ಸಂಪುಟ ೧೫
ಸಂಚಿಕೆ ೩-೪

ಕರ್ನಾಟಕ ಭಾರತಿ

ಸಂಕ್ರಮಣ
ಮತ್ತು
ಅಕ್ಷಯ ತೃತಿಯಾ

ಸಂಯುಕ್ತ ಸಂಚಿಕೆ
ಜನವರಿ ಮತ್ತು ಮೇ ೧೯೮೩

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಲೇಖಕರಿಗೆ ಸೂಚನೆಗಳು

"ಕರ್ನಾಟಕ ಭಾರತಿ" ಯು ಸೃಜನ, ವಿಮರ್ಶನ, ಸಂಶೋಧನ ಸಾಹಿತ್ಯ, ವಿಜ್ಞಾನ ಮತ್ತು ಮಾನವಿಕ ವಿಷಯಗಳ ಅಭಿವೃದ್ಧಿಗಾಗಿ ಮೀಸಲಾಗಿದ್ದು, ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನ-ಗಳಿದ್ದರೆ, ಮೂಲ ಲೇಖಕರ ಹಾಗೂ ಲೇಖನದ ಹೆಸರನ್ನು ಸೂಚಿಸುವದಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು ಸ್ಪಷ್ಟವಾಗಿ ಬರೆದಿರಬೇಕು. ಇಲ್ಲವೇ ಟೈಪುಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲೀ ಅಸಂಪೂರ್ಣವಾಗಿಯಾಗಲೀ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೇ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ ಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುತ್ತದೆ. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ವಿಮರ್ಶೆಗಾಗಿ ಪುಸ್ತಕಗಳನ್ನು **ಸಂಪಾದಕರು ಕರ್ನಾಟಕ ಭಾರತಿ, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೫೮೦ ೦೦೩** ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು. ಇನ್ನಿತರ ಯಾವುದೇ ವಿಷಯಕ್ಕೆ **ನಿರ್ದೇಶಕರು, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೫೮೦ ೦೦೩.** ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ ೨. ರಾಜ್ಯೋತ್ಸವ ಸಂಚಿಕೆ
೩. ಸಂಕ್ರಮಣ ಸಂಚಿಕೆ ೪. ಅಕ್ಷಯ ತೃತಿಯಾ ಸಂಚಿಕೆ

ವಾರ್ಷಿಕ ಚಂದಾ : ರೂ. ೮-೦೦ (ಅಂಚೆವೆಚ್ಚ ಸಹಿತ)

ಬಿಡಿ ಸಂಚಿಕೆಯ ಬೆಲೆ : ರೂ. ೨-೫೦

(ಅಂಚೆವೆಚ್ಚ ರೂ. ೧-೨೫ ಪ್ರತ್ಯೇಕ)

(ವಿದ್ಯಾರ್ಥಿಗಳಿಗೆ ರಿಯಾಯತಿ ಚಂದಾ ದರ ರೂ. ೪-೦೦ ಮಾತ್ರ)

ಹಣವನ್ನು ಡಿಮಾಂಡ ಡ್ರಾಫ್ಟ ಇಲ್ಲವೇ ಪೋಸ್ಟಲ್ ಆರ್ಡರ ಮೂಲಕ ಫಾಯನಾನ್ಸ ಆಫೀಸರ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ-೫೮೦ ೦೦೩. ಇವರಿಗೆ ಕಳುಹಿಸಬೇಕು.

ಕರ್ನಾಟಕ ಭಾರತಿ

ತ್ರೈಮಾಸಿಕ ಪತ್ರಿಕೆ

ಸಂಪುಟ : ೧೫ ಸಂಚಿಕೆ : ೩-೪

ಪ್ರಧಾನ ಸಂಪಾದಕರು :

ಡಾ. ಎಂ. ಎಂ. ಕಲಬುರ್ಗಿ

ಸಂಪಾದಕರು :

ಡಾ. ಎಂ. ಬಿ. ಕೊಟ್ರಶೆಟ್ಟಿ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೧೫ ಸಂಚಿಕೆ : ೩-೪

ಸಂಕ್ರಮಣ ಮತ್ತು ಅಕ್ಷಯ ತೃತೀಯಾ ಸಂಯುಕ್ತ ಸಂಚಿಕೆ

ಜನವರಿ ಮತ್ತು ಮೇ, ೧೯೮೩

ಪ್ರಕಾಶಕರು :

ಎಸ್. ಬಿ. ನಾಯಕ
ಕಾರ್ಯ ನಿರ್ವಾಹಕ-ನಿರ್ದೇಶಕರು ಪ್ರಸಾರಾಂಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಮುದ್ರಕರು :

ಪಿ. ಎಸ್. ಹೊಂಬಾಳಿ
ಹೊಂಬಾಳಿ ಪ್ರಿಂಟರಿ,
ಶಕ್ತಿ ಟಾಕೀಜ ಕಂಪೌಂಡ್, ಕೋಯಿನ್ ರೋಡ, ಹುಬ್ಬಳ್ಳಿ.

ಪರಿವಿಡಿ

ಈ ಸಂಚಿಕೆಯ ಲೇಖಕರು

೧ ಡಾ. ಎಂ. ಬಿ. ಕೊಟ್ರಶೆಟ್ಟಿ
ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨ ಬಸವರಾಜ ನಾಯ್ಕರ
ಅಧ್ಯಾಪಕರು, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ.

೩ ಡಾ. ಎಂ. ಎಂ. ಕಲಬುರ್ಗಿ
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೪ ಎಚ್. ನಾಗರಾಜರಾವ್
ಸಂಶೋಧನ ವಿದ್ಯಾರ್ಥಿ, ಇತಿಹಾಸ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೫ ಡಾ. ಅ. ಸುಂದರ
ಪ್ರಾಧ್ಯಾಪಕರು, ಪ್ರಾಚೀನ ಭಾರತ ಇತಿಹಾಸ ಮತ್ತು ಶಾಸನ ವಿಜ್ಞಾನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೬ ಬಿ. ಕೆ. ಹಿರೇಮಠ
ಅಧ್ಯಾಪರಕು, ಕನ್ನಡ ವಿಭಾಗ, ಶ್ರೀ ಬಸವೇಶ್ವರ ಕಾಲೇಜ, ಬಾಗಲಕೋಟ.

೭ ಡಾ. ವಿಲ್ಯಂ ಮಾಡ್ತ
ಭಾಷಾವಿಜ್ಞಾನ ಪ್ರವಾಚಕರು, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

೮ ಎಂ. ಬಿ. ಚರಂತಿಮಠ
ಅಧ್ಯಾಪಕರು, ಗುದ್ಲೆಪ್ಪ ಹಳ್ಳಿಕೇರಿ ಮಹಾವಿದ್ಯಾಲಯ, ಹಾವೇರಿ.

೯ ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ
ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೦ ಎನ್. ಪಿ. ಕಿಲಾರಿ
ಹೆಡ್‌ಮಾಸ್ತರ, ಎಚ್. ಎಚ್. ಆಗಾಖಾನ, ಯು. ಪಿ. ಸ್ಕೂಲ,
ನಿಜಾಮಾಬಾದ-೫೦೩ ೦೦೧.

೧೧ ಎಸ್. ಪಿ. ಪಾಟೀಲ
ಅಧ್ಯಾಪಕರು, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೨ ಬಿ. ಆರ್. ಹಿರೇಮಠ
ಅಧ್ಯಾಪಕರು, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೩ ಪಿ. ಎಸ್. ಮುಂದಿನಮನಿ
ಅಧ್ಯಾಪಕರು, ಅರ್ಥಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೪ ಡಾ. ವ್ಹಿ. ಎಸ್. ಕಂಬಿ
ಅಧ್ಯಾಪಕರು, ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೫ ಮೋಹನ ಹೆಗಡೆ
ಭಾರತೀ ಹೈಸ್ಕೂಲ, ಬಂದಗದ್ದೆ.

೧೬ ಜಿ. ಎಸ್. ಸಿದ್ಧಲಿಂಗಯ್ಯ
C/o, ಚೆನ್ನಪ್ಪ ಎರೇಸೀಮೆ ೫೬೯, ।। ಬ್ಲಾಕ್ ೩ ಮೇನ್, ವಿಜಯನಗರ
ಬೆಂಗಳೂರು-೫೬೦ ೦೪೦.

೧೭ ತಿರುಮಲ ಮಾವಿನಕುಳಿ
ಕರ್ಕಿಕೊಪ್ಪ, ಸಾಗರ-೫೭೭ ೪೦೧. ಶಿವಮೊಗ್ಗ - ಕರ್ನಾಟಕ

೧೮ ಶಿವಾನಂದ ಮೂಲಿಮನಿ

೧೯ ಡಾ. ಬುದ್ದಣ್ಣ ಹಿಂಗಮಿರೆ
ಅಧ್ಯಾಪಕರು, ಕನ್ನಡ ಅಧ್ಯಯನ ಪೀಠ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಮೂಡಲಪಾಯ ಬಯಲಾಟದ ನವೀಕರಣ *

● ಡಾ. ಎಂ. ಬಿ. ಕೊಟ್ರಶೆಟ್ಟಿ

ಕರ್ನಾಟಕದ ಜಾನಪದ ರಂಗಭೂಮಿಯ ವೈವಿಧ್ಯ, ವೈಲಕ್ಷಣ್ಯಗಳನ್ನು ಅವಲೋಕಿಸಿದರೆ, ಮೂರು ಪ್ರಮುಖ ಶೈಲಿಗಳು ಎದ್ದು ಕಾಣುತ್ತವೆ. ಕರ್ನಾಟಕದ ವಿಸ್ತಾರ, ಏಕೀಕರಣ ಪೂರ್ವದ ರಾಜಕೀಯ ವಿಭಾಗಗಳು, ಭೌಗೋಲಿಕ ವೈಲಕ್ಷಣ್ಯಗಳು, ಆಯಾ ಪ್ರದೇಶದ ಜನರ ಸಾಂಸ್ಕೃತಿಕ ಪರಂಪರೆ, ಕಲಾಭಿರುಚಿ, ಮನೋಧರ್ಮಗಳು ಹಾಗೂ ನೆರೆಹೊರೆಯ ಪ್ರಾಂತಗಳ ಸಾಂಸ್ಕೃತಿಕ ಪ್ರಭಾವಗಳಿಂದ ಮೂಲದಲ್ಲಿ ಒಂದೇ ಆಗಿದ್ದ ಬಯಲಾಟ ಪರಂಪರೆ ಅನೇಕ ವ್ಯತ್ಯಾಸಗಳನ್ನು ರೂಢಿಸಿಕೊಂಡು ವೈವಿಧ್ಯಪೂರ್ಣವಾಗಿ ವಿಕಾಸಗೊಂಡಿದೆ. ಉತ್ತರ ಕರ್ನಾಟಕದ ಮೂಡಲಪಾಯ, ಕರಾವಳಿಯ ಯಕ್ಷಗಾನ ಹಾಗೂ ಹಳೆಯ ಮೈಸೂರು ಪ್ರದೇಶದಲ್ಲಿ ಮೂಲದಲ್ಲಿ ಮೂಡಲಪಾಯವೇ ಆಗಿದ್ದು ಇಂದು ಯಕ್ಷಗಾನದ ದಟ್ಟ ಪ್ರಭಾವಕ್ಕೊಳಗಾದ ಸಮ್ಮಿಶ್ರ ಸ್ವರೂಪವನ್ನು ಪಡೆದ "ಮೂಡಲಪಾಯ ಯಕ್ಷಗಾನ" ಇವೇ ಆ ಮೂರು ಪ್ರಕಾರಗಳು. ಇವುಗಳ ಬೆಳವಣಿಗೆಯ ಹಿನ್ನೆಲೆಯಲ್ಲಿ ಕರ್ನಾಟಕದ ಜನರ ಪ್ರತಿಭೆ, ಉತ್ಕಟ ಕಲಾಪ್ರಜ್ಞೆ, ಸ್ವತಂತ್ರ ಮನೋಧರ್ಮ ಹಾಗೂ ಧೀಮಂತ ಬದುಕುಗಳು ನಿದರ್ಶನಕ್ಕೆ ಬರುತ್ತವೆ.

ದೊಡ್ಡಾಟ, ಆಟ್ಟದಾಟ, ಮೇಳದಾಟ ಮೊದಲಾದ ಪರ್ಯಾಯನಾಮಗಳಿಂದ ಕರೆಯಲ್ಪಡುವ ಮೂಡಲಪಾಯ ಬಯಲಾಟವು ಉತ್ತರ ಕರ್ನಾಟಕದ ಸಂಸ್ಕೃತಿಯ ಒಂದು ವಿಶಿಷ್ಟ ಹಾಗೂ ಸತ್ವಪೂರ್ಣ ಅಂಗವಾಗಿದೆ. ಕರ್ನಾಟಕ ಜಾನಪದ ಅಕ್ಯಾಡೆಮಿಯ ನೆರವಿನಿಂದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ "ಮೂಡಲಪಾಯ ಬಯಲಾಟ ಕಮ್ಮಟ"ದ ಅಂಗವಾಗಿ ಸಾಂಗಗೊಂಡ ವಿಚಾರ ಸಂಕಿರಣ ಹಾಗೂ ರಂಗ ಪ್ರಯೋಗಗಳು ಮೇಲಿನ ಅಭಿಪ್ರಾಯಕ್ಕೆ ಸಾಕ್ಷ್ಯಾಧಾರಗಳನ್ನೊದಗಿಸಿವೆ.

---

* ಮೂಡಲಪಾಯ ಬಯಲಾಟ ಕಮ್ಮಟ ಅಂಗವಾಗಿ ನಡೆದ ವಿಚಾರ ಸಂಕಿರಣದಲ್ಲಿ ಮಂಡಿಸಿದ ಪ್ರಬಂಧ.

ಮೂಡಲಪಾಯ ಬಯಲಾಟಗಳು ಸಾಮಾನ್ಯವಾಗಿ ಪೌರಾಣಿಕ ವಸ್ತುಗಳಿಂದ ಕೂಡಿ, ದೇವ ದೇವತೆಯರ ಅದ್ಭುತ ರೀತಿಗಳನ್ನು ಚಿತ್ರಿಸಿ ಜಾನಪದ ಮನಸ್ಸಿನ ಅದ್ಭುತದ ಆಕಾಂಕ್ಷೆ, ಧರ್ಮ, ಪ್ರಜ್ಞೆ ಹಾಗೂ ಮನರಂಜನೆಯ ಬಯಕೆಗಳನ್ನು ತೃಪ್ತಿ ಪಡಿಸುವ ಉದ್ದೇಶವನ್ನು ಹೊಂದಿವೆ. ಇಂದಿಗೂ ಅವುಗಳಲ್ಲಿ ವೀರಾದ್ಭುತ ರೌದ್ರರಸ ಗಳ ಪ್ರಚೋದನೆಯೆ ಮುಖ್ಯ ಗುರಿಯಾಗಿದ್ದು ಪೌರಾಣಿಕ ವಾತಾವರಣಕ್ಕೆ ಸೀಮಿತ ವಾಗಿವೆ. ಇದು ಒಂದು ರೀತಿಯಿಂದ ಮೂಡಲಪಾಯ ಬಯಲಾಟದ ಸೀಮಿತ ವ್ಯಾಪ್ತಿಯನ್ನು ಸೂಚಿಸುತ್ತದೆ ಎನ್ನುವುದು ಗಮನಾರ್ಹ ಅಂಶವಾಗಿದೆ.

ಶಿವಶರಣರ ಹಾಗೂ ದಾಸರ ಭಕ್ತಿಯ ಆಂದೋಲನಗಳಿಂದ ಕನ್ನಡಿಗರ ಜೀವನ ದೃಷ್ಟಿಯಲ್ಲಿ ಮಹತ್ತರ ಬದಲಾವಣೆಗಳಾದವು. ಶಿವಶರಣರು ಹಾಗೂ ಸಾಧುಸಂತರ ಐತಿಹಾಸಿಕ ಬದುಕಿನ ಹಿನ್ನೆಲೆಯಲ್ಲಿ ಭಕ್ತಿ, ಜ್ಞಾನ, ವೈರಾಗ್ಯಗಳನ್ನು ನಿರೂಪಿಸುವ ನೀತಿಪ್ರಧಾನವಾದ ಸಣ್ಣಾಟಗಳ ಪರಂಪರೆಯೊಂದು ಬೆಳೆದು ಬಂದದ್ದು ರಂಗಭೂಮಿಯ ಇತಿಹಾಸದಲ್ಲಿ ಒಂದು ಮಹತ್ವದ ಘಟ್ಟ. ಸಣ್ಣಾಟಗಳ ಶೈಲಿಗೂ ಮೂಡಲಪಾಯದ ಶೈಲಿಗೂ ಅನೇಕ ವ್ಯತ್ಯಾಸಗಳಿವೆ. ಶ್ರೀ ಕೃಷ್ಣಪಾರಿಜಾತ, ಸಂಗ್ಯಾ ಬಾಳ್ಯಾ, ಅಲ್ಲಮಪ್ರಭು ಮುಂತಾದ ಸತ್ವಪೂರ್ಣವಾದ ಸಣ್ಣಾಟಗಳು ವ್ಯಾಪಕವಾಗಿ ಪ್ರಯೋಗಗೊಂಡವು. ಆದರೆ ಈ ಸಣ್ಣಾಟಗಳು ಮೂಲದಲ್ಲಿದ್ದ ದೊಡ್ಡಾಟದ ಅಂದರೆ ಮೂಡಲಪಾಯ ಪರಂಪರೆಯನ್ನು ಹಿಮ್ಮೆಟ್ಟಿಸಲಿಲ್ಲವೆಂಬುದು ಗಮನಾರ್ಹ ಸಂಗತಿಯಾಗಿದೆ. ಅಷ್ಟೇ ಏಕೆ; ಆಧುನಿಕ ನಾಟಕ ಹಾಗೂ ಸಿನೇಮಾಗಳ ಹಾವಳಿಯ ಲ್ಲಿಯೂ ಉತ್ತರ ಕರ್ನಾಟಕದ ಹಳ್ಳಿಹಳ್ಳಿಗಳಲ್ಲಿ ಇವು ವ್ಯಾಪಕ ಸ್ವರೂಪದಲ್ಲಿ ಪ್ರಯೋಗಗೊಳ್ಳುತ್ತಿವೆ. ಹಳೇ ಮೈಸೂರಿನ ಪ್ರದೇಶದಲ್ಲಿಯೇ ಸುಮಾರು ೨೫೦ ಮೂಡಲಪಾಯದ ಮೇಳಗಳು ಹಾಗೂ ಅಷ್ಟೇ ಸಂಖ್ಯೆಯ ಭಾಗವತರು ಇದ್ದುದನ್ನು ಕೊನೇಹಳ್ಳಿಯಲ್ಲಿ ಇತ್ತೀಚೆಗೆ ನಡೆದ ಮೂಡಲಪಾಯ ಕಮ್ಮಟದಲ್ಲಿ ಗುರುತಿಸಲಾಗಿದೆ. ಉತ್ತರ ಕರ್ನಾಟಕದಲ್ಲಿ ಇಂತಹ ಅಂಕಿಸಂಖ್ಯೆಗಳನ್ನು ಕಲೆಹಾಕುವ ಕಾರ್ಯವು ವ್ಯವಸ್ಥಿತ ವಾಗಿ ನಡೆಯದಿದ್ದರೂ ಸುಮಾರು ೫೦೦ ಮೇಳಗನ್ನಾದರೂ ಗುರುತಿಸಬಹುದೆಂದು ಅಂದಾಜು ಮಾಡಲಾಗಿದೆ. ಇದರಿಂದ ಉತ್ತರ ಕರ್ನಾಟಕದಲ್ಲಿ ಮೂಡಲಪಾಯವು ಜೀವಂತ ಅಂತೆಯೇ ಸಂಪದ್ಭರಿತ ಸಂಪ್ರದಾಯವಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

ಇತ್ತೀಚೆಗೆ ಕನ್ನಡ ಜನಪದ ಜೀವನ ದೃಷ್ಟಿಯಲ್ಲಿ ಆಧುನಿಕ ನಾಗರಿಕತೆಯ ಪ್ರಭಾವವು ದಟ್ಟವಾಗಿ ವ್ಯಾಪಿಸಹತ್ತಿದೆ. ವೈಜ್ಞಾನಿಕ ಮತ್ತು ಯಾಂತ್ರಿಕಯುಗದ ಸಂಕೀರ್ಣ ವಿಚಾರಗಳಿಂದ ಅವರು ಪ್ರಭಾವಿತರಾಗುತ್ತಿದ್ದಾರೆ. ಆಧುನಿಕ ವಿದ್ಯಾಭ್ಯಾಸದ ಸೌಕರ್ಯಗಳು ಇಂದೂ ಗ್ರಾಮಜೀವನಕ್ಕೂ ವ್ಯಾಪಿಸಿವೆ. ಹಳ್ಳಿಹಳ್ಳಿಗೆ ಶಾಲೆ ಹಾಯ ಸ್ಕೂಲಗಳು, ಮುಖ್ಯ ಸ್ಥಳಗಳಲ್ಲಿ ಕಾಲೇಜುಗಳು ತಲೆಯೆತ್ತಿ ಜನಪದರ ಜ್ಞಾನ ದಿಗಂ-

ತವನ್ನು ಕ್ರಾಂತಿಕಾರಕ ಪ್ರಮಾಣದಲ್ಲಿ ವಿಸ್ತರಿಸುತ್ತಲಿವೆ. ಹೀಗಾಗಿ ಅವರ ಸೌಂದರ್ಯ, ಪ್ರಜ್ಞೆ, ಮನೋಧರ್ಮಗಳು ಪರಿವರ್ತನೆಗೊಂಡಿವೆ. ಅವರು ಹಿಂದಿನಂತೆ ಅಪ್ಪಟ ಜಾನಪದೀಯರಾಗಿ ರಿಪ್‌ವ್ಯಾನ್ ವಿಂಕಲ್‌ರಾಗಿ ಉಳಿದಿಲ್ಲವೆಂಬುದು ಗಮನಾರ್ಹ. ಆದ್ದರಿಂದ ಇಂದಿನ ಬದಲಾದ ವಾತಾವರಣದಲ್ಲಿ ಮೂಡಲಪಾಯದಂತಹ ಕಲೆ ಕೂಡ ಆಧುನೀಕರಣಕ್ಕೆ ಒಳಗಾಗಲೇಬೇಕಾದುದು ಅನಿವಾರ್ಯವಾಗಿದೆ. ಪ್ರಾಚೀನ ಸಂಪ್ರದಾಯದಲ್ಲಿ ಒಳ್ಳೆಯ ಅಂಶಗಳೊಡನೆ ಅನೇಕ ಅರ್ಥಹೀನ ಆಚರಣೆಗಳೂ ಸೇರಿಕೊಂಡಿರುತ್ತವೆ. ಒಂದು ಸಂಪ್ರದಾಯದ ಮೊತ್ತದಲ್ಲಿ ಅರ್ಥಹೀನವಾದುದಾವುದು? ಸತ್ವಶಾಲಿಯಾದ ಅಂಗವಾವುದು ಎಂಬುದನ್ನು ಐತಿಹಾಸಿಕ ಪ್ರಜ್ಞೆಯ ಒರೆಗಲ್ಲಿಗೆ ಉಜ್ಜಿ ನೋಡಬೇಕಾಗುತ್ತದೆ ಎಂಬ ಟಿ. ಎಸ್ ಎಲಿಯಟ್‌ನ ಮಾತುಗಳು ಈ ಸಂದರ್ಭದಲ್ಲಿ ಅರ್ಥಪೂರ್ಣ. ಹಳ್ಳಿಯ ಮುಗ್ಧ ಕಲಾವಿದರು ತಮಗೆ ತಿಳಿದಂತೆ ಮೂಡಲಪಾಯಗಳನ್ನು ಪ್ರಯೋಗಿಸುತ್ತಾರೆ. ಅವರು ಸಾಂಪ್ರದಾಯಕವಾಗಿ ಅನುಸರಿಸಿಕೊಂಡು ಬಂದುದೆಲ್ಲವೂ ಅರ್ಥಪೂರ್ಣವಾದುದು, 'ಸಂಪ್ರದಾಯವೇ ದೇವರು' ಎಂಬಂತಹ ವಿಚಾರಗಳನ್ನು ಕೈಬಿಡುವದು ಇಂದಿನ ಅಗತ್ಯವಾಗಿದೆ. ಹಳ್ಳಿಗರು ನಾಟಕ ಸಿನೇಮಗಳಿಂದ, ರೇಡಿಯೋ, ಟೆಲಿವಿಜನ್ ಕಾರ್ಯಕ್ರಮಗಳಿಂದ ಪ್ರಭಾವಿತರಾಗಿದ್ದಾರೆ. ಅವರ ಅಭಿರುಚಿ ಮನೋಧರ್ಮಗಳು ಪರಿವರ್ತನೆಗೊಂಡಿರುವುದರಿಂದ ಯಾವುದೇ ನವೀಕರಣವನ್ನು ಪ್ರತಿಭಟಿಸದೇ ಬರಮಾಡಿಕೊಳ್ಳುವ ಸ್ಥಿತಿಯಲ್ಲಿದ್ದಾರೆಂದು ಧೈರ್ಯದಿಂದ ಹೇಳಬಹುದು.

ಯಕ್ಷಗಾನ ಕಲೆಯನ್ನು ಕುರಿತು ಆಳವಾದ ಸಂಶೋಧನೆ, ಚರ್ಚೆ ವಿಮರ್ಶೆಗಳು ನಡೆದು ಅದರ ಸತ್ವ ಹಾಗೂ ಕಲಾಭಿವ್ಯಕ್ತಿಯ ಸಾಮರ್ಥ್ಯಗಳು ಆಧುನಿಕ ಜಗತ್ತಿನ ಗಮನಕ್ಕೆ ಬಂದಿವೆ. ಕಾರಂತರ 'ಯಕ್ಷಗಾನ ಬಯಲಾಟ' ಕೃತಿಗೆ ಕೇಂದ್ರ ಸಾಹಿತ್ಯ ಅಕ್ಯಾಡೆಮಿಯ ಪುರಸ್ಕಾರ ದೊರೆತು ಅದರ ಕೀರ್ತಿಯನ್ನು ರಾಷ್ಟ್ರೀಯ ಹಾಗೂ ಅಂತರ ರಾಷ್ಟ್ರೀಯ ಮಟ್ಟಕ್ಕೆ ವಿಸ್ತರಿಸಲು ಸಾಧ್ಯವಾಯಿತು. ಆ ಕಲೆಯ ಮೂಲ ಸ್ವರೂಪಕ್ಕೆ ಚ್ಯುತಿಬಾರದಂತೆ ಅದರ ನವೀನ ಅಭಿವ್ಯಕ್ತಿಯ ಸಾಧ್ಯತೆಗಳನ್ನು ಶೋಧಿಸುವ ದಿಶೆಯಲ್ಲಿ ಸೃಷ್ಟ್ಯಾತ್ಮಕ ಪ್ರಯೋಗ (Creative Experiments) ಗಳನ್ನು ಮಾಡಿದ್ದಾರೆ. ಯಕ್ಷಗಾನದ ಸಾಂಪ್ರದಾಯಿಕ ಗೀತ ನೃತ್ಯಗಳ ಬಲದಿಂದಲೇ "ಕನಕಾಂಗಿ ಹಾಗೂ ನಳದಮಯಂತಿ" ಪ್ರಸಂಗಗಳನ್ನು ಯಕ್ಷಗಾನ ಬ್ಯಾಲೆಗಳನ್ನಾಗಿ ರೂಪಿಸಿ ಕಲಾಸಂಪತ್ತಿಗೆ ವಿಶ್ವವೇ ಬೆರಗಾಗುವಂತೆ ಮಾಡಿದ್ದಾರೆ. 'ಮೂಡಲಪಾಯ'ದ ಕಲಾಸಂಪತ್ತಿನತ್ತ ವಿದ್ವಾಂಸರ ದೃಷ್ಟಿ ಕೇಂದ್ರೀಕೃತಗೊಳ್ಳಬೇಕಾಗಿದ್ದುದು ಇಂದಿನ ಅವಶ್ಯಕತೆಗಳಲ್ಲೊಂದಾಗಿದೆ, 'ಮೂಡಲಪಾಯ' ಸಂಪ್ರದಾಯದ ಮೂಲಭೂತ ಅಂಶಗಳನ್ನು ಅರಿತು, ಅವರ ಪ್ರಯೋಗದಲ್ಲಿ ಕಂಡುಬರುವ ಅವ್ಯವಸ್ಥೆಯನ್ನು ದೂರ ಮಾಡಲು ಕಾರಂತರಂತಹ ಧೀಮಂತರ ಮಾರ್ಗದರ್ಶನ ಒದಗಿಬರಬೇಕು. ಬದುಕು

ಬೆಳೆಯಬೇಕಾದರೆ ಕಲೆಗಳು ಬೆಳೆಯಬೇಕು. ಕಲೆಗಳು ಬೆಳೆಯಬೇಕಾದರೆ ಅವುಗಳ ಕೆಲಸ ಮತ್ತು ರೀತಿಗಳು ವಿಶಾಲಿಸಬೇಕು ಎಂಬ ಶಿವರಾಮ ಕಾರಂತರ ಮಾತು ಮನನೀಯವಾಗಿದೆ. ಈ ದೃಷ್ಟಿಯಿಂದ ಮೂಡಲಪಾಯ ಬಯಲಾಟದ "ನವೀಕರಣಕ್ಕಾಗಿ ಕೆಲವು ಸೂಚನೆಗಳನ್ನು ತಮ್ಮ ಮುಂದಿಡಬಯಸುತ್ತೇನೆ."

೧. ಪ್ರಯೋಗವನ್ನು ಮೂರು ಗಂಟೆಗೆ ಸೀಮಿತಗೊಳಿಸಬೇಕು

"ಮೂಡಲಪಾಯ"ವೂ ಸೇರಿದಂತೆ ಕರ್ನಾಟಕದ ಬಯಲಾಟಗಳ ಪ್ರಯೋಗಕ್ಕೆ ರಾತ್ರಿ ೧೦ ಗಂಟೆಯಿಂದ ಬೆಳಗಿನ ೬ ಗಂಟೆಯುವರೆಗೆ ಅಂದರೆ ಸುಮಾರು ಎಂಟು ಗಂಟೆಗಳ ದೀರ್ಘ ಕಾಲಾವಧಿ ಬೇಕಾಗುತ್ತದೆ. ಇದು ಹಿಂದಿನಿಂದಲೂ ನಡೆದು ಬಂದ ಸಂಪ್ರದಾಯ. ಬಯಲಾಟಗಳು ಧಾರ್ಮಿಕ ವಿಧಿಯ ಆರಾಧನೆಯ ಅಂಗವಾಗಿ ಪ್ರಯೋಗಗೊಳ್ಳುವದರಿಂದ ಕಾಲಕ್ಷೇಪಕ್ಕಾಗಿ ಅವರ ವಿಸ್ತಾರವನ್ನು ಪ್ರಯಾಸಪಟ್ಟು ಹಿಗ್ಗಲಸವಾಗುತ್ತದೆ. ಅದರ ಕಲಾಸಂಪತ್ತು ಇಷ್ಟೊಂದು ದೀರ್ಘ ಕಾಲಾವಧಿಯನ್ನು ತುಂಬುವದು ಅಸಾಧ್ಯ. ಪ್ರಸಂಗಸಾಹಿತ್ಯ, ಸಂಗೀತ ಹಾಗೂ ಕುಣಿತಗಳನ್ನು ವ್ಯವಸ್ಥಿತಗೊಳಿಸಿದರೆ ಕೇವಲ ಮೂರು ಗಂಟೆಗಳ ಅವಧಿಯ ಪರಿಮಿತಿಯಲ್ಲಿ ಪ್ರಭಾವಿ ಹಾಗೂ ಪರಿಣಾಮಕಾರಿಯಾಗುವಂತೆ ಪ್ರಯೋಗಿಸಬಹುದಾಗಿದೆ. ಈ ಕಮ್ಮಟದ ಅಂಗವಾಗಿ ಪ್ರಯೋಗಗೊಂಡ ಹತ್ತು 'ಮೂಡಲಪಾಯ' ಆಟಗಳಿಗೆ ಪ್ರತಿಯೊಂದಕ್ಕೆ ಮೂರು ಗಂಟೆಗಳ ಕಾಲವನ್ನು ನಿಗದಿಗೊಳಿಸಲಾಗಿತ್ತು. ಇಷ್ಟು ಅವಧಿಯಲ್ಲಿಯೇ ಯಾವದೇ ರೀತಿಯ ಆಭಾಸಕ್ಕೆ ಎಡೆಗೊಡದೆ ತೃಪ್ತಿಕರವಾಗಿ ಮೂಡಿಬಂದಿವೆ. ಹಳ್ಳಿಗಳಲ್ಲಿ ಇವನ್ನು ೮ ಗಂಟೆಗಳವರೆಗೆ ಪ್ರಯೋಗಿಸಬೇಕಾದಾಗ ನಡುನಡುವೆ ಹಾಡು ಕುಣಿತಗಳನ್ನು ಪುನರುಕ್ತಿ ಮಾಡಿ ಅಡ್ಡ ಸೋಗುಗಳನ್ನು ತಂದು ಭಾಗತವರು ಹಾಗೂ ಪಾತ್ರಧಾರಿಗಳಿಗೆ ಅಟ್ಟದ ಮೇಲೆ ಆಯಾರ ಮಾಡಿಸುವ ಮೂಲಕ ಕಾಲಕ್ಷೇಪಕ್ಕೆ ಅವಕಾಶ ಮಾಡಿ ಕೊಡಲಾಗುತ್ತದೆ. ಬಯಲಾಟದ ಪ್ರಯೋಗಕ್ಕೆ ಕಲೆಯ ದೃಷ್ಟಿಯಿಂದ ಮೇಲೆ ಹೇಳಿದ ಸಂಗತಿಗಳು ಅನಿವಾರ್ಯವೆಂದು ಹೇಳುವದು ಮೂರ್ಖತನದ ಪರಮಾವಧಿಯಲ್ಲದೆ ಮತ್ತೇನು? ಯಾವುದೇ ಕಲಾ ಪ್ರಯೋಗವು ಮೂರು ಗಂಟೆಗಳಿಗಿಂತಲೂ ಹೆಚ್ಚಿಗೆ ಪ್ರೇಕ್ಷಕರ ಮನಸ್ಸನ್ನು ಸೆರೆಹಿಡಿಯುವದು ಸಾಧ್ಯವಿಲ್ಲವೆಂಬುದು ಮನಶಾಸ್ತ್ರೀಯ (Psychological need) ಅಗತ್ಯವಾಗಿದೆ. ಆದ್ದರಿಂದ ಕಲಾನುಭವದ ಪರಿಣಾಮದ ದೃಷ್ಟಿಯಿಂದ ಇವುಗಳ ಪ್ರಯೋಗವನ್ನು ೩ ಗಂಟೆಗಳಿಗೆ ಅಳವಡಿಸುವದು ಅನಿವಾರ್ಯವಾಗಿದೆ. ಆಧುನಿಕ ವೇಗ ಜೀವನದ ಬಿಸಿ ಇಂದು ಗ್ರಾಮ ಜೀವನಕ್ಕೆ ವ್ಯಾಪಿಸಿದ್ದರಿಂದ ಗ್ರಾಮೀಣ ಪ್ರೇಕ್ಷಕರೂ ಕೂಡ ಈ ಬದಲಾವಣೆಯನ್ನು ಸ್ವಾಗತಿಸುತ್ತಾರೆ.

೨. ಅಂತರಿಕ ಸ್ವರೂಪ (Structural change) ದಲ್ಲಿ ಮಾಡಿಕೊಳ್ಳಬೇಕಾದ ಬದಲಾವಣೆಗಳು.

ಪ್ರಯೋಗದ ಕಾಲಾವಧಿಯನ್ನು ಮೂರು ಗಂಟೆಗೆ ಇಳಿಸಿದರೆ ಬಯಲಾಟದ ಆಂತರಿಕ ಸ್ವರೂಪದಲ್ಲಿ ಕೆಲವು ಬದಲಾವಣೆಗಳನ್ನು ಮಾಡಿಕೊಳ್ಳುವದು ಅನಿವಾರ್ಯ ವಾಗುತ್ತದೆ. ಮೂಡಲಪಾಯವು ನೃತ್ಯ, ಗೀತ, ಸಾಹಿತ್ಯ, ವೇಷಗಾರಿಕೆ ಹಾಗೂ ಅಭಿನಯಗಳೆಂಬ ಪಂಚಾಂಗಗಳಿಂದ ಕೂಡಿದ ಒಂದು ಸಂಕೀರ್ಣ ಕಲೆಯಾಗಿದೆ. ಈ ಮಾತನ್ನು ವಿವರಿಸುವ ಅಗತ್ಯವಿಲ್ಲವೆಂದು ಭಾವಿಸಿದ್ದೇನೆ. ಪ್ರಯೋಗವು ಯಶಸ್ವಿಯಾಗ ಬೇಕಿದ್ದರೆ ಈ ಎಲ್ಲ ಕಲಾಂಗಗಳ ಸಮಪ್ರಮಾಣದ ಅಭಿವ್ಯಕ್ತಿಗೆ ಅವಕಾಶವಿರಬೇಕು.

ಅ) ಪ್ರಸಂಗ ಸಾಹಿತ್ಯವನ್ನು ಸಂಶೋಧಿಸಿ ಪ್ರಯೋಗಕ್ಕೆ ಅಳವಡಿಸಬೇಕು :

ಮೂಡಲಪಾಯದ ಹಾಡು ಮತ್ತು ಸಂಭಾಷಣೆಗಳನ್ನು ಬರೆದವರು ಶಿಷ್ಟ ಹಾಗೂ ಜಾನಪದ ಮಿಶ್ರಣದ ಮಧ್ಯಮ ವರ್ಗದ ಕವಿಗಳು ತಮಗಿರುವ ಪರಿಮಿತ ಜ್ಞಾನದಲ್ಲಿ ಕೃತಿ ರಚಿಸಿರುವದರಿಂದ ಅವುಗಳಲ್ಲಿ ಪುಟಗಟ್ಟಲೆ ಬೆಳೆದ ಅರ್ಥ ಹೀನವಾದ ಸಂಭಾಷಣೆಗಳು, ವಿಪರೀತ ಪ್ರಾಸವ್ಯಾಮೋಹ, ಹೇರಳ ಪುನರುಕ್ತಿಗಳು ಇವೇ ಮೊದ ಲಾದ ದೋಷಗಳು ಕಂಡು ಬರುತ್ತವೆ ಒಂದು ಕೃತಿ ಪ್ರಯೋಗಕ್ಕೆ ಅರ್ಹವಾಗಬೇಕಾ ದರೆ ಅದನ್ನು ಶೋಧಿಸಿ ಸಂಪಾದಿಸಬೇಕಾಗುತ್ತದೆ. ಮುದ್ರಣ ಸೌಕರ್ಯಗಳು ಸುಲಭವಾಗಿರುವ ಇಂದಿನ ಪರಿಸ್ಥಿತಿಯಲ್ಲಿ ಈ ಕೆಲಸವನ್ನು ಸುಲಭವಾಗಿ ಮಾಡ ಬಹುದಾಗಿದೆ.

ಬ) ಕುಣಿತಗಳು ಕಲಾಪೂರ್ಣವಾಗಬೇಕಾದರೆ ತರಬೇತಿಯ ಶಿಬಿರಗಳ ನ್ನೇರ್ಪಡಿಸಬೇಕು :

'ಮೂಡಲಪಾಯ'ದ ಕುಣಿತಗಳನ್ನು ಹೆಜ್ಜೆ ಕುಣಿತಗಳೆಂದು ಕರೆಯುವದು ವಾಡಿಕೆ. ಗಂಡು ಪಾತ್ರಗಳ ನೃತ್ಯ ಶೈಲಿ ಸರಳವಾಗಿದ್ದರೂ ವಿರೋಚಿತವಾಗಿದೆ. ಎರಡು ಹೆಜ್ಜೆಗಳಿಂದ ಎರಡು ಹೆಜ್ಜೆಗಳ ವರೆಗೂ ವಿಸ್ತಾರವನ್ನು ಪಡೆದಿವೆ ಇವುಗಳಲ್ಲಿ ಶಾಸ್ತ್ರೀಯ ನೃತ್ಯದ ವ್ಯವಸ್ಥಿತ ಸಂಕೇತಗಳು ಇಂದಿದ್ದರೂ ಪಾತ್ರಗಳಿಗೆ ತಕ್ಕಂತೆ ತರ ಬೇತಿ ಕೊಟ್ಟರೆ ಪ್ರಯೋಗದಲ್ಲಿ ಪರಿಣಾಮ ರಮಣೀಯವಾಗುವ ಸಾಧ್ಯತೆಗಳು ಹೇರಳ ವಾಗಿವೆ. ಪಾತ್ರಧಾರಿಗಳು ವಿಪರೀತ ಆವೇಶಕ್ಕೊಳಗಾಗಿ ಅಟ್ಟದ ಹಲಗೆ ಮುರಿಯು ವಂತೆ ಹುಂಬತನ ತೋರುವದನ್ನು ನಿಯಂತ್ರಿಸಬೇಕು. ಸ್ತ್ರೀ ಪಾತ್ರಗಳು ಹೆಜ್ಜೆಗಳನ್ನು ಅನುಸರಿಸಿ ಕುಣಿದರೂ ಮೇಲೆ ಕೆಳಗೆ ಬಾಗಿ ಹಿಂದೆ ಮುಂದೆ ಸರಿದು ಕೈಗಳ ಮೂಲಕ ಮುದ್ರೆಗಳನ್ನು ತೋರಿ ನಾಜೂಕಾಗಿ ಕುಣಿಯುತ್ತವೆ. ಹತ್ತಿಬಿಡಿಸುವ, ಹೂ ಕೊಯ್ಯುವ, ತೆನೆ ಮುರಿಯುವ, ರಾಶಿ ಮಾಡುವ ಇತ್ಯಾದಿ ಕ್ರಿಯೆಗಳನ್ನು ಹೇಳುವ ಈ ಕುಣಿತ ಗಳು ಉತ್ತರ ಕರ್ನಾಟಕದ ಕೃಷಿ ಮೂಲ ಸಾಂಸ್ಕೃತಿಕ, ಪ್ರಾದೇಶಿಕ ಹಿನ್ನೆಲೆ ಪಡೆದಿವೆ. ಈ ಎಲ್ಲ ಕುಣಿತಗಳ ಬಗೆಗೆ ಆಳವಾದ ಸಂಶೋಧನೆ ನಡೆಸಿ ಅರ್ಥಪೂರ್ಣವಾದ ಭಂಗಿಗಳನ್ನು ಯೋಜಿಸಿಕೊಳ್ಳುವ ಪ್ರಯತ್ನ ನಡೆಯಬೇಕಾಗಿದೆ.

ಕ) ಮೇಳಗೀತದ ಕಿರುಚಾಟವನ್ನು ತಪ್ಪಿಸಬೇಕು :

ಮೂಡಲಪಾಯ ಸಂಗೀತದ ಶಿಲ್ಪ ಶೈಲಿಗಳನ್ನು ಪರಿಶೀಲಿಸಿದರೆ ಇದು ಮೂಲತಃ ಕರ್ನಾಟಕ ಸಂಗೀತದ ಉಪಶಾಖೆಯಾಗಿದೆ. ಆದರೆ ಶಾಸ್ತ್ರೀಯ ವ್ಯವಸ್ಥೆಗೆ ಒಳಪಡದ ಅನೇಕ ವೈಲಕ್ಷಣ್ಯಗಳಿರುವುದರಿಂದ ಇದನ್ನು ಪ್ರತ್ಯೇಕ ಸಂಪ್ರದಾಯವೆಂದೇ ಪರಿಗಣಿಸಬೇಕಾಗಿದೆ. ಇದರಲ್ಲಿ ರಾಗಗಳಿಗಿಂತಲೂ ಧಾಟಿಗಳಿಗೆ ಪ್ರಾಧಾನ್ಯವಿದೆ. ಪ್ರದೇಶದಿಂದ ಪ್ರದೇಶಕ್ಕೆ ಇವುಗಳಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳಿದ್ದರೂ ಪ್ರಮುಖವಾಗಿ ೮-೧೦ ಧಾಟಿಗಳನ್ನು ಗುರುತಿಸುವದು ಸಾಧ್ಯ. ಮೊದಮೊದಲು ಹಾಡುಗಳಿಗೆ ದಕ್ಷಿಣಾದಿ ಸಂಗೀತಕ್ಕೆ ಸೇರಿದ ರಾಗ ತಾಳಗಳ ನಿರ್ದಿಷ್ಟತೆ ಇರುತ್ತಿತ್ತು. ಆದರೆ ಬರಬರುತ್ತ ಆಯಾ ರಾಗ ತಾಳಗಳಲ್ಲಿರುವ ಹಾಡುಗಳು ಧಾಟಿಗಳಾಗಿ ಸಿದ್ಧ ಶೈಲಿಯೊಂದು ರೂಪುಗೊಂಡಿದೆ. ಇತ್ತಿತ್ತಲಾಗಿ ಉತ್ತರಾದಿ ಸಂಗೀತದ ಅನುಕರಣೆ ಕೂಡ ಹೇರಳವಾಗಿದೆ. ಬೆಳಗಾಂವಿ, ಧಾರವಾಡ, ವಿಜಾಪೂರ ಜಿಲ್ಲೆಗಳಲ್ಲಿ ಉತ್ತರಾದಿ ಸಂಗೀತವು ಬಯಲಾಟದೊಂದಿಗೆ ಸಾಮರಸ್ಯ ಸಾಧಿಸಿದೆ. ಸಾಮಾನ್ಯವಾಗಿ ಸ್ತ್ರೀ ಪಾತ್ರದ ಹಾಡುಗಳ ಮೇಲೆ ಹಿಂದುಸ್ತಾನಿ ಸಂಗೀತದ ಪ್ರಭಾವವು ವಿಶೇಷವಾಗಿದೆ.

ಮೂಡಲಪಾಯದ ಹಿಮ್ಮೇಳದ ವೈಶಿಷ್ಟ್ಯವು ಇನ್ನಾವ ನಾಟಕಕ್ಕೂ ಇಲ್ಲವೆಂಬುದು ಗಮನಾರ್ಹ. ಆದರೆ ಹಿಮ್ಮೇಳದಲ್ಲಿ ಹಾಡುವವರ ಸಂಖ್ಯೆ ಇಷ್ಟೇ ಎಂಬ ನಿಯಮವಿಲ್ಲ. ೪-೫ ರಿಂದ ೧೦-೧೫ ರ ಜನರವರೆಗೆ ಇದರಲ್ಲಿ ಭಾಗವಹಿಸಿ 'ಹೇವೇವಾ' ಕೋಚನ್ನು ಎತ್ತಿಕೊಂಡು ಲಂಬಿಸಿ ಹಾಡುತ್ತ ಗಂಟಲಿನ ಕಸರತ್ತು ತೋರುತ್ತಾರೆ. ಇದರಿಂದ ಭಾವ ಸಾಹಚರ್ಯಕ್ಕೆ ಅವಕಾಶವಿಲ್ಲವಾಗಿ ಕೀಸರು ಬಾಸರಾಗಿ ಕಿವಿಗಡಚಿಕ್ಕುವದನ್ನು ತಡೆಗಟ್ಟಬೇಕಾಗಿದೆ

ಖ. ಸ್ತ್ರೀಪಾತ್ರಗಳನ್ನು ಸ್ತ್ರೀಯರೇ ವಹಿಸುವಂತೆ ಪ್ರೋತ್ಸಾಹಿಸಬೇಕು :

ಎಲ್ಲ ಜಾನಪದ ಆಟಗಳಂತೆ 'ಮೂಡಲಪಾಯ'ದಲ್ಲಿ ಸ್ತ್ರೀಪಾತ್ರಗಳನ್ನು ಪುರುಷರೇ ವಹಿಸುವ ಸಂಪ್ರದಾಯವಿದೆ. ಆದರೆ ಇದನ್ನು ಇಂದು ಕೈಬಿಡಬೇಕಾಗಿದೆ. ನಾಟಕ, ಸಿನೇಮಾಗಳಲ್ಲಿ ಸ್ತ್ರೀಯರು ಪಾತ್ರವಹಿಸುವುದು ಇಂದು ಸರ್ವಸಾಮಾನ್ಯವಾಗಿದೆ. ನಾಟಕ-ಸಿನೇಮಾಗಳಲ್ಲಿ ಪಾತ್ರವಹಿಸುವವರು ಚಾರಿತ್ರ್ಯಹೀನರು ಎಂಬ ತಪ್ಪು ಕಲ್ಪನೆ ಸಮಾಜದಲ್ಲಿತ್ತು. ಆದರೆ ಇಂದು ಸಮಾಜದ ದೃಷ್ಟಿಕೋನದಲ್ಲಿ ಪರಿವರ್ತನೆಯಾಗಿದೆ. ನಟರಂತೆ ನಟಿಯರಿಗೂ ಸಾಮಾಜಿಕ ಗೌರವಾದಗಳಿಗೆ ಪಾತ್ರರಾಗುತ್ತಿರುವ ಅನೇಕ ಉದಾಹರಣೆಗಳು ನಮ್ಮೆದುರಿಗಿವೆ. ಬಯಲಾಟದಲ್ಲಿ ಸ್ತ್ರೀಯರು ಪಾತ್ರ ವಹಿಸಲು ಮುಂದೆ ಬರುವ ಸಾಧ್ಯತೆಗಳು ಇವೆ. ಈಗಾಗಲೇ ಬಳ್ಳಾರಿ ಜಿಲ್ಲೆಯಲ್ಲಿ ಮೂಡಲಪಾಯಗಳಲ್ಲಿ ಸ್ತ್ರೀಯರು ಪಾತ್ರವಹಿಸಿದ ಉದಾಹರಣೆಗಳಿವೆ. ಬಳ್ಳಾ

ರಿಯ ಸುಜಾತಾ, ಅನ್ನಪೂರ್ಣಾ ಸಹೋದರಿಯರು, ಕೂಡ್ಲಿಗಿಯ ದೊಡ್ಡ ಮುದ್ದಮ್ಮ ಸಣ್ಣ ಮುದ್ದಮ್ಮ, ಅಂಜನಮ್ಮ, ಸೊರಬಲಮ್ಮ ಮುಂತಾದವರು ಜಿಲ್ಲೆಯಾದ್ಯಂತ ಅನೇಕ ಮೂಡಲಪಾಯಗಳಲ್ಲಿ ಪಾತ್ರವಹಿಸಿ ಖ್ಯಾತಿಪಡೆದಿದ್ದಾರೆ. ಕಮ್ಮಟದಲ್ಲಿ ಪ್ರಯೋಗಗೊಂಡ ಬಳ್ಳಾರಿಯ 'ಸುಂದೋಪಸುಂದರು' ಬಯಲಾಟದಲ್ಲಿ ಸ್ತ್ರೀ ಪಾತ್ರವನ್ನು ಸ್ತ್ರೀಯೇ ನಿರ್ವಹಿಸಿದ್ದರಿಂದ ಆ ಆಟದ ರಂಗೇ ಬೇರೆಯಾಗಿತ್ತೆಂಬುದನ್ನು ನಾವೆಲ್ಲ ಪ್ರತ್ಯಕ್ಷ ಕಂಡಿದ್ದೇವೆ. ಉಳಿದ ಮೇಳಗಳಲ್ಲಿ ಸ್ತ್ರೀಪಾತ್ರಧಾರಿಗಳಾದ ಪುರುಷರು ಎಷ್ಟೇ ಮೇಕಪ್ ಮಾಡಿಕೊಂಡಿದ್ದರೂ ಒಣಗಿದ ಹಿರೇಕಾಯಿಯಂತಹ ಅವರ ಸೊಟ್ಟ ಮುಖವು ಎದ್ದುಕಾಣುತ್ತಿದ್ದವು. ಇದರಿಂದ ಇಡೀ ಪ್ರಯೋಗವೇ ಆಭಾಸವಾಗುತ್ತಿತ್ತು. ಆದ್ದರಿಂದ ಸ್ತ್ರೀಪಾತ್ರಗಳನ್ನು ಸ್ತ್ರೀಯರೇ ವಹಿಸಲು ಪ್ರೋತ್ಸಾಹಿಸುವದು ಅಗತ್ಯವೆಂದು ನಮ್ಮ ಭಾವನೆ. ಸಾಮಾಜಿಕ ದೃಷ್ಟಿಕೋನದಲ್ಲಿ ಆಮೂಲಾಗ್ರ ಪರಿವರ್ತನೆಯಾದ್ದರಿಂದ ಬಳ್ಳಾರಿಯ ಮಾದರಿಯನ್ನು ಎಲ್ಲ ಕಡೆಗೂ ಅನುಸರಿಸಬಹುದಾಗಿದೆ.

೪. 'ಮೂಡಲಪಾಯ' ಪ್ರಯೋಗಗಳಿಗೆ ದಿಗ್ದರ್ಶನ (Direction)ದ ವ್ಯವಸ್ಥೆಯಾಗಬೇಕು :

''ಮೂಡಲಪಾಯ'' ಪ್ರಯೋಗವು ಸೂತ್ರಧಾರನ ಮಾರ್ಗದರ್ಶನದಲ್ಲಿ ನಡೆಯುತ್ತದೆ. ಇವನಿಗೆ ಮಾಸ್ತರನೆಂದು ಕರೆಯುತ್ತಿದ್ದರೂ ಮುಮ್ಮೇಳ, ಮೇಡಿ ತಾಳ ಎಂಬ ಅನ್ವರ್ಥ ಹೆಸರುಗಳು ಇವೆ. ಇವನಿಗೆ ಸಂಗೀತದಲ್ಲಿ ಇರುವಷ್ಟು ನಿಷ್ಣಾತಿ ಇತರ ಕಲಾರಂಗಗಳಲ್ಲಿ ಇರುವದಿಲ್ಲ. ಆಟದ ಮಾತುಗಳನ್ನು ಕಂಠಪಾಠ ಮಾಡಿಸುವನಾದರೂ ಇವನಿಗೆ ಅಭಿನಯಿಸುವುದಕ್ಕೆ ಬರುತ್ತದೆಂದು ನಿಶ್ಚಿತವಾಗಿ ಹೇಳಲು ಬರುವದಿಲ್ಲ. ಕುಣಿತ. ಕಲಿಸುವದಂತೂ ಇವನ ಜವಾಬ್ದಾರಿಯಲ್ಲ. ಕುಣಿತದ ಶಿಕ್ಷಣವು ಆಯಾ ಊರಿನ ಹಿರಿಯರಿಂದ ಪರಂಪರೆಯಿಂದ ಸಾಗಿಬರುತ್ತದೆ. ಆದರೆ ಇವರು ಕಲೆಗೆ ತನ್ನನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡಿರುವುದರಿಂದ ನೃತ್ಯ, ಅಭಿನಯಗಳಲ್ಲಿ ನಿಷ್ಣಾತಿ ಬರುವಂತೆ ತರಬೇತಿ ಕೊಡುವದು ಸಾಧ್ಯವಿದೆ. ಹೀಗಾದರೆ ಈ ಕಲೆಯು ನೃತ್ಯ, ಗೀತ, ಸಾಹಿತ್ಯ, ವೇಷಗಾರಿಕೆ ಅಭಿನಯಗಳಲ್ಲಿ ಸಾಮರಸ್ಯಗಳನ್ನುಂಟು ಮಾಡಿ ಇಡೀ ಪ್ರಯೋಗವನ್ನು ಕಲಾತ್ಮಕಗೊಳಿಸುವದು ಸಾಧ್ಯವಿದೆ. ಜಾನಪದ ಅಕ್ಯಾಡೆಮಿ ಹಾಗೂ ವಿಶ್ವವಿದ್ಯಾಲಗಳು ಇಂತಹ ತರಬೇತಿಯ ವ್ಯವಸ್ಥೆ ಮಾಡಬೇಕು.

೫. ಸಾರಥಿಯ ಪಾತ್ರದ ಔಚಿತ್ಯವನ್ನು ಹೆಚ್ಚಿಸಬೇಕು :

ಮೂಡಲಪಾಯದ ಗಂಭೀರವಾದ ವಸ್ತು ಯೋಜನೆಯಲ್ಲಿ ಹಾಸ್ಯಕ್ಕೆ ಅವಕಾಶ ಕಡಿಮೆ. ಈ ಕೊರತೆಯನ್ನು ನೀಗಿಸಲು ಸಾರಥಿಯ ಪಾತ್ರದ ಸೃಷ್ಟಿಯಾಗಿದೆ ಸಂಸ್ಕೃತ

ನಾಟಕಗಳ ವಿದೂಷಕನೇ ಪ್ರಾದೇಶಿಕ ಗುಣಗಳನ್ನು ಪಡೆದು ಸಾರಥಿಯ ರೂಪ ಪಡೆದಿದ್ದಾನೆ ಆದರೆ ರಂಗದಮೇಲೆ ಇವನ ಮಾತು, ಚೇಷ್ಟೆ; ಅಪದ್ಧ ಸಂಭಾಷಣೆ ಅಧಿಕ ಪ್ರಸಂಗತನಗಳಿಗೆ ಯಾವ ನಿಬಂದನೆಗಳೂ ಇಲ್ಲ. ಇವನ ಕೀಳು ಮಾತು, ಅಭಿನಯಗಳಿಂದ ಔಚಿತ್ಯದ ಎಲ್ಲೆ ಮೀರಿ ವರ್ತಿಸಿ ಪ್ರೇಕ್ಷಕರು ತಲೆತಗ್ಗಿಸುವಂತೆ ಮಾಡುವದು ಸರ್ವಸಾಮಾನ್ಯವಾಗಿದೆ. ಲಘುವಾದ ಅಂತೆಯೇ ಆರೋಗ್ಯಪೂರ್ಣವಾದ ಹಾಸ್ಯದೊಂದಿಗೆ, ಲಘು ಹೆಜ್ಜೆಗಳ ಕುಣಿತಗಳನ್ನು ಅಳವಡಿಸಿ ಈ ಪಾತ್ರವನ್ನು ಕಲಾಪೂರ್ಣಗೊಳಿಸುವದು ಸಾಧ್ಯವಿದೆ.

೬. ವಾದ್ಯ ಹಾಗೂ ಇತರ ರಂಗಪರಿಕರಗಳ ಸಂಯೋಜನೆ:

ಮೂಡಲಪಾಯದಲ್ಲಿ ಬಳಕೆಗೊಳ್ಳುವ ವಾದ್ಯಗಳಲ್ಲಿ ಮದ್ದಳೆ ಹಾಗೂ ತಾಳಗಳು ಪ್ರಾಚೀನವಾದವುಗಳು. ಆಧಾರಸ್ವರಕ್ಕೆ ಸ್ವರಕಾಯಿಯನ್ನು ಉಪಯೋಗಿಸಲಾಗುತ್ತಿತ್ತು. ಆದರೆ ಇತ್ತಿತ್ತಲಾಗಿ ಹಾರ್ಮೋನಿಯಂ, ತಬಲಾ, ಪಿಟೀಲು, ಮುಖವೀಣೆಗಳ ವ್ಯಾಪಕ ಬಳಕೆ ನಡೆದಿದೆ. ಮೂಡಲಪಾಯ ಸಂಗೀತಕ್ಕೆ ಇವೆಲ್ಲ ಚನ್ನಾಗಿ ಹೊಂದಿಕೊಂಡಿವೆಯೆಂದು ಕಮ್ಮಟದಲ್ಲಿ ಭಾಗವಹಿಸಿದ ಎಲ್ಲ ಮೂವತ್ತು ಜನ ಕತೆಗಾರರ ಅಭಿಪ್ರಾಯವಾಗಿದೆ. ಹೀಗಿದ್ದಾಗ ಮೂಲದ ಮದ್ದಳೆ ತಾಳಗಳನ್ನಷ್ಟೇ ಉಪಯೋಗಿಸಬೇಕೆಂಬ ಕಟ್ಟು ಕಟ್ಟಳೆ ಅರ್ಥಹೀನ.

"ಮೂಡಲಪಾಯ"ದ ವೇಷಭೂಷಣಗಳಲ್ಲಿ ಕಿರೀಟ ಭುಜಕೀರ್ತಿ, ಎದೆಕಟ್ಟುಗಳು ಯಕ್ಷಗಾನಕ್ಕಿಂತಲೂ ಭವ್ಯ ಹಾಗೂ ಅದ್ಭುತರಮ್ಯವಾಗಿವೆ. ಆದ್ದರಿಂದ ಹಳೆಯ ವೇಷಭೂಷಣಗಳ ಬಳಕೆಯನ್ನು ಮುಂದುವರಿಸುವದು ಉತ್ತಮ. ಯಕ್ಷಗಾನದ ಕುಣಿತಗಳಲ್ಲಿ ನಾಜೂಕು, ದ್ರುತಗತಿಯಿರುವದರಿಂದ ಪಾತ್ರಗಳಿಗೆ ಭಾರವಾಗದಂತೆ ಅವುಗಳನ್ನು ಕಿರಿದು ಹಾಗೂ ಹಗುರುಗೊಳಿಸಲಾಗಿದೆ. ಆದ್ದರಿಂದ ಈ ವಿಷಯದಲ್ಲಿ ಯಕ್ಷಗಾನದ ಇಲ್ಲವೆ ನಾಟಕಗಳ ಅನುಕರಣೆ ಮಾಡದಿರುವದೇ ಒಳ್ಳೆಯದು.

ರಂಗಸಜ್ಜಿಕೆ, ಸಂಪ್ರದಾಯಗಳಲ್ಲಿ ಕೂಡ ನವೀಕರಣದ ಅಗತ್ಯವಿದೆ. ಮೂಡಲಪಾಯ ಕುಣಿತಕ್ಕೆ ಕಟ್ಟಿಗೆಯ ಹಲಗೆಗಳಿಂದ ಮಾಡಿದ ಅಟ್ಟವಾದರೆ ಒಳ್ಳೆಯದು. ಆದರೆ ಇಂದು ಸಣ್ಣ ದೊಡ್ಡ ನಗರಗಳಲ್ಲಿ ಆಧುನಿಕ ನಾಟ್ಯ ಗೃಹಗಳು ನಿರ್ಮಾಣಗೊಳ್ಳುತ್ತಲಿವೆ. ಉಪಲಬ್ಧವಿರುವ ಕಡೆ ನಾಟ್ಯ ಗೃಹಗಳಲ್ಲಿ "ಮೂಡಲಪಾಯ"ವನ್ನು ಪ್ರಯೋಗಿಸಿದರೆ ತಪ್ಪೇನೂ ಇಲ್ಲ. ಪೆಟ್ರೋಮ್ಯಾಕ್ಸ ಇಲ್ಲವೆ ಹಿಲಾಯಿಗಳ ಬೆಳಕಿನ ವ್ಯವಸ್ಥೆ ಮೂಡಲಪಾಯಕ್ಕೆ ಒಗ್ಗಿದೆ. ಆದರೆ ವಿದ್ಯುತ್ ಬಲ್ಬುಗಳಿಗೆ ಬಣ್ಣದ ಹಾಳೆಗಳನ್ನು ಸುತ್ತಿ ಅಂತಹದೇ ಪ್ರಭಾವಗಳನ್ನುಂಟು ಮಾಡಬಹುದಾಗಿದೆ. ಮೂಡಲಪಾಯ ಬಯಲಾಟ ಅಟ್ಟದಿಂದ ನಾಟ್ಯಗೃಹಕ್ಕೆ ಪ್ರವೇಶಿಸಿದಾಗ ಹ್ಯಾಂಗಿಂಗ್ ಮೈಕಿನ ಸೌಕರ್ಯವನ್ನು ಬಳಸಿಕೊಳ್ಳಬಹುದಾಗಿದೆ.

ರೊಮಾನ್ಸ್ : ಒಂದು ಸಾಹಿತ್ಯ ಪ್ರಕಾರ

● ಬಸವರಾಜ ನಾಯ್ಕರ

ರೊಮಾನ್ಸ್ ಎಂದೊಡನೆಯೇ ಭಾರತೀಯರಿಗೆ ತಟ್ಟನೆ ನೆನಪಾಗುವ ವಿಚಾರವೆಂಬರೆ ಹಿಂದೀ ಅಥವಾ ಹಿಂದಿಯನ್ನೇ ಅನುಸರಿಸುವಂಥ ಪ್ರಾದೇಶಿಕ ಭಾಷೆಯ ಚಲನಚಿತ್ರಗಳು. ಯಾವುದೋ ಒಂದು ನಿರ್ಜನವಾದ ಕಾಡಿನಲ್ಲಿ ಅಥವಾ ಹೂದೋಟದಲ್ಲಿ ಪ್ರೇಮಿಗಳಿಬ್ಬರು ಪರಸ್ಪರ ಚುಂಬಿಸುವುದರಲ್ಲಿ ಮಗ್ನರಾಗಿರುವುದು, ಅಥವಾ ಹಚ್ಚಹಸುರಾದ ಹುಲ್ಲಿನ (ಇಳಿಜಾರಾದ) ಮೈದಾನದಲ್ಲಿ ಒಂದು ಗಂಡು ಒಂದು ಹೆಣ್ಣು ಒಬ್ಬರ ಮೇಲೊಬ್ಬರು ಬಿದ್ದು ಹೊರಳಾಡುವುದು ಅಥವಾ ನದಿಯಲ್ಲಿ ಮುಳುಗಿ ಸಾಯಲೆತ್ನಿಸುವ ಹುಡುಗಿಯೊಬ್ಬಳನ್ನು ಹುಡುಗನೊಬ್ಬ ಅನಿರೀಕ್ಷಿತವಾಗಿ ಬಂದು ಅನಾಮತ್ತಾಗಿ ಎತ್ತಿಕೊಂಡು ತೊಯ್ದ ಉಡುಗೆಗಳೊಳಗಿಂದ ಇಣುಕುತ್ತಿರುವ ಅವಳ ಯೌವನವನ್ನು ಪ್ರೇಕ್ಷಕರಿಗೆ ಕಣ್ತುಂಬ ತೋರಿಸಿ ಅವರ ಬಾಯಲ್ಲಿ ನೀರು ಬರಿಸುವುದು ಇವೇ ಮೊದಲಾದ ದೃಶ್ಯಗಳು ಭಾರತೀಯ ಹಿಂದೀ ಚಲನಚಿತ್ರಗಳಲ್ಲಿ ಸರ್ವಸಾಮಾನ್ಯವಾಗಿ ಕಂಡು ಬರುತ್ತವೆ. ಇಂಥ ದೃಶ್ಯಗಳನ್ನೆಲ್ಲ ಭಾರತೀಯರಾದ ನಾವು "ರೊಮಾನ್ಸ್" ಎಂದು ಹುಮ್ಮಸಿನಿಂದ ಕರೆಯುತ್ತೇವೆ. ಅದರಂತೆ ನಿಜಜೀವನದಲ್ಲಿಯೂ ಇವೇ ಅಲ್ಲವಿದ್ದರೂ ಈ ತರಹದ ಘಟನೆಗಳನ್ನು ನೋಡುತ್ತೇವೆ. ಕಾಲೇಜಿನ ಹೂದೋಟದಲ್ಲಾಗಲಿ ಅಥವಾ ಕ್ಯಾಂಟೀನಿನಲ್ಲಾಗಲಿ ಹುಡುಗನೊಬ್ಬ ಹುಡುಗಿಯೊಂದಿಗೆ ಚೆಕ್ಕಂದವಾಡುತ್ತಿದ್ದರೆ ಅದಕ್ಕೂ ನಾವು 'ರೊಮಾನ್ಸ್' ನಡೆದಿದೆ ಎನ್ನುತ್ತಿರುತ್ತೇವೆ ಹೀಗೆ ಶೃಂಗಾರ ರಸೋದ್ದೀಪಕವಾದ ಅಥವಾ ಲೈಂಗಿಕತೆಯ ಮೇಲೆಯೇ ಆಧರಿಸಿದ ಮಾನವೀಯ ಸಂಬಂಧಗಳನ್ನು ನಾವು ಸಾಮಾನ್ಯವಾಗಿ ಮತ್ತು ಹಗುರವಾಗಿ 'ರೊಮಾನ್ಸ್' ಎಂದು ಬಣ್ಣಿಸುತ್ತೇವೆ. ಭಾರತದ ಜೀವನವನ್ನು ಪ್ರತಿನಿಧಿಸುವ ಹಿಂದೀ ಚಲನಚಿತ್ರಗಳು 'ರೊಮಾನ್ಸ್' ಎಂಬ ಶಬ್ದದ ಹಿಂದಿನ ಗಾಂಭೀರ್ಯ, ಚಿಂತನಶೀಲತೆ ಮತ್ತು ತಳಹದಿಯನ್ನು ಮರೆಮಾಚಿಸಿ ಅದನ್ನೊಂದು ಕೇವಲ ಲೈಂಗಿಕವೆನ್ನಬಹುದಾದ ಶೃಂಗಾರ ದೃಶ್ಯಗಳನ್ನು ತೋರಿಸುವ ಚಲನಚಿತ್ರ-ಪ್ರಕಾರ (ಆದರೆ ಸಾಹಿತ್ಯ ಪ್ರಕಾರವಲ್ಲ)ವೆನ್ನುವಷ್ಟರ ಮಟ್ಟಿಗೆ ಅಗ್ಗವಾಗಿಸಿದ್ದಾರೆ. ಹೀಗಾಗಿ ಅನೇಕ ಭಾರತೀಯ

ವಿದ್ಯಾರ್ಥಿಗಳಿಗೆ 'ರೊಮಾನ್ಸ್' ಎಂಬ ಶಬ್ದದ ನಿಜವಾದ ಅರ್ಥವಾಗಲಿ ಅಥವಾ ಮಹತ್ವವಾಗಲಿ ತಿಳಿದಿರುವುದಿಲ್ಲ. ಆದುದರಿಂದ ಅವರು ಅವುಗಳನ್ನು ತಿಳಿದುಕೊಳ್ಳುವುದು ಅತ್ಯಂತ ಅವಶ್ಯವಾದ ಜವಾಬ್ದಾರಿಯಾಗಿದೆ.

'ರೊಮಾನ್ಸ್' ಎಂಬುದು ಯುರೋಪ ದೇಶಗಳಲ್ಲಿ ಅತ್ಯಂತ ಸುಪ್ರಸಿದ್ಧವಾದ ಸಾಹಿತ್ಯ-ಪ್ರಕಾರವಾಗಿದೆ. ಅದರ ಬಗೆಗೆ ಸಾಕಷ್ಟು ಜನ ವಿದ್ವಾಂಸರು ಚರ್ಚಿಸಿದ್ದಾರೆ. ಆದರೆ ನಾರ್ಥ್ರೊಪ್ ಫ್ರಾಯ್ ಅವರು ಈ ಸಾಹಿತ್ಯ ಪ್ರಕಾರವನ್ನು ಕುರಿತು ವಿಶೇಷವಾದ ಅಧ್ಯಯನ ಮಾಡಿ ಜಗತ್ಪ್ರಸಿದ್ಧರಾಗಿದ್ದಾರೆ. ಸಧ್ಯ ಕೆನಡಾ ದೇಶದ ಟೊರಂಟೊ ವಿಶ್ವವಿದ್ಯಾಲಯದಲ್ಲಿ ಆಂಗ್ಲವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿರುವ ಅವರು ಅತ್ತ್ಯುನ್ನತ ಮಟ್ಟದ ಮೇಧಾವಿಯೆಂದು ಹೆಸರುವಾಸಿಯಾಗಿದ್ದಾರೆ. ಅವರ ಅಗಾಧವಾದ ಸಾಹಿತ್ಯವನ್ನು ಮೆಚ್ಚಿಕೊಂಡುದರಿಂದಲೆ ಜಗತ್ತಿನ ಸಾಹಿತ್ಯಾಭ್ಯಾಸಿಗಳು ಅವರನ್ನು 'ಆಧುನಿಕ ಅರಿಸ್ಟಾಟಲ್, ಎಂದು ಕೊಂಡಾಡಿದ್ದಾರೆ. ಸೈದ್ಧಾಂತಿಕ ವಿಮರ್ಶಾ ಕ್ಷೇತ್ರದಲ್ಲಿ ಪುರಾತನ ಅರಿಸ್ಟಾಟಲ್‌ನ ನಂತರ ಅಷ್ಟೇ ಗಂಭೀರವಾಗಿ ಕೆಲಸ ಮಾಡಿದವರೆಂದರೆ ನಾರ್ಥ್ರೊಪ್ ಫ್ರಾಯ್ ಅವರೊಬ್ಬರೆ ಎಂದು ಹೇಳಿದರೆ ಅತಿಶಯೋಕ್ತಿಯಾಗುವುದಿಲ್ಲ. ಏಕೆಂದರೆ ಅವರು ಹಾಗೆ ಇದ್ದದ್ದು ನಿಜವಾದ ಸಂಗತಿಯೆ ಆಗಿದೆ. ಅವರು ಅನೇಕ ವಿಮರ್ಶಾಗ್ರಂಥಗಳನ್ನು ಬರೆದಿದ್ದಾರೆ. ಅವುಗಳಲ್ಲಿ The Anatomy of Criticism ಮತ್ತು The Secular Scripture ಎಂಬ ಗ್ರಂಥಗಳು ಅತ್ತ್ಯುನ್ನತ ಮಟ್ಟದ ವಿಮರ್ಶಾ ಪ್ರಜ್ಞೆಯ ಕನ್ನಡಿಗಳೆಂದು ಹೇಳಬಹುದು. ಇವೆರಡೂ ಗ್ರಂಥಗಳನ್ನೋದುವದು ಒಂದು ಕಠಿಣವೂ ಅಷ್ಟೇ ಆನಂದದಾಯಕವೂ ಆದ ಅನುಭವಾಗಿರುತ್ತದೆ. ಒಂದು ರೀತಿಯಲ್ಲಿ ನಾರ್ಥ್ರೊಪ್ ಫ್ರಾಯ್ ಅವರು ಆಧುನಿಕ ಸಾಹಿತ್ಯಲೋಕದ ವಿಮರ್ಶಕರ ಗುರು ಎಂದೂ ಹೇಳಬಹುದು. ಮೇಲೆ ಉದ್ಧರಿಸಿದ ಗ್ರಂಥಗಳೆರಡರಲ್ಲಿಯೂ ಅವರು ಐರೋಪ್ಯ ದೇಶಗಳ ಸುಪ್ರಸಿದ್ಧ 'ರೊಮಾನ್ಸ್' ಎಂಬ ಸಾಹಿತ್ಯ ಪ್ರಕಾರವನ್ನು ಕುರಿತು ಸುದೀರ್ಘವಾಗಿ ಚರ್ಚಿಸಿದ್ದಾರೆ. ಈ ಲೇಖನದಲ್ಲಿ ಅವರ ಕೆಲವು ಪ್ರಮುಖ ವಿಚಾರಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಬಹುದು.

'ರೊಮಾನ್ಸ್' ಎಂಬುದು ಪಾಶ್ಚಾತ್ಯ ಸಾಹಿತ್ಯದಲ್ಲಿ ಅತ್ಯಂತ ಪ್ರಭಾವಪೂರ್ಣ ಹಾಗೂ ಜನಪ್ರಿಯವಾದ ಸಾಹಿತ್ಯಪ್ರಕಾರವಾಗಿದೆ. ಪೌರ್ವಾತ್ಯ ದೇಶದಲ್ಲಿ 'ರೊಮಾನ್ಸ್' ಎಂಬ ಹೆಸರಿನ ಸಾಹಿತ್ಯವಿರದಿದ್ದರೂ ರೊಮಾನ್ಸಿಗೆ ನಿಕಟವಾದ ಸಾಹಿತ್ಯ ಕಂಡು ಬರುತ್ತದೆ. ಉದಾಹರಣೆಗೆ ಭಾರತೀಯ ಪುರಾಣಗಳು ಈ ಸಾಹಿತ್ಯವನ್ನು ಹೋಲುತ್ತವೆ. ನಾರ್ಥ್ರೊಪ್ ಫ್ರಾಯ್ ಅವರು 'ರೊಮಾನ್ಸ್' ಪ್ರಕಾರವನ್ನು ಎರಡು ಗುಂಪುಗಳಲ್ಲಿ ವಿಂಗಡಿಸುತ್ತಾರೆ. ಒಂದು. ಜಾತ್ಯಾತೀತ ರೊಮಾನ್ಸ್. ಎರಡು. ಧಾರ್ಮಿಕ ರೊಮಾನ್ಸ್. ಜಾತ್ಯಾತೀತ ರೊಮಾನ್ಸ್‌ಗಳಲ್ಲಿ ಪ್ರೇಮವೀರ್ಯ ಮತ್ತು

ದೀನರಕ್ಷಣೆಗಳು ಪ್ರಮುಖವಾದ ವಸ್ತುವಾಗಿದ್ದರೆ, ಧಾರ್ಮಿಕ ರೊಮಾನ್ಸ್‌ಗಳಲ್ಲಿ ಸಂತರ ಆದರ್ಶಗಳೇ ಪ್ರಮುಖ ವಸ್ತುವಾಗಿರುತ್ತದೆ. ಹೀಗಿದ್ದರೆ ಇವೆರಡೂ ಪ್ರಕಾರಗಳಲ್ಲಿ ಒಂದು ಸಾಮ್ಯವಿರುತ್ತದೆ. ಅದೇನೆಂದರೆ ಎರಡರಲ್ಲಿಯೂ ಸ್ವಾಭಾವಿಕ ತತ್ವಗಳನ್ನು ಉಲ್ಲಂಘಿಸಿ ಅದ್ಭುತವೆನ್ನಬಹುದಾದ ಪವಾಡಾತ್ಮಕ ತತ್ವಗಳನ್ನನುಸರಿಸಲಾಗುತ್ತದೆ.

ಫ್ರಾಯ್ ಅವರು ರೊಮಾನ್ಸ್‌ನ್ನು ರುದ್ರ ನಾಟಕ (Tragedy)ದೊಂದಿಗೆ ಹೋಲಿಸಿ ಅವೆರಡರಲ್ಲಿಯ ಸಾಮ್ಯವೈಷಮ್ಯಗಳನ್ನು ತೋರಿಸುತ್ತಾರೆ. ರುದ್ರನಾಟಕದಲ್ಲಿ ಕನಿಕರ (Pity) ಮತ್ತು ಭಯ (Fear)ಗಳು ಸಾಮಾನ್ಯವಾಗಿದ್ದರೆ ರೊಮಾನ್ಸಿನಲ್ಲಿ ಅವೆರಡೂ ಭಾವನೆಗಳು ಅವಕ್ಕಿಂತ ಉನ್ನತವಾದ ಭಾವನೆಗಳಾಗಿ ಮಾರ್ಪಡುತ್ತವೆ ರುದ್ರನಾಟಕದಲ್ಲಿ ಉದ್ಭವಿಸುವ 'ಭಯ'ವು ರೊಮಾನ್ಸಿನಲ್ಲಿ 'ಭಯ'ವಾಗಿ ಉಳಿಯದೆ ವೀರರಸ ಅಥವಾ ಅದ್ಭುತ ರಸೋದ್ದೀಪಕವಾಗಿರುತ್ತದೆ. ಅದರಂತೆ ರುದ್ರನಾಟಕದಲ್ಲಿ ಉದ್ಭವಿಸುವ 'ಕನಿಕರ'ವು ರೊಮಾನ್ಸಿನಲ್ಲಿ ಮುಂದವಾದ ಆಕರ್ಷಣೆಯಾಗಿ ಅಥವಾ ಸೃಜನಾತ್ಮಕ ಕಲ್ಪನಾಲಹರಿಯಾಗಿ ಮಾರ್ಪಡುತ್ತದೆ.

'ರೊಮಾನ್ಸ್' ಎಂಬ ಸಾಹಿತ್ಯ ಪ್ರಕಾರವು, ಫ್ರಾಯ್ ಅವರ ಪ್ರಕಾರ, ಮಾನವನ ಆಶೆಗಳನ್ನು ಸಂತೃಪ್ತಗೊಳಿಸುವ ಕನಸು (Wish fulfilment-dream)ಗಳಿಗೆ ಅತ್ಯಂತ ನಿಕಟವಾಗಿರುತ್ತದೆ. ಆದುದರಿಂದ ಈ ಸಾಹಿತ್ಯಪ್ರಕಾರಕ್ಕೆ ಒಂದು ಕುತೂಹಲಕಾರಿಯಾದ ಸಾಮಾಜಿಕ ಪಾತ್ರವಿದೆ. ಪ್ರತಿಯೊಂದು ಯುಗದಲ್ಲಿಯೂ ಅಧಿಕಾರಾರೂಢ ಸಾಮಾಜಿಕ ಅಥವಾ ಬೌದ್ಧಿಕ ವರ್ಗವು ತನ್ನ ಆದರ್ಶಗಳನ್ನೆಲ್ಲ ಒಂದಿಲ್ಲ ಒಂದು ತರಹ ರೊಮಾನ್ಸಿನ ರೂಪದಲ್ಲಿ ಅಭಿವ್ಯಕ್ತಿಸುತ್ತದೆ. ಅಂಥ ರೊಮಾನ್ಸಿನಲ್ಲಿ ಚಿತ್ರಿತವಾಗಿರುವ ತತ್ವನಿಷ್ಠ ವೀರರು ಮತ್ತು ಸುಂದರಿಯರಾದ ನಾಯಕಿಯರು ಆ ವರ್ಗದ ಆದರ್ಶಗಳನ್ನು ಪ್ರತಿನಿಧಿಸಿದರೆ, ಅದರಲ್ಲಿಯ ಖಳನಾಯಕರು ಆ ವರ್ಗದ ಆದರ್ಶಗಳಿರುವ ಗಂಡಾಂತರಗಳನ್ನು ಪ್ರತಿನಿಧಿಸುತ್ತಾರೆ. ಈ ತರಹದ ಕಥಾವಸ್ತು ಮಧ್ಯಕಾಲೀನ ಪ್ರೇಮವೀರರನ್ನು ಕುರಿತ ರೊಮಾನ್ಸಗಳಲ್ಲಿ, ರೆನೈಸ್ಸಾನ್ಸ್ ಕಾಲದ ಕುಲೀನ ವರ್ಗದ ರೊಮಾನ್ಸ್‌ಗಳಲ್ಲಿ, ಹದಿನೆಂಟನೆಯ ಶತಮಾನದ ನಂತರದ ಭೂರ್ಜ್ವಾ ರೊಮಾನ್ಸ್‌ಗಳಲ್ಲಿ ಮತ್ತು ಆಧುನಿಕ ರಷಿಯಾ ದೇಶದ ಕ್ರಾಂತಿಕಾರಿ ರೊಮಾನ್ಸ್‌ಗಳಲ್ಲೆಲ್ಲ ಕಂಡು ಬರುತ್ತದೆ. ಅಲ್ಲದೆ ರೊಮಾನ್ಸಿನಲ್ಲಿ ಶಿಶು ಸಹಜವಾದ ಭಾವನೆಗಳು ಅತ್ಯಂತ ಸಾಮಾನ್ಯವಾಗಿರುತ್ತವೆ. ಅಲ್ಲದೆ ಒಂದು ತರಹದ ನೆನಪುಗಳ ಮರುಕಳಿಕೆ (nostalgia)ಯಿರುತ್ತದೆ. ಒಂದು ಕಾಲ್ಪನಿಕವಾದ "ಸುವರ್ಣ ಯುಗ" (golden age)ದ ಬರವಿಗಾಗಿ ಸತತವಾದ ಹಾರೈಕೆ ಕಂಡುಬರುತ್ತದೆ.

ಫ್ರಾಯ್ ಅವರು ರೊಮಾನ್ಸಿನಲ್ಲಿ ಆರು ಪ್ರಮುಖವಾದ ಲಕ್ಷಣಗಳನ್ನು ಎತ್ತಿ ತೋರಿಸುತ್ತಾರೆ. ಮೊದಲನೆಯ ಲಕ್ಷಣವೆಂದರೆ ನಾಯಕನ ಜನ್ಮ ವಿಚಿತ್ರ ಅಥವಾ

ಕುತೂಹಲಕಾರಿಯಾಗಿರುತ್ತದೆ. ರೊಮಾನ್ಸಿನ ನಾಯಕನು ಸಾಮಾನ್ಯವಾಗಿ ನೀರಿನಲ್ಲಿ (ಅದು ಸರೋವರ, ನದಿ ಅಥವಾ ಸಮುದ್ರವಾಗಿರಬಹುದು) ಜನ್ಮ ತಾಳಿರುತ್ತಾನೆ. ಎರಡನೆಯದಾಗಿ, ನಾಯಕನು ಯೌವನದಲ್ಲಿ ಅತ್ಯಂತ ಮುಗ್ಧನಾಗಿರುತ್ತಾನೆ. ಮೂರನೆಯದಾಗಿ, ರೊಮಾನ್ಸಿನಲ್ಲಿ ಅನ್ವೇಷಣೆ (Quest theme) ಅತ್ಯಂತ ಸಹಜವಾದ ಮತ್ತು ಅನಿವಾರ್ಯವಾದ ಅಂಶವಾಗಿರುತ್ತದೆ. ನಾಲ್ಕನೆಯದಾಗಿ, ರೊಮಾನ್ಸಿನಲ್ಲಿ ಯಾವಾಗಲೂ ಈಗಿದ್ದುದಕ್ಕಿಂತ ಹೆಚ್ಚು ಆನಂದದಾಯಕವಾದ ಸಮಾಜವು ಕಾಣುತ್ತಿರುತ್ತದೆ. ಐದನೆಯದಾಗಿ ಈ ಸಾಹಿತ್ಯ ಪ್ರಕಾರದಲ್ಲಿ ಅನುಭವವನ್ನು ಚಿಂತನಪರ ವರ್ಣನಾತ್ಮಕ ದೃಷ್ಟಿಯಿಂದ, ಮೇಲಿನಿಂದ ನೋಡುವ ದೃಷ್ಟಿಯಿರುತ್ತದೆ. ಆರನೆಯುದಾಗಿ, ಇದರಲ್ಲಿ ಪೆನ್ಸರೊಸೊ ಅಥವಾ ಮಾನಸಿಕ ವ್ಯಾಕುಲತೆಯ ಸ್ಥಿತಿ ಅತ್ಯಂತ ಸಾಮಾನ್ಯವಾಗಿರುತ್ತದೆ. ಯೇಟ್ಸ ಕವಿಯು ಚಿತ್ರಿಸಿರುವ ಗೋಪುರದಲ್ಲಿ ಕುಳಿತು ಚಿಂತನ ಗೈಯುವ ವೃದ್ಧನ ಸ್ಥಿತಿ ರೊಮಾನ್ಸ್‌ಗಳಲ್ಲಿ ಕಂಡು ಬರುತ್ತದೆ.

ಈ ಸಾಮಾನ್ಯ ಲಕ್ಷಗಣಳನ್ನು ತಿಳಿದುಕೊಂಡ ನಂತರ ನಾವು ರೊಮಾನ್ಸಿನ ಇನ್ನಿತರ ಲಕ್ಷಣಗಳನ್ನು ವಿವರವಾಗಿ ಚರ್ಚಿಸಬಹುದು. ರೊಮಾನ್ಸಿನಲ್ಲಿ ಪ್ರೇಮ ಮತ್ತು ಸಾಹಸ ಇವೆರಡೂ ಅತ್ಯಂತ ಪ್ರಮುಖವಾದ ಕಥಾವಸ್ತುಗಳಾಗಿರುತ್ತವೆ. ಪ್ರೇಮದಿಂದ ಉದ್ಭವಿಸುವ ತೊಂದರೆಗಳನ್ನು ನಿವಾರಿಸುವುದಕ್ಕಾಗಿ ಸಾಹಸ ಅನಿವಾರ್ಯವಾಗುತ್ತದೆ, ಪ್ರೇಮವು ಸಾಹಸಕ್ಕೆ ಮೂಲ ಪ್ರೇರಣೆಯಾಗಿದ್ದರೂ, ಸಾಹಸಕ್ಕೆ ಕೊನೆಯ ಬಹುಮಾನ ಪ್ರೇಮವೇ ಆಗಿದೆ. ಇಲ್ಲಿ ಪ್ರೇಮವೆಂದಾಗ ಮಾನವ ಮತ್ತು ದೇವರ ನಡುವಿನ ಪ್ರೇಮವಾಗಲಿ ಅಥವಾ ಮಾನವ ಮತ್ತು ಮಾನವ ಜನಾಂಗದ ನಡುವಿನ ಪ್ರೇಮವಾಗಲಿ ಆಗಿರದೆ ಅದು ಕೇವಲ ಗಂಡು ಮತ್ತು ಹೆಣ್ಣಿನ ನಡುವಿನ ಪ್ರೇಮವಾಗಿದ್ದು ಕೇವಲ ಲೈಂಗಿಕವಾರದೆ ಉದಾತ್ತೀಕರಿಸಲ್ಪಟ್ಟ ಭಾವನೆಯಾಗಿತ್ತದೆ. ಉದಾಹರಣೆಗೆ, ಮಧ್ಯಕಾಲೀನ ಯುರೋಪಿಯನ್ ರೊಮಾನ್ಸ್‌ಗಳಲ್ಲಿ ಪ್ರೇಮವೀರನೊಬ್ಬ ಅರ್ಥರ್ ಮಹಾರಾಜನ ದರಬಾರಿನಲ್ಲಿ ಮಾನ ಮರ್ಯಾದೆಗಳನ್ನು ಗಳಿಸುವ ಆಶೆಯುಳ್ಳವನಾಗಿದ್ದು ಸಮೀಪದ ಕಾಡಿನಲ್ಲಿ ಬೇಟೆಯಾಡುವುದಕ್ಕಾಗಿ ಹೋಗುತ್ತಾನೆ. ಪ್ರೇಮದ ಪಾವಿತ್ರ್ಯವನ್ನು ರಕ್ಷಿಸುವುದು ಆತನ ಜೀವನದ ಪರಮಗುರಿಯಾಗಿರುವುದರಿಂದ ಪ್ರೇಮಕ್ಕೆ ಗಂಡಾಂತರ ಬಂದೊದಗಿದಾಗೆಲ್ಲ ಅಲ್ಲಿಗೆ ಧಾವಿಸಿ ಅದನ್ನು ಕಾಪಾಡುವುದೆ ಅವನ ಸಾಹಸಕ್ಕೆ ಮೂಲಪ್ರೇರಣೆಯಾಗುತ್ತದೆ. ಆತ ಕಾಡಿನಲ್ಲಿ ಅತ್ತಿಂದಿತ್ತ ಕುದುರೆಯ ಮೇಲೆ ಸವಾರಿ ಮಾಡುವಾಗ ಮತ್ತೊಬ್ಬ ಅಲ್ಲಿ ಒಬ್ಬ ಸುಂದರಿಯನ್ನು ಬೆನ್ನಟ್ಟಿ ಹೊರಟಿರುತ್ತಾನೆ. ಆಗ ಆ ಅಬಲೆಯಾದ ಸುಂದರಿ ತನ್ನ ರಕ್ಷಣೆಗಾಗಿ ಸಹಾಯ ಯಾಚಿಸುತ್ತ ಕೂಗುತ್ತಿರುತ್ತಾಳೆ. ಅದೇ ವೇಳೆಗೆ ಕಥಾನಾಯಕನಾದ ಪ್ರೇಮವೀರ ಅಲ್ಲಿಗೆ ಕೂಡಲೇ ಧಾವಿಸಿ ಆ ಸುಂದರಿಯನ್ನು ಕಾಡಿಸುವ ಪ್ರೇಮಚಾಂಡಾಲನನ್ನು ಚೆನ್ನಾಗಿ ಮರ್ಧಿಸಿ, ಸೋಲಿಸಿ ಇಲ್ಲವೆ ಕೊಂದು ಅವಳನ್ನು ರಕ್ಷಿಸುತ್ತಾನೆ. ಆಗ

ಅವಳು ಸ್ವಾಭಾವಿಕವಾಗಿಯೆ ತನ್ನನ್ನು ರಕ್ಷಿಸಿದ ಸರದಾರನನ್ನು ಪ್ರೀತಿಸತೊಡುಗುತ್ತಾಳೆ. ಹೀಗೆ ಪ್ರೇಮ ಮತ್ತು ಸಾಹಸಗಳು ರೊಮಾನ್ಸಿನಲ್ಲಿ ಸರ್ವಸಾಮಾನ್ಯವಾಗಿ ಬರುವ ಕಥಾವಸ್ತುಗಳಾಗಿರುತ್ತವೆ. ರೊಮಾನ್ಸಿನ ಪ್ರೇಮವೀರ ಒಂದಾದ ಮೇಲೊಂದು ಸಾಹಸದಲ್ಲಿ ತೊಡಗುತ್ತಾನೆ. ಅವನು ತೊಡಗುವ ಎಲ್ಲ ಮಲ್ಲಯುದ್ಧಗಳಲ್ಲಿಯೂ ಆತ ವಿಜಯಿಯಾಗಿಯೇ ತೀರುತ್ತಾನೆ. ಇಂಥ ವಿಜಯವನ್ನು ಸಾಧಿಸಿದಾಗ ಆತನಿಗೆ ಒಂದು ತರಹದ ಸ್ವಾತಂತ್ರ್ಯ ದೊರಕಿದಂತಾಗುತ್ತದೆ. ರೊಮಾನ್ಸಿನ ನಾಯಕ ಪ್ರೇಮಾರಾಧಕನೂ ವೀರನೂ ಆಗಿದ್ದಂತೆ, ಅದರ ನಾಯಕಿಯೂ ಕೆಲವೊಂದು ವಿಶಿಷ್ಟಗುಣಗಳನ್ನು ಹೊಂದಿರುತ್ತಾಳೆ. ಉದಾಹರಣೆಗೆ ಅವಳು ಸಾಮಾನ್ಯವಾಗಿ ಅತ್ಯಂತ ನಯನಾಜೂಕಿನವಳಾಗಿರುತ್ತಾಳೆ. ಅಲ್ಲದೆ ಅವಳು ಕನ್ಯೆಯೆ ಆಗಿರುತ್ತಾಳೆ. ಆದುದರಿಂದಲೇ ರೊಮಾನ್ಸಿನಲ್ಲಿ ಅವಳ ಕನ್ಯತ್ವದ ಪಾವಿತ್ರ್ಯಕ್ಕೆ ಬಹಳಷ್ಟು ಮಹತ್ವವಿರುತ್ತದೆ. ಆದ್ದರಿಂದಲೆ ಎಂಥೆಂಥ ಗಂಡಾಂತರಗಳು ಬಂದೊದಗಿದರೂ ಅವಳು ತನ್ನ ಕನ್ಯತ್ವವನ್ನು ಕಾಳಜಿಪೂರ್ವಕ ಜೋಪಾನ ಮಾಡಿಕೊಳ್ಳಬೇಕಾಗುತ್ತದೆ. ಇಂಥ ಕನ್ಯಾಮಣಿಯನ್ನು ಆಹುತಿಕೊಡುವುದು ರೊಮಾನ್ಸಿನಲ್ಲಿ ಅತ್ಯಂತ ಮುಖ್ಯವಾದ ಅಂಶವಾಗಿರುತ್ತದೆ. ರೊಮಾನ್ಸಿನಲ್ಲಿ ಸ್ತ್ರೀ ಪಾತ್ರಗಳೇ ಹೆಚ್ಚಾಗಿರುವುದರಿಂದ ಅವರೆಲ್ಲ ಪುರುಷರನ್ನು ಉದ್ಧರಿಸುವ (redemptive) ವ್ಯಕ್ತಿಗಳಾಗಿರುತ್ತಾರೆ.

ರೊಮಾನ್ಸಿನಲ್ಲಿ ಸಾಂಪ್ರದಾಯಿಕ ಜೀವನ ದರ್ಶನಗಳನ್ನು ತಿರುವುಮುರುವಾಗಿ ಅಭಿವ್ಯಕ್ತಿಸಲಾಗಿರುತ್ತದೆ. ಅಲ್ಲಿ ನಿಯತಿ ನಿಯಮಸಾಪೇಕ್ಷತ್ವವನ್ನು ಧಾರಾಳವಾಗಿ ಕಾಣಬಹುದು. ಅನೇಕ ರೊಮಾನ್ಸ್‌ಗಳಲ್ಲಿ ಕಥಾನಾಯಕನಿಗೆ ಇಬ್ಬರು ತಂದೆಗಳಿರುತ್ತಾರೆ. ಒಬ್ಬ ನಿಜವಾದ ತಂದೆಯಾಗಿದ್ದರೆ ಇನ್ನೊಬ್ಬ ತಂದೆಯೆಂದು ತಿಳಿದುಕೊಂಡ ಅಥವಾ ಸ್ವೀಕರಿಸಿದ ವ್ಯಕ್ತಿಯಾಗಿರುತ್ತಾನೆ. ಸಾಮಾನ್ಯವಾಗಿ ರೊಮಾನ್ಸಿನ ಕಥಾನಾಯಕನ ಜನ್ಮ ಅತ್ಯಂತ ನಿಗೂಢವಾಗಿರುತ್ತದೆ. ಆತ ಎಲ್ಲಿ, ಹೇಗೆ ಮತ್ತು ಏಕೆ ಹುಟ್ಟಿದನೆಂಬ ಸಂಗತಿ ಕೊನೆಯತನಕ ರಹಸ್ಯವಾಗಿಯೇ ಉಳಿಯುತ್ತದೆ. ಎಲ್ಲಿಯೊ ಒಂದು ಮೂಲೆಯಲ್ಲಿ ಯಾವುದೊ ರೀತಿಯಲ್ಲಿ ಜನ್ಮವೆತ್ತಿದ ಇಂಥ ಕಥಾನಾಯಕನನ್ನು ಕುರಿಗಾರರು ಅನಿರೀಕ್ಷಿತವಾಗಿ ಎತ್ತಿಕೊಳ್ಳುತ್ತಾರೆ ಇಲ್ಲವೆ ಗುರುತಿಸುತ್ತಾರೆ. ಹೀಗಾಗಿ ಕಥಾನಾಯಕನಿಗೆ ತನ್ನ ಮೂಲದ ಅರಿವೇ ಇರುವುದಿಲ್ಲ. ತನ್ನ ಮೂಲ ಹೆಸರನ್ನು ಮರೆತು ಅಥವಾ ಬಿಟ್ಟು ಕುರಿಗಾರರು ತನಗೆ ಕೊಟ್ಟ ಹೆಸರನ್ನೆ ಉಪಯೋಗಿಸುತ್ತ ಆತ ಬೆಳೆದು ದೊಡ್ಡವನಾಗುತ್ತಾನೆ ಅಥವಾ ಇನ್ನು ಕೆಲವು ಸಂದರ್ಭಗಳಲ್ಲಿ ತನ್ನ ಸ್ವಂತಿಕೆಯನ್ನು ಬಚ್ಚಿಡುವ ಪ್ರಸಂಗ ಬಂದಿರುತ್ತದೆಯಾದ್ದರಿಂದ ತಾನು ಹುಟ್ಟಿನಿಂದ ಗಂಡಾಗಿದ್ದರೂ ತನ್ನ ವೇಷ ಬದಲಿಸಿ ಹೆಣ್ಣಿನಂತೆ ನಡೆದುಕೊಳ್ಳಬೇಕಾಗುತ್ತದೆ. ಅನೇಕವೇಳೆ ರೊಮಾನ್ಸಿನ ಕಥಾನಾಯಕ ಅತ್ಯಂತ ಉನ್ನತ ವರ್ಗ ಅಥವಾ ವಂಶದಲ್ಲಿ ಜನ್ಮವೆತ್ತಿದ್ದರೂ ಅನಿವಾರ್ಯ ಕಾರಣಗಳಿಂದಾಗಿ ತೀರಸಾಮಾನ್ಯ ವ್ಯಕ್ತಿಯಂತೆ ಜೀವಿಸಬೇಕಾಗುತ್ತದೆ. ಹೀಗೆ ಜೀವಿ

ಸುತ್ತಿರುವಾಗ ಕಥಾನಾಯಕನಿಗೆ ಅನೇಕ ವೈರಿಗಳು ಕಾಡಲಾರಂಭಿಸುತ್ತಾರೆ. ಆಗ ಆತನು ತನ್ನ ಅಗಾಧವಾದ ಶಕ್ತಿಯಿಂದಾಗಲಿ ಅಥವಾ ಯಾವುದಾದರೊಂದು ದೇವರ ಬೆಂಬಲದಿಂದಾಗಲಿ ತನ್ನ ವೈರಿಗಳನ್ನು ಎದುರಿಸುತ್ತಾನೆ. ಕೊನೆಗೆ ವಿಜಯಿಯಾಗುತ್ತಾನೆ. ಹೀಗಾಗಿ ಮೊದಲು ಬಲಶಾಲಿಯಾದ ವೈರಿಗಳು ಅನಂತರ ಬಲಹೀನರಾಗುತ್ತಾರೆ. ಇಲ್ಲವೆ ಸಾವನ್ನೆದುರಿಸುತ್ತಾರೆ. ಕೆಲವೊಮ್ಮೆ ಕಥಾನಾಯಕ ಮಾನವರೊಡನೆ ಕಾದಾಡುವ ಬದಲು ಇನ್ನಿತರ ಅಮಾನುಷ ಮತ್ತು ಅನಿಷ್ಟ ಶಕ್ತಿಗಳೊಂದಿಗೆ ಹೋರಾಡಬೇಕಾಗುತ್ತದೆ. ಉದಾಹರಣೆಗೆ ಆತ ರಾಕ್ಷಸರೊಡನಾಗಲಿ ಅಥವಾ ಮಹಾಸರ್ಪದೊಂದಿಗಾಗಲಿ ಇಲ್ಲವೆ ಡ್ರೇಗನ್ನಿ (Dragon) ನೊಂದಿಗಾಗಲಿ ಸೆಣಸಾಡಬೇಕಾಗುತ್ತದೆ. ಹೀಗೆ ಮೊದಮೊದಲು ಸರ್ವಸಾಮಾನ್ಯನಂತಿದ್ದ ವ್ಯಕ್ತಿ ಕ್ರಮೇಣವಾಗಿ ತನ್ನ ಸಾಹಸ ಶೌರ್ಯಗಳಿಂದ ಸಮಾಜದಲ್ಲಿ 'ನಾಯಕ'ನ ಸ್ಥಾನವನ್ನು ಗಳಿಸುತ್ತಾನೆ. ಆತನ ಕೀರ್ತಿ ಎಲ್ಲೆಡೆಗೂ ಪಸರಿಸುತ್ತದೆ. ರೊಮಾನ್ಸಿನ ಕಥಾನಾಯಕ ಕಟ್ಟ ಕೊನೆಗೆ ವಿಜಯಿಯಾದರೂ ತನ್ನ ಜೀವನದಲ್ಲಿ ಅನೇಕ ತೊಂದರೆಗಳನ್ನು ಅನುಭವಿಸಿಯೆ ತೀರಬೇಕಾಗುತ್ತದೆ. ತನ್ನ ಕೊನೆಯ ವಿಜಯಕ್ಕೆ ಪೂರ್ವಭಾವಿಯಾಗಿ ಆತ ಅನೇಕ ತರಹದ ತ್ಯಾಗಗಳನ್ನು ಮಾಡಬೇಕಾಗುತ್ತದೆ. ಆತ ಒಮ್ಮೆಯಾದರೂ ಪಾತಾಳ ಲೋಕಕ್ಕೆ (underworld) ಹೋಗಿ ವಾಸವಾಗಿರಬೇಕಾಗುತ್ತದೆ. ಅಲ್ಲಿ ಆತ ಡ್ರೇಗನ್ ಅಥವಾ ಇನ್ನಿತರ ರಾಕ್ಷಸರೊಡನೆ ಕಾದಾಡುತ್ತಾನೆ. ಇಲ್ಲವೆ ಪ್ರೇತ ಮತ್ತಿತರ ವನ್ಯ ಪ್ರಾಣಿಗಳೊಂದಿಗೆ ವಾಸಿಸುತ್ತಾನೆ. ಇಲ್ಲವೆ ಗಾಢವಾದ ನಿದ್ರೆಯಲ್ಲಿ ಮೈಮರೆತು ಬಿಡುತ್ತಾನೆ ಪಾತಾಳಲೋಕದಲ್ಲಿ ಸ್ವಾಭಾವಿಕವಾಗಿಯೆ ಅಂಧಕಾರ ಪಸರಿಸುತ್ತದೆ. ಈ ಅಂಧಕಾರಕ್ಕೆ ಸಾಂಕೇತಿಕ ಅರ್ಥವೂ ಹೊಂಡಿಕೊಂಡಿದೆ. ಪಾತಾಳಲೋಕದಲ್ಲಿರುವ ಅಂಧಕಾರ ಅಥವಾ ಕಥಾನಾಯಕನು ಅನುಭವಿಸುವ ಅತ್ಯಂತ ಗಾಢವಾದ ನಿದ್ರೆ ಇವೆರಡೂ ಸಾವಿನ ಸಂಕೇತಗಳಾಗಿ ಬಿಡುತ್ತವೆ. ಅನೇಕಜನ ಕಥಾನಾಯಕ ಸತ್ತಿರಬೇಕೆಂದೂ ಭಾವಿಸಿರುತ್ತಾರೆ. ಆತ ಪಾತಾಳಲೋಕಕ್ಕೆ ಹೋಗುವುದಾಗಲಿ ಇಲ್ಲವೆ ಗಾಢ ನಿದ್ರೆಯಲ್ಲಿರುವುದಾಗಲಿ ಇವೆರಡೂ ಅನುಭವಗಳು ಆತನಿಗೆ ಸಾಂಕೇತಿಕವಾಗಿ ಸಾವಿನ ಅನುಭವವನ್ನೆ ಕೊಡುತ್ತವೆ. ಇನ್ನು ಕೆಲವು ರೊಮಾನ್ಸಗಳಲ್ಲಿ ಕಥಾನಾಯಕ ಕತ್ತಲಾದ ಸೆರೆಮನೆಯಲ್ಲಿ ಕಾಲಕಳೆಯಬೇಕಾಗುತ್ತದೆ. ಆತ ಅನೇಕ ಅಪವಾದಗಳನ್ನು ಸಹಿಸಬೇಕಾಗುತ್ತದೆ. ಇಲ್ಲಿಗೆ ರೊಮಾನ್ಸಿನ ಕಥೆ ಮುಗಿಯಲಿಲ್ಲ. ಹೀಗೆ ಒಂದಲ್ಲ ಒಂದು ತರಹದ ಸಾಂಕೇತಿಕ ಮರಣವನ್ನನುಭವಿಸಿದ ನಂತರ ಆತ ಪುನರ್ಜನ್ಮ ಪಡೆಯುತ್ತಾನೆ. ಆಗ ಇವನಿಗೆ ಮಾನಸನ್ಮಾನಗಳು ದೊರೆಯುತ್ತವೆ. ಆತನ ದೇಹದ ಮೇಲಿದ್ದ ಕಲೆಗಳ ಮುಖಾಂತರ ಆತನ ನಿಜವಾದ ವ್ಯಕ್ತಿತ್ವ ಜನರಿಗೆ ತಿಳಿಯುತ್ತದೆ. ಆತನ ಅನ್ವೇಷಣೆ ಮುಕ್ತಾಯಗೊಂಡು. ಆತನು ವಿಜಯಿಯಾಗಿ ತನ್ನ ಆದರ್ಶವನ್ನು ಸಾಧಿಸಿದ ಸಮಾಧಾನವನ್ನು ಪಡೆಯುತ್ತಾನೆ. ಹೀಗೆ ರೋಮಾನ್ಸಿನಲ್ಲಿ ಆಯಾಕಾಲದ ಸಾಮಾಜಿಕ

ಮತ್ತು ಧಾರ್ಮಿಕ ಮೌಲ್ಯಗಳು ಪ್ರತಿನಿಧಿಸಲ್ಪಟ್ಟಿರುತ್ತವೆ. ಅದರಲ್ಲಿ ಕಥಾನಾಯಕನ ಅನ್ವೇಷಣೆ ಮತ್ತು ಸಾಮಾಜಿಕ ಅನ್ವೇಷಣೆ ಒಂದರಿಂದೊಂದು ಭಿನ್ನವಾಗಿರದೆ ಒಂದೆಯೇ ಆಗಿರುತ್ತವೆ. ರೊಮಾನ್ಸ್ ಆ ಕಾಲದ ಜೀವನ ದರ್ಶನಕ್ಕೆ ಕನ್ನಡಿಯಾಗುತ್ತದೆ. ಅದರಲ್ಲಿ ಸಂತೃಪ್ತ (idyllic) ಮತ್ತು ಸಾಹಸಮಯ (adventurous) ಜೀವನಗಳ ಮಧ್ಯದಲ್ಲಿರುವ ವಿರೋಧವು ಎದ್ದು ಕಾಣುತ್ತದೆ ಅಲ್ಲದೆ ರೊಮಾನ್ಸಿನಲ್ಲಿ ಕ್ರಿಯೆಯು ಯಾವಾಗಲೂ ಎರಡು ಸ್ಥರಗಳ ಮೇಲೆ ನಡೆಯುತ್ತಿರುತ್ತದೆ. ಮಹಾಕಾವ್ಯ ಮತ್ತು ರೊಮಾನ್ಸಿನ ಮಧ್ಯದಲ್ಲಿರುವ ಅಂತರವೇನೆಂದರೆ ಮಹಾಕಾವ್ಯದಲ್ಲಿ ಸಂಕೀರ್ಣತೆಯಿದ್ದರೆ ರೊಮಾನ್ಸಿನಲ್ಲಿ ಸಮಸ್ಯೆಗಳ ಸರಳೀಕರಣವು ಹೆಚ್ಚಾಗಿ ಕಂಡು ಬರುತ್ತದೆ. ಅದೇನೇ ಆದರೂ ರೊಮಾನ್ಸನ್ನು ನಾವು ಅಷ್ಟು ಸರಳವಾಗಿ ಕಡೆಗಣಿಸಲಾಗುವುದಿಲ್ಲ. ಏಕೆಂದರೆ ಅದು ಎಷ್ಟೆ ಸರಳವಾಗಿದ್ದರೂ, ಕೃತ್ರಿಮವೆನಿಸಿದರೂ ಅದು ನೀತಿಕಥೆ (fable, ಮತ್ತು ಪುರಾಣ (myth)ಗಳ ಮೂಲಬೇರು ಎಂಬುದನ್ನು ಮರೆಯುವ ಹಾಗಿಲ್ಲ. ಆಂಗ್ಲಸಾಹಿತ್ಯದಲ್ಲಿ ಸುಪ್ರಸಿದ್ಧವಾಗಿರುವ 'ಬೈಬಲ್' ಧರ್ಮಗ್ರಂಥವೂ ಸಹಿತ ಒಂದು ರೊಮಾನ್ಸ್ ಎಂದೆಯೇ ಪರಿಗಣಿಸಲ್ಪಡುತ್ತಿದೆ. ಫ್ರಾಯ್ ಅವರು ಈ ವಿಷಯ ಕುರಿತು ಸಾಕಷ್ಟು ದೀರ್ಘವಾಗಿ ವಿಮರ್ಶೆ ಬರೆದಿದ್ದಾರೆ. ಈ ಲೇಖನದಲ್ಲಿ ರೊಮಾನ್ಸ ಎಂಬ ಅತಿವಿಸ್ತಾರವಾದ ಸಾಹಿತ್ಯ ಪ್ರಕಾರದ ಬಗೆಗೆ ಕೆಲವು ಲಕ್ಷಣಗಳನ್ನು ಚರ್ಚಿಸಿ ಕನ್ನಡಿಗರ ಕುತೂಹಲ ಕೆರಳಿಸುವುದೆ ಇದರ ಉದ್ದೇಶವಾಗಿದೆ. ಮೇಲುನೋಟಕ್ಕೆ ರೊಮಾನ್ಸ್ ಅಸತಿರಳವಾದ ಪ್ರೇಮಸಂಬಂಧಿಯಾದ ಸಾಹಿತ್ಯರಚನೆಯಾಗಿ ಕಂಡರೂ ಅದನ್ನು ಆಳವಾಗಿ ಅಭ್ಯಸಿಸಿದಾಗ ಅದರ ಹಿಂದೆ ಇರುವ ತಾತ್ವಿಕ ತಳಹದಿ ಎಷ್ಟು ಮಹತ್ವಪೂರ್ಣವಾದದ್ದೆಂಬುದು ವಿಶದವಾಗುತ್ತದೆ.

ರೊಮಾನ್ಸು ಯುರೋಪಿಯನ್ ಸಾಹಿತ್ಯದಲ್ಲಿ ಅತಿಪ್ರಮುಖವೂ ಜನಪ್ರಿಯವೂ ಆದ ಸಾಹಿತ್ಯ ಪ್ರಕಾರವಾಗಿರುತ್ತದೆ. ಆದರೆ ಭಾರತೀಯ ಸಾಹಿತ್ಯದಲ್ಲಿ 'ರೊಮಾನ್ಸ್' ಎಂಬ ಶಿರೋನಾಮೆಯ ಸಾಹಿತ್ಯಪ್ರಕಾರ ಕಂಡು ಬರುವುದಿಲ್ಲವಾದರೂ ರೊಮಾನ್ಸಿನ ಅಂಶ ಮಾತ್ರ ಭಾರತೀಯ ಎಲ್ಲ ಸಾಹಿತ್ಯ ಪ್ರಕಾರಗಳಲ್ಲಿ ಕಂಡು ಬರುತ್ತದೆ. ಕಾವ್ಯ, ನಾಟಕ. ಮಹಾಕಾವ್ಯಗಳಲ್ಲಿ ಅದರಂತೆ ಭಾರತೀಯ ಪುರಾಣಗಳಲ್ಲಿ ರೊಮಾನ್ಸಿನ ಅಂಶ ಸಾಕಷ್ಟು ಪ್ರಮಾಣದಲ್ಲಿ ಎದ್ದು ಕಾಣುತ್ತದೆ. ನಿಜವಾದ ಮತ್ತು ಆಳವಾದ ಸಂಶೋಧನೆ ಮಾಡಬೇಕೆಂಬ ಆಶೆಯುಳ್ಳ ಧೀರರು ನಮ್ಮ ನಾಡಿನಲ್ಲಿದ್ದರೆ ಅವರು ಯುರೋಪಿಯನ್ ರೊಮಾನ್ಸ್ ಮತ್ತು ಭಾರತೀಯ ಪುರಾಣಗಳ ತೌಲನಿಕ ಸೈದ್ಧಾಂತಿಕ ವಿಮರ್ಶೆಯನ್ನು ಸೃಜಿಸುವ ಸಾಹಸಕ್ಕೆ ಸಿದ್ಧರಾಗಬೇಕು. ●

ಪುರಂದರದಾಸ ನಾದೋಪಾಸಕ ಮತ್ತು ಸಂಗೀತಜ್ಞನಾಗಿ

● ಹೆಚ್. ನಾಗರಾಜರಾವ್

ದಕ್ಷಿಣಾತ್ಯ ಅಥವಾ ಕರ್ನಾಟಕ (carnatic) ಸಂಗೀತ ಪ್ರಪಂಚದಲ್ಲಿ ಮಹಾ ವಾಗ್ಗೇಯಕಾರ, ಭಕ್ತ, ಕವಿ ಪುರಂದರದಾಸರ ಹೆಸರನ್ನು ಕೇಳದೇ ಇರುವವರು ಅತೀವಿರಳ. ಅವರನ್ನು ಅರಿಯದವರು ಇರಲಾರರೆಂದರೂ ಅತಿಶಯೋಕ್ತಿಯಲ್ಲ. ಅವರ ಧಾರ್ಮಿಕ ಗುರುಗಳಾಗಿದ್ದ ವ್ಯಾಸರಾಯರಿಗೂ ಸಂಗೀತದಲ್ಲಿ ಪರಿಣತಿ ಇತ್ತೆಂದು ಹೇಳಲು ಅವರ ಪ್ರೌಢವಾದ ಕೃತಿಗಳೂ, ಸುಳಾದಿಗಳೂ ಸಾಕ್ಷಾಧಾರವಾಗಿವೆ.[1]

ಕರ್ನಾಟಕ (carnatic) ಸಂಗೀತಕ್ಕೆ ಪುರಂದರದಾಸರ ಕೊಡುಗೆ ಅತ್ಯಮೂಲ್ಯ. ಅವರು ರಚಿಸಿದ ಪಿಳ್ಳಾರಿ ಗೀತೆಗಳು ಕರ್ನಾಟಕ ಸಂಗೀತಕ್ಕೆ ಭದ್ರ ತಳಹದಿಯಾಗಿವೆ.[2] 'ಲಂಬೋದರ ಲಕುಮಿಕರ' ಎಂದು ಮಾಯಾಮಾಳವ ಗೌಳ ರಾಗದಲ್ಲಿ ಅಳವಡಿಸಿರುವ ಪುರಂದರದಾಸರ ರಚನೆಯಿಂದಲೇ, ಕರ್ನಾಟಕ ಸಂಗೀತದ ಪ್ರತಿಯೊಬ್ಬ ವಿದ್ಯಾರ್ಥಿಯೂ ಸಂಗೀತಪಾಠ ಪ್ರಾರಂಭಿಸುವುದು. ದಾಸರ ಒಬ್ಬ ಅತ್ಯುತ್ತಮ ಕಲಾವಿದರಷ್ಟೇ ಅಲ್ಲದೇ, ಒಳ್ಳೆಯ ಸಂಗೀತಜ್ಞರೂ ಆಗಿದ್ದರು. ಅವರು ಸಂಗೀತದ ಪ್ರಾರಂಭ ಶಿಕ್ಷಣಕ್ಕೆ ಹೊಸ ಆಯಾಮಗಳನ್ನು ಕಂಡು ಹಿಡಿದಿದ್ದಾರೆ. ಸ್ವರಾವಳಿ, ಎಂದರೆ ಪ್ರಾಥಮಿಕ ಸ್ವರಶಿಕ್ಷಣ ಜತಿಸ್ವರಗಳು, ಎಂದರೆ ಜೋಡು ಸ್ವರಗಳನ್ನು ಹಾಡುವುದು. ಉದಾ: ಸಸ ರಿರಿ ಗಗ ಮಮ. ಅಲಂಕಾರ ಮುಂತಾದವುಗಳಿಂದ ವಿದ್ಯಾರ್ಥಿಗಳಿಗೆ ಸಂಗೀತದ ಅತಿ ಸೂಕ್ಷ್ಮವಾದ ತಾಂತ್ರಿಕ ಅಂಗಗಳಲ್ಲಿ ಪರಿಣತಿ ಹೊಂದುವಂತೆ ಮಾಡಿದ್ದಾರೆ. ಆದ್ದರಿಂದ ಅವರನ್ನು 'ಆದಿಗುರು' ಮತ್ತು 'ಕರ್ನಾಟಕ ಸಂಗೀತ

---

1. ಎಸ್. ಕೆ. ರಾಮಚಂದ್ರರಾವ್, 'ಕರ್ನಾಟಕ ಸಂಗೀತ' ಕನ್ನಡ ವಿಶ್ವಕೋಶ, ಸಂಪು. 4. ಪು. 176.

2. ಹು. ಗು. ಬೆಂಗೇರಿ, 'ದಾಸಕೂಟದ ಸಂಕ್ಷಿಪ್ತ ಇತಿಹಾಸ,' ಜಯಕರ್ನಾಟಕ, ಸಂಪು. 4. ಪು. 708.

ಪಿತಾಮಹ' ಎಂದು ಕರೆಯಲಾಗಿದೆ.[3] ಎಂಬ ಬಿ. ಚೈತನ್ಯದೇವ ಅವರ ಅಭಿಪ್ರಾಯ ಸಮಂಜಸವಾಗಿದೆ.

ಪ್ರಾಪಂಚಿಕ ಜೀವನದ ಲಾಲಸೆಗಳಿಂದ ಮುಕ್ತರಾದ ಮೇಲೆ ಪುರಂದರದಾಸರು ಅನುಸರಿಸಿದ ಜೀವನಮಾರ್ಗವನ್ನು ಇಲ್ಲಿ ಚರ್ಚಿಸುವುದು ಅವಶ್ಯಕ. ಭಾರತೀಯ ಸಂಗೀತದ ಇತಿಹಾಸದ ಪುಟಗಳನ್ನು ತಿರುವಿದಾಗ, ಸಂಗೀತವು ನಮಗೆ ನೈಸರ್ಗಿಕ ಕಲೆಯಷ್ಟೇ ಅಲ್ಲವೇ ಅದೊಂದು ಧಾರ್ಮಿಕ ಸಿದ್ಧಿಯ ಸಾಧನೆಯೂ ಆಗಿದ್ದು ಕಂಡುಬರುತ್ತದೆ. ವೇದದ ಮಂತ್ರಗಳನ್ನು ಗದ್ಯದಂತೆ ಪಠಿಸದೆ ಅವುಗಳನ್ನು ಸ್ವರ ಬದ್ಧವಾಗಿ ಹಾಡಿ 'ಸಾಮಗಾನ' ಎಂದಿರುವುದನ್ನು ಇಲ್ಲಿ ಸ್ಮರಿಸಬಹುದಾಗಿದೆ. ಒಂದು ಸಾರಿ ನಾರದನು ವಿಷ್ಣುವಿನ ಇರುವಿನ ಬಗ್ಗೆ ಕೇಳಿದಾಗ ವಿಷ್ಣುವು 'ನಾಹಂ ವಸಾಮಿ ವೈಕುಂಠೇ। ಯೋಗಿನಾಂ ಹೃದಯೇ ನಚ। ಮದ್ಭಕ್ತಾ ಯತ್ರ, ಗಾಯಂತಿ। ತತ್ರ ತಿಷ್ಠಾಮಿ ನಾರದ।[4] ಎಂದು ಹೇಳುವನು. ಈ ಶ್ಲೋಕದ ಭಾವಾರ್ಥ ಹೀಗಿದೆ.

ನಾರದನೇ ನಾನು ವೈಕುಂಠದಲ್ಲೂ ಇರುವುದಿಲ್ಲ. ಯೋಗಿಗಳ ಯಜ್ಞಯಾಗಾದಿ ಜಪಗಳಲ್ಲಿಯೂ ಇರುವುದಿಲ್ಲ. ಆದರೆ ನನ್ನ ಭಕ್ತನು ನನ್ನನ್ನು ಕುರಿತು ಅನನ್ಯ ಭಕ್ತಿಯಿಂದ ಎಲ್ಲಿ ಹಾಡುತ್ತಾನೋ ಅಲ್ಲಿಯೇ ನಾನಿರುವೆನೆಂದು ವಿಷ್ಣು ಹೇಳುವ ಅರ್ಥವನ್ನು ಮನದಂದಾಗ ಮುಕ್ತಿಯನ್ನು ಪಡೆಯಲು ಸಂಗೀತವೇ ಅತಿ ಸಮೀಪವಾದ ಮತ್ತು ಸುಲಭವಾದ ಮಾರ್ಗವೆಂಬುದು ಸ್ಪಷ್ಟವಾಗುತ್ತದೆ. ಪುರಂದರದಾಸರೂ ಸಹ ಸಂಗೀತದ ಮಾರ್ಗವಾಗಿಯೇ ತಮ್ಮ ಇಷ್ಟದೇವತೆಯ ಆರಾಧನೆಯನ್ನು ಮಾಡತೊಡಗಿದ್ದು ಮೇಲಿನ ಹೇಳಿಕೆಗೆ ಪೂರಕವೇ ಆಗಿದೆ.

ಪುರಂದರದಾಸರಿಗೆ ಸಂಗೀತವೇ ಮುಖ್ಯವಾಗಿತ್ತೋ? ಅಥವಾ ಸಂಗೀತ ಮಾಧ್ಯಮದ ಮೂಲಕ ದೈವಾರಾಧನೆಯೇ ಮುಖ್ಯವಾಗಿತ್ತೋ? ಎಂಬ ಪ್ರಶ್ನೆ ಬರುತ್ತದೆ. ಅವರ ಕೀರ್ತನೆಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಈ ಎರಡು ಪ್ರಶ್ನೆಗಳಿಗೂ ಉತ್ತರ ದೊರೆಯುತ್ತದೆ. ಮೂಲತಃ ಅವರು ಹಾಡಿದುದು ದೈವಾರಾಧನೆಗಾಗಿಯೇ. ಆದರೆ ಅವು ಸಹಜವಾಗಿ ಮಾಧುರ್ಯವನ್ನು ಮತ್ತು ಸಂಗೀತದ ಸಕಲ ಅಂಶಗಳನ್ನು ಹೊಂದಿದ್ದುವೆನ್ನುವುದರಲ್ಲಿ ಸಂದೇಹವಿಲ್ಲ. 'ಪುರಂದರದಾಸರ ಹಾಡುಗಳಲ್ಲಿ ಸ್ವರ, ರಾಗಗಳ ಹೆಸರು, ಮೂರ್ಛನೆ, ಜಾತಿ, ಪ್ರಬಂಧ, ಗೀತೆ ಮತ್ತು ಕೆಲವು ವಾದ್ಯಗಳ ಉಲ್ಲೇಖ ಸಿಗುತ್ತದೆ. ಸಂಗೀತದ ಈ ತಾಂತ್ರಿಕ ಅಂಶಗಳು ಪುರಂದರ

3. ಬ. ಚೈತನ್ಯದೇವ ಎನ್ ಇಂಟ್ರೊಡಕ್ಷನ ಟು ಇಂಡಿಯನ್ ಮ್ಯೂಸಿಕ್, 1973, ಪು. 103.

4. ಅಹೋಬಲ, ಸಂಗೀತ ಪಾರಿಜಾತ, ಶ್ಲೋಕ 16. ಪು. 5, ನೋಡಿ. ಡಬ್ಲು ಪೋಸ್ಲೆ, ಓರಿಯಂಟಲ್ ಕಲೆಕ್ಷನ್.

ದಾಸರಲ್ಲದೇ ಬೇರಾವುದೇ ಹರಿದಾಸರ ಕೀರ್ತನೆಗಳಲ್ಲಿ ಕಂಡು ಬರುವದಿಲ್ಲ. ಆದ್ದರಿಂದ ಪುರಂದರದಾಸರು ಸಂಗೀತ ಮಾಧ್ಯಮದಿಂದ ಮುಕ್ತಿ ಸಾಧನೆಯ ಮಾರ್ಗದರ್ಶಕರಲ್ಲದೆ, ಒಳ್ಳೆಯ ಸಂಗೀತಜ್ಞರೂ ಆಗಿದ್ದರೆಂದು[5] ಬ.ವಿ.ಕೆ. ಶಾಸ್ತ್ರಿಯವರು ಹೇಳುವ ಮಾತು ಯಥಾಯೋಗ್ಯವಾಗಿದೆ. ಮೋಕ್ಷ ಸಾಧನೆಯೇ ನಾದೋಪಾಸನೆಯ ಮೂಲ ಉದ್ದೇಶ ಎನ್ನುವುದನ್ನು ಅವರ ಕೆಲವು ಕೀರ್ತನೆಗಳು ಹೇಳಿದರೆ, ಇನ್ನೂ ಕೆಲವು ಕೀರ್ತನೆಗಳು ಪುರಂದರದಾಸರ ಸಂಗೀತ ಪರಿಣತಿ ಮತ್ತು ಸಂಗೀತ ಜ್ಞಾನವನ್ನು ಸ್ಫುಟವಾಗಿ ಬಿಂಬಿಸುತ್ತವೆ.

ನಾದೋಪಾಸಕ ಪುರಂದರದಾಸರು :

"ಕೃಷ್ಣನ ಪಾಡುವ ಕಂಠವೇ ಶ್ರೀ ವೈಕುಂಠ[6]" ಎಂಬಲ್ಲಿ ದೇವರನ್ನು ಕುರಿತಾಗಿ ಹಾಡುವ ಹೃದಯವು ದೇವರ ವಾಸಸ್ಥಾನವಾದ ವೈಕುಂಠದಷ್ಟೇ ಪವಿತ್ರ ಎನ್ನುವ ಭಾವನೆಯು ಎದ್ದು ಕಾಣುತ್ತದೆ. 'ಮಂಗಳ ಮೂರುತಿಯ ಪಾಡದ ಕಂಠ ಒಡೆದು ಹೋದ ಹರಿವಿನ ಕಂಠ[7]' ಎಂಬ ಇನ್ನೊಂದು ಹೇಳಿಕೆಯಲ್ಲಿ, ಭಗವಂತನ ನಾಮಾಮೃತವನ್ನು ಹಾಡಿ ಹೊಗಳದ ಕಂಠ ಒಡೆದು ಹೋದ ಮಡಕೆಯ ಕಂಟದಷ್ಟೇ ನಿಷ್ಪ್ರಯೋಜಕ ಎಂಬ ಅಭಿಪ್ರಾಯ ಸ್ಪಷ್ಟವಿದೆ.

ಮುಕ್ತಿಯ ಮಾರ್ಗವನ್ನು ತೋರಿಸು ಎಂದು ದೇವರನ್ನು ಕೇಳುವಾಗ ಪುರಂದರದಾಸರು 'ಸಂಗೀತ ಕೀರ್ತನೆ ಪಾಡುವೆನೆಂದರೆ ತುಂಬುರ ನಾರದರು ಪಡುತಿಹರೋ ದೇವ[8]' ಎಂದು ಹೇಳುತ್ತಾರೆ. ಇಲ್ಲಿ ಭಕ್ತನ ಅಳಲು ತುಂಬು ಹೃದಯದಿಂದ ವ್ಯಕ್ತವಾಗುತ್ತದೆ. ಏಕೆಂದರೆ ಗಾನಯೋಗ ಮತ್ತು ನಾದೋಪಾಸನೆಯಿಂದ ದೇವರನ್ನು ಒಲಿಸಿಕೊಳ್ಳಲು ಪ್ರಯತ್ನಿಸಿದರೆ, ಸದಾಕಾಲ ತುಂಬುರ ನಾರದರ ಗಂಧರ್ವಗಾಯನವನ್ನು ಕೇಳುವ ದೇವರಿಗೇ ಈ ಭಕ್ತನ ಸಂಗೀತ ರುಚಿಸದೇ ಹೋಗಬಹುದೆಂಬ ಭಯವಿದೆ. ಮೋಕ್ಷ ಸಾಧನೆಗೆ ಸಂಗೀತ ಮಾಧ್ಯಮದ ಅವಶ್ಯಕತೆ ಮತ್ತು ನಾದೋಪಾಸನೆಯ ಮಹತ್ವ ಇಲ್ಲಿ ಸ್ಫುಟವಾಗಿ ವ್ಯಕ್ತವಾಗಿದೆ.

---

5. ಬಿ.ವಿ.ಕೆ. ಶಾಸ್ತ್ರಿ, 'ಪುರಂದರದಾಸ ದಿ ಪ್ರಿಕರ್ಸರ್ ಆಫ್ ಕರ್ನಾಟಕ ಮ್ಯೂಸಿಕ್', ಶ್ರೀಕಂಠಿಕಾ, ಮೈಸೂರು, 1973, ಪು. 310.

6. ಪುರಂದರದಾಸರ ಕೀರ್ತನೆಗಳು, ಉಡುಪಿ, ಭಾಗ 2, ಹಾಡಿನ ಸಂ. 28, ಪು. 15

7. ಅದೇ ಭಾಗ 2, ಹಾಡಿನ ಸಂ. 177, ಪು. 94

8. ಅದೇ ಭಾಗ 2, ಹಾಡಿನ ಸಂ. 68, ಪು. 36

ದೇವರನ್ನು ಸಂಗೀತ ಮತ್ತು ವಾದ್ಯಗಳ ಜೊತೆ ಗುರುತಿಸುವುದು ವೇದಕಾಲದಿಂದಲೂ ಬಂದ ಸಂಪ್ರದಾಯ. ಅದರಂತೆಯೇ ಪುರಂದರದಾಸರೂ ಸಹ "ಸಂಗೀತ ಲೋಲ" "ಸದ್ಗುಣಶೀಲ[9]." ಎಂದು ದೇವರು ಮತ್ತು ಸಂಗೀತಕ್ಕೆ ತಾದಾತ್ಮ್ಯ ಕಲ್ಪಿಸಿದ್ದಾರೆ. 'ಪಿಳ್ಳಂಗೋವಿಯ ಚೆಲ್ವ ಕೃಷ್ಣನ ಎಲ್ಲಿ ನೋಡಿದಿರಿ[10]' ಎನ್ನುವಲ್ಲಿ ಭಾರತೀಯಸಂಗೀತದ ಪ್ರಮುಖ ವಾದ್ಯವೇಣುವು ಕೃಷ್ಣನಿಂದಲೇ ನುಡಿಸಲ್ಪಡುವುದು ಕಂಡುಬರುತ್ತದೆ.

ಸಂಗೀತಜ್ಞ ಪುರಂದರದಾಸರು :

ಎರಡನೆಯ ಮುಖ್ಯ ಅಂಶವೆಂದರೆ ಪುರಂದರದಾಸರಿಗೆ ಸಂಗೀತದಲ್ಲಿದ್ದ ಪರಿಣತಿ ಮತ್ತು ಪರಿಶ್ರಮ ಅವರನ್ನು ಈಗಾಗಲೇ 'ಕರ್ನಾಟಕ ಸಂಗೀತ ಪಿತಾಮಹ' ಎಂದಿರುವುದನ್ನು ಈಗ ಸ್ಮರಿಸಬಹುದಾಗಿದೆ. 'ಕರ್ನಾಟಕ ಸಂಗೀತ'ಕ್ಕೆ ಪುರಂದರದಾಸರೇ ಸ್ವತಃ ನೀಡಿದ ಕಾಣಿಕೆಯಲ್ಲಿದೆ. ಇಂದಿನ ಕರ್ನಾಟಕ ಸಂಗೀತದ ಜೀವಾಳವಾಗಿರುವ ಮುಖ್ಯ ಅಂಶಗಳು ವಿಜಯನಗರದ ಕಾಲದಲ್ಲೂ ಪ್ರಚಲಿತವಾಗಿದ್ದು ಅವುಗಳ ಪ್ರಚಾರಕ ಮತ್ತು ಉದ್ಧಾರಕರಾಗಿ ಪುರಂದರದಾಸರು ಮಾಡಿದ ಕಾರ್ಯ ಅವರ್ಣನೀಯ[11]" ಎಂದು ಹೇಳುವ ಬಿ. ವಿ. ಕೆ. ಶಾಸ್ತ್ರಿಯವರ ಮಾತು ಪುರಂದರದಾಸರು ಸಂಗೀತ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆಯನ್ನು ಎತ್ತಿತೋರಿಸುತ್ತದೆ. ನಾದೋಪಾಸನೆಯ ಜೊತೆಗೆ ಸಹಜವಾಗಿಯೇ ಮೈಗೂಡಿಸಿಕೊಂಡ ಸಂಗೀತದ ತಾಂತ್ರಿಕ ಅಂಶಗಳು ಪುರಂದರದಾಸರ ಕೀರ್ತನೆಗಳ ಕೆಲವು ಸಾಲುಗಳಲ್ಲಿ ಉಜ್ವಲವಾಗಿ ಪ್ರಕಟವಾಗುತ್ತವೆ.

ಕೃಷ್ಣನ ಲೀಲೆಗಳನ್ನು ವರ್ಣಿಸುತ್ತ 'ಝಂ ತಟ ತಕಧಿಮಿ ತಧೀಂಗಿಣತೊಂ। ಎಂದು ಝಂಪೆ ತಾಳದಿ ತುಂಬುರನೊಪ್ಪಿಸೆ। ಧ.ಮ.ಪ. ಪ.ಧ.ಸ.ರಿ। ಎಂದು ಧ್ವನಿಯಿಂದ। ನಾರದ ತುಂಬುರ ಗಾನವ ಮಾಡಲು। ನಂದಿಯು ಮದ್ದಳೆ ಚಂದದಿ ಹಾಕಲು।[12] ಎಂದು ಉದ್ಗರಿಸಿದ್ದಾರೆ. ಇಲ್ಲಿ ನಾವು ಕರ್ನಾಟಕ ಸಂಗೀತದ ಪ್ರಮುಖ ತಾಳಗಳಲ್ಲೊಂದಾದ 'ಝಂಪೆ' ತಾಳದ ಉಲ್ಲೇಖವನ್ನು ಕಾಣಬಹುದು. 'ಮದ್ದಳೆ ಎಂಬ ವಾದ್ಯವೂ ಹೆಸರಿಸಲ್ಪಟ್ಟಿದೆ' ಸಂಗೀತ ಕ್ಷೇತ್ರದಲ್ಲಿ ಪರಿಶ್ರಮವಿರದ ಒಬ್ಬ

---

9. ಅದೇ ಭಾಗ 1. ಹಾಡಿನ ಸಂ. 43. ಪು. 33

10. ಅದೇ ಭಾಗ 1. ಹಾಡಿನ ಸಂ. 136. ಪು. 70

11. ಬಿ.ವಿ.ಕೆ. ಶಾಸ್ತ್ರಿ, 'ಪುರಂದರದಾಸ ದಿ ಪ್ರಿಕರ್ಸರ್ ಆಫ್ ಕರ್ನಾಟಕ ಮ್ಯೂಸಿಕ್', ಶ್ರೀಕಂಠಿಕಾ, ಮೈಸೂರು. 1973 ಪು. 315.

12. ಪುರಂದರದಾಸರ ಕೀರ್ತನೆಗಳು, ಉಡುಪಿ. ಭಾಗ 2, ಹಾಡಿನ ಸಂ. 104. ಪು. 56

ಸಾಮಾನ್ಯನಿಗೆ ಈ ತಾಳ ಮತ್ತು ಆದರ ಸೂಕ್ಷ್ಮತೆಗಳ ಪರಿಚಯವಿರುವುದು ಅಸಾಧ್ಯ.

ಇನ್ನೊಂದು ಕಡೆ 'ತಾಳಬೇಕು। ತಕ್ಕ ಮೇಳಬೇಕು। ಗಳ ಶುದ್ಧಿ ಇರಬೇಕು. ತಿಳಿದು ಹೇಳಲುಬೇಕು। ಯತಿಪ್ರಾಸ ಇರಬೇಕು। ಗತಿಗೆ ನಿಲ್ಲಿಸಬೇಕು।[13] ಎಂದಿರುವಲ್ಲಿ 'ತಾಳಬೇಕು' ಎಂಬ ಶಬ್ದವು ಶ್ಲೇಷಾರ್ಥದಲ್ಲಿ ಬಳಸಲ್ಪಟ್ಟಿದೆ. ಜೀವನದಲ್ಲಿ ಸಾಧಿಸಿ ಕೊಂಡ ಗುರಿಯ ಸಾಧನೆಗೆ ತಾಳ್ಮೆಯ ಆಗತ್ಯವನ್ನೂ, ಸಂಗೀತದಲ್ಲಿ ತಾಳದ ಪ್ರಾಮು ಖ್ಯತೆಯನ್ನೂ ಈ ದ್ವಂದಾರ್ಥ ಒಳಗೊಂಡಿದೆ. ಯಾವುದೇ ಒಂದು ಗೀತೆಯ ಚಲ ನೆಯು ನಿರ್ದಿಷ್ಟವಾದ ಗತಿಯಲ್ಲಿರುತ್ತದೆ. ಗೀತೆಯು ಚಲಿಸುವ ಗತಿ ಅನಿರ್ದಿಷ್ಟವಾ ದರೆ ಅದರಲ್ಲಿ ಮಾಧುರ್ಯ ಇರುವುದಿಲ್ಲ. ಭರತನ ಕಾಲದಿಂದಲೂ ಭಾರತೀಯ ಸಂಗೀತ ಶಾಸ್ತ್ರಜ್ಞರು ಸ್ವರಕ್ಕೆ ತಾಯಿಯ ಸ್ಥಾನವನ್ನೂ, ತಾಳಕ್ಕೆ ತಂದೆಯ ಸ್ಥಾನ ವನ್ನೂ ಸಂಗೀತದಲ್ಲಿ ನೀಡುತ್ತಾ ಬಂದಿದ್ದಾರೆ. ನಮ್ಮ ದೈನಂದಿನ ಜೀವನದಲ್ಲಿಯೂ ಯಾವುದೇ ಅಡೆತಡೆಯಾದರೆ 'ಏನೋ ನನ್ನ ಜೀವನದ ತಾಳ ತಪ್ಪಿದೆ' ಎನ್ನುವುದು ವಾಡಿಕೆ. ಗಳಶುದ್ಧಿ ಇರಬೇಕು' ಎನ್ನುವಲ್ಲಿ ಪುರಂದರದಾಸರು 'ಕಂಠತ್ರಾಣ' ಮತ್ತು ಕಂಠದ ಶುದ್ಧತೆ, ಸೂಕ್ಷ್ಮತೆಯ ಬಗ್ಗೆ ಉಲ್ಲೇಖಿಸಿದಂತಿದೆ. 'ಯತಿಪ್ರಾಸ ಇರಬೇಕು' ಎಂಬಲ್ಲಿ ಹಾಡುವ ಗೀತೆಯ ಭಾಷೆ ಮತ್ತು ಛಂದಸ್ಸಿನ ಬಗ್ಗೆ ಹೇಳಿದ್ದಾರೆ. ಒಂದು ಲಯ ಮತ್ತು ಹಿಡಿತದಿಂದ ಕೂಡಿತ ಗೀತೆ ಅಥವಾ ಕವಿತೆಯನ್ನು ಮಾತ್ರ ಹಾಡ ಬಹುದು. ನಿರ್ದಿಷ್ಟ ಲಘು, ಗುರು, ಮಾತ್ರೆಗಳಿಲ್ಲದ ನವ್ಯ ಕವಿತೆಯನ್ನು ಹಾಡಲಾಗು ವುದಿಲ್ಲ. 'ಗತಿಗೆ ನಿಲ್ಲಿಸಬೇಕು' ಎಂಬಲ್ಲಿ ಮತ್ತೊಮ್ಮೆ ತಾಳದ ನಿಬದ್ಧತೆಯನ್ನು ಹೇಳಿ ದ್ದಾರೆ. ಸಂಗೀತ ಶಾಸ್ತ್ರದ ಈ ಎಲ್ಲ ಪರಿಕರಣಗಳು ತಾಂತ್ರಿಕ ಅವಶ್ಯಕತೆಗಳು ಒಬ್ಬ ಪ್ರೌಢ ಸಂಗೀತಗಾರ ಮತ್ತು ಸಂಗೀತಜ್ಞನಿಗಲ್ಲದೆ ಬೇರೊಬ್ಬರಿಗೆ ಅರ್ಥ ವಾಗುವಂತಿಲ್ಲ.

ಪುರಂದರದಾಸರ ಇನ್ನೊಂದು ಗೀತೆಯಲ್ಲಿ ಈ ಕೆಳಕಂಡ ರಾಗಗಳ ಉಲ್ಲೇಖ ವಿದೆ. 'ಮಾರವ,' 'ವೇಶಿ,' 'ಗುಜ್ಜರಿ,' 'ಭೈರವಿ,' 'ಗಾಳಿ,' ನಾಟಿ, ಸಾವೇರಿ ಅಹೇರಿ ಪೂರಿ. ಕಾಂಬೋಧಿ, ಪಾಡಿ, ದೇಶಾಕ್ಷಿ, ಶಂಕರಾಭರಣ, ಮಾಳವಿ. ವರಾಳಿ. ಕಲ್ಯಾಣಿ. ತೋಡಿ, ಮುಖಾರಿ, ವಸಂತ, ಚೌಳಿ, ಧನ್ಯಾಶ್ರೀ, ಸೌರಾಷ್ಟ್ರ, ಗುಂಡಕ್ರಿಯ, ರಾಮ ಕ್ರಿಯ ಮೇಘಕುರಂಜಯ,[14] ಈ ಎಲ್ಲ ರಾಗಗಳ ಭಾವ, ಸ್ವರಮೇಳ ಮತ್ತು ಇತರ ಲಕ್ಷಣಗಳ ಪರಿಚಯವಿದೆಯೆಂದೇ ಅವರು ಉಲ್ಲೇಖಿಸಿದ್ದಾರೆ. ಇನ್ನೊಂದು

---

13. ಅದೇ ಭಾಗ 2. ಹಾಡಿನ ಸಂ. 11, ಪು. 7

14. ಅದೇ ಭಾಗ 5. ಹಾಡಿನ ಸಂ. 46. ಪು 23-24

ಅಂಶನೆಂದರೆ ಅವರು ಎಲ್ಲ ಮೇಳಕರ್ತರಾಗಗಳಲ್ಲಿಯೂ ಕೀರ್ತನೆಗಳನ್ನು ರಚಿಸಿರುವರೆಂಬ[15] ಉಲ್ಲೇಖವಿದೆ. ಇದು ದಾಸರಿಗೆ ಸಂಗೀತದಲ್ಲಿದ್ದ ಪ್ರಾವೀಣ್ಯತೆಯನ್ನು ಕನ್ನಡಿಯಂತೆ ಬಿಂಬಿಸುತ್ತದೆ.

ಸಂಗೀತಾಭಿರುಚಿಯಿಲ್ಲದವರಿಗೆ ಪುರಂದರದಾಸರು 'ಪಾಡಲರಿಯದವರಿಗೆ ಪ್ರೌಢತನವೇಕೆ?[16]' ಎನ್ನುತ್ತಾರೆ. ಪ್ರಾಯಶಃ ಅವರ ಕಾಲ ಸಂಗೀತದ ಪ್ರವರ್ಧಮಾನ ಕಾಲವಾಗಿದ್ದು, ಸಂಗೀತಾಭಿಮಾನಿಯಲ್ಲದವನನ್ನು ಅವರು ಹೀಯಾಳಿಸಿದ್ದಾರೆ. ಹಾಡಲು ಬರುವುದು ಅಥವಾ ಹಾಡುವುದೇ ಒಂದು ಪ್ರೌಢಿಮೆಯಾಗಿರುವುದು ದಾಸರು ಸಂಗೀತಕ್ಕೆ ನೀಡಿದ ಮಹತ್ವವನ್ನು ತೋರಿಸುತ್ತದೆ.

ರಾಗವು ಭಾರತೀಯ ಸಂಗೀತದ ಒಂದು ಪ್ರಮುಖ ಅಂಗ. ಆದರೆ ರಾಗವೆಂದರೆ ಕೇವಲ ಸ್ವರ ಸಮೂಹ ಮತ್ತು ಸ್ವರ ಜೋಡಣೆಯ ಸಂಕೀರ್ಣತೆಯಲ್ಲ. ಅದು ಒಂದು ನಿರ್ದಿಷ್ಟವಾದ ಭಾವನೆಯ ಮೂರ್ತಿ ಸ್ವರೂಪವಿದ್ದಂತೆ. ಪುರಂದರದಾಸರೂ ಈ ಅಂಶವನ್ನು ತಮ್ಮ ಹಾಡಿನಲ್ಲಿ ಈ ರೀತಿಯಾಗಿ ಹೇಳಿದ್ದಾರೆ. 'ಕೇಳನೋ ಹರಿ ತಾಳನೋ। ತಾಳ ಮೇಳಗಳಿದ್ದು ಪ್ರೇಮವಿಲ್ಲದಗಾನ[17]' ಹಾಡು ಸಕಲ ವಾದ್ಯವೃಂದಗಳಿಂದ ಕೂಡಿದ್ದರೂ, ಅದರ ಅರ್ಥ, ಭಾವ, ಸೌಂದರ್ಯವನ್ನು ತಿಳಿಯದೆ, ಹೃದಯತುಂಬಿ ಪ್ರೇಮಭಯವಾಗಿ ಹಾಡದಿದ್ದರೆ ಹರಿಯು ಅದನ್ನು ಆನಂದಿಸನು ಎನ್ನುತ್ತಾರೆ. ಕಲಾವಿದನಿಗೆ ಹಾಡುವಾಗ ಬೇಕಿರುವ ಏಕಾಗ್ರತೆ ಮತ್ತು ತಲ್ಲೀನತೆ ವೇದ್ಯವಾಗುತ್ತವೆ.

ಪುರಂದರದಾಸರ ಹಲವಾರು ಹಾಡುಗಳಲ್ಲಿ ವೇಣು, ವೀಣೆ, ಮೃದಂಗ, ಶಂಖ, ಭೇರಿ, ದುಂದುಭಿ, ಕಿನ್ನರಿ, ನಗಾರಿ, ತಂಬೂರಿ, ಮುಂತಾದ ವಾದ್ಯಗಳ ಉಲ್ಲೇಖವೂ ಬರುತ್ತದೆ. ಸದಾಕಾಲ ಅವರ ಕೈಯಲ್ಲಿದ್ದ ತಂಬೂರಿ ಮತ್ತು ಚಿಟಿಕೆಗಳು ಅವರು ಸ್ವತಃ ತಾಳ ಮತ್ತು ಶೃತಿಗೆ ನೀಡಿದ ಮಹತ್ವವನ್ನು ಒತ್ತಿ ಹೇಳುತ್ತದೆ. ಸಂಗೀತದ ಮಹತಿಯನ್ನು ಹೇಳುತ್ತ ದಾಸರು 'ತಂಬೂರಿ ಮೀಟಿದವ। ಭವಾಬ್ಧಿ ದಾಟಿದವ। ತಾಳವ ತಟ್ಟಿದವ। ಸುರರೊಳು ಸೇರಿದವ। ಗಾಯನವ ಪಾಡಿದವ। ಹರಿಮೂರ್ತಿ ನೋಡಿದವ[18]' ಎಂದಿದ್ದಾರೆ. ಕೇವಲ ದೇವರನ್ನು ಕುರಿತಾಗಿ ಹಾಡುವುದೇ ಅಲ್ಲ.

---

15. ಹು.ಗು. ಬೆಂಗೇರಿ, 'ದಾಸಕೂಟದ ಸಂಕ್ಷಿಪ್ತ ಇತಿಹಾಸ, ಜಯಕರ್ನಾಟಕ' ಸಂಪುಟ 4, ಪು. 708.
16. ಪುರಂದರದಾಸರ ಕೀರ್ತನೆಗಳು, ಉತುಪಿ. ಭಾಗ 2. ಹಾಡಿನ ಸಂ. 63. ಪು. 34
17. ಅದೇ ಭಾಗ 4. ಹಾಡಿನ ಸಂ. 83, ಪು. 51
18. ಅದೇ ಭಾಗ 5. ಉಗಾಭೋಗ ಸಂ. 136 ಪು 122

ಹಾಡುವವರ ಜೊತೆಗೆ ನಾದಯೋಗದಲ್ಲಿ ಸಹಚರರಾಗಿದ್ದವರೂ ಸಹ ಮುಕ್ತಿಯ ವಿವಿಧ ಹಂತಗಳನ್ನು ಮುಟ್ಟುವರೆಂಬುದು ಸ್ಪಷ್ಟವಾಗಿದೆ. ಗಾಯನವನ್ನು ಮಾಡಿದವರು ನಾದ ಹರಿಮೂರ್ತಿಯನ್ನೇ ನೋಡಿ ದೇವರಲ್ಲಿ ಒಂದಾದವನು ಎನ್ನುವ ಕಲ್ಪನೆ ಸಮಂಜಸವಾಗಿದೆ.

ಶಾಸ್ತ್ರಕ್ಕೂ ಜೀವನಕ್ಕೂ ಒಂದು ಅಂತರ ಯಾವ ಕಾಲದಲ್ಲೂ ಇದ್ದೇ ಇರುತ್ತದೆ. ಆದರೆ ಈ ಅಂತರ ಅತಿಯಾದಾಗ ಮಹನೀಯರು ಕಾಣಿಸಿಕೊಂಡು ಮಾರ್ಗದರ್ಶನ ಮಾಡುತ್ತಾರೆ. ಪುರಂದರದಾಸರ ಕಾಲದಲ್ಲಿ ಇದೇ ಪರಿಸ್ಥಿತಿ ನಿತ್ಯ ಜೀವನದ ಕಲೆಯಲ್ಲೂ ಕಾಣಿಸಿಕೊಂಡಿತ್ತು. ಪ್ರಸ್ತುತ, ಸಂಗೀತದಲ್ಲಿ ಲಕ್ಷ್ಯ ಲಕ್ಷಣಗಳಿಗೆ ಅತಿಯಾದ ವಿರಸವಿದ್ದ ಕಾಲ ಅದು. ಶಾಸ್ತ್ರ ನಿರೂಪಣೆ ವ್ಯವಹಾರದ ಅಗತ್ಯಗಳನ್ನು ಅರಿತುಕೊಳ್ಳದೆ ಬಿಗಿಯಾಗಿ ಬಿಮ್ಮನಿತ್ತು. ಶಾಸ್ತ್ರದ ಸಂಕೋಚದಿಂದ ನಿತ್ಯವ್ಯವಹಾರಗಳನ್ನು ಬಿಡುಗಡೆ ಮಾಡಬೇಕೆಂದು ಎಲ್ಲ ಲಕ್ಷಣಕಾರರೂ ಹೇಳಿದ್ದರು ನಿಜ. ಶಾಙ್ಗ ದೇವನೇ 'ಲಕ್ಷ್ಯ ಪ್ರಧಾನಿ ಶಾಸ್ತ್ರಾಣಿ' ಎಂದು ಮುಂತಾಗಿ ಹೇಳಿದ್ದ. ಆದರೆ ಲಕ್ಷಣದ ವಿಧಿ ನಿಷೇಧಗಳನ್ನು ಗಣನೆಗೆ ತೆಗೆದುಕೊಳ್ಳದೆ ಪ್ರಯೋಗ ಸಿದ್ಧವಾದ, ವ್ಯವಹಾರ ಶುದ್ಧವಾದ ಲಕ್ಷ್ಯ ಸಂಗೀತವನ್ನು ಪ್ರಚುರಪಡಿಸಿದ ಧೈರ್ಯ ಆ ಕಾಲದಲ್ಲಿ ಪುರಂದರದಾಸನಿಗಲ್ಲದೇ ಬೇರೊಬ್ಬನಿಗಿದ್ದ ಉಲ್ಲೇಖವಿಲ್ಲ. ಜನರ ಹಿತ ಅಗತ್ಯಗಳನ್ನು ಅರ್ಥಮಾಡಿಕೊಂಡು ಅವುಗಳಿಗನುಗುಣವಾಗಿ ಸಂಗೀತದ ಕಟ್ಟಡವನ್ನು ಚೊಕ್ಕಗೊಳಿಸಿದವ ಪುರಂದರದಾಸ. ಅವನಿಂದ ದಕ್ಷಿಣ ದೇಶದ ಸಂಗೀತ ತನ್ನ ಇತಿಹಾಸದಲ್ಲಿ ಹೊಸದೊಂದು ಘಟ್ಟವನ್ನು ಮುಟ್ಟಿದಂತಾಯಿತು.[19]

ಈ ಎಲ್ಲ ಅಂಶಗಳನ್ನು ಗಮನಿಸಿದಾಗ ದಾಸರು ಕೇವಲ ತಮ್ಮ ಸಂಗೀತ ಪ್ರೌಢಿಮೆಯನ್ನು ಮೆರೆಸಲು ಹಾಡದೆ, ಸಹಜವಾಗಿ ತಮ್ಮ ಅನುಭವಗಳನ್ನು ಧಾರ್ಮಿಕ ಪಥವನ್ನು ಜನಸಾಮಾನ್ಯರಿಗೆ ತಿಳಿಸುವ ಉದ್ದೇಶವನ್ನಿಟ್ಟುಕೊಂಡಿದ್ದು ಸ್ಪಷ್ಟವಾಗುತ್ತದೆ. ಆದರೆ ಏಕಕಾಲದಲ್ಲಿ ಸಹಜವಾಗಿಯೇ ಅವರ ಕೀರ್ತನೆಗಳು ಸಾಹಿತ್ಯಿಕ ದೃಷ್ಟಿ, ಸಂಗೀತಗಾರ ಮತ್ತು ಸಂಗೀತಜ್ಞನ ಸರಳತೆಯ ದೃಷ್ಟಿಯಿಂದಲೂ ಸರ್ವ ಸಮರ್ಪಕವಾಗಿವೆ ಎಂದು ಧೃಡವಾಗಿ ಹೇಳಬಹುದು.

19. ಎಸ್.ಕೆ. ರಾಮಚಂದ್ರರಾವ್ 'ಕರ್ನಾಟಕ ಸಂಗೀತ' ಕನ್ನಡ ವಿಶ್ವಕೋಶ, ಸಂಪುಟ, 4, ಪುಟ 176.

ಪ್ರಾಚೀನ ಕದಂಬ ವಿಷ್ಣುವರ್ಮ ಮತ್ತು ಸಿಂಹವರ್ಮನ ಮುದಿಗೆರೆಯ ತಾಮ್ರ ಶಾಸನಗಳ ಶೋಧನೆ

● ಅ. ಸುಂದರ

ಶೋಧನೆ

ಸುಮಾರು ೧೯೮೩ ರ ಏಪ್ರಿಲ್ ಮಧ್ಯ ಭಾಗದಲ್ಲಿ ಶ್ರೀ ಕುಯಿ ಹನುಮಣ್ಣನವರು ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಮುದಿಗೆರೆಯಲ್ಲಿರುವ ತಮ್ಮ ಜಮೀನನ್ನು ಉಳುತ್ತಿದ್ದಾಗ ಎರಡು ತಾಮ್ರಪಟ ಗುಚ್ಛಗಳು ನೇಗಿಲ ಕುಳಕ್ಕೆ ಸಿಕ್ಕಿ ಮೇಲೆ ಕಾಣಿಸಿಕೊಂಡವು. ಶ್ರೀ ಹನುಮಣ್ಣನವರು ಸುರಕ್ಷಿತವಾಗಿ ಅವುಗಳನ್ನು ತೆಗೆದಿಟ್ಟು ಯುಗಟಿ ಸಿದ್ದಯ್ಯನವರಿಗೆ ಒಪ್ಪಿಸಿದರು. ಅವರ ಮತ್ತು ಯುಗಟಿಯ ನಾರಾಯಣ ಮೂರ್ತಿಯವರ ಸಂಪರ್ಕದಿಂದಾಗಿ ಆ ತಾಮ್ರಪತ್ರಗಳು ಇತಿಹಾಸದ ಬಗ್ಗೆ ಹೇಳಬಹುದಾದ ಹೊಸ ವಿಷಯ ತಿಳಿಯುವ ಸದಭಿರುಚಿಯ ಕುತೂಹಲದಿಂದ ಆತಾಮ್ರ ಪತ್ರಗಳನ್ನು ತಜ್ಞರಿಂದ ಅಧ್ಯಯನಕ್ಕೊಳಪಡಿಸುವ ಉದ್ದೇಶದಿಂದ 'ಕನ್ನಡ ಪ್ರಭ' ಪತ್ರಿಕೆಯ ಉಪಸಂಪಾದಕ ಯುಗಟಿ ಶ್ರೀನಿವಾಸರ ವಶಕ್ಕೊಪ್ಪಿಸಿದರು. ಇವರಿಂದ ಅವು ನನ್ನ ಪ್ರತಿಭಾನ್ವಿತ ವಿದ್ಯಾರ್ಥಿ ಮತ್ತು ಎಂ. ಎ. ಪರೀಕ್ಷೆಯಲ್ಲಿ ಭಾರತೀಯ ಶಾಸನ ಶಾಸ್ತ್ರವನ್ನು ಅಭ್ಯಾಸ ಮಾಡಿರುವ ಪಾಂಡುರಂಗ ಶಾಸ್ತ್ರೀ ಅವರಿಗೆ ಅಧ್ಯಯನಕ್ಕೊಸ್ಕರ ದೊರೆಕಿತು. ಇವುಗಳ ಅಧ್ಯಯನವನ್ನು ನಾನು ಹೆಚ್ಚು ಸಮರ್ಪಕವಾಗಿ ಮಾಡುವೆನೆಂಬ ನಿರೀಕ್ಷೆಯಿಂದ ಅವುಗಳನ್ನು[1] ನನಗೆ ಕೊಟ್ಟರು.

ಪ್ರಪ್ರಥಮ ದೊರಕಿದ ಸಿಂಹವರ್ಮನ ಶಾಸನ:

1. ಈ ತಾಮ್ರ ಶಾಸನಗಳ ವಿಷಯದ ಬಗ್ಗೆ ನನ್ನ ವರದಿಯನ್ನು ದಿ. 7-8-1983 ರ ಕನ್ನಡ ಪ್ರಭ ದಿನ ಪತ್ರಿಕೆಯ ಭಾನುವಾರದ ವಿಭಾಗದಲ್ಲಿ ಪ್ರಕಟಿಸಲಾಗಿದೆ.

ಇದುವರೆಗೆ ಪ್ರಾಚೀನ ಕದಂಬ ಅರಸು ಮನೆತನದ ೧೪ ಶಿಲಾ ಶಾಸನಗಳಲ್ಲದೆ ಹತ್ತು ರಾಜರುಗಳ ಒಟ್ಟು ೨೭ ತಾಮ್ರ ಹಲಗೆಗಳ ಗುಚ್ಛಗಳು ಪ್ರಸಿದ್ಧವಾಗಿವೆ.[2] ಸುಮಾರು ಒಂದೂವರೆ ವರ್ಷಗಳ ಹಿಂದೆ ಶಿರಾಳಕೊಪ್ಪದ ಹತ್ತಿರ ಒಂದು ಗ್ರಾಮದಲ್ಲಿ ಮತ್ತೆರಡು ತಾಮ್ರ ಹಲಗೆಗಳ ಗುಚ್ಛಗಳು ಸಿಕ್ಕಿವೆ. ಅವುಗಳಲ್ಲಿಯ ವಿಷಯವನ್ನು ಸಂಕ್ಷಿಪ್ತವಾಗಿ ವೃತ್ತ ಪತ್ರಿಕೆಯಲ್ಲಿ ಪ್ರಕಟಿಸಲಾಗಿತ್ತು. ಆದರೆ ಆ ವಿಷಯ ಈಗ ನನ್ನ ಲಕ್ಷದಲ್ಲಿಲ್ಲ. ಮತ್ತು ಆ ವೃತ್ತ ಪತ್ರಿಕೆಯು ನನಗೆ ದೊರೆಕಿಲ್ಲ. ಈಗ ಆ ತಾಮ್ರ ಹಲಗೆಗಳಗುಚ್ಛಗಳು ಕರ್ನಾಟಕ ಸರಕಾರದ ಪುರಾತತ್ವ ಮತ್ತು ವಸ್ತು ಸಂಗ್ರಹಾಲಯ ಶಾಖೆಯಲ್ಲಿದೆ. ಅದರ ನಿರ್ದೇಶಕರಾದ ಡಾ॥ ಎಂ ಎಸ್. ನಾಗರಾಜರಾವ್ ಸಧ್ಯದಲ್ಲೇ ಅದನ್ನು ಪ್ರಕಟಿಸುವುದಾಗಿ ತಿಳಿದಿದೆ.

ಆದ್ದರಿಂದ ಸಧ್ಯಕ್ಕೆ ಇವುಗಳನ್ನು ಬಿಟ್ಟು ಇದುವರೆಗೆ ಪ್ರಕಟಿಸಲ್ಪಟ್ಟ ತಾಮ್ರ ಗುಚ್ಛಗಳಲ್ಲಿ ಎರಡು ವಿಷ್ಣುವರ್ಮನದು. ಒಂದು ಬೀರೂರಿನಲ್ಲಿ ದೊರೆತದ್ದು. ಮತ್ತೊಂದು ತುಮಕೂರು ಜಿಲ್ಲೆಯ ಅದೇ ತಾಲ್ಲೂಕಿನ ಕೋರ ಗ್ರಾಮದಲ್ಲಿ ಸಿಕ್ಕಿದ್ದು. ಎರಡನೆಯದನ್ನು ವಿಷ್ಣುವರ್ಮನ ಹೆರ್ಲಟ ಶಾಸನವೆಂದು ಕರೆಯಲಾಗಿದೆ. ಬೀರೂರಿನ ತಾಮ್ರ ಶಾಸನದ ಭಾಷೆ ಸಮರ್ಪಕವಾಗಿಲ್ಲ, ಅಕ್ಷರಗಳೂ ಕೂಡಾ ಚೆನ್ನಾಗಿಲ್ಲ. ಹೀಗೆ ಕೆಲವು ಕಾರಣದಿಂದ ಇದನ್ನು ಕೃತಕ ಶಾಸನವೆಂದು ತಿಳಿಯಲಾಗಿದ. ಈಗ ಮುದಿಗೆರೆಯಲ್ಲಿ ಸಿಕ್ಕ ವಿಷ್ಣುವರ್ಮನ ತಾಮ್ರಶಾಸನವು ಮೂರನೆಯದು. ಸಿಂಹವರ್ಮನ ತಾಮ್ರ ಶಾಸನವು ಇದುವರೆವಿಗೂ ದೊರಕಿರಲಿಲ್ಲ. ಈಗ ದೊರೆತ ಮುದಿಗೆರೆಯ ಇವನ ಶಾಸನ ಪ್ರಪ್ರಥಮ.

ತಾಮ್ರಪಟಗಳ ವರ್ಣನೆ :

ತಾಡವೋಲೆಯ ಹಾಳೆಗಳಂತೆ ವಿಷ್ಣುವರ್ಮನ ಗುಚ್ಛದಲ್ಲಿ ಮೂರು ಹಲಗೆಗಳು, ಸಿಂಹವರ್ಮನದರಲ್ಲಿ ನಾಲ್ಕು ಹಲಗೆಗಳು ಇವೆ. ಈ ಹಲಗೆಗಳ ಎಡ ಅಂಚಿನ ಮಧ್ಯದಲ್ಲಿಯ ರಂಧ್ರದಿಂದ ಇವುಗಳನ್ನು ಒಂದೋದು ಉಂಗುರದಲ್ಲಿ ಜೋಡಿಸಲಾಗಿದೆ, ಉಂಗುರದ ತುದಿಗಳೆರಡನ್ನೂ ಭಾರವಾದ ರಾಜಮುದ್ರೆಯಿಂದ ಬಲವಾಗಿ ಬೆಸುಗೆ ಹಾಕಿದೆ, ಒಂದೊಂದು ತಾಮ್ರಪಟವೂ ಸರಾಸರಿ ೨೩ ಸೆ ಮೀ. ಉದ್ದ ೪. ೫ ಸೆ.ಮೀ. ಅಗಲ ಮತ್ತು ೧.೫ ರಿಂದ ೨ ಮಿಲಿ ಮೀಟರ್ ದಪ್ಪ ಇದೆ. ಉಂಗುರವು

---

2. ಗೋಪಾಲ ಬಾ. ರಾ.; 1283 :

ಕದಂಬ ಅಧ್ಯಯನ ಸಂಸ್ಥೆ, ಶಿರಸಿ, ನನ್ನ ಈ ಲೇಖನದಲ್ಲಿ ಉಲ್ಲೇಖಿಸಿದ ಪ್ರಾಚೀನ ಕದಂಬರ ಶಾಸನಗಳು, ಮತ್ತು ಅವುಗಳಲ್ಲಿಯ ವಿಷಯ ಮತ್ತು ಕದಂಬ ರಾಜರ ಕಾಲಮಾನ ಈ ಪುಸ್ತಕದ ಆಧಾರದ ಮೇಲೆ ಕೊಡಲಾಗಿದೆ.

ಸುಮಾರು ೪.೫ ಸೆ. ಮೀ. ವ್ಯಾಸ ಮತ್ತು ೫ ಮಿಲಿ ಮೀಟರ್ ದಪ್ಪವಿದೆ. ವಿಷ್ಣುವರ್ಮನ ಗುಚ್ಛದ ಮುದ್ರೆಯು ಆಯತಾಕಾರ (೩.೦ x ೨. ೫ ಸೆ. ಮೀ.)ವಾಗಿದ್ದು ಅದರ ಮೇಲೆ ಅಸ್ಪಷ್ಟ ಲಾಂಛನವಿದೆ. ಸಿಂಹವರ್ಮನ ತಾಮ್ರಗುಚ್ಛದ ಮುದ್ರೆ ವರ್ತುಳ (೪.೨ ಸೆ. ಮೀ. ವ್ಯಾಸ) ವಾಗಿದ್ದು ಅದರ ಮೇಲೆ ಲಾಂಛನವಿದ್ದಂತಿಲ್ಲ. ಮೊದಲನೆಯ ಮತ್ತು ಕೊನೆಯ ಹಲಗೆಗಳ ಒಳಬದಿಯಲ್ಲಿ ಮಧ್ಯದ ಹಲಿಗೆಗಳ ಎರಡೂ ಬದಿಗಳಲ್ಲೂ ಬರವಣಿಗೆ ಇದೆ. ವಿಷ್ಣುವರ್ಮನ ಗುಚ್ಛದ ಕೊನೆ ಹಲಗೆಯ ಹೊರಬದಿಯಲ್ಲಿ ಸುಮಾರು ೮ನೇ ಶತಮಾನದ ಅಕ್ಷರಗಳಲ್ಲಿ 'ಶ್ರೀ ವಿಜ, ಜಯ, ವಿಜ' ಎಂದು ಸಿಕ್ಕಾಪಟ್ಟೆ ಬರೆಯಲಾಗಿದೆ.

ಪ್ರತಿಯೊಂದು ಹಲಗೆಯಲ್ಲೂ ಬರವಣಿಗೆಯ ಮೂರು ಸಾಲುಗಳಿವೆ. ಸಿಂಹವರ್ಮನ ಗುಚ್ಛದ ಕೊನೆಯ ಹಲಗೆಯಲ್ಲಿ ಮಾತ್ರ ನಾಲ್ಕು ಸಾಲುಗಳಿವೆ. ಒಟ್ಟಿನಲ್ಲಿ ವಿಷ್ಣುವರ್ಮನ ಗುಚ್ಛದಲ್ಲಿ ೧೫ ಸಾಲುಗಳು. ಸಿಂಹವರ್ಮನ ಗುಚ್ಛದಲ್ಲಿ ೧೯ ಸಾಲುಗಳಿವೆ. ಭಾಷೆ ಸಂಸ್ಕೃತ ಆದರೆ ಅಲ್ಲಲ್ಲಿ ತಪ್ಪುಗಳಿವೆ. ಅಪರೂಪವಾಗಿ ಸಂಸ್ಕೃತ ಶಬ್ದಗಳ ಕನ್ನಡ ತದ್ಭವ ರೂಪಗಳ ಪ್ರಯೋಗವೂ ಇದೆ. ಪ್ರಾಚೀನ ಸು. ೫-೬ನೇ ಶತಮಾನದ ಕನ್ನಡ ಲಿಪಿಗೆ ರೂಪಾಂತರ ಹೊಂದುತ್ತಿರುವ ಬ್ರಾಹ್ಮೀ ಲಿಪಿಯಲ್ಲಿದೆ. ಸಾಮಾನ್ಯವಾಗಿ ಪ್ರಾಚೀನ ಕದಂಬರ ಶಾಸನಗಳಲ್ಲಿಯ ಅಕ್ಷರಗಳ ತಲೆಯ ಮೇಲೆ ಪ್ರಮಾಣ ಬದ್ಧವಾಗಿ ಪೆಟ್ಟಿಗೆಯಾಕಾರದ ಚೌಕಟ್ಟು ಇರುತ್ತದೆ. ಆದ್ದರಿಂದ ಈ ಅಕ್ಷರಗಳಿಗೆ "ಶಿರ ಪೇಟಿಕಾ" ಅಕ್ಷರಗಳೆಂದು ಹೆಸರು. ಆದರೆ ಮುದಿಗೆರೆ ತಾಮ್ರ ಶಾಸನಗಳಲ್ಲಿ ಕ.ತ.ಪ.ಮ.ರ.ಶ ಮೊದಲಾದ ಕೆಲವು ಅಕ್ಷರಗಳಲ್ಲಿ ಮಾತ್ರ ಈ ಲಕ್ಷಣವಿದೆ. ಸಾಲುಗಳು ನೇರವಾಗಿವೆ. ತಾಮ್ರ ಹಲಗೆಗಳನ್ನು ಎಲ್ಲವೂ ಅಲ್ಲದಿದ್ದರೂ, ಅನುಕ್ರಮ ಸಂಖ್ಯೆಗಳಿಂದ ಗುರುತಿಸಲಾಗಿದೆ. ವಿಷ್ಣುವರ್ಮನ ಮತ್ತು ಸಿಂಹವರ್ಮನ ತಾಮ್ರ ಪಟಗಳಲ್ಲಿ ಕ್ರಮವಾಗಿ ಮೊದಲನೆಯದನ್ನು ಮತ್ತು ಮೊದಲಿನ ಮೂರು ಹಲಗೆಗಳನ್ನು ಈ ರೀತಿ ಗುರುತಿಸಲಾಗಿದೆ. ಈ ಸಂಖ್ಯೆಗಳು ಗುಡ್ನಾಪುರದ ಕದಂಬ ರವಿವರ್ಮ (ಸು. ೪೮೫-೫೧೯) ನ ಶಿಲಾ ಶಾಸನದಲ್ಲಿಯ ಸಂಖ್ಯೆಗಳನ್ನು ಹೋಲುತ್ತವೆ. ತಾಮ್ರ ಪಟಗಳಲ್ಲಿ ಅಲ್ಲಲ್ಲಿ ಕಿಲುಬು ಕಚ್ಚುಗಳಿರುವುದರಿಂದ ಕೆಲವು ಅಕ್ಷರಗಳು ಹಾಳಾಗಿವೆ. ಇಲ್ಲವೇ ಅಸ್ಪಷ್ಟವಾಗಿವೆ. ಆದರೂ ತಾಮ್ರ ಪಟಗಳು ಸುಸ್ಥಿತಿಯಲ್ಲಿವೆ.

ವಿಷಯ :

ಎರಡೂ ಗುಚ್ಛಗಳಲ್ಲಿಯೂ ಆರಂಭದಲ್ಲಿ ಮಂಗಳಕರವಾದ 'ಸ್ವಸ್ತಿ' ಎಂಬ ಪದವೂ ಮತ್ತು ತೀರ್ಥಂಕರನ, ಜಿನಧರ್ಮದ ಸ್ತುತಿಯೂ ಇವೆ. ವಿಷ್ಣುವರ್ಮನ ಗುಚ್ಛದಲ್ಲಿ ಜಿನೇಂದ್ರ ಎಂಬ ಉಲ್ಲೇಖವೇ ಇದೆ. ಅನಂತರ ತಂದೆ ಹಾಗೂ ಅಜ್ಜನಾದ

ಮಾನವ್ಯಸ ಗೋತ್ರದ, ಅಶ್ವಮೇಧ ಯಜ್ಞವನ್ನು ಮಾಡಿದ ಶ್ರೀಕೃಷ್ಣವರ್ಮ ಧರ್ಮ ಮಹಾರಾಜನ, ಹಿರಿಯ ಮಗನಾದ ವಿಷ್ಣುವರ್ಮನ ಮೊಮ್ಮಗನಾದ ಸಿಂಹವರ್ಮನ ಅನೇಕ ಶಾಸ್ತ್ರಗಳಲ್ಲಿಯ ಪಾಂಡಿತ್ಯ, ಪರಾಕ್ರಮ ಮತ್ತು ಗುಣಗಳ ವಿಶೇಷ ವರ್ಣನೆ ಇವೆ.

ವಿಷ್ಣುವರ್ಮನನ್ನು 'ಕೈಕೆಯ ರಾಜ ಬಾಲಿಕಾ ಗರ್ಭಸಂಭೂತ' ಎಂದು ವರ್ಣಿಸಿದ್ದರಿಂದ ಇವನ ತಾಯಿ ಕೈಕೆಯ ವಂಶದ ರಾಜಕುಮಾರಿ. ಈ ಕೈಕೆಯ ವಂಶದವರು ಹೊನ್ನಾವರ– ಗೇರುಸೊಪ್ಪೆ ಪ್ರದೇಶವನ್ನು ಆಳುತ್ತಿದ್ದರು. ಈ ವಂಶದ ಚಿತ್ರಸೇನರಾಜನ ತಾಮ್ರ ಪತ್ರವೊಂದು ಹೊನ್ನಾವರದಲ್ಲಿ ಸಿಕ್ಕಿದೆ. ಇವರು ಕದಂಬ ರಾಜನ ಮಂಡಲಾಧಿಪತಿಗಳಾಗಿದ್ದರು. ವಿಷ್ಣುವರ್ಮನನ್ನು 'ಪಲ್ಲವೇಂದ್ರಾಭಿಷಿಕ್ತ.' ಎಂದು ವರ್ಣಿಸಲಾಗಿದೆ. ಸಿಂಹವರ್ಮನ ತಾಯಿಯು 'ರಾಮೇಯ ವಂಶ'ದವಳೆಂಬ ಧ್ವನಿ ಇದೆ.

ಈ ವಂಶಾವಳಿ ಗುಣವರ್ಣನೆಗಳ ನಂತರ ಈ ರಾಜರುಗಳು ಮಾಡಿದ ದಾನ ವಿವರಗಳಿವೆ. ವಿಷ್ಣುವರ್ಮನು ತನ್ನ ಆಳ್ವಿಕೆಯ ಒಂಬತ್ತನೆಯ ವರ್ಷದಲ್ಲಿ ಶ್ರಾವಣಮಾಸ, ಹುಣ್ಣಿಮೆಯ ದಿನ ಸೇಂದ್ರಕ ವಿಷಯದಲ್ಲಿಯ ಆಸಂದಿಲೂರು ಗ್ರಾಮದ ಕೆರೆಯ ಉತ್ತರ ಸೀಮೆಯ ಆರು ನಿವರ್ತನ ಭೂಮಿಯನ್ನು ಆ ಗ್ರಾಮದಲ್ಲಿಯ ದೇವಾದಿದೇವ ಪರಮ ಅರ್ಹಂತಾಯನಕ್ಕೆ (ಜೈನ ಬಸದಿಗೆ), ಪೂಜೆಯ ಸಲುವಾಗಿ, ಪುಣ್ಯ ಸಂಪಾದನೆಗೋಸ್ಕರ ಮತ್ತು ಕುಲಾಭಿವೃದ್ಧಿಗೋಸ್ಕರ ದಾನ ಮಾಡಿದನು. ಇದರಂತೆಯೇ ಸಿಂಹವರ್ಮನೂ ಕೂಡ ತನ್ನ ಆಳ್ವಿಕೆಯ ಐದನೆಯ ವರ್ಷದ ಪುಷ್ಯಮಾಸದ ದಶಮಿ ತಿಥಿಯ ದಿನ ಅದೇ ಬಸದಿಗೆ ಆಸಂದಿಲೂರಿನ ಕೆರೆಯ ದಕ್ಷಿಣ ಸೀಮೆಯ ಐದು ನಿವರ್ತನ ಭೂಮಿಯನ್ನು ಪೂಜೆಗೋಸ್ಕರ ದಾನ ಮಾಡಿದನು.

ಕೊನೆಯಲ್ಲಿ, ಈ ಕೊಟ್ಟ ದಾನಗಳ ದುರುಪಯೋಗವಾಗಲಾರದೆಂಬ ದೃಷ್ಟಿಯಿಂದ ಧರ್ಮಶಾಸ್ತ್ರಗಳಲ್ಲಿಯ ಶ್ಲೋಕಗಳ ಉಲ್ಲೇಖದ ಮೂಲಕ ದುರುಪಯೋಗ ಮಾಡಿದಲ್ಲಿ ನರಕದಲ್ಲಿ ಅರವತ್ತು ಸಾವಿರ ವರುಷ ಹುಳುವಾಗಿ ಬೀಳುತ್ತಾನೆ ಎಂಬ ಹಿಡಿ ಶಾಪವಿದೆ.

ರಾಜಕೀಯ ಪರಿಸ್ಥಿತಿ :

ಎರಡೂ ತಾಮ್ರ ಪಟಗಳಲ್ಲೂ ಈ ರಾಜರುಗಳು ತಮ್ಮ ವಂಶಾವಳಿಯನ್ನು ಕ್ರಮವಾಗಿ ತಮ್ಮ ತಂದೆ ಅಜ್ಜನಾದ ಕೃಷ್ಣವರ್ಮ (ಸು. ೪೩೦–೪೬೦)ನಿಂದ ಹೇಳಿಕೊಂಡಿದ್ದಾರೆ. ಮೂಲವಂಶದ ವೀರಶರ್ಮನಿಂದಾಗಲೀ ಕದಂಬ ರಾಜ್ಯ ಸ್ಥಾಪಕ ಮಯೂರ ವರ್ಮನಿಂದಾಗಲೀ ಅಲ್ಲ. ಕೃಷ್ಣವರ್ಮನು ತನ್ನ ಸಹೋದರ ಶಾಂತಿವರ್ಮನಿಂದ ಬೇರ್ಪಟ್ಟು ಬಹುಶಃ ಪಲಾಶಿಕೆ (ಹಲಸಿ)ಯಿಂದ ಸ್ವತಂತ್ರವಾಗಿ ರಾಜ್ಯವಾಳುತ್ತಿದ್ದನು. ಇವನು ಈ ಉಪಶಾಖೆಯ ಮೂಲ ಪುರುಷ. ಆದ್ದರಿಂದಲೇ ಇವನ ಮಗ, ಮೊಮ್ಮಗ ಮತ್ತು ಈ ಶಾಖೆಯ ತರುವಾಯದ ಅರಸರುಗಳಾದ ಇಮ್ಮಡಿ

ಕೃಷ್ಣವರ್ಮ (ಸು.ಕ್ರಿ.ಶ. ೫೧೬ ೫೪೦) ಭೋಗಿವರ್ಮನು ಮೊದಲನೆಯ ಕೃಷ್ಣವರ್ಮನಿಂದಲೇ ತಮ್ಮ ವಂಶಾವಳಿಯನ್ನು ಹೇಳಿಕೊಂಡಿದ್ದಾರೆ.

ವಿಷ್ಣುವರ್ಮನು ತನ್ನ ಭುಜಬಲ ಪರಾಕ್ರಮದಿಂದ ರಾಜ್ಯಭೋಗವನ್ನು ಪಡೆದನೆಂದು ಸೂಚಿಸಿದೆ. (ಸ್ವಭುಜ್ಯೆ .. ಭೋಗಭಾಗಿ) ಇದು ಒಂದು ಸಾಂಪ್ರದಾಯಿಕ ಹೆಗ್ಗಳಿಕೆಯೆಂದು ತೋರಬಹುದು. ಏಕೆಂದರೆ, ಕದಂಬ ವಂಶದ ಮೃಗೇಶವರ್ಮನಿಂದ ಹಿಡಿದು ಭೋಗಿವರ್ಮನವರೆಗೆ ಕೆಲವು ಅರಸರ (ಉದಾ : ಮೃಗೇಶವರ್ಮನ ದೇವಗಿರಿಯ, ರವಿವರ್ಮನ ಹಲಶಿಯ, ಇಮ್ಮಡಿ ಕೃಷ್ಣವರ್ಮನ ಬನಹಳ್ಳಿಯ ತಾಮ್ರ ಶಾಸನಗಳಲ್ಲಿಯ ಉಲ್ಲೇಖಗಳು) ಸಾಧನೆಗಳ ವರ್ಣನೆಗಳಲ್ಲಿಯೂ ಸ್ವಲ್ಪ ಹೆಚ್ಚು ಕಡಿಮೆ ಇದೇ ರೀತಿಯ ಹೊಗಳಿಕೆ ಇದೆ. ಆದರೆ ಯಾರೊಡನೆ (ತಮ್ಮೊಳಗಾಗಲೀ, ಹೊರಗಿನವರೊಡನಾಗಲೀ) ಕಾದಾಡಿ ತಮಗೆ ಬರಬೇಕಾಗಿದ್ದ ರಾಜ್ಯವನ್ನು ದಕ್ಕಿಸಿಕೊಳ್ಳಬೇಕಾಯಿತೆಂಬುದರ ಬಗ್ಗೆ ವಿವರಣೆ ಇಲ್ಲ. ಆದರೂ ಕೂಡ ರಾಜ್ಯದಾಸೆಯಿಂದ ಬಂಧುವರ್ಗದವರ ಮತ್ತು ಅವರವರ ಹಿಂಬಾಲಕರ ಸವಾಲುಗಳನ್ನು ಎದುರಿಸಬೇಕಾಯಿತೆಂದು ಅರ್ಥೈಸಬೇಕಾಗುತ್ತದೆ. ವಿಷ್ಣುವರ್ಮನೂ ಕೂಡ ಪಟ್ಟಕ್ಕೆ ಬರುವ ಮುಂಚೆ ಇಂಥ ಪರಿಸ್ಥಿತಿಯನ್ನು ಎದುರಿಸಬೇಕಾಯಿತೆಂದು ತೋರುತ್ತದೆ. ಇವನ ತಂದೆ ಮೊದಲನೆ ಕೃಷ್ಣವರ್ಮನು ನಣಕ್ಕಾಸ ಪಲ್ಲವನೊಡನೆಯ ಹೋರಾಟದಲ್ಲಿ ಪರಾಭವವನ್ನು ಅನುಭವಿಸಿ ಬಹುಶಃ ಯುದ್ಧದಲ್ಲಿ ಮಡಿದನು. ಆಗ ವಿಷ್ಣುವರ್ಮನು ಪಟ್ಟಕ್ಕೆ ಬರಲು ಗಂಭೀರವಾದ ಅಡೆತಡೆಗಳನ್ನು ಎದುರಿಸಬೇಕಾಯಿತೆಂದು ತೋರುತ್ತದೆ. ಇಂಥ ಕಷ್ಟ ಪರಿಸ್ಥಿತಿಯಲ್ಲಿ ಪಲ್ಲವ ರಾಜನು ಇವನ ಸಹಾಯಕ್ಕೆ ಬಂದು ಪಟ್ಟಾಭಿಷೇಕವನ್ನು ನೆರವೇರಿಸಿದನು. ಆದ್ದರಿಂದಲೇ ಇವನು ರಾಜ್ಯವನ್ನು ತನ್ನ ಪರಾಕ್ರಮದಿಂದ ಪಡೆದುಕೊಳ್ಳಬೇಕಾಯಿತೆಂದು ಮತ್ತು 'ಪಲ್ಲವೇಂದ್ರಾಭಿಷಿಕ್ತ'ನೆಂದು ಹೇಳಿಕೊಂಡಿದ್ದಾನೆ. ಇವನ ಹೆಬ್ಬಟ ತಾಮ್ರ ಶಾಸನದಲ್ಲಿ ಈ ಪಲ್ಲವೇಂದ್ರನನ್ನು ಶಾಂತಿವರ್ಮನೆಂದು ಕರೆಯಲಾಗಿದೆ. ಈ ಪಲ್ಲವ ರಾಜನು ಯಾರು ಎಂಬುದು ಬೇರೆ ಯಾವ ಮೂಲಗಳಿಂದಲೂ ಇದುವರೆಗೆ ತಿಳಿದಿಲ್ಲ.

ಸಿಂಹವರ್ಮನನ್ನೂ ಕೂಡ ಅವನ ತಂದೆಯನ್ನು ಕೈಕೆಯರಾಜ ಬಾಲಿಕಾ ಗರ್ಭ ಸಂಭೂತ ಎಂದು ವರ್ಣಿಸಿದ ಹಾಗೆ, 'ರಾಮೆಯ ವಂಶ ಹಿಮವತ್ ಪ್ರಸೂತ' ಎಂದು ಹೇಳಲಾಗಿದೆ. ರಾಮೇಯ ವಂಶವು ಯಾವುದು ಮತ್ತು ಅದು ಯಾವ ರೀತಿಯಲ್ಲಿ ಪ್ರಾಮುಖ್ಯವಾಗಿತ್ತು ಎಂಬುದನ್ನು ಶೋಧಿಸಬೇಕಾಗಿದೆ.

ಇವನಿಗೆ ಎರಡು ಸಲ ಪಟ್ಟಾಭಿಷೇಕವಾಯಿತೆಂದು ಕಾಣುತ್ತದೆ. 'ಮೈಸವಾಭಿಶಿಕ್ತ ತದನು ಸರ್ವಸೇನ ಮಹಾರಾಜೇನ ಮೂರ್ಧಾಭಿಷೇಕೇನಾಭ್ಯರ್ಚಿತ' ಎಂದು ಶಾಸನದಲ್ಲಿ ವರ್ಣಿಸಲಾಗಿದೆ. ಮೊದಲು ರಾಜ್ಯದ (ಪ್ರಾಯಶಃ ಮಂತ್ರಿ ಮಂಡಲ ಮತ್ತು ಉನ್ನತ

ಸ್ಥಾನದಲ್ಲಿರುವವರ) ಸಭೆಯಿಂದ ಇವನು ಪಟ್ಟಾಭಿಷಿಕ್ತನಾದನೆಂಬ ಸೂಚನೆ ಕಾಣುತ್ತದೆ. ಅನಂತರ ವಿಧಿವತ್ತಾಗಿ ಸರ್ವಸೇನ ಮಹಾರಾಜನಿಂದ ಪಟ್ಟಾಭಿಷಿಕ್ತನಾದನು. ಕೆಳಗೆ ವಿವರಿಸಿದಂತೆ ವಿಷ್ಣುವರ್ಮನು ರವಿವರ್ಮನೊಡನೆಯ ಕಾದಾಟದಲ್ಲಿ ಮಡಿದ ಕೂಡಲೇ ಸಿಂಹವರ್ಮನಿಗೆ ಸಿಂಹಾಸನವನ್ನೇರಲು ಎದುರಾಳಿಗಳು ಅಡ್ಡ ಬರಬಹುದೆಂಬ ಶಂಕೆ-ಯಿಂದ ಸಭೆಯು ಅವಸರದಲ್ಲಿ ಅವನಿಗೆ ಸಂಕ್ಷೇಪವಾಗಿ ಪಟ್ಟಾಭಿಷೇಕ ಮಾಡಿ ಅವನನ್ನು ರಾಜನೆಂದು ಘೋಷಿಸಿರಬೇಕು. ಅನಂತರ ಇವನಿಗೆ ಸಹಾಯ ಮಾಡಿದ ಪ್ರಬಲಮಿತ್ರ ರಾಜರುಗಳಲ್ಲಿ ಒಬ್ಬನಾದ ಹಿರಿಯ ಸರ್ವಸೇನ ಮಹಾರಾಜನು ಶಾಸ್ತ್ರೋಕ್ತವಾಗಿ ಇವನ ಪಟ್ಟಾಭಿಷೇಕವನ್ನು ನೆರವೇರಿಸಿದನು.

ಕದಂಬ ಮತ್ತು ವಾಕಾಟಕ ಸಂಬಂಧ :

ಸಿಂಹವರ್ಮನ ಶಾಸನದಲ್ಲಿ ಸರ್ವಸೇನ ಮಹಾರಾಜನ ಉಲ್ಲೇಖ ಮಹತ್ವದ್ದು. ನಮಗೆ ತಿಳಿದಂತೆ ಇವನು ನಾಗಪುರ (ಮಹಾರಾಷ್ಟ್ರ) ಪ್ರದೇಶದಿಂದ ಆಳುತ್ತಿದ್ದ ವಾಕಾಟಕ ರಾಜಮನೆತನದವನು. ಈ ರಾಜ್ಯದ ಸ್ಥಾಪಕ ಮೊದಲನೆಯ ವಿಂಧ್ಯ ಶಕ್ತಿಯ ಮೊಮ್ಮಗ, ಮೊದಲ ಪ್ರವರ ಸೇನನ ಮಗ. ಇವನು ವತ್ಸಗುಲ್ಮ (ಈಗಿನ ಬಾಸಿಮ್ ಅಕೋಲ ಜಿಲ್ಲೆ) ಪ್ರದೇಶದಿಂದ ಬಹುಶಃ ತಂದೆಯ ಮರಣಾನಂತರ ಸ್ವತಂತ್ರನಾಗಿ ಆಳಲು ಪ್ರಾರಂಭಿಸಿ ವತ್ಸಗುಲ್ಮ ಶಾಖೆಯ ಮೂಲ ಪುರುಷನಾದ ಇವನು ಕವಿಯೂ ಆಗಿದ್ದನು. 'ಹರವಿಜಯ' ಎಂಬ ಪ್ರಾಕೃತ ಕಾವ್ಯವನ್ನು ಇವನೇ ರಚಿಸಿದನೆಂದು ಬಗೆಯಲಾಗಿದೆ. ಇವನ ಮಗ ಇಮ್ಮಡಿ ವಿಂಧ್ಯಶಕ್ತಿಯ ಬಾಸಿಮ್ ಶಾಸನದಲ್ಲಿ ಈ ಶಾಖೆಯ ವಂಶಾವಳಿಯನ್ನು ನಿರೂಪಿಸಲಾಗಿದೆ.

ಕದಂಬರಿಗೂ ಮತ್ತು ವಾಕಾಟಕರಿಗೂ ವೈವಾಹಿಕ ಸಂಬಂಧವಿತ್ತು. ಒಬ್ಬ ಕುಂತಳದ (ಕದಂಬರ) ರಾಜನ ಮಗಳು ಅಜ್ಜಿತಭಟ್ಟಾರಿಕಾ ಎಂಬುವಳ ವಿವಾಹವು ಮೂಲ ಶಾಖೆಯ ವಾಕಾಟಕ ದೊರೆ ನರೇಂದ್ರಸೇನನೊಡನೆ ಆಯಿತು. ಈ ಕದಂಬ-ರಾಜನು ಮೂಲ ಮನೆತನದವನಾಗಿರಬೇಕು. ಆದರೆ ವಾಕಾಟಕ ಉಪಶಾಖೆಯ ರಾಜ ಮನೆತನಕ್ಕೂ ಮೂಲಶಾಖೆಯ ಕದಂಬ ಮನೆತನಕ್ಕೂ ವೈಮನಸ್ಸಿತ್ತೆಂದು ತೋರುತ್ತದೆ. ಏಕೆಂದರೆ ಇಮ್ಮಡಿ ವಿಂಧ್ಯ ಶಕ್ತಿಯ ಪ್ರಾಯಶಃ ಸಹೋದರನಾದ ಇಮ್ಮಡಿ ಪ್ರವರ ಸೇನನು ಕುಂತಳ ರಾಜನನ್ನು ಸೋಲಿಸಿದನೆಂದು ಅಜಂತಾ ಶಾಸನದಲ್ಲಿ ಉಲ್ಲೇಖವಿದೆ.

ಈಗ ದೊರೆತ ಸಿಂಹವರ್ಮನ ಮುದಿಗೆರೆಯ ಶಾಸನದ ಪ್ರಕಾರ ಇವನ ಮನೆ-ತನಕ್ಕೂ ಮತ್ತು ವತ್ಸಗುಲ್ಮ ಶಾಖೆಯ ವಾಕಾಟಕ[೩] ಮನೆತನಕ್ಕೂ ಸ್ನೇಹವಿದ್ದಿರಬೇಕು.

೩. ವಾಕಾಟಕ ರಾಜರುಗಳ ವಿಷಯ ಮತ್ತು ಕಾಲಮಾನವನ್ನು ಸದ್ಯಕ್ಕೆ ಭಾರತೀಯ ವಿದ್ಯಾ ಭವನದ ಭಾರತದ ಚರಿತ್ರೆ ಮತ್ತು ಸಂಸ್ಕೃತಿಯ ಮಾಲಿಕೆಯ ೩ನೇ ಸಂಪುಟ ದಿ. ಕ್ಲ್ಯಾಸಿಕಲ್ ಏಜ್ ಆಧಾರದ ಮೇಲೆ ಕೊಡಲಾಗಿದೆ.

ಈ ಹಿನ್ನೆಲೆಯಲ್ಲಿ ಇಮ್ಮಡಿ ಪ್ರವರಸೇನನು ಸೋಲಿಸಿದ ಕದಂಬರಾಜನು ಬಹುಶಃ ರವಿವರ್ಮನೇ ಆಗಿರಬಹುದು. ಸಿಂಹವರ್ಮನ ಪಕ್ಷ ವಹಿಸಿರಬೇಕು. ಗೆದ್ದಮೇಲೆ ಪ್ರವರಸೇನನ ತಂದೆ ಸರ್ವಸೇನ ಮಹಾರಾಜನು ಸಿಂಹವರ್ಮನ ಪಟ್ಟಾಭಿಷೇಕ ಸಮಾರಂಭವನ್ನು ನೆರವೇರಿಸಿದನು. ಆದರೆ ಈ ರೀತಿ ಅರ್ಥೈಸುವಿಕೆಗೆ ಒಂದು ದೊಡ್ಡ ವಿರೋಧವಿದೆ. ಅದು ಕಾಲಮಾನ. ತಜ್ಞರು ಇದುವರೆಗೆ ದೊರೆತ ಆಧಾರಗಳ ಮೇಲಿನಿಂದ ತರ್ಕಬದ್ಧವಾಗಿ ಸಮಕಾಲೀನ ಎಲ್ಲ ವಂಶಗಳ ರಾಜರುಗಳ ಅನುಕ್ರಮ ಮತ್ತು ಕಾಲ-ಮಾನಗಳ ಪಟ್ಟಿಗಳನ್ನು ಸಿದ್ಧಪಡಿಸಿದ್ದಾರೆ. ಅವುಗಳ ಪ್ರಕಾರ ಸರ್ವಸೇನ ಮತ್ತು ಸಿಂಹವರ್ಮನ ಕಾಲಮಾನಗಳು ಕ್ರಮವಾಗಿ ಸು. ೪ ನೇ ಶತಮಾನದ ಮಧ್ಯಭಾಗ ಮತ್ತು ೫ ನೇ ಶತಮಾನದ ಕೊನೆಯಭಾಗ. ಈ ರೀತಿಯ ಕಾಲಮಾನ ವೈಪರೀತ್ಯ-ದಿಂದ ಸರ್ವಸೇನನು ಸಿಂಹವರ್ಮನ ಪಟ್ಟಾಭಿಷೇಕವನ್ನು ನೆರವೇರಿಸುವ ಸಾಧ್ಯತೆ ಇಲ್ಲ. ಆದರೂ ಸಿಂಹವರ್ಮನ ಶಾಸನದಲ್ಲಿ ಬರುವ ಸ್ಪಷ್ಟ ಉಲ್ಲೇಖವು ಅಸತ್ಯವೆಂದು ಬದಿಗೆ ತಳ್ಳಲೂ ಸಾಧ್ಯವಿಲ್ಲವೆಂದು ತೋರುವುದು. ಆದ್ದರಿಂದ ಈಗ ಒಪ್ಪಿಕೊಳ್ಳಬಹುದಾದ ಈ ವಂಶಾವಳಿಗಳು ಮತ್ತು ಅವುಗಳ ಕಾಲಮಾನಗಳಲ್ಲಿ ಇನ್ನೂ ಹೆಚ್ಚಿನ ಮತ್ತು ಗಂಭೀರ ಅಧ್ಯಯನದ ಅವಶ್ಯವಿದೆ.

ಸಿಂಹವರ್ಮನ ಪಟ್ಟಾಭಿಷೇಕವು ಸರ್ವಸೇನನಿಂದ ನೆರವೇರಿಸುವಂಥ ಸಂಧರ್ಭ ಏನಿತ್ತು ಎಂಬುದರ ಬಗ್ಗೆ ನಮ್ಮ ಗಮನವನ್ನು ಹರಿಸುವ. ಸಮಕಾಲೀನರಾಗಿದ್ದ ವಿಷ್ಣುವರ್ಮ (ಸು. ೪೬೦–೪೯೦) ಮತ್ತು ಮೃಗೇಶವರ್ಮ (ಸು. ೪೫೫–೪೮೦) ಕ್ರಮವಾಗಿ ಹಲಸಿ ಮತ್ತು ಬನವಾಸಿಯಿಂದ ಆಳುತ್ತಿದ್ದರು. ಇವರ ತಂದೆಯವರ ಕಾಲ-ದಿಂದಲೂ ಈ ಮನೆತನಗಳ ಮಧ್ಯೆ ವೈಮನಸ್ಸಿತ್ತು. ಇವರು ಒಬ್ಬರನ್ನೊಬ್ಬರು ತಮ್ಮ ಅಧೀನವಾಗಿರುವಂತೆ ನೋಡಲು ಪ್ರಯತ್ನಿಸುತ್ತಿದ್ದರು. ಮೃಗೇಶವರ್ಮನು ತನ್ನ ಎಂಟನೇ ಆಳ್ವಿಕೆ ವರ್ಷದ ಹಲಸಿ ತಾಮ್ರ ಶಾಸನದಂತೆ ಹಲಸಿಯಲ್ಲಿ ಒಂದು ಜಿನಾಲಯವನ್ನು ಕಟ್ಟಿಸಿ ಅದಕ್ಕೆ ಭೂಮಿದಾನ ಮಾಡಿದ್ದನು. ಅಂದರೆ ತಾತ್ಕಾಲಿಕವಾಗಿ ವಿಷ್ಣುವರ್ಮನು ಇವನ ಅಧೀನದಲ್ಲಿದ್ದರಬಹುದು. ಆದರೆ ಪರಿಸ್ಥಿತಿಯು ಹೀಗೆಯೆ ಉಳಿಯಲಿಲ್ಲ. ಈಗ ದೊರೆತ ವಿಷ್ಣುವರ್ಮನ ಮುದಿಗೆರೆ ತಾಮ್ರಶಾಸನದ ಪ್ರಕಾರ ಇವನು ಸು. ೪೬೬ರಲ್ಲಿ ಬನವಾಸಿಯಲ್ಲಿದ್ದು ಇದಕ್ಕೆ ಸೇರಿದ್ದ ಸೇಂದ್ರಕ ಪ್ರಾಂತದಲ್ಲಿಯ ಆಸಂದಿ-ಲೂರಿನ ಜೈನ ಬಸದಿಗೆ ಭೂಮಿದಾನ ಮಾಡಿದನು. ಸ್ವಲ್ಪ ಸಮಯದ ನಂತರ ಇವನನ್ನು ಬನವಾಸಿಯಿಂದ ಓಡಿಸಿರಬೇಕು. ಏಕೆಂದರೆ, ಮೃಗೇಶವರ್ಮನ ತಮ್ಮನಾದ ಶಿವಮಾಂಧಾತೃ (ಸು. ೪೮೦–೪೮೫) ೪೮೨ ರಲ್ಲಿ ಬನವಾಸಿಯಿಂದ ಆಳುತ್ತಿದ್ದು ದಾನ ಮಾಡಿದ ವಿಷಯ ಅವನ ಕೂಡಲಗೆರೆ ತಾಮ್ರ ಶಾಸನವು ತಿಳಿಸುತ್ತದೆ. ಮೃಗೇಶವರ್ಮನ ಮಗ ರವಿವರ್ಮನ ಆಳ್ವಿಕೆಯ ಕಾಲದಲ್ಲೂ ಇವನಿಗೂ ವಿಷ್ಣು-ವರ್ಮನಿಗೂ ವೈರತ್ವ ಹೆಚ್ಚಾಗಿ ಯುದ್ಧದಲ್ಲಿ ಪರ್ಯವಸನವಾಯಿತು. ಇದರಲ್ಲಿ

ವಿಷ್ಣುವರ್ಮನು ಮರಣ ಹೊಂದಿದನು. ರವಿವರ್ಮನು ತನ್ನ ಹಲಶಿಯ ತಾಮ್ರ ಶಾಸನದಲ್ಲಿಯ ಮತ್ತು ಗುಡ್ನಾಪುರದ ಶಿಲಾ ಶಾಸನದಲ್ಲಿ ಗೌರವದಿಂದಲೇ ಶ್ರೀವಿಷ್ಣು (ವಿಷ್ಣುದಾಸ)ವನ್ನು ಮುಗಿಸಿದುದಾಗಿ ಹೇಳಿಕೊಂಡಿದ್ದಾನೆ. ವಿಷ್ಣುವರ್ಮನಿಗೆ ವಿಷ್ಣು-ದಾಸನೆಂದೂ ಹೆಸರಿತ್ತೆಂಬುದು ಅವನ ಮೊಮ್ಮಗನಾದ ಇಮ್ಮಡಿ ಕೃಷ್ಣವರ್ಮನ ಬನಹಳ್ಳಿ ಮತ್ತು ಬೆಣ್ಣೂರು ತಾಮ್ರ ಶಾಸನಗಳಲ್ಲಿ ಹೇಳಿದೆ. ಇಂಥ ಗಂಭೀರ ರಾಜಕೀಯ ಪರಿಸ್ಥಿತಿಯಲ್ಲಿ ಮೃತಿ ಹೊಂದಿದ ವಿಷ್ಣುವರ್ಮನ ಮಗ ಸಿಂಹವರ್ಮನ ಸಹಾಯಕ್ಕೆ ವಾಕಾಟಕ ಇಮ್ಮಡಿ ಪ್ರವರಸೇನನು ರವಿವರ್ಮನಿಂದ ಸಿಂಹವರ್ಮನಿಗೆ ಅವನ ತಂದೆಯ ರಾಜ್ಯವನ್ನು ಉಳಿಸಲು ಬಂದಿರಬೇಕು. ರವಿವರ್ಮನನ್ನು ಸೋಲಿಸಿದ ಮೇಲೆ ಇವನ ತಂದೆ ಸರ್ವಸೇನನಿಂದ ಸಿಂಹವರ್ಮನಿಗೆ ಪಟ್ಟಾಭಿಷೇಕವಾಯಿತು.

ತರುವಾಯ ರವಿವರ್ಮನ ಮತ್ತು ಸಿಂಹವರ್ಮನ ಸಂಬಂಧವು ಸಮರ್ಪಕ-ವಾಗಿರಲಿಲ್ಲ. ಸಿಂಹವರ್ಮನೂ ತನ್ನ ತಂದೆಯಂತೆ ಸು. ೪೯೫ ರಲ್ಲಿ ಬನವಾಸಿಯಲ್ಲಿದ್ದು ಅದೇ ಸೇಂದ್ರಕ ವಿಷಯದ ಆಸಂದಿಲೂರಿನ ಜೈನ ಬಸದಿಗೆ ಭೂಮಿದಾನ ಮಾಡಿದನು. ಸ್ವಲ್ಪ ಹೆಚ್ಚು ಕಡಿಮೆ ಇದೇ ಸಮಯದಲ್ಲಿ ರವಿವರ್ಮನು ತನ್ನ ೧೨ ನೇ ಆಳ್ವಿಕೆ ವರ್ಷದಲ್ಲಿ (ಸು. ೪೯೬) ಪಾಂಕ್ತಿಪುರ (ಈಗಿನ ಹಾನಗಲ್)ದಲ್ಲಿದ್ದು ವರಯಿಕಾ ಗ್ರಾಮದಲ್ಲಿ ಒಂದು ಕೆರೆಯನ್ನು ಕಟ್ಟಿಸಿ ಭವಸ್ವಾಮಿಯೆಂಬ ಬ್ರಾಹ್ಮಣನಿಗೆ ಭೂಮಿದಾನ ಮಾಡಿದನೆಂದು ಅವನ ಕುಂಟಗಣಿ ತಾಮ್ರ ಶಾಸನದಲ್ಲಿದೆ.

ಬನವಾಸಿ ರಾಜ್ಯ :

ವಿಷ್ಣುವರ್ಮನ ಬೀರೂರು ಶಾಸನದಲ್ಲಿದ್ದಂತೆ ಈ ಮುದಿಗೆರೆ ತಾಮ್ರ ಶಾಸನ-ಗಳಲ್ಲೂ ಬನವಾಸಿ ರಾಜ್ಯದಲ್ಲಿದ್ದ ಘಟಕಗಳ ಸಂಖ್ಯೆಯನ್ನು ಕೊಡಲಾಗಿದೆ. ಈ ರಾಜ್ಯದಲ್ಲಿ ಎಂಟು ಭಾಗಗಳಿದ್ದವು. 'ವಿಜಯ ವೈಜಯಂತ್ಯ ಸಾಷ್ಟಾದಶಕತಾದ್ರಿ್ಯಯಾ' ಮತ್ತು 'ವಿಜಯ ಬೇಜಯಂತೀ ವನಿತಾಯಾ ಸಾಷ್ಟಾದಶಕ ರಾಜ್ಯ ವಿಭಕ್ತಾರ್ಧಯಾ' ಇದು ೧೦-೧೨ ನೇ ಶತಮಾನಗಳ ಕನ್ನಡ ಶಾಸನಗಳಲ್ಲಿಯ ಬನವಾಸಿ ಪನ್ನಿರ್ಚ್ಛಾಸಿರಂ ಎಂಬ ವರ್ಣನೆಯ ಕ್ರಮದ ಪೂರ್ವಭಾವಿಯ ಪ್ರಯೋಗವೆಂದು ಹೇಳಬಹುದು. ಪ್ರಾಯಶಃ ಒಂದು ರಾಜ್ಯದಲ್ಲಿಯ ಘಟಕಗಳ ಸಂಖ್ಯೆಯನ್ನು ಹೇಳುವ ಕ್ರಮ ಈ ಶಾಸನಗಳಲ್ಲಿಯೆ ಮೊದಲು ಕಾಣಿಸಿಕೊಳ್ಳುತ್ತದೆಂದು ಹೇಳಬಹುದು.

ಸೇಂದ್ರಕ ವಿಷಯದಲ್ಲಿದ್ದ ಆಸಂದಿಲೂರು ಈಗಿನ ಮುದಿಗೆರೆ ಹತ್ತಿರವಿರುವ ಆಸಂದಿಹಳ್ಳಿಯೇ ಆಗಿರಬೇಕು. (ಶ್ರೀ ಪಾಂಡುರಂಗ ಶಾಸ್ತ್ರಿಯವರು ಒದಗಿಸಿದ ಮಾಹಿತಿ) ಮತ್ತು ಇಲ್ಲಿ ಒಂದು ಹೊಯ್ಸಳ ಕಾಲದ್ದೆನ್ನಬಹುದಾದ ಜೈನ ಬಸದಿಯೂ ಇದೆ. ಪ್ರಾಯಶಃ ಮೊದಲೇ ಇದ್ದ ಬಸದಿಯ ಸ್ಥಳದಲ್ಲಿಯೇ ಹೊಯ್ಸಳ ಕಾಲದಲ್ಲಿ

ಮತ್ತೆ ಕಟ್ಟಿರಬಹುದು. ಸೇಂದ್ರಕ ವಿಷಯವು ಈಗಿನ ಶಿವಮೊಗ್ಗ ಮತ್ತು ಚಿಕ್ಕ ಮಗ-ಳೂರು ಜಿಲ್ಲೆಗಳ ಪ್ರದೇಶಗಳನ್ನೊಳಗೊಂಡಿದೆ.

ಕಾಲಮಾನ :

ಕೊನೆಯದಾಗಿ ವಿಷ್ಣುವರ್ಮ ಮತ್ತು ಸಿಂಹವರ್ಮರು ಕ್ರಮವಾಗಿ ತಮ್ಮ ಆಳ್ವಿಕೆಯ ೯ ಮತ್ತು ೫ನೇ ವರ್ಷಗಳಲ್ಲಿ ಈ ತಾಮ್ರ ಶಾಸನಗಳನ್ನು ಹೊರಡಿಸಿದರು. ಈಗ ಬಹುಮಟ್ಟಿಗೆ ತಜ್ಞರು ಒಪ್ಪಿಕೊಂಡಂತೆ ಈ ರಾಜರುಗಳು ಅನುಕ್ರಮವಾಗಿ ತಮ್ಮ ಆಳ್ವಿಕೆಯನ್ನು ಸು. ೪೬೦ ರಲ್ಲಿ ಮತ್ತು ೪೯೦ ರಲ್ಲಿ ಆರಂಭಿಸಿದರು. ಆದ್ದರಿಂದ ಈ ತಾಮ್ರ ಶಾಸನಗಳ ಕಾಲವನ್ನು ತಾತ್ಕಾಲಿಕವಾಗಿ ಸು.ಕ್ರಿ.ಶ. ೪೬೯ ಮತ್ತು ೪೯೫ ಎಂದು ತೀರ್ಮಾನಿಸಬಹುದು.

ಈ ಶಾಸನಗಳು ಕೃತಕವೆ?

ಈ ಶಾಸನಗಳಲ್ಲಿ ಲಾಂಛನ ಮುದ್ರೆಯು ತೀರಾ ಅಸ್ಪಷ್ಟವಾಗಿವೆ. ಭಾಷೆಯು ಅದರಲ್ಲೂ ಸಿಂಹವರ್ಮನ ತಾಮ್ರ ಶಾಸನದ್ದೂ ಅಲ್ಲಲ್ಲಿ ದೋಷಪೂರಿತವಾಗಿದೆ. ಕದಂಬ ಶಾಸನಗಳಲ್ಲಿ ಸಾಮಾನ್ಯವಾಗಿ ಇರುವ ಶಿರಪೇಟಿಕಾ ಲಕ್ಷಣವೂ ಇವುಗಳಲ್ಲಿ ಒಂದೇ ಪ್ರಕಾರವಾಗಿ ಇಲ್ಲ. ಇದ್ದಲ್ಲಿ ಒಡೆದೆದ್ದು ಕಾಣುವುದಿಲ್ಲ. ಐತಿಹಾಸಿಕ ಸಂಗತಿ-ಯಲ್ಲೂ ಮೇಲೆ ವಿವರಿಸಿದಂತೆ ಸ್ವಲ್ಪ ಅಸಂಗತ ಕಾಣುತ್ತದೆ. ಆದ್ದರಿಂದ ಇವುಗಳು ಮುಖ್ಯವಾಗಿ ಸಿಂಹವರ್ಮನದು ಕೃತಕವಾಗಿರಬದೇ ? ಎಂಬ ಅನುಮಾನ ಬರಬಹುದು. ಈ ದೃಷ್ಟಿಯಿಂದ ಇವುಗಳ ಅಧ್ಯಯನ ಮುಂದುವರೆಸಿದೆ. ಒಂದು ವೇಳೆ ಇವು ಈ ರಾಜರುಗಳ ಕಾಲದ್ದಾಗಿರದೆ ಕೃತಕವಾಗಿದ್ದಲ್ಲಿ ಅಕ್ಷರಗಳ ಶೈಲಿಯ ಮೇಲೆ ಇವು ಸು. ೬ ನೇ ಶತಮಾನಕ್ಕಿಂತ ಅನಂತರ ಕಾಲದ್ದಲ್ಲ. ಆದ್ದರಿಂದ ಈ ರಾಜರುಗಳಿಗೆ ಕಾಲಮಾನದಿಂದ ಇವು ತೀರಾ ಸಮೀಪವಾಗಿದ್ದು ಇದರಲ್ಲಿ ಬರುವ ಐತಿಹಾಸಿಕ ಸಂಗತಿಗಳಲ್ಲಿ ವಿರೂಪವಿಲ್ಲದೆ ಸತ್ಯಕ್ಕೆ ದೂರವಾಗಿಲ್ಲವೆಂದು ಹೇಳಬಹುದು. ಒಟ್ಟಿನಲ್ಲಿ ಈ ತಾಮ್ರ ಶಾಸನಗಳು ಆಗಿನ ರಾಜಕೀಯ ಮತ್ತು ಸಾಂಸ್ಕೃತಿಕ ಸ್ಥಿತಿಗತಿಗಳ ಕೆಲವು ಹೊಸ ಸಂಗತಿಗಳನ್ನು ಬೆಳಕಿಗೆ ತರುತ್ತವೆ.

ವಿಷ್ಣುವರ್ಮನ ಒಂಬತ್ತನೇ ವರ್ಷದ ಮುದಿಗೆರೆ ತಾಮ್ರ ಶಾಸನ

ಒಂದನೆ ಹಲಗೆ ಒಳಬದಿ

೧. ಸ್ವಸ್ತಿ ಜಯತ್ಯವಿರತಾನನ್ತ ಯುಗಪಜ್ಞಾನದ(ರ್ಶ)ನ : ಜಿನೇನ್ದ್ರಃ ಪರ-
ಮೈಶ್ವರ್ಯ(ರ್ಯೋ) ನಿತ್ಯಾವ್ಯಾಬಾಧ ಫೆ ಖ್ಯಾ (ಪ್ಯಾತಾ)ಚಾರ(:)

೨. ವಿಜಯ ವೈಜಯಯನ್ತ್ಯಾ ಃ ಸಾಷ್ಟಾದಶಕಶಾದ್ರಿ್ಯ(ರ್ಥಿ) ಯಾ ಃ ಪ್ರಶಾಸಿತೊ ಶ್ರಿ(ೀ)ಕೃಷ್ಣವರ್ಮ ಧ(ರ್ಮ) ಮಹಾರಾಜ

೩. ಸ್ಯ ಮಾನವ್ಯ ಸಗೋತ್ರಸ್ಯ ಅಶ್ವಮೇಧಯಾಜಿನಃ ಜ್ಯೆಷ್ಠತನಯ ಃ ಕೈಕೆಯರಾಜ-ಬಾಲಿಕಾಗರ್ಭ ಸವ ್ಭೂತ ಃ

ಎರಡನೇ ಹಲಗೆ : ಮುಂಬದಿ

೪. ಸ್ವಭುಜೌಜೌವಿತೆತೋರ ಃ ಸ್ವಭುಜಾರ್ಜಿತಾಸೋಕ (?) ಭೋಗಭಾಗೀ ಸಮರ ಸಾಗರ ವೇಗವಾರ್ಯ್ಯೇವೀರ್ಯ ಃ ವಾಜಿಗನ್ಧರ್ವ್ಯ(ರ್ವ) ಶಬ್ದ

೫. ನೀತಿಧರ್ಮ ಧನುರ್ವ್ವೆದಾಧ್ಯ(ಧ್ಯಾ)ತ್ಮಸಮಯ ಮೀಮಾಂಸಯಾ ಅವಿದಿತಕ್ಷ-ಪಾಕ್ಷಣ ಃ ದೇವ ಬ್ರಾಹ್ಮಣ

೬. ಗುರುಸಾಧುವಿದ್ವತ್ಪೂಜಾನಿರತ : ಪಲ್ಲವೇನ್ದ್ರಾಭಿಷಿಕ್ತ ಃ ಕದಮ್ಬಾನಾಂ ಮಹಾರಾಜ ಃ ವಿ. ವಿಕ್ರಮ ವಿ

ಎರಡನೇ ಹಲಗೆ : ಹಿಂಬದಿ

೭. ಜ್ಞಾನ ಸಮ(ಮಾ)ನಗುಣ ಃ ಶ್ರೀ ವಿಷ್ಣುವರ್ಮಾ(ರ್ಮ)ಸಾರ್ವ್ವ(ರ್ವ)ಭೌಮಃ ಸ್ವರಾಜ್ಯನವಮೆ ಸಂವತ್ಸರೆ ಶ್ರಾವಣ ಪೌರ್ಣಮ(ಮಾ)ಸ್ಯಾಂ ತಿಥೌ

೮. ಸೇನ್ದ್ರಕ ವಿಷಯೇ ಆಸನ್ದ್ಯಲೂರೇ ದೇವಾಧಿದೇವ ಪರಮಾರ್ಹತಾ-ಮಾಯತನಸ್ಯ ಪೂಜಾರ್ತ್ಥಂ ಸ್ವಪುಣ್ಯಾ ಕು

೯. ಲಾಭಿವೃದ್ಧ್ಯರ್ತ್ಥಂ ಆಸನ್ದೀ ತಟಾಕಸ್ಯೋತ್ತರೆ ಪಾಲ್ಯಾ ಃ ಅಧಸ್ತಾತ್ ರಾಜಮಾನೇನ ಪಣ್ಣಿವರ್ತ್ತನ ಮಾತ್ರ.

ಮೂರನೇ ಹಲಗೆ : ಒಳಬದಿ

೧೦. ಕ್ಷೇತ್ರಂ ದತ್ತವಾನಿತಿ ಉಕ್ತಞ್ಚ ಬಹುಭಿರ್ವ್ವ(ರ್ವ)ಸುಧಾ ಭುಕ್ತ ರಾಜಭಿ ಃ - ಸಗರಾದಿಭಿ ಃ ಯಸ್ಯ ಯಸ್ಯ

೧೧. ಯದಾ ಭೂಮಿ ಃ ತಸ್ಯ ತಸ್ಯ ತದಾ ಫಲಂ(ಲಂ)॥ ಸ್ವದತ್ತಾಂ ಪರದತ್ತಾಂ ವಾ ಯೋ ಹರೇತಿ ವಸುನ್ಧರಾ(ಂ)

೧೨. ಷಷ್ಟಿ(ಷ್ಟಿ) ವರ್ಷ ಸಹಸ್ರಾಣಿ ನರಕೇ ಪಚ್ಯತೇ ತು ಸ: ಇತಿ॥

ಸಿಂಹವರ್ಮನ ಐದನೇ ವರ್ಷದ ಮುದಿಗೆರೆಯ ಶಾಸನ

ಒಂದನೇ ಹಲಗೆ : ಒಳಬದಿ

೧. ಸ್ವಸ್ತಿ॥ ವಿಭವಾಮಲ ಶ್ರೀತಲ ವಿ(ಶ್ಯಾಂ?)ತ ಚ್ಛಾಯಾ ಪ್ರಮೋದ ಭಾಗ ವಿಭಾಗಿ

೨. ಜಯತಿ ಜಯ್ಯೆಕ ಸ್ಥಾನ ನ್ತ್ರಿಭುನ ಸಕಲಾತಪತ್ರಮಿಹ ಸದ್ಧರ್ಮ್ಮಃ॥

೩. ವಿಜಯ ಬೆ(ವ್ವೈ)ಜಯನ್ತಿ (೯) ವನಿತಾಯಾಃ ಸಾಷ್ಟಾದಕರ ರಾಜ್ಯ ವಿಘಕ್ತಾದ್ಗ (? ರ್ಥಿ೯)ಯಾ

ಎರಡನೇ ಹಲಗೆ : ಮುಂಬದಿ

೪. ಹೃದಯ ಗೋಚರೋಚಿತ ಸ್ವಾಮಿಸ್ವ(ನಃ ವ) ಸುಭಗಸ್ಯ ಕದಮ್ಬಾನಾಂ ಶ್ರೀ ಕೃಷ್ಣವರ್ಮ್ಮ ಧರ್ಮ್ಮಮಹಾ

೫. ರಾಜಸ್ಯ ಮಾನವ್ಯಸಗೋತ್ರಸ್ಯ ಅಶ್ವಮೇಧಯಜ್ಞಯಶೋಮಯ ಪ್ರತಿಕೃತೇಃ ಪ್ರಿಯನಪ್ತಾ

೬. ವಸುಮತೀ ವಧೂಮಣ್ಣನ ಕುತೂಹಲೀ ತವಿಷ್ಣೋಃ (?) ವಿಷ್ಣುವರ್ಮ ಸಾರ್ವ್ವ ಭೌಮಸ್ಯ

ಎರಡನೇ ಹಲಗೆ : ಹಿಂಬದಿ

೭. ಪ್ರಿಯತನಯಃ ರಾಮೇಯವಂಶ ಹಿಮವತ್ಪ್ರಸೂತ ಜಗನ್ಮಾತೃ ಗಜ್ಗ (ಙ್ಗ)ಗರ್ಭ(ರ್ಭ) ಪ್ರದಾಧಿಶಯನ ದಿಗ್ಗಜೇನ್ದ್ರಃ

೮. ಯಸ್ಯ ಪ್ರಸಾದಮುಪಜೀವನ್ತಿ ಪ್ರಜಾ ಸಾಕ್ಷಾತ್ಕ ತನಾಭಾಗ ಪ್ರತಾಪೌಷಿ ಯಸ್ಯ ಪರಾಕ್ರ

೯. ಮ ರಸಜ್ಞತಯಾ ರಿಪು ನೃಪತಿ ಯುವತೀ ನಾಂ ವದನ ಕಮಲ ಪ್ರಸಾದ ಸಾತತ್ಯಹಾರೀ

ಮೂರನೇ ಹಲಗೆ : ಮುಂಬದಿ

೧೦. ತ್ಯ ಗೋದಯೋ ಮಿತ್ರಾರ್ಥೀ ಜನೇಚ್ಛಾ ಕುಮುದ ಷಣ್ಡ ಮಣ್ಡ ಸಪಿಣ್ಡ ಚನ್ದ್ರೋದಯಃ ಅನೇಕ ಶಾಸ್ತ್ರಾರ್ತ್ಥ ಮೀ ಮಾಂ

೧೧. ಸಾವದಾತಾ(ತ) ಮತಿರದಿತಿ ಸುತ ಗಭಸ್ತಿ ವಿಸ್ತಾರ ಸಮಾಹಾರ ಜನಿತ ತಪನೀಯಾಚಲ ಶಿಖರ ಮೇ

೧೨. ವ ಕವಿಲಮ್ಬಿನೀ ಮೂರ್ತ್ತಿಚ್ಛಾಯ ಮನುವರ್ತ್ತತೆ ಪರ್ಜ್ಜನ್ಯಃ ಯಶ್ಚ ಧರ್ಮಾರ್ಥಕಾಮ ಪ್ರತ್ಯಾದೇಶಃ

ಮೂರನೆ ಹಲಗೆ : ಹಿಂಬದಿ

೧೩. ಮೈಸವಾ (ಮಾಹೀಸದಾ) ಭಿಷಿಕ್ತಸ್ತದನು ಸರ್ವ್ವಸೇನ ಮಹಾರಾಜೇನ ಮೂರ್ದ್ಧಾಭಿಷೇಕೇನಾಭ್ಯರ್ಚಿತ ಃ ತತ ಸ್ಸ್ವರಾಜ್ಯ ಪಞ್ಚ

೧೪. ಮೇ ಸಂವತ್ಸರೇ ಪೌಷಮಾಸೆ ತಿಥೌ ದಶಮ್ಯಾಂ ಸ ಶ್ರೀಮಾನ್ ಕದಮ್ಬಾನಾ-ಮ್ಮಹಾರಾಜಃ ಸಿಂಹ

೧೫. ವರ್ಮ್ಮಾ(ರ್ಮ್ಮಾ) ಭಗವತಾಮರ್ಹತಾಮಾಯತನಸ್ಯ ಪೂಜಾರ್ತ್ಥಮ್ ಸೇನ್ದ್ರಕ ವಿಷಯೇ ಆಸನ್ದ್ಯಾಲೂರೆ

ನಾಲ್ಕನೇ ಹಲಗೆ : ಒಳಬದಿ

೧೬. ಆಸನ್ದೀ ತಟಾಕಸ್ಯ ದಕ್ಷಿಣಪಾಲ್ಯಾಃ ಅಧಸ್ತಾತ್ ರಾಜಮಾನೇನ ಪಞ್ಚನಿವರ್ತ್ತನ ಮಾತ್ರಮ್ ಕ್ಷೇತ್ರನ್ದತ್ತವಾನ್

೧೭. ಸರ್ವ ಪರಿಹಾರ್ಯ್ಯಮಿತಿ ॥ ಉಕ್ತಮ್ಚ ॥ ಬಹುಭಿರ್ವಸುಧಾ ಭುಕ್ತಾ ರಾಜಭಿಸ್ಸಗರಾದಿಭಿ (ಃ) ಯಸ್ಯ

೧೮. ಯಸ್ಯ ಯದಾ ಭೂಮಿಸ್ತಸ್ಯ ತಸ್ಯ ತದಾ ಫಲಮ್ ॥ ಸ್ವದತ್ತಾಮ್ಪರದತ್ತಾಂ ವಾಯೋ ಹರೇತಿ ವಸು

೧೯. ನ್ಧರಾಮ್ ಷಷ್ಟಿ(ಷ್ಟಿ)ವರ್ಷ ಸಹಸ್ರಾಣಿ ನರಕೆ ಪಚ್ಯತೆ ತು ಸಃ ಇತಿ॥

ಕೃತಜ್ಞತೆ

ಈ ತಾಮ್ರ ಶಾಸನಗಳನ್ನು ನನಗೆ ಕೊಟ್ಟು ಅವುಗಳ ಅಧ್ಯಯನಕ್ಕೆ ನನಗೆ ಅವಕಾಶ ಮಾಡಿಕೊಟ್ಟ ಶ್ರೀ ಪಾಂಡುರಂಗ ಶಾಸ್ತ್ರಿಯವರಿಗೂ ಮತ್ತು ಈ ನನ್ನ ಲೇಖನದ ಉತ್ತಮ ಪ್ರತಿಯನ್ನು ಮಾಡಿಕೊಟ್ಟ ಶ್ರೀಮತಿ ಭಾಗ್ಯಲಕ್ಷ್ಮಿಸುಂದರ ಅವರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

ಲಂಡನಿನ ವೆಲ್‌ಕಮ್ ಸಂಸ್ಥೆಯಲ್ಲಿರುವ ಔಷಧೀಯ ಚರಿತ್ರೆಗೆ ಸಂಬಂಧಿಸಿದ ಪೌರ್ವಾತ್ಯ ಹಸ್ತಪ್ರತಿಗಳ ಸಂಗ್ರಹ *

ಮೂಲ : ನೈಜಲ್ ಅಲನ್
ಅನುವಾದ : ಬಿ.ಕೆ. ಹಿರೇಮಠ

ಸಂಯುಕ್ತ ಸಂಸ್ಥಾನದಲ್ಲಿ (ವಿಶೇಷವಾಗಿ ಯುರೋಪಿನಲ್ಲಿಯೇ) ಬಹುಶಃ ಅಷ್ಟೊಂದು ಪ್ರಖ್ಯಾತವಾಗದೆ ಉಳಿದ ಪೌರ್ವಾತ್ಯ ಹಸ್ತಪ್ರತಿಗಳ, ಅಚ್ಚಾದ ಪುಸ್ತಕ-ಗಳ ಮತ್ತು ದ್ವಿಪಾತಳಿಯ (Two Dimensional material) ವಸ್ತುಗಳ ಬಹುದೊಡ್ಡ ಸಂಗ್ರಹವು ವೆಲ್‌ಕಮ್ ಔಷಧೀಯ ಚರಿತ್ರೆಯ ಪುಸ್ತಕ ಭಂಡಾರದಲ್ಲಿ ದೊರಕುತ್ತದೆ ಒಟ್ಟು. ೧೦,೦೦೦ಕ್ಕೂ ಮೇಲ್ಪಟ್ಟು ವಸ್ತುಗಳಿರುವ ಈ ಸಂಗ್ರಹದಲ್ಲಿ ಸುಮಾರು ೯೦೦ ರಷ್ಟು ತಾಳೆಗರಿಯ ಮೇಲೂ ಇನ್ನುಳಿದವುಗಳು ಕಾಗದ, ಲೋಹ, ಚರ್ಮ ಮತ್ತು ಹಸ್ತಿದಂತದ ಮೇಲೂ ಬರೆಯಲ್ಪಟ್ಟವುಗಳಾಗಿವೆ. ಸುಮಾರು ಮೂರು ಸಾವಿರದಷ್ಟು. ಪೌರ್ವಾತ್ಯ ಲಿಪಿಗಳಲ್ಲಿ ಮುದ್ರಣಗೊಂಡ ಪುಸ್ತಕಗಳು ಪಡಿ-ಯಚ್ಚಿನ, ರೇಖಾಚಿತ್ರ, ವರ್ಣಚಿತ್ರ ಮತ್ತು ಛಾಯಾಗ್ರಹಣಗಳನ್ನು ಒಳಗೊಂಡಿವೆ. ಮೂವತ್ತಕ್ಕೂ ಹೆಚ್ಚು ಭಾಷೆಗಳನ್ನು ಈ ಸಂಗ್ರಹವು ಪ್ರತಿನಿಧಿಸುತ್ತದೆ.

ಈಗ, 'ವೆಲ್‌ಕಮ್ ಫೌಂಡೇಶನ್ ಲಿಮಿಟೆಡ್' ಎಂಬುದಾಗಿ ಕರೆಯಲ್ಪಡುವ ಅಂತರ್ ರಾಷ್ಟ್ರೀಯ ಔಷಧಿ ಕಂಪನಿಯು ಈ ಮೊದಲು ಖಾಸಗಿ ನಿರ್ವಹಣೆಯ ಸಂಸ್ಥೆಯಾಗಿತ್ತು. ಜನ್ಮತಃ ಅಮೇರಿಕನ್ ಆಗಿದ್ದ ಸರ್ ಹೆನ್ರಿ ವೆಲ್‌ಕಮ್ (೧೮೫೩–೧೯೩೬) ಅವರು ಕಳೆದ ಶತಮಾನಾಂತ್ಯದ ಅವಧಿಯಲ್ಲಿ ಈ ಪುಸ್ತಕ ಭಂಡಾರವನ್ನು ಸಂಸ್ಥಾಪಿಸಿದರು. ತಾವು ಕೈಕೊಂಡಿದ್ದ ಉದ್ಯಮದ ಮೂಲಕ ಅಪಾರ ಸಂಪತ್ತನ್ನು ಗಳಿಸಿದ್ದ ವೆಲ್‌ಕಮ್ ತಮ್ಮ ಮೊದಲ ಆಸಕ್ತಿಯಾಗಿದ್ದ ಪ್ರಾಚ್ಯಶಾಸ್ತ್ರ, ಮಾನವ ಶಾಸ್ತ್ರ

* ಈ ಇಂಗ್ಲೀಷ ಮೂಲ ಲೇಖನವು Journal of the Royal Asiatic Society of Great Britain and Ireland (No. 1 - 1981 Pgs. 10-25) ಪತ್ರಿಕೆಯಲ್ಲಿ ಪ್ರಕಟವಾಗಿದೆ. ಇದರ ಮೂಲ ಲೇಖಕರು : NIGEL ALLAN.

ಮತ್ತು ಪ್ರಧಾನವಾಗಿ ಔಷಧೀಯ ಶಾಸ್ತ್ರದ ಚರಿತ್ರೆಗೆ ಸಂಬಂಧಿಸಿದ ದಾಖಲೆಗಳ ಸಂಗ್ರಹದಲ್ಲಿ ತೊಡಗಲು ಸಾಧ್ಯವಾಯಿತು. ತಮ್ಮ ೩೦ ನೆಯ ವಯಸ್ಸಿನಲ್ಲಿಯೇ ಅವರು ಪ್ರತಿಯೊಂದು ರಾಷ್ಟ್ರದಲ್ಲಿ ಬೇರೆ ಬೇರೆ ಕಾಲಾವಧಿಯಲ್ಲಿ ಪ್ರಚಾರದಲ್ಲಿದ್ದ ಔಷಧೀಯ ಶಾಸ್ತ್ರಕ್ಕೆ ಸಂಬಂಧಿಸಿದ ವಿಚಾರ ಮತ್ತು ಅದರ ಪ್ರಯೋಗವನ್ನು ಕುರಿತಾದ ಪುಸ್ತಕಗಳನ್ನು, ಸಲಕರಣೆಗಳನ್ನು ಕಲೆಹಾಕಲು ಪ್ರಾರಂಭಿಸಿದರು. ಈ ಕಾರ್ಯದಲ್ಲಿ ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿದ್ದ ವೆಲ್‌ಕಮ್ ಕಂಪನಿಯ ಪ್ರತಿನಿಧಿಗಳು ಸ್ಥಳೀಯ ಆರೋಗ್ಯ ಸಂಸ್ಥೆಗಳ, ಕೆಲವು ಸಲ ಅಲ್ಲಿನ ಸರಕಾರವು ನೀಡಿದ ಪ್ರೋತ್ಸಾಹ ಮತ್ತು ಸಹಕಾರದ ಮೂಲಕ ಈ ಉದ್ದೇಶಕ್ಕಾಗಿ ದುಡಿದು ಸಹಕರಿಸಿದರು. ಪ್ರಥಮ ಜಾಗತಿಕ ಯುದ್ಧದ ಸಂದರ್ಭದಲ್ಲಿ ಮಾತ್ರ ಸ್ವಲ್ಪ ಸ್ಥಗಿತಗೊಂಡಿದ್ದ ಸಂಗ್ರಹಣ ಕಾರ್ಯವು ಮುಂದೆ ಅಭೂತಪೂರ್ವವಾದ ರೀತಿಯಲ್ಲಿ ಮುಂದುವರಿದು ಅಂದು ಜಗತ್ತಿನಲ್ಲಿಯೇ ಮಿಗಿಲಾದ ಸಂಗ್ರಹವೆನಿಸಿತ್ತು. ೧೯೬೨ ರಲ್ಲಿ ಈ ಪುಸ್ತಕ ಭಂಡಾರದ ಮೂಲಭೂತ-ವಾದ ವ್ಯವಸ್ಥೆಯು ಪೂರ್ಣಗೊಂಡಿರಲಿಲ್ಲವಾದರೂ ಜನತೆಗೆ ೧೯೪೯ ರ ಡಿಸೆಂಬರಿ-ನಲ್ಲಿಯೇ ಔಪಚಾರಿಕವಾಗಿ ತೆರೆಯಲ್ಪಟ್ಟಿತ್ತು. ಸದ್ಯ, ಇದು ವೆಲ್‌ಕಮ್ ಟ್ರಸ್ಟಿನ ಆಸ್ತಿಯಾಗಿದ್ದು ವೆಲ್‌ಕಮ್ ಅವರ ಉಯಿಲಿನ ಪ್ರಕಾರ ಔಷಧಿ ಮತ್ತು ಅದಕ್ಕೆ ಸಂಬಂಧಿಸಿದ ಶಾಸ್ತ್ರಗಳ ಉನ್ನತ ಸಂಶೋಧನೆ ನಡೆಸಲು ರೂಪಿಸಿದ ಉದಾರವಾದ ಸಂಸ್ಥೆಯಾಗಿದೆ. ಯಾವುದೇ ಬೃಹತ್ ರಾಷ್ಟ್ರೀಯ ಸಂಗ್ರಹವನ್ನು ಸರಿಗಟ್ಟಬಲ್ಲ ಉನ್ನತ ಮಟ್ಟದ ಒಂದು ಪುಸ್ತಕ ಭಂಡಾರವನ್ನಾಗಿ ಇದನ್ನು ಅಭಿವೃದ್ಧಿ ಪಡಿಸಬೇಕೆಂ-ಬುದು ವೆಲ್‌ಕಮ್ ಅವರ ಮನದ ಆಕಾಂಕ್ಷೆಯಾಗಿತ್ತು. ಈಗ, ವೆಲ್‌ಕಮ್ ಸಂಸ್ಥೆಯು ಜಗತ್ತಿನಲ್ಲಿಯೇ ಆ ಕ್ಷೇತ್ರದ ವಿಶೇಷವಾದ ಜ್ಞಾನದ ಒಂದು ಶಾಖೆಗೆ ಮೀಸಲಾದ ಅಂತರ್ ರಾಷ್ಟ್ರೀಯ ಉಚ್ಚ ಮಟ್ಟದ ಪುಸ್ತಕ ಭಂಡಾರವನ್ನು ಒದಗಿಸಿದೆ. ತನ್ಮೂಲಕ ವೆಲ್‌ಕಮ್ ಅವರ ಆಕಾಂಕ್ಷೆಯನ್ನು ಸಾಕಾರಗೊಳಿಸಿದೆ.

ಇದರಲ್ಲಿ ವಿಜ್ಞಾನದ ಕೆಲವು ವಿಭಾಗಗಳಿದ್ದು, ನಾಗರಿಕತೆಯೆ ಅಲ್ಲದೆ ಮನುಕುಲದ ಇತಿಹಾಸದಲ್ಲಿ ಅತ್ಯಂತ ಪ್ರಾಚೀನವಾದ ಮಾನವ ಜನಾಂಗವು ರೂಡಿಸಿಕೊಂಡಿದ್ದ ಉಪಚರಿಸುವ ಕಲೆ (Healing Art)ಯ ಸಾಹಸವನ್ನು ಪ್ರತಿನಿಧಿಸುವ ಸಾಕ್ಷಿ ಚಿತ್ರದಂತೆ ಲಂಬ ಛೇದಕ ವಿಭಾಗಗಳ ಮೂಲಕ ಸವಿಸ್ತರವಾಗಿ ಮತ್ತು ವೈಚಿತ್ರಪೂರ್ಣ-ವಾಗಿ ವ್ಯವಸ್ಥೆಗೊಳಿಸಲಾಗಿದೆ. ಇದು ವಿಶೇಷತಃ ಪೌರ್ವಾತ್ಯ ಸಂಗ್ರಹದಲ್ಲಿ ದೊರಕುವ ವಿಷಯ ವೈವಿಧ್ಯತೆಯಿಂದ ವ್ಯಕ್ತವಾಗುತ್ತದೆ. ಔಷಧೀಯ ಚರಿತ್ರೆಯಲ್ಲಿ ಯಾವುದೇ ಒಂದನ್ನು ಮಾತ್ರ ಅದಕ್ಕೆ ಸಂಬಂಧಿಸಿದ ಇನ್ನುಳಿದ ವ್ಯವಸ್ಥೆಗಳನ್ನು ಹೊರತು ಪಡಿಸಿ ಅಧ್ಯಯನ ಮಾಡಲಾಗದು ಎಂಬುದು ಈ ಎಲ್ಲ ದೊಡ್ಡ ಸಂಗ್ರಹವನ್ನು ಕಲೆ ಹಾಕಿದವರ ಜ್ಞಾನದೃಷ್ಟಿಗೆ ಹೊಳೆದಿತ್ತು. ಹಾಗೆ ನೋಡಿದರೆ, ಈ ವಿಷಯವು ಸಂಸ್ಕೃತಿ ಮತ್ತು ನಾಗರಿಕತೆಯ ಎಲ್ಲ ಕ್ಷೇತ್ರವನ್ನು ತಟ್ಟುತ್ತದೆ. ಅಧ್ಯಯನಕ್ಕೆ ತೊಡಗಿದ ಒಬ್ಬ ವಿಜ್ಞಾನಿಯು

ಆ ವಿಷಯವು ವಿಕಾಸಗೊಳ್ಳುತ್ತ ಬಂದ ಮಾರ್ಗದಲ್ಲಿ ಮಾನವನು ಸರ್ವಸಾಮಾನ್ಯವಾದ ಜ್ಞಾನವನ್ನು ಹಂಚಿಕೊಂಡಿದ್ದ ಅಂದರೆ–ವೈದ್ಯನ ಸಮಸ್ಯೆಗಳನ್ನು ತತ್ವಜ್ಞಾನಿಯೊಬ್ಬನು ಚರ್ಚಿಸಿದ, ಧರ್ಮಾಧಿಕಾರಿಯೊಬ್ಬನು ಆಧುನಿಕ ಮನೋವಿಜ್ಞಾನಿಯಂತೆ ಮನುಷ್ಯ ಸ್ವಭಾವದ ವಿಕ್ಷಿಪ್ತತೆಯನ್ನು ಕುರಿತು ವಿದ್ವತ್ ಪೂರ್ಣವಾಗಿ ಮಾತನಾಡಿದ-ಈ ನೆಲೆಗಳನ್ನು ತಿಳಿದಿರಬೇಕಾಗುತ್ತದೆ. ಇದನ್ನು ವೆಲ್‌ಕಮ್ ಅವರ ಪ್ರತಿನಿಧಿಗಳು ತಮ್ಮ ಮನಸ್ಸಿನಲ್ಲಿ ದೃಢವಾಗಿ ಇಟ್ಟುಕೊಂಡಿದ್ದರು. ಅಂತೆಯೇ, ಏಶಿಯಾ ಮತ್ತು ಉತ್ತರ ಆಫ್ರಿಕಾಗಳಲ್ಲಿಯ ಮಾನವನ ಈ ಪ್ರಯತ್ನದ ಪ್ರತಿಯೊಂದು ಮುಖವನ್ನು ತಮ್ಮ ಸಂಗ್ರಹದಲ್ಲಿ ಸ್ಪಷ್ಟವಾಗಿ ಪ್ರತಿಬಿಂಬಿಸಿದ್ದಾರೆ. ಮುಖ್ಯತಃ ಈ ಸಂಗ್ರಹದ ಬಹು ಭಾಗವು ವೆಲ್‌ಕಮ್‌ರವರ ವ್ಯಾಪಾರಿ ಸಂಬಂಧಗಳುಳ್ಳ ಪೌರ್ವಾತ್ಯ ರಾಷ್ಟ್ರಗಳಲ್ಲಿಯ ತನ್ನ ಪ್ರತಿನಿಧಿಗಳ ಮುಖಾಂತರವೇ ಸಂಗ್ರಹಿಸಿದ್ದು. ಈ ದೇಶದ ಮತ್ತು ಈ ಭೂಖಂಡದ ಹರಾಜುಮಳಿಗೆಯಿಂದ ತಂದವುಗಳ ಜೊತೆಗೆ ಅತ್ಯಂತ ಗಮನಾರ್ಹವಾದ ಸಂಗ್ರಹವು ಡಾ. ಫೇರಾಮಲ್ ಅವರಿಂದ ಆದುದು. ಇವರು ೧೯೧೦ ರಿಂದ ೧೯೨೬ರ ವರೆಗೆ ವೆಲ್‌ಕಮ್ ಕಂಪನಿಯ ಸೇವೆಯಲ್ಲಿದ್ದರು. ಡಾ ಮಲ್ ಅವರು ಚರ್ಚಿನ ಸೇವೆಗಾಗಿ ತಮ್ಮ ತಾಯ್ನಾಡಾದ ಭಾರತದಲ್ಲಿ ಶಿಕ್ಷಣವನ್ನು ಪಡೆದವರು. ಆದರೆ, ಮುಂದೆ ಅವರು ವೈದ್ಯ ವೃತ್ತಿಯನ್ನು ಕೈಕೊಂಡರು. ಅವರಿಗೆ ಮ್ಯೂನಿಚ್‌ನಲ್ಲಿ ಎಂ.ಡಿ. ಪದವಿಯನ್ನು ನೀಡಲಾಯಿತು. ೧೯೦೯ ರಲ್ಲಿ ಅವರು ಇಂಗ್ಲೆಂಡಿನ ಕಾಲೇಜ ಆಫ್ ಸರ್ಜನ್'ದ ಸದಸ್ಯರಾದರು. ಅಲ್ಲದೆ, ಲಂಡನ್ನಿನ ರಾಯಲ್ ಕಾಲೇಜಿನ ಫಿಜಿಸಿಯನ್ ಸನದನ್ನು ಪಡೆದರು. ಅವರೊಬ್ಬ ಪ್ರತಿಭಾವಂತ ಭಾಷಾಭಿಜ್ಞರು ಆಗಿದ್ದು ಉಪಖಂಡಗಳ ಅನೇಕ ಭಾಷೆಗಳನ್ನು ಬಲ್ಲವರಾಗಿದ್ದರಲ್ಲದೆ ಅರಬ್ಬೀ ಮತ್ತು ಪರ್ಶಿಯನ್ ಭಾಷೆಗಳನ್ನು ತಿಳಿದವರಾಗಿದ್ದರು. ವೆಲ್‌ಕಮ್ ಕಂಪನಿಯಲ್ಲಿನ ತಮ್ಮ ೧೬ ವರ್ಷಗಳ ಸೇವಾವಧಿಯಲ್ಲಿ ೧೦ ವರ್ಷಗಳು ಭಾರತದಲ್ಲಿಯ ರಾಜವಂಶಕ್ಕೆ ಸೇರಿದ, ಬ್ರಾಹ್ಮಣ ಕುಟುಂಬಗಳಿಗೆ ಸೇರಿದ ದೇವಾಲಯ, ಮಠ, ಅರಮನೆ ಮತ್ತು ಪುಸ್ತಕ ಭಂಡಾರಗಳನ್ನು ಸಂದರ್ಶಿಸುವುದರಲ್ಲಿಯೇ ಕಳೆದವು. ಅವರು ಭಾರತದಾದ್ಯಂತ ಪ್ರವಾಸ ಕೈಕೊಂಡು, ಈಗ ಲಂಡನ್ನಿನ ಸಂಗ್ರಹದಲ್ಲಿರುವ ಸಂಸ್ಕೃತ ಮತ್ತು ಇನ್ನುಳಿದ ಭಾರತೀಯ ಭಾಷೆಗಳಿಗೆ ಸಂಬಂಧಿಸಿದ ಸಾಮಗ್ರಿಗಳನ್ನು ಅತ್ಯಂತ ದೂರದ ಪ್ರದೇಶಗಳಾದ ಹಿಮಾಲಯ, ನೇಪಾಳ ಮತ್ತು ತಿಬೇಟಗಳಿಂದ ಸಾಹಸಪಟ್ಟು ಕಳುಹಿಸಿಕೊಟ್ಟರು. ಹಾಗೆಯೆ, ಏಶಿಯಾ ಮತ್ತು ಆಫ್ರಿಕಾಗಳಲ್ಲಿರುವ ಔಷಧೀಯ ಶಾಸ್ತ್ರಕ್ಕೆ ಸಂಬಂಧಿಸಿದ ಕಟ್ಟಡಗಳು, ವ್ಯಕ್ತಿಗಳು, ಹಸ್ತಪ್ರತಿಗಳು, ಸಾಗಿಸಲುಬಾರದ ಚಿತ್ರಗಳು ಹಾಗು ಮಾರಟಕ್ಕಾಗಿ ಸಿಗದ ವಸ್ತುಗಳು ಇವೆಲ್ಲವುಗಳ ಛಾಯಾಗ್ರಹಣ ಮಾಡಿಕೊಂಡು ಬರಲು ಇವರನ್ನು ವೆಲ್‌ಕಮ್ ಸಂಸ್ಥೆಯ ಪರವಾಗಿ ನಿಯಮಿಸಲಾಗಿತ್ತು. ಈಗ ಅದೇ ವೆಲ್‌ಕಮ್ ಸಂಸ್ಥೆಯ ಮಹತ್ವಪೂರ್ಣ ಸಂಗ್ರಹದ ಮೂಲಧನವಾಗಿದೆ.

ಇಲ್ಲಿನ ಸಂಗ್ರಹವನ್ನು ಗಮನಿಸಿದಾಗ, ಸಿಮೆಟಿಕ್ ಭಾಷೆಗೆ ಸಂಬಂಧಿಸಿದ ವಸ್ತು-ಸಾಮಗ್ರಿಗಳಲ್ಲಿ ಅರಬ್ಬೀ ಭಾಷೆಯದೇ ಅತ್ಯಂತ ಹೆಚ್ಚಿನ ಸಂಗ್ರಹವಾಗಿದೆ. ಇದರಲ್ಲಿ ೭೦೦ ಕ್ಕೂ ಹೆಚ್ಚಿನ ಹಸ್ತಪತ್ರಿಗಳು ಸುಮಾರು ೨೦೦ ಅಚ್ಚಾದ ಪುಸ್ತಕಗಳು ಇವೆ. ೨೦೦ಕ್ಕೂ ಹೆಚ್ಚಿನ ಹಸ್ತಪತ್ರಿಗಳು ಔಷಧಿ ಮತ್ತು ವಿಜ್ಞಾನ ಕುರಿತಾದವುಗಳು. ಅವುಗಳಲ್ಲಿ ರಸವಿದ್ಯೆ ಮತ್ತು ಜ್ಯೋತಿಷ್ಯ ಶಾಸ್ತ್ರಗಳು ವಿಶೇಷ ಪ್ರಾತಿನಿಧ್ಯ ಪಡೆದಿವೆ. ಇಲ್ಲಿಯ ಹಸ್ತಪ್ರತಿಗಳನ್ನು ವರ್ಗೀಕರಿಸಲು, ಅರಬ್ಬೀ ಹಾಗು ಪರ್ಶಿಯನ್ ಕೃತಿಗಳ ಯಾದಿ-ಯೊಂದನ್ನು ತಯಾರಿಸಲು ವೆಲ್‌ಕಮ್ ವಿಶ್ವಸ್ಥ ಸಂಸ್ಥೆಯು ೧೯೩೮ ರಲ್ಲಿ, ಅರಬ್ಬೀ ಭಾಷೆಯ ಮೂಲಕ ಹರಿದು ಬಂದ (ವಿಶೇಷವಾಗಿ ಔಷಧಿಗೆ ಸಂಬಂಧಿಸಿದ) ಪ್ರಾಚ್ಯ ವಿದ್ಯೆಗಳಲ್ಲಿ ಈಗಾಗಲೇ ಮಹತ್ವದ ಸಂಶೋಧನೆ ಕೈಕೊಂಡ ಆಕ್ಸಫರ್ಡಿನ ಡಾ. ರಿಚರ್ಡ್ ವಾಲ್ಜರ್ ಅವರನ್ನು ಆಮಂತ್ರಿಸಿತ್ತು. ಈ ಹಸ್ತಪ್ರತಿಗಳೆಲ್ಲವೂ ವೈದ್ಯಕೀಯ ಅಥವಾ ವಿಜ್ಞಾನಕ್ಕೆ ಸಂಬಂಧಪಟ್ಟವುಗಳಾಗಿರಲಿಲ್ಲ. ಆದರೆ ಇವೆಲ್ಲವುಗಳು ಸಂಗ್ರಹಯೋಗ್ಯ-ವಾಗಿದ್ದು ಇವುಗಳಿಗೆ ಶಾಶ್ವತವಾದ ವ್ಯವಸ್ಥೆಯೊಂದನ್ನು ಮಾಡುವ ಉದ್ದೇಶದಿಂದ ವಾಲ್ಜರ್ ಅವರು ಇಂಗ್ಲೀಷಿನಲ್ಲಿ ಬೆರಳಚ್ಚಿನ ಲೇಖಕಸೂಚಿಯೊಂದನ್ನು ಸಿದ್ಧಪಡಿಸಿ, ಅದರೊಂದಿಗೆ ಬ್ರೆಕೆಲ್‌ಮನ್, ಸಾರ್ಟನ್, ಬ್ರಾವುನ್ ಮತ್ತು ಇನ್ನುಳಿದ ಔಷಧೀಯ ಶಾಸ್ತ್ರ ಚರಿತ್ರೆಯಲ್ಲಿ ಈ ಸಂಬಂಧವಾಗಿ ದೊರೆಯುವ ಉಚಿತ ವಿವರಗಳನ್ನು ಕೊಡ-ಮಾಡಿದ್ದಾರೆ. ವೈದ್ಯಕೀಯ ಹಾಗು ವಿಜ್ಞಾನ ಕುರಿತ ಅರಬ್ಬೀ ಹಸ್ತಪ್ರತಿಗಳ ಅಚ್ಚಾದ ಸೂಚಿಯೊಂದು ಪ್ರಕಟಗೊಳ್ಳುವ ಹತ್ತು ವರ್ಷಗಳ ಪೂರ್ವದಲ್ಲಿ ಅಂದರೆ ೧೯೪೭ ರಲ್ಲಿಯೇ ಅರಬ್ಬೀ ಭಾಷೆಯ ಹಸ್ತಪ್ರತಿಗಳ ವ್ಯವಸ್ಥೆ ಮತ್ತು ಅಧ್ಯಯನಕ್ಕೆ ಸಂಬಂಧಿಸಿದ ಪ್ರಾರಂಭಿಕಹಂತವು ಪೂರ್ಣಗೊಂಡಿತ್ತು. ಅದನ್ನೇ, ಏತನ್ಮಧ್ಯೆ ಪುಸ್ತಕ ಭಂಡಾರದ ವಿಸ್ತರಣಾ ಸಂಗ್ರಹಕ್ಕೆ ಬಂದು ಸೇರ್ಪಡೆಯಾದ ಮತ್ತು ಪರಿಶೋಧಿಸಲ್ಪಟ್ಟ ಹಸ್ತ-ಪ್ರತಿಗಳ ಹೆಚ್ಚಿನ ಸಂಗತಿಗಳನ್ನು ಸೇರಿಸಿ ಡಾ. ಇಸ್ಕಂದರ್ ಅವರು ೧೯೬೭ ರಲ್ಲಿ ಪೂರ್ತಿ ಮಾಡಿದರು. ಒಟ್ಟಿನಲ್ಲಿ ೧೯೭ ಸಂಪುಟಗಳು ೨೪೫ ಕೃತಿಗಳ ವಿವರಣೆಯನ್ನು ಒಳ-ಗೊಂಡಿವೆ. ಈ ಸೂಚಿಯಲ್ಲಿ ವಿವರಿಸಲ್ಪಟ್ಟವುಗಳಲ್ಲಿ ರಸವಿದ್ಯೆಗೆ ಸಂಬಂಧಿಸಿದವುಗಳು ಒಂಬತ್ತು. ಕೃಷಿಗೆ, ಪ್ರಾಣಿಶಾಸ್ತ್ರ ಮತ್ತು ಪ್ರಾಣಿ ಚಿಕಿತ್ಸೆಗೆ ಸಂಬಂಧಿಸಿದವುಗಳು ಆರು. ಕನಸು ಹಾಗೂ ವಿಶ್ವಶಾಸ್ತ್ರಗಳ ವಿಷಯವನ್ನೊಳಗೊಂಡ ಮುಖ ಸಾಮುದ್ರಿಕ ಶಾಸ್ತ್ರದ ಏಳು ಕೃತಿಗಳು ಇವೆ. ಇನ್ನುಳಿದವು ಔಷಧಿ ಶಾಸ್ತ್ರಕ್ಕೂ. ಮನುಷ್ಯ ಜೀವಿಯ ಔಷಧಿಗಳಿಗೂ ಸಂಬಂಧಿಸಿದವುಗಳು. ೬೬೯/೧೨೭೧ ರಲ್ಲಿ ಟಾಬ್ರಿಜ್‌ನಲ್ಲಿ ರಸೂಲನಿಂದ ಸೂಕ್ಷ್ಮವಾದ '**ತಾಲಿಕ್**'ನಲ್ಲಿ ರಚಿಸಲ್ಪಟ್ಟ '**ಕಿತಾಬ್-ಅಲ್-ಹಾವೀ**'ಯು ಅತ್ಯಂತ ಗಮನಾರ್ಹವಾದ ಬಹುಶಃ ಅದ್ವಿತೀಯವಾದ ಮೂಲ ಕೃತಿಯಾಗಿದೆ. ಯಾಕೆಂದರೆ ಇನ್ನುಳಿದ ಹಸ್ತಪ್ರತಿಗಳಲ್ಲಿ ಕಂಡು ಬರುವಂತೆ ಅವನ ಅನುಯಾಯಿಗಳ ಟೀಕೆ, ಟಿಪ್ಪಣೆಗಳು ಸೇರಿಸಲ್ಪಡದೆ, ರಸೂಲ್ ಹೇಗೆ ಬರೆದಿಟ್ಟಿದ್ದಾನೋ ಹಾಗೆಯೇ

ಇರುವ ಕೃತಿಯಿದು. ಇಲ್ಲಿರುವ ಅರಬ್ಬೀ ಮಹತ್ವದ ಹಸ್ತಪ್ರತಿಗಳಲ್ಲಿ ಇಬ್ನಸೀನಾನ '**ಅಲ್-ಕಾನೂನ-ಫೀ ಅಲ್-ತಿಬ್**'ವು ಬಹು ಪ್ರೇಕ್ಷಣೀಯವಾದುದು. ಈ ಸುಂದರವಾದ ಸಹ್ತಪ್ರತಿಯು ಅತ್ಯುತ್ತಮ '**ನಸ್ತಾಲಿಕ್**'ನಲ್ಲಿ ೧೦೪೨–೧೬೩೨ ರಲ್ಲಿ ಬರೆಯಲಾಗಿದ್ದು ಐದೂ ಪ್ರತಿಗಳ ಮೊದಲ ಪುಟಗಳು ಚಿನ್ನದ ರೇಕಿನಿಂದ ಅಲಂಕೃತವಾಗಿವೆ. ಇದು ಶರೀರ ಶಾಸ್ತ್ರದ ನಾಲ್ಕು ಚಿತ್ರಗಳನ್ನು ಮತ್ತು ಚಿಕಿತ್ಸೆಯ ದೃಶ್ಯಗಳ ವಿವರಗಳನ್ನೊಳಗೊಂಡ ಆಕರ್ಷಕವಾದ ಮೆರಗುಕೊಟ್ಟ ರಟ್ಟಿನ ಹೊದಿಕೆಯನ್ನು ಹೊಂದಿದೆ.

ಸಿಮೆಟಿಕ್ ಭಾಷೆಗೆ ಸೇರಿದ ಇನ್ನುಳಿದ ವಸ್ತು ಸಾಮಗ್ರಿಗಳಲ್ಲಿ 'ಹಿಬ್ರೂ'ವಿನ ೭೧ ಹಸ್ತಪ್ರತಿಗಳಿವೆ. ಇದರಲ್ಲಿ ೧೬–೧೭ ನೆಯ ಶತಮಾನದ ತುಂಬಾ ಕುತೂಹಲಕಾರಿಯಾದ ವೈದ್ಯಕೀಯ ಕೃತಿಗಳಿದ್ದು, ಅವುಗಳಲ್ಲಿ ಬೇರೆಬೇರೆ ರೋಗಗಳ ಚಿಕಿತ್ಸೆಗಾಗಿಯೂ, ಹೆರಿಗೆಯ ರಕ್ಷಣೆಗಾಗಿಯೂ ಮಾಡಿದ ನಿಗೂಢವಾದ ನಾಲ್ಕು ತಾಯಿತಗಳು, ಭಿನ್ನ ಭಿನ್ನ ವಯೋಮಾನದ ಕವಚಗಳ ೪೦ ಚರ್ಮದ ತುಣುಕುಗಳು, ಇಸ್ತರಿನ ಎರಡು ಚರ್ಮದ ಸುರುಳಿಗಳು ಮತ್ತು ಪೂರ್ಣವಾದ ಒಂದು ತೋರಾ ಸುರಳಿಯು ಇದೆ. ಹಿಬ್ರೂವು ಐವತ್ತಕ್ಕಿಂತ ಹೆಚ್ಚು ಅಚ್ಚಾದ ಪುಸ್ತಕಗಳನ್ನು ಹೊಂದಿದ್ದು ಅದರಲ್ಲಿ ಕ್ರಿ.ಶ. ೧೫೫೫ ರಲ್ಲಿ, ವ್ಯಾನಿಸ್‌ನಲ್ಲಿ ಪ್ರಕಟಗೊಂಡ 'ಸೆಡರ್ ಹಾನೀಕೂರ್' ಎಂಬ ಅಪರೂಪದ ಪ್ರತಿಯೂ ಇದೆ. ಹತ್ಯಗಾಗಿರುವ ದನಗಳ ಬೆನ್ನೆಲುಬಿನ ರಕ್ತ ನಾಳಗಳನ್ನು ಹೇಗೆ ತೆಗೆದು ಹಾಕಬೇಕೆಂಬುದನ್ನು ಕುತೂಹಲಕಾರಿಯಾಗಿ ವಿವರಿಸುವ ಪ್ರಕರಣ ಗ್ರಂಥವಿದು. ಅಲ್ಲದೆ, ಸದ್ಯ ಉಳಿದಿರುವ ಕೆಲವೇ ಕೆಲವು ಮಡಿಚಿಡಲು ಬರುವಂತಹ ಶರೀರ ಶಾಸ್ತ್ರದ ಚಿತ್ರವನ್ನು ಒಳಗೊಂಡಿದೆ. ಸಿಮೆಟಿಕ್ ಭಾಷಾ ಸಂಗ್ರಹವು ಕೆಲವು ಸಿರಿಕ್ ಹಸ್ತಪ್ರತಿಯ ಭಾಗಗಳನ್ನು ಮತ್ತು ಅಚ್ಚಾದ ಪುಸ್ತಕಗಳನ್ನು ಹಾಗೂ ಮೂರು ಕರ್ಶೂನಿ ಹಸ್ತಪ್ರತಿಗಳನ್ನು ಸಹ ಒಳಗೊಂಡಿದೆ. ಯುಥೋಪಿಯನ್‌ದ ಇಪ್ಪತ್ತು ಹಸ್ತಪ್ರತಿಗಳಿದ್ದು ಅದರಲ್ಲಿ ೧೭ನ್ನು ಈಗಾಗಲೇ ವಿವರಣಾತ್ಮಕ ಸೂಚಿಯಲ್ಲಿ ಪ್ರಕಟಿಸಲಾಗಿದೆ. ೧೯೬೧ ಮತ್ತು ೧೯೬೦ ರಲ್ಲಿ ಧರ್ಮದ ವಿಷಯಗಳನ್ನೊಳಗೊಂಡ ೧೭ ಹಸ್ತಪ್ರತಿಗಳನ್ನು ಬ್ರಿಟಿಶ್ ಸಂಗ್ರಹಾಲಯದ ಪುಸ್ತಕ ಭಂಡಾರಕ್ಕೆ ಕಾಣಿಕೆಯಾಗಿ ಕೊಡಲಾಯಿತು. ಈ ಪ್ರಕಟಿತ ಸೂಚಿಯಲ್ಲಿ ವಿವರಿತವಾದ ಹಸ್ತಪ್ರತಿಗಳಲ್ಲಿ ಮಾನವ ಔಷಧಿಗಳಿಗೆ ಸಂಬಂಧಿಸಿದ ೧೬ ಸುರುಳಿಗಳು ಅಮ್‌ಹೆರಿಕ್‌ದ ದಟ್ಟವಾದ ಪ್ರಭಾವಕ್ಕೆ ಒಳಗಾದ 'ಗೀಝು'ನಲ್ಲಿ ಬರೆಯಲಾಗಿವೆ. ಇನ್ನೊಂದು ಸುರುಳಿಯು ಕಾಲಜ್ಞಾನಕ್ಕೆ ಸಂಬಂಧ ಪಟ್ಟುದು. ಇಲ್ಲಿನ ಕೆಲವು ಹಸ್ತಪ್ರತಿಗಳು ಮೂಲತಃ ಮಗ್ದಲಾದಿಂದ ಬಂದವು ಮತ್ತು ಲಾರ್ಡ್ ನೇಪಿಯರ್‌ನ ೧೮೬೭–೮ ರ ಸಾಹಸಯಾತ್ರೆಯ ಸದಸ್ಯರು ತಿರುಗಿ ತಂದವುಗಳಾಗಿರಬೇಕು. ಒಟ್ಟು ಈ ಹಸ್ತಪ್ರತಿಗಳು ಯುಥೋಪಿಯನ್‌ನ ಈ ಬಗೆಯ ಸಾಹಿತ್ಯದ ಒಳ್ಳೆಯ ಪ್ರಾತಿನಿಧಿಕ ಸಂಗ್ರಹವನ್ನು ಒಳಗೊಳ್ಳುತ್ತವೆ.

ಕಾಪ್ಟಿಕ್ ಕೂಡ ಎರಡು ಬಾಹರಿಕ್ (Bohairic) ಹಸ್ತಪ್ರತಿಗಳಿಂದ ಪ್ರಾತಿನಿಧ್ಯಗೊಂಡಿದೆ. ಇದರಲ್ಲಿ ೧೮ ಅಥವಾ ೧೯ ನೆಯ ಶತಮಾನಕ್ಕೆ ಸೇರಿದ ಸಿರಿಲ್ ಮತ್ತು ಗ್ರೆಗೋರಿಯ ಪದ ಪೂಜಗಳು (Anaphoras of Cyrit and Gregory) ವಿವಿಧ ಪ್ರಾರ್ಥನೆಗಳನ್ನು ಒಳಗೊಂಡಿದೆ. ಇನ್ನುಳಿದ ಎರಡರಲ್ಲಿ ಒಂದು ಸಾಹಿದಿಕ್ ಉಪಭಾಷೆಯುದಾದ (The song of the three children)ದ ಭಾಗವಾಗಿದೆ. ಇನ್ನುಳಿದ ಎರಡು ಭಾಷೆಗಳ ಸಂಗ್ರಹಗಳಲ್ಲಿ ಒಂದು ಅರ್ಮೇನಿಯನ್ ಭಾಷೆ ಇದರಲ್ಲಿ ೧೬ ಹಸ್ತಪ್ರತಿಗಳು ಮತ್ತು ಐದು ಅಚ್ಚಾದ ಪುಸ್ತಕಗಳು ಇರುವುದು ಗಮನಾರ್ಹ. ಈ ಹಸ್ತಪ್ರತಿಗಳು ಮುಖ್ಯವಾಗಿ ಪೂಜಾ ವಿಧಾನವನ್ನು ಹೇಳುವ ಕೆಲವು ಸುಂದರ ಸಚಿತ್ರವಾದ ಕೃತಿಗಳು. ಹಾಗೇಯೇ, ಬಗದಾದ್‌ನ ಡಾ. ಹೊರ್‌ಸೆಪ್‌ನ ಸಹಕಾರದೊಂದಿಗೆ ಗಬೆಗೂನ್ ಹೊವ್ವನ್ನು (Gabegheon Hovvannu)ವಿನ ಬೇರೆ ಬೇರೆ ಬರಹಗಳಿಂದ ಸಂಗ್ರಹಿಸಿದ ಔಷಧೋಪಚಾರದ ಹಸ್ತ ಪ್ರತಿಯೂ ಇದೆ. ಈ ಕೃತಿಯನ್ನು ಅರ್ಮೇನಿಯನ್ ಭಾಷೆಗೆ ಅನುವಾದಿಸಲಾಗಿದ್ದು ಕ್ರಿಕಸ್ ನಿಶಸ್ತಜ್ಯನ್ (Krikas Nishastajyan)ನು ೧೮೦೨ ರಲ್ಲಿ ಕಾನಸ್ಟೇಂಟಿನೋಪಲ್‌ನಲ್ಲಿ ಇದನ್ನು ಲೇಖನ ಗೈದನು. ಒಂದೇ ಒಂದು ಹಸ್ತಪ್ರತಿಯ ಮೂಲಕ ಜಾರ್ಜಿಯನ್ ಭಾಷೆ ಪ್ರತಿನಿಧಿತವಾಗಿದೆ.

ದಕ್ಷಿಣ ಏಶಿಯಾದ ಸಂಗ್ರಹಿತ ಸಾಮಗ್ರಿಯನ್ನು ಕುರಿತು ಚರ್ಚಿಸುವ ಪೂರ್ವದಲ್ಲಿ ಪರ್ಶಿಯನ್ ಮತ್ತು ತುರ್ಕ ಭಾಷೆಯ ಸಾಮಗ್ರಿಯನ್ನು ಪರಿಶೀಲಿಸುವುದು ಉಚಿತ. ೬೦೦ ಕ್ಕೂ ಮೇಲ್ಪಟ್ಟು ಇರುವ ಪರ್ಶಿಯನ್ ಹಸ್ತಪ್ರತಿಗಳಲ್ಲಿ ಪ್ರಧಾನವಾಗಿ ಔಷಧೀಯ ಶಾಸ್ತ್ರಕ್ಕೆ ಸಂಬಂಧಪಟ್ಟವು; ಇನ್ನುಳಿದಂತೆ ಸುಂದರವಾದ ಗಿಡಮೂಲಿಕೆ ಚಿತ್ರಗಳ, ಖಗೋಲ ಶಾಸ್ತ್ರ, ಜ್ಯೋತಿಷ್ಯ ಶಾಸ್ತ್ರ, ರಸವಿದ್ಯೆ ಮತ್ತು ಭಿನ್ನ ಭಿನ್ನ ವಿಷಯದ ಹಸ್ತಪ್ರತಿಗಳಿವೆ. ಬಹಳಷ್ಟು ಹಸ್ತಪ್ರತಿಗಳು ಸುಂದರ ಚಿಕಣಿ ಚಿತ್ರರಚನೆ (Miniatures)ಗಳಿಂದ ಕೂಡಿದ್ದು. ಅದರಲ್ಲಿ ಪರ್ಶಿಯಾದ ಮಧ್ಯಕಾಲೀನ ದೇಹರಚನಾ ಶಾಸ್ತ್ರಜ್ಞನಾದ ಮನ್ಸೂರನ ರಚನೆಗಳನ್ನು ಆಧಾರವಾಗಿಟ್ಟುಕೊಂಡು ರಚಿಸಿದವು. '**ಫರಸ್‌ನಾಮಾ**' ಎಂಬ ಹಸ್ತಪ್ರತಿಯು ಪಶುವೈದ್ಯಕೀಯಕ್ಕೆ ಸಂಬಂಧ ಪಟ್ಟಿದೆಯಾದರೂ ವಿಶೇಷವಾಗಿ ಕುದುರೆಯ ರೋಗಗಳು ಅವುಗಳ ಉಪಚಾರ ಕುರಿತಾದ ಜ್ಞಾನವನ್ನು ಕುರಿತುದಾಗಿದೆ. ಇದು. ಸಯ್ಯದ್ ಅಬ್ದುಲ್ಲಾ ಖಾನನು ಮೂಲಸಂಸ್ಕೃತ ಕೃತಿಯಿಂದ ಪರ್ಶಿಯನ್ ಭಾಷೆಗೆ ಅನುವಾದಿಸಿದ ಕೃತಿಯಾಗಿದೆ. ಈತನು ಶಾಹಜಹಾನನಲ್ಲಿ ಪಶು ವೈದ್ಯನಾಗಿದ್ದನು. ಈ ಕೃತಿಯು ಸುವರ್ಣರೇಖೆಯ ಮಧ್ಯದಲ್ಲಿ ಭಾರತದ '**ನಸ್ತಾಲಿಕ್**' ಶೈಲಿಯಲ್ಲಿ ಬರೆದಿದ್ದು ೬೦ ಪತ್ರಗಳಿಂದ ಕೂಡಿದ್ದಾಗಿದೆ. ಆರಂಭದಲ್ಲಿ ಸುಂದರವಾದ 'ಸರಲ್ಲಾಹ'ವಿದ್ದು ಅನಂತರದ ಪತ್ರಗಳಲ್ಲಿ ಕುದುರೆಯ ೩೭ ಚಿಕಣಿ ಚಿತ್ರಗಳು ಹರಡಿಕೊಂಡಿವೆ. ಈ ಸಂಗ್ರಹದ ಮಹತ್ವದ

ಪರ್ಶಿಯನ್ ಹಸ್ತಪ್ರತಿಗಳಲ್ಲಿಯೇ ಇದೊಂದು ವೈಶಿಷ್ಟ್ಯಪೂರ್ಣ ಉದಾಹರಣೆ-ಯಾಗಿದೆ. ಇದ್ನೊಂದು ಗಮನಾರ್ಹವಾದ ಕೃತಿಯೆಂದರೆ, ೮೧೩/೧೪೧೦-೧೧ ರಲ್ಲಿ ರಚಿತವಾದ ತೈಮೂರ ರಾಜಕುಮಾರನಾದ ಇಸ್ಕಂದರ್‌ನ ಜಾತಕ. ಇದು ಪ್ರಾಚೀನವಾದ ಶಿರಾಜ್ (Shiraz School) ಪರಂಪರೆಯ ಚಿತ್ರಕಲೆಯ ಸುಂದರ ಉದಾಹರಣೆ-ಗಳನ್ನೊಳಗೊಂಡಿದೆ. ತುರ್ಕ ಭಾಷೆಯ ೨೩ ಪ್ರತಿಗಳು. ೪ ಅಚ್ಚಾದ ಪುಸ್ತಕಗಳು ಮುಖ್ಯತಃ ಔಷಧೀಯ, ಖಗೋಲಶಾಸ್ತ್ರ ಮತ್ತು ಯಕ್ಷಿಣಿವಿದ್ಯೆ ಕುರಿತಾದವು. ಅದ-ರೊಟ್ಟಿಗೆ, ೧೦೫೩/೧೬೪೩ ರಲ್ಲಿ ರಚಿತವಾದ ಅರೇಬಿಯನ್ ಮತ್ತು ತುರ್ಕ ಭಾಷೆಯ ರೋಬ್ (Robe) ಶೋಕಗೀತೆಯಾದ ಖಶೀದೆ-ಇ-ಬುರ್ದಾ (Kaside-i-burda, 'Eulogy of the Robe') ಎಂಬ ಅಪೂರ್ವ ಹಸ್ತಪ್ರತಿಯನ್ನು ಒಳಗೊಂಡಿವೆ.

ಸಂಖ್ಯೆ ಮತ್ತು ಮಹತ್ವದ ದೃಷ್ಟಿಯಿಂದ ಪ್ರಥಮ ಸ್ಥಾನವನ್ನು ಪಡೆಯುವುದು ಸಂಸ್ಕೃತದ ಸಂಗ್ರಹವೇ. ಸುಮಾರು ೬೦೦೦ ಹಸ್ತಪ್ರತಿಗಳನ್ನು ನೂರಾರು ಬಾಯಿಂಡ್ ಮಾಡಿರದ ಅಚ್ಚಾದ ಪುಸ್ತಕಗಳನ್ನು ಹೊಂದಿದೆ. ಇದರೊಟ್ಟಿಗೆ, ೮೦ಕ್ಕೂ ಹೆಚ್ಚು ಪ್ರಾಕೃತದ ಹಸ್ತಪ್ರತಿಗಳು ಇಲ್ಲವೆ ದೇವನಾಗರಿ ಲಿಪಿಯನ್ನು ಒಳಗೊಂಡು ಬಂಗಾಲಿ ಮತ್ತು ಶಾರದಾ ಲಿಪಿಗಳ ಆಧಿಕ್ಯದೊಂದಿಗೆ ಇನ್ನೂ ಹಲವಾರು ಲಿಪಿಗಳು ಇಲ್ಲಿ ಪ್ರಾತಿನಿಧ್ಯ ಪಡೆದಿವೆ. ಕೆಲವು ಹಸ್ತಪ್ರತಿಗಳು ಸಚಿತ್ರವಾಗಿದ್ದು, ಕೆಲವುಗಳು ಔಷಧೋಪಚಾರದ ದೃಶ್ಯಗಳನ್ನು ಪ್ರತಿಬಿಂಬಿಸುವ ಚಿಕಣಿ ಚಿತ್ರಗಳನ್ನು ಒಳಗೊಂಡಿವೆ. ಈ ಸಂಗ್ರಹದಲ್ಲಿ ಒಂದೇ ಒಂದು ಶರೀರ ಶಾಸ್ತ್ರದ ಚಿತ್ರರಚನೆಯಿದ್ದು ಅದು ಕೂಡ ವಿಶ್ವದ ಬೃಹತ್ ಮತ್ತು ಸೂಕ್ಷ್ಮ ರಚನಾ ಆಧಾರಿತವಾದ ಜ್ಯೋತಿಷ್ಯ ಶಾಸ್ತ್ರದ ವಿಷಯವನ್ನೊಳಗೊಂಡಿದೆ. ಬಹುಳಷ್ಟು ಸಂಸ್ಕೃತ ಹಸ್ತಪ್ರತಿಗಳು ಕೈಯಿಂದ ತಯಾರಿ-ಸಿದ ಕಾಗದಗಳ ಮೇಲೆ ಮಸಿಯಿಂದ ಬರೆದವುಗಳು. ಹಾಗೆಯೇ, ಈ ಸಂಗ್ರಹವು ೧೫೦ ತಾಳೆಗರಿ ಪ್ರತಿಗಳನ್ನು ಮತ್ತು ಗಿಡದ ತೊಗಟೆಯ ಮೇಲೆ ಬರೆದ ಅನೇಕ ಪ್ರತಿಗಳನ್ನು ಒಳಗೊಂಡಿದೆ. ಈ ಹಸ್ತಪ್ರತಿಗಳಲ್ಲಿ ಬಹು ಸಂಖ್ಯೆಯವು ಅಪೂರ್ಣ ಮತ್ತು ತ್ರುಟಿತಗೊಂಡವುಗಳಾಗಿವೆ.

ಕಳೆದ ೨೫ ವರ್ಷಗಳಿಂದ ಅತ್ಯಂತ ತ್ವರಿತವಾಗಿ ಸಂಗ್ರಹಣ ಕಾರ್ಯವನ್ನು ಕೈಕೊಳ್ಳಲಾಗಿದೆ. ೧೯೫೪ ರಲ್ಲಿ ೩೦೦೦ ಕ್ಕೂ ಮೇಲ್ಪಟ್ಟ ಸಂಸ್ಕೃತ ಮತ್ತು ಭಾರತೀಯ ಇನ್ನುಳಿದ ಭಾಷೆಗಳ ಹಸ್ತಪ್ರತಿಗಳ ಸಂಕ್ಷಿಪ್ತ ಪಟ್ಟಿಯೊಂದನ್ನು ಡಾ. ವ್ಹಿ. ರಾಘವನ್ ಅವರು ಸಿದ್ಧಪಡಿಸಿದ್ದರಾದರೂ ದುರದೃಷ್ಟವಶಾತ್ ಅದು ಪ್ರಕಟಗೊಳ್ಳಲೇ ಇಲ್ಲ. ೧೯೭೦ ರಲ್ಲಿ ಪ್ರೊವಿಡೆನ್ಸಿನ ಬ್ರೌನ್ ವಿಶ್ವವಿದ್ಯಾನಿಲಯದ ಪ್ರೊ. ಡಿ. ಪಿಂಗ್ರಿ ಅವರು 'ಸಂಸ್ಕೃತದಲ್ಲಿಯ ಖಚಿತ ವಿಜ್ಞಾನಗಳ ಸಮೀಕ್ಷೆ' ಎಂಬ ಮೊದಲ ಸಂಪುಟವನ್ನು ೧೯೭೧ ರಲ್ಲಿಯೂ ಮತ್ತು ೧೯೭೬ ರಲ್ಲಿ ಅದರ ಮುಂದಿನ ಸಂಪುಟಗಳನ್ನು ಪ್ರಕಟಿಸಿದರು. ಜ್ಯೋತಿಷ್ಯ ಶಾಸ್ತ್ರ ಮತ್ತು ಅದಕ್ಕೆ ಸಂಬಂಧಪಟ್ಟ ಕ್ಷೇತ್ರಗಳಾದ

ಗ್ರಹವಿಜ್ಞಾನ ಮತ್ತು ಭೂಗೋಳ (ವಿಶೇಷವಾಗಿ ಜೈನ) ಹಾಗೆಯೇ ಧಾರ್ಮಿಕ ವ್ರತಾದಿಗಳನ್ನು ಆಚರಿಸುವ ನಿಶ್ಚಿತಗಳಿಗೆಯನ್ನು ನಿರ್ಧರಿಸುವ ಬಗ್ಗೆ ಧರ್ಮ ಶಾಸ್ತ್ರದಲ್ಲಿ ವ್ಯಕ್ತವಾದ ವಿಷಯವನ್ನು ಸಂಗ್ರಹಿಸುವುದು ಈ ಸಮೀಕ್ಷೆಯ ಉದ್ದೇಶವಾಗಿತ್ತು. ಈ ವಿಷಯ ಸಂಗ್ರಹವನ್ನು ಕಳೆದ ೩೦ ವರ್ಷಗಳಿಂದಲೂ ಸಂಗ್ರಹಿಸುತ್ತಲಿರುವ ಅವರು ಅಮೇರಿಕ, ಯುರೋಪ ಮತ್ತು ಭಾರತಗಳಿಂದ ಈಗಲೂ ಸಂಗ್ರಹಿಸುತ್ತಲಿದ್ದಾರೆ. ಇದೊಂದು ಹಲವಾರು ವರ್ಷಗಳ ದೀರ್ಘವಾದ ಅವಧಿಯ ಒಂದು ಯೋಜನೆ-ಯಾಗಿದೆ. ಈ ಕಾರ್ಯವು ಪ್ರಗತಿಯಾಗುತ್ತಿದ್ದಂತೆ, ವೆಲ್‌ಕಮ್ ಸಂಸ್ಥೆಯಲ್ಲಿರುವ ಸಂಸ್ಕೃತ ಹಸ್ತಪ್ರತಿಗಳ ಮಹತ್ವದ ಸಂಗ್ರಹವು ಕೂಡ ಬೆಳೆದಿದೆ. ಇದರಲ್ಲಿ ಹಸ್ತ ಸಾಮುದ್ರಿಕ, ಖಗೋಳ ಶಾಸ್ತ್ರ, ಜೋತಿಷ್ಯ ಹಾಗು ಅದಕ್ಕೆ ಸಂಬಂಧಿಸಿದ ವಿಷಯಗಳು ಕೂಡ ಸಮಾವೇಶವಾಗಿವೆ. ಈಚೀಚೆಗೆ ರಾಘವನ್ ಅವರ ಪಟ್ಟಿಯೊಂದನ್ನು ಒಳಗೊಂಡ ಇಡೀ ಸಂಗ್ರಹದ ಪಟ್ಟಿಯೊಂದನ್ನು ಸಿದ್ಧಪಡಿಸುವ ಕಾರ್ಯವು ನಡೆದಿದೆ. ಇದರಿಂದ ಔಷಧೀಯ ಹಸ್ತಪ್ರತಿಗಳ ವಿವರವಾದ ವರ್ಣನಾತ್ಮಕ ಸೂಚಿಯನ್ನು ಸಾಂಪ್ರದಾಯಿಕ ಆಯುರ್ವೇದದ ತತ್ವಗಳನ್ನು ಆಧರಿಸಿ ಸಾದರಪಡಿಸಿದಂತಾಗುವುದು.

ಔಷಧೀಯ ಶಾಸ್ತ್ರಗಳಿಗೆ ಸಂಬಂಧಿಸಿದವೆನ್ನಬಹುದಾದ ಶರೀರ ರಚನಾ ಶಾಸ್ತ್ರ, ಶರೀರ ವಿಜ್ಞಾನ, ರೋಗಲಕ್ಷಣ ಶಾಸ್ತ್ರ, ಮತ್ತು ಭ್ರೂಣಶಾಸ್ತ್ರ ಕುರಿತಾದ ಹಸ್ತಪ್ರತಿ-ಗಳು ಇಲ್ಲಿವೆ. ಆಧುನಿಕ ವೈದ್ಯಕೀಯ ಸೌಕರ್ಯಗಳು ಇನ್ನು ನಿಲುಕದಿರುವ ಈ ಭೂಖಂಡದ ದೂರದ ಮೂಲೆಗಳಲ್ಲಿರುವ ಕೆಲವು ಪ್ರದೇಶಗಳಲ್ಲಿ ದೈಹಿಕ ಅಸ್ತವ್ಯಸ್ತತೆಯನ್ನು ಹೋಗಲಾಡಿಸಲು ಭಾರತೀಯ ವೈದ್ಯಕೀಯದಲ್ಲಿ ಪರಂಪರಾಗತವಾಗಿ ನಡೆದು ಬಂದ ವಿಧಾನದಲ್ಲೇ ಈಗಲೂ ಉಪಚರಿಸುವುದು ಪ್ರಚಲಿತವಿದೆ. ಈ ಮೊದಲಿನಿಗಿಂತಲೂ ಹೆಚ್ಚು ಆಸಕ್ತಿಯಿಂದ ಭಾರತೀಯ ಪರಂಪರೆಯ ಬಗ್ಗೆಯೂ, ಆಯುರ್ವೇದ ಶಾಸ್ತ್ರಗಳ ಬಗ್ಗೆಯೂ ಅಧ್ಯಯನವು ನಡೆದಿದೆಯಲ್ಲದೆ, ಹಸ್ತಪ್ರತಿಗಳ ಸಂಗ್ರಹ ಮತ್ತು ಈ ವರೆಗೆ ದೊರೆತ ಸಾಮಗ್ರಿಯ ಪ್ರಕಟನೆಯ ಸಂಬಂಧದಲ್ಲಿ ಹಿಂದಿನಿಗಿಂತಲೂ ಈಗ ಹೆಚ್ಚು ಉತ್ಸಾಹ ಕಂಡು ಬರುತ್ತದೆ. ಬಹುಮಟ್ಟಿಗೆ ಪರಂಪರೆಯಲ್ಲಿ ಪ್ರಧಾನವಾದ ಎಲ್ಲ ವೈದ್ಯಕೀಯ ಶಾಸ್ತ್ರಗಳೂ ಈ ಸಂಗ್ರಹದಲ್ಲಿವೆ. ಅವರಲ್ಲಿ ಶಸ್ತ್ರ ಚಿಕಿತ್ಸೆಯ ಪಿತಾಮಹನಾದ ಶುಶ್ರುತನ 'ಸಂಹಿತೆ' ಮತ್ತು ಭಾರತದ ವೈದ್ಯಕೀಯ ಶಾಸ್ತ್ರದ ಆಚಾರ್ಯ-ನಾದ ಚರಕನ ಸಂಹಿತೆಯೂ ಇದೆ. ಇನ್ನೊಂದು ಮಹತ್ವದ ವೈದ್ಯಕೀಯ ಕೃತಿಯೆಂದರೆ, ಸ್ವಲ್ಪ ಈಚಿನದೆನ್ನಬಹುದಾದ ವಾಗ್ಭಟನ ಅಷ್ಟಾಂಗ ಹೃದಯ ಎಂಬುದಾಗಿದೆ. ಶಾಸ್ತ್ರ ಸಂಬಂಧಿಯಾದ ಕೃತಿಗಳು ಅಂದರೆ ಪರಂಪರಾಗತವಾಗಿ ಬಂದ ವ್ಯವಸ್ಥಿತ ಅಧ್ಯಯನವು ಈ ಮೊದಲೇ ಹೇಳಲಾದ ವೈದ್ಯಕೀಯ ಶಾಸ್ತ್ರ. ಜೋತಿಷ್ಯ, ಖಗೋಳ ಶಾಸ್ತ್ರಗಳಗನ್ನೊಳಗೊಂಡು ವ್ಯಾಕರಣ, ಕಾನೂನು, ಶಬ್ದೋತ್ಪತ್ತಿ ಶಾಸ್ತ್ರ, ತತ್ವಶಾಸ್ತ್ರ ಗಳು ಈ ಸಂಗ್ರಹದಲ್ಲಿ ಅಗ್ರಗಣ್ಯವಾಗಿವೆ. ಇವುಗಳು ಹಿಂದೂಧರ್ಮ (ವಿಶೇಷವಾಗಿ

ಜೈನ) ಮತಗಳಿಗೆ ಸಂಬಂಧಿಸಿವೆ. ಜೈನ ಹಸ್ತಪ್ರತಿಗಳಲ್ಲಿ ಒಂದಾದ ಭದ್ರಬಾಹುವಿನ ಕಲ್ಪಸೂತ್ರವು ೨೩೬ ಪತ್ರಗಳನ್ನು ಹೊಂದಿದ್ದು, ಪ್ರಾಕೃತದಲ್ಲಿ ಲಿಖಿತವಾಗಿದೆ. ಶಿಲ ವರ್ಣ ರಂಜಿತ ಚಿಕಣಿ ಚಿತ್ರಗಳನ್ನು ಹೊಂದಿದ ಇದರ ಕಾಲವು ೧೫೭೦ ಆಗಿದೆ. ಈ ಸಂಗ್ರಹಕ್ಕೆ ಸಂಬಂಧಿಸಿದಂತೆ ನಡೆದ ಕಾರ್ಯವು ಪ್ರಗತಿ ಹೊಂದುತ್ತಿದ್ದಂತೆ ಮಹತ್ವದ ಹಸ್ತಪ್ರತಿಗಳ ಸಂಖ್ಯೆಯು ಬೆಳೆದು ಈ ದೇಶದ ಮತ್ತು ಪರದೇಶದ ಸಂಸ್ಕೃತ ವಿದ್ವಾಂಸರಿಗೆ ಹೆಚ್ಚಿನ ವಿಷಯದ ಮಾಹಿತಿಯನ್ನು ಒದಗಿಸಬಲ್ಲುದೆಂದು ಆಶಿಸಲಾಗಿದೆ.

ಪಾಳಿ, ಬಹಳ ಕಾಲದ ಹಿಂದೆಯೇ ಬಳಕೆ ನಿಂತು ಹೋದ ಈ ಭೂಖಂಡದ ಇನ್ನೊಂದು ಪ್ರಾಚೀನವಾದ ಭಾಷೆ. ಅದಿನ್ನೂ ಸಿಲೋನ, ಬರ್ಮಾ ಮತ್ತು ಥೈಲಾಂಡಗಳಲ್ಲಿಯ ಬೌದ್ಧ ಧರ್ಮದ ಗ್ರಂಥಗಳಲ್ಲಿ ಬಳಕೆಗೊಳ್ಳುತ್ತಲಿದೆ. ಈ ಭಾಷೆಯು ಕೂಡ ೧೫೦ ಹಸ್ತಪ್ರತಿಗಳಿಂದ ಪ್ರಾತಿನಿಧ್ಯ ಪಡೆದಿದೆ. ಇವುಗಳಲ್ಲಿ ನೂರರಷ್ಟು ಬರ್ಮಾ ಲಿಪಿಯವು. ಇನ್ನುಳಿದವುಗಳಲ್ಲಿ ವಿಶೇಷವಾಗಿರುವುದು ಸಿಂಹಳೀಯ ಲಿಪಿಯವು. ಅಲ್ಲದೆ ೮೦ಕ್ಕೂ ಮೇಲ್ಪಟ್ಟು ತಾಳೆಗರಿಯ ಮೇಲೆ, ೨೧ ಲೋಹಗಳ ಮೇಲೆ ಇನ್ನುಳಿದವು ಕಾಗದ ಮತ್ತು ಹಸ್ತಿದಂತದ ಮೇಲೂ ಬರೆದವುಗಳಾಗಿವೆ. ಹೆಚ್ಚಾಗಿ, ಈ ಹಸ್ತಪ್ರತಿಗಳಲ್ಲಿ ಅರಗಿನ ಉಜ್ವಲ ವರ್ಣಗಳಿಂದ ತುಂಬಿದ ಲಿಪಿಗಳ ಬರವಣಿಗೆ ಇದ್ದು ಚಲುವಿನ ವರ್ಣಮಯ ಹಲಗೆಗಳ ಮಧ್ಯ ಇವುಗಳನ್ನು ಇಡಲಾಗಿವೆ. ಅವುಗಳಲ್ಲಿ ಒಂದು ಹಸ್ತಪ್ರತಿಯು ಅನುಕ್ರಮವಾದ ಬುದ್ಧನ ಜೀವನದ ಅಂದರೆ ಜನನವನ್ನು ಮೊದಲ್ಗೊಂಡು ಸನ್ಯಾಸ ಸ್ವೀಕರಿಸಿ ಬುದ್ಧನಾದ ಜೀವನದ ಎಲ್ಲ ಸಂಗತಿಗಳ ವರ್ಣರಂಜಿತ ಚಿತ್ರಗಳ ಬೃಹತ್ತಾದ ಪುಸ್ತಕವಾಗಿದೆ. ೧೭೯೦ ರಲ್ಲಿ, ಬರ್ಮಾ ಲಿಪಿಯಲ್ಲಿ ಬರೆಯಲಾದ ಈ ಹಸ್ತಪ್ರತಿಯು ಮೂರು ಸಂಪುಟಗಳಲ್ಲಿ ವಿಭಾಗಿಸಲ್ಪಟ್ಟಿದ್ದು ಉದ್ದಕ್ಕೆ ೧.೫೦೦ cms ಎತ್ತರಕ್ಕೆ ೫೦ cms ಇದೆ.

ಹಾಗೆಯೆ, ಈ ಉಪಖಂಡದ ಇನ್ನು ೯ ಭಾಷೆಗಳು ಪ್ರಾತಿನಿಧ್ಯ ಪಡೆದಿವೆ. ಹಿಂದಿಯಂದು ಉತ್ತರ ಭಾರತದ ಭಾಷಾ ಸಂಗ್ರಹಗಳಲ್ಲಿಯೇ ಅತ್ಯಂತ ದೊಡ್ಡದು. ಅದರಲ್ಲಿ ೩೦೦ ಕ್ಕೂ ಹೆಚ್ಚು ಹಸ್ತಪ್ರತಿಗಳು ಅಲ್ಲದೆ ಔಷಧೀಯ, ಪಶು ವೈದ್ಯಕೀಯ ಮತ್ತು ಜೋತಿಷ್ಯ ಶಾಸ್ತ್ರಗಳು ಪ್ರಧಾನವಾದ ೧೫೦ ರಷ್ಟು ಅಚ್ಚಾದ ಪುಸ್ತಕಗಳಿವೆ. ಇನ್ನುಳಿದ ಉತ್ತರ ಭಾರತದ ಭಾಷೆಗಳಲ್ಲಿ ಉರ್ದುವಿನ ೧೦೦ ಕ್ಕೂ ಹೆಚ್ಚು ಅಚ್ಚಾದ ಪುಸ್ತಕಗಳು ಮತ್ತು ೪೦ ರಷ್ಟು ಹಸ್ತಪ್ರತಿಗಳು, ಓರಿಯಾ ಲಿಪಿಯ ೨೫ ಓಲೆಗರಿ ಹಸ್ತಪ್ರತಿಗಳು, ೩೦ ಕ್ಕೂ ಹೆಚ್ಚು ಪಂಜಾಬಿ ಹಸ್ತಪ್ರತಿಗಳು ಮತ್ತು ಕೆಲವು ಅಚ್ಚಾದ ಪುಸ್ತಕಗಳು ಅಲ್ಲದೆ ನಾಲ್ಕು ಮರಾಠಿ ಹಸ್ತಪ್ರತಿಗಳು ಇವೆ. ದ್ರಾವಿಡ ಭಾಷೆಗಳು ಕೂಡ ಇಲ್ಲಿ ಪ್ರಾತಿನಿಧ್ಯ ಪಡೆದಿದ್ದು ತಮಿಳಿನ ೬೪ ತಾಳೆಗರಿ ಹಸ್ತಪ್ರತಿಗಳು ಮತ್ತು

೨೦ ಕ್ಕೂ ಮಿಕ್ಕಿದ ಅಚ್ಚಾದ ಪುಸ್ತಕಗಳು; ಮಲೆಯಾಳಿಯ ೨೦ ತಾಳೆಗರಿ ಹಸ್ತಪ್ರತಿ-ಗಳು ಮತ್ತು ೨೭ ಅಚ್ಚಾದ ಪುಸ್ತಕಗಳು; ತೆಲುಗಿನ ೨೪ ತಾಳೆಗರಿ ಹಸ್ತಪ್ರತಿಗಳು ಮತ್ತು ೧೨ ಅಚ್ಚಾದ ಪುಸ್ತಕಗಳು ಮತ್ತು ಕನ್ನಡದ ಕೆಲವು ಅಚ್ಚಾದ ಪುಸ್ತಕಗಳಿದ್ದು; ಒಂದೇ ಒಂದು ಹಸ್ತಪ್ರತಿಯಿದೆ. ಈ ಪುಸ್ತಕ ಭಂಡಾರವು ೪೦೦ ಕ್ಕೂ ಸಿಂಹಳೀಯ ತಾಳೆಗರಿ ಹಸ್ತಪ್ರತಿಗಳನ್ನು ಹೊಂದಿರುವುದು ಗಮನಾರ್ಹವಾಗಿದೆ.

ವೆಲ್‌ಕಮ್ ಸಂಸ್ಥೆಯಲ್ಲಿರುವ ಆಗ್ನೇಯ ಏಶಿಯಾದ ಅತ್ಯಂತ ದೊಡ್ಡ ಹಸ್ತ ಪ್ರತಿ ಸಂಗ್ರಹವೆಂದರೆ ಬರ್ಮೀಯದು. ೧೦೦ ಕ್ಕೂ ಹೆಚ್ಚು ಇರುವ ಇದರಲ್ಲಿ ೮೦ ರಷ್ಟು ತಾಳೆಗರಿ ಮತ್ತು ಕೆಲವು ಲೋಹದವಾಗಿವೆ. ತಾಳೆಗರಿ ಹಸ್ತಪ್ರತಿಗಳಲ್ಲಿ ಹೆಚ್ಚಿನವು ವಿಜ್ಞಾನ ವಿಷಯಕವಾದವು. ಮತ್ತು ಸುಂದರವಾಗಿ ಬಣ್ಣ ತುಂಬಿದ ಅಂಚುಗಳಿಂದ ಕೂಡಿದವುಗಳು. ಥೈ ಭಾಷೆಯ ೨೧ ಹಸ್ತಪ್ರತಿಗಳಿದ್ದು ಕೆಲವನ್ನು ಕರಿವರ್ಣದ ಕಾಗದದ ಮೇಲೆ ಹಳದಿ ಅಥವಾ ಬಿಳಿ ಮಸಿಯಿಂದ ಬರೆಯಲಾಗಿದೆ. ಇವುಗಳಲ್ಲಿ ಎರಡು ಹಸ್ತಪ್ರತಿಗಳು ಮೂಲ ಚೀನಿ ಭಾಷೆಯ ಜ್ಯೋತಿಷ್ಯ ಶಾಸ್ತ್ರಕ್ಕೂ, ಮೂರನೆಯದೊಂದು ಅಂಗ ಮರ್ಧನ ಶಾಸ್ತ್ರಕ್ಕೆ ಸಂಬಂಧಪಟ್ಟದ್ದಾಗಿದೆ. ಈ ಪುಸ್ತಕ ಭಂಡಾರವು ಮೂರು ಶಾನ್ (Shan) ಹಸ್ತಪ್ರತಿಗಳನ್ನು, ಒಂದು ಟ್ಯಾಮ್ (Tam), ಇನ್ನೊಂದು ಲೋಲೋ (Lolo) ಹಸ್ತಪ್ರತಿಗಳನ್ನು ಹೊಂದಿದೆ. ಇಂಡೋನೇಶಿಯಾಕ್ಕೆ ಸಂಬಂಧ ಪಟ್ಟ ಭಾಷೆಗಳಲ್ಲಿ ವೆಸ್ಟರ್ನ್ ಕಾಗದದ ಮೇಲೆ ಬರೆದ ೩೦ ಮಲಯಾ ಹಸ್ತಪ್ರತಿಗಳದೇ ದೊಡ್ಡ ಸಂಗ್ರಹ. ಅವರಲ್ಲಿ ಜಾವಿ (Jawi) ಭಾಷೆಯವು ಕೆಲವು ಇನ್ನುಳಿದವುಗಳು ರೋಮನೀಕರಣಗೊಂಡ ಲಿಪಿಗಳಲ್ಲಿ ಬರೆದವುಗಳು ಮಧ್ಯ ಮಲಯಾದ ಹಸ್ತಪ್ರತಿ-ಯೊಂದು ಬಿದಿರಿನ ಪಟ್ಟಿಗಳ ಮೇಲೆ ದಕ್ಷಿಣ ಸುಮಾತ್ರಾದ ರೆನ್‌ಕೊಂಗ್ (Rencong) ಲಿಪಿಯಲ್ಲಿ ಬರೆದಿದೆ. ಇದರಲ್ಲಿನ ೧೮ ಹಸ್ತಪ್ರತಿಗಳು ಸಸ್ಯ ಮತ್ತು ಪ್ರಾಣಿಗಳ ವರ್ಗೀಕರಣವನ್ನು ಕುರಿತಾದುವು. ಉಳಿದವುಗಳು ಮಂತ್ರ ತಂತ್ರಗಳ, ಭವಿಷ್ಯಜ್ಞಾನದ ಮತ್ತು ಮಲಯಾದ ಜಾನಪದಕ್ಕೆ ಸಂಬಂಧಿಸಿದವುಗಳು. ಹದಿನಾಲ್ಕು ಬಾಟಕ್ (Batak) ಹಸ್ತಪ್ರತಿಗಳಲ್ಲಿ ಹತ್ತು ಬೇರೆ ಬೇರೆ ಗಿಡಗಳ ತೊಗಟೆಯ ಮೇಲೆ ಬರೆದ-ವುಗಳು. ಅವುಗಳಲ್ಲಿ ಆರರ ವಿವರಗಳು ಈಗಾಗಲೆ ಪ್ರಕಟಗೊಂಡಿವೆ. ಇದರಲ್ಲಿನ ಐದು ಹಸ್ತ ಪ್ರತಿಗಳು ಕರೊ-ಬಾಟಕ್ (Karo-Batak)ನಲ್ಲಿಯೂ, ತೋಬಾ ಬಾಟಕ್ (Toba-Batak)ನಲ್ಲಿ ಬರೆದ ೪ರಲ್ಲಿ ಒಂದನ್ನು ಬಿದಿರಿನ ಕೊಳವೆಯ ಮೇಲೆ ಬರೆಯಲಾಗಿದೆ-ಯಲ್ಲದೆ ದೇರಿ ಬಟಕ್ (Dairi-Batak)ನಲ್ಲಿ ಬರೆದ ಎರಡರಲ್ಲಿ ಒಂದನ್ನು ಬಿದಿರಿನ ಪಟ್ಟಿಯ ಮೇಲೆ ಬರೆಯಲಾಗಿದೆ. ಇವೆಲ್ಲವುಗಳು ೧೯ ನೆಯ ಶತಮಾನ ಅಥವಾ ೨೦ ನೆಯದ ಶತಮಾನವಾಗಿದ್ದು ಇಂದ್ರಜಾಲ ಮತ್ತು ಕಾಲಜ್ಞಾನದ ವಿಷಯ-ಗಳನ್ನು ಒಳಗೊಂಡಿವೆ. ಜವನೀಯ (Javanese) ೧೦ ಹಸ್ತಪ್ರತಿಗಳಿದ್ದು ಅವರಲ್ಲಿ ೮ ತಾಳೆಗರಿಯಲ್ಲಿ ಬರೆದವುಗಳಾಗಿವೆ.

ದೂರದ ಪೌರ್ವಾತ್ಯ ಸಂಗ್ರಹಗಳೆಲ್ಲ ಸುಮಾರು ೫೭೫ ಕಲ್ಲಚ್ಚಿನ ಪುಸ್ತಕಗಳು, ೧೨ ಹಸ್ತಪ್ರತಿಗಳು ಮತ್ತು ಕೆಲವು ಅಲಂಕಾರಾಕ್ಷರ (Calligraphy) ಬರವಣಿಗೆಯ ಉದಾಹರಣೆಗಳನ್ನೊಳಗೊಂಡ ಚೀನಾದ ಸಂಗ್ರಹವೇ ಮುಖ್ಯವಾದುದು. ಇವುಗಳಲ್ಲಿನ ಸುಮಾರು ೩೦೦ ರಷ್ಟು ಕಲ್ಲಚ್ಚಿನ ಪ್ರತಿಗಳು ಚೀನಾ ದೇಶದ ಚಿಕಿತ್ಸಾ ವಿಧಾನಗಳಲ್ಲಿ ಪ್ರಾಚೀನ ಕಾಲದಿಂದಲೂ ಗೌರವ ಪಡೆದ, ಪ್ರಮುಖವೂ ಆದ ಸೂಜಿ ಚಿಕಿತ್ಸೆ (Accupuncture) ಒಳಗೊಂಡ ಮತ್ತು ಪ್ರತ್ಯುದ್ರೇಕಕಾರಿ(Moxibustion) ಅಂದರೆ ದೇಹದ ಭಾಗವನ್ನು ಲೋಹದಿಂದ ಸೌಮ್ಯವಾಗಿ ಸುಡುವ ಇಲ್ಲವೆ ಬೊಬ್ಬೆಯೇಳುವಂತೆ ಮಾಡುವ ಅಗ್ನಿಪ್ಲಾಸ್ತ್ರಿ ಈ ಮುಂತಾದ ವೈದ್ಯಕೀಯಕ್ಕೆ ಸಂಬಂಧಿಸಿದವುಗಳಾಗಿವೆ. ಇದಲ್ಲದೆ, ಇನ್ನುಳಿದ ಸಂಗ್ರಹವು ಔಷಧಿ ತಯಾರಿಕೆ ಮತ್ತು ವಿನಿಯೋಗ, ಪ್ರಸವ ಶಾಸ್ತ್ರ. ನೇತ್ರ ಚಿಕಿತ್ಸಾ ಶಾಸ್ತ್ರ ಮತ್ತು ಗಿಡಮೂಲಿಕೆ ವಿಷಯಗಳನ್ನು ಪ್ರತಿಪಾದಿಸುತ್ತದೆ. ಒಟ್ಟಿನಲ್ಲಿ ಈ ವೈದ್ಯಕೀಯ ಸಂಗ್ರಹವು ಮಹತ್ವದ್ದಾಗಿದ್ದು ಶರೀರ ರಚನಾ ಶಾಸ್ತ್ರದ ಸಚಿತ್ರ ಉದಾಹರಣೆಗಳೊಂದಿಗೆ ಸೂಜಿ ಚಿಕಿತ್ಸೆ ನಡೆಸಬೇಕಾದ ಶರೀರದ ಭಾಗಗಳನ್ನು ಮತ್ತು ದೇಹದ ಯಾವ ಭಾಗದಲ್ಲಿ ಪ್ರತ್ಯುದ್ರೇಕಕಾರಿ ವಸ್ತುವನ್ನು ಲೇಪಿಸಬೇಕು; ಲೋಹದಿಂದ ಸುಡಬೇಕು ಎಂಬುದನ್ನು ವಿವರಿಸುತ್ತದೆ. ಇದು ಯೆನ್-ಕೊ ಚಾ ಚವುನ (Yen-k'o ta ch'uan) ಎಂಬ ನೇತ್ರ ಚಿಕಿತ್ಸಾ ಸಂಹಿತೆಯನ್ನು ಒಳಗೊಂಡಿದೆ. ಇದು ಫೂ ಜೆನ್-ಯು (Fu Jen-yu)ನಿಂದ ಬರೆಯಲ್ಪಟ್ಟಿದ್ದು ಕ್ರಿ.ಶ. ೧೬೪೪ ರಲ್ಲಿ ಲಿನ್ ಚಾಂಗ್ ಶೆಂಗ್ (Lin Ch'ang Sheng)ನಿಂದ ವಿಸ್ತೃತಗೊಂಡಿದೆ. ಆರು ವಿಭಾಗಗಳಲ್ಲಿ ೧೦೬ ಬೇರೆ ಬೇರೆ ಕಣ್ಣಿನ ರೋಗಗಳನ್ನು ಕುರಿತು ಚರ್ಚಿಸುವ ಈ ಕೃತಿಯು ಮೊದಲ ಬಾರಿಗೆ ಪ್ರಕಟಗೊಂಡುದು ಮಿಂಗ್‌ರಾಜರ ಆಳ್ವಿಕೆಯ ಅವಧಿಯಲ್ಲಿ. ಅಂದು ನೇತ್ರ ಚಿಕಿತ್ಸಕರಿಗೆ ಇದೊಂದು ಶ್ರೇಷ್ಠ ಮಾರ್ಗದರ್ಶನ ಗ್ರಂಥವಾಗಿತ್ತು. ಇದೇ ಸಂಗ್ರಹದಲ್ಲಿ ಚೀನಾದ ಪ್ರಪ್ರಥಮ ವೈದ್ಯಕೀಯ ಶ್ರೇಷ್ಠ ಗ್ರಂಥವಾದ (The Yellow Emperor's Classic of Internal Medicine) ಹುಆಂಗ್-ತಿ ನೆಯ್ ಚಿಂಗ್ ಸೂ ವೆನ್ (Huang ti Nei Ching Su Wen) ಕೂಡ ಇದೆ. ಚೀನಾದ ವೈದ್ಯಕೀಯ ಪರಂಪರೆಯಲ್ಲಿ ಮೂಲಭೂತವಾದ ಈ ಕೃತಿಯನ್ನು ಕ್ರಿ. ಶ. ಪೂ ಸುಮಾರು ೩೦೦೦ ರಲ್ಲಿ ರಚಿಸಲಾಗಿದೆ ಎಂದು ಭಾವಿಸಲಾಗುತ್ತದೆ. ನಿಜವಾಗಿಯೂ ಇದು ಕ್ರಿ. ಶ. ಪೂರ್ವ ಒಂದನೆಯ ಶತಮಾನದ ವೈದ್ಯರುಗಳ ಅನುಭವ ಮತ್ತು ವಿಚಾರಗಳನ್ನು ಪ್ರತಿಪಾದಿಸುತ್ತದೆ. ಅಲ್ಲದೆ, ಅಲ್ಲಿಯ ವಿಷಯ ಪ್ರತಿಪಾದನೆಯು ಈಗಿರುವಂತೆ ಕ್ರಿ.ಶ. ಪೂರ್ವ ೨ನೆಯ ಶತಮಾನಕ್ಕಿಂತ ಈಚಿನದಲ್ಲವೆಂಬುದನ್ನು ಸ್ಪಷ್ಟಪಡಿಸುತ್ತದೆ. ಇದು ಅನೇಕ ಮರುಮುದ್ರಣಗಳನ್ನು ಕಂಡಿದ್ದು ತನ್ನ ಅತ್ಯಂತ ಜನಪ್ರಿಯತೆಯಿಂದಾಗಿ ಪ್ರಾಚೀನ ಆವೃತ್ತಿಗಳು ಉಳಿದುಕೊಂಡು ಬಂದಿವೆ. ಇದು ಮುಖ್ಯತಃ ಶರೀರಶಾಸ್ತ್ರ ಮತ್ತು ಸೂಜಿ

ಚಿಕಿತ್ಸೆಗೆ ಸಂಬಂಧ ಪಟ್ಟದ್ದಾಗಿದೆ. ಇನ್ನುಳಿದ ಮಹತ್ವದ ಕಲ್ಲಚ್ಚಿನ ಪ್ರತಿಗಳಲ್ಲಿ ೧೫೯೬ ರಲ್ಲಿ ಪ್ರಥಮ ಬಾರಿ ಪ್ರಕಟಗೊಂಡ ಲಿ-ಶಿಹ್-ಚೆನ್ (Li-Shih-Chen)ನ ಗಿಡಮೂಲಿಕೆಗಳಿಗೆ ಸಂಬಂಧಿಸಿದ 'ಪೆನ್ ತ್ಸಾವೋ ಕಂಗ್ ಮು' (Pen Ts'ao Kang Mu)ವಿನ ಆಧುನಿಕ ಆವೃತ್ತಿಯನ್ನು ಒಳಗೊಂಡಿದೆ ಇದರ ಅಪೂರ್ಣ ಸಂಕ್ಷಿಪ್ತ ಆವೃತ್ತಿ ಕೂಡ ಇಲ್ಲಿದೆ. ಇನ್ನೂ ಕುತೂಹಲದ್ದೆಂದರೆ, ಪ್ರಾಚೀನ ಕೃತಿಯೊಂದರ ಆಧುನಿಕ ಆವೃತ್ತಿ ಎನ್ನಬಹುದಾದ ೧೬೬೦ ರಲ್ಲಿ ಆಳಿದ ಮಂಚು ಸಾಮ್ರಾಟ್ ಕಂಗ್ ಸೀಯ ಕಾಲಕ್ಕೆ ಪ್ರಥಮ ಬಾರಿ ಪ್ರಕಟಗೊಂಡ ಕೃತಿಯಾಗಿದೆ. ದುರ್ಮಾಂಸ ಮತ್ತು ಒಳಗುರುಗಳ ಉಪಚಾರ ವಿಧಾನಕ್ಕೆ ಸಂಬಂಧಿಸಿದ ಇದು ಸಚಿತ್ರವಾದ್ದು, ಕೇವಲ ಗಂಟಲಿಗೆ ಸಂಬಂಧಿಸಿದಂತೆ ೧೮ ಚಿತ್ರಗಳಿವೆ ಈ ಹಸ್ತಪ್ರತಿಗಳಲ್ಲಿ ೧೮ ನೆಯ ಶತಮಾನದ ಉತ್ತರಾರ್ಧಕ್ಕೆ ಸೇರಿದ ಒಂದರಲ್ಲಿ ಬೇರೆಬೇರೆ ರೋಗಗಳಿಗೆ ಕೊಡಬೇಕಾದ ಔಷಧಿಗಳ ವಿವರಗಳ ಜೊತೆಗೆ ಅಂಗಮರ್ದನ ಕೌಶಲವನ್ನು ಸಚಿತ್ರವಾಗಿ ತೋರಿಸಲಾಗಿದೆ.

ಚೀನೀಯರು ಬಳಸುತ್ತ ಬಂದ ಪರಂಪರಾಗತ ವೈದ್ಯಕೀಯ ವ್ಯವಸ್ಥೆಯನ್ನು ಪ್ರತಿಬಿಂಬಿಸುವ ಪ್ರದರ್ಶನವೊಂದನ್ನು ವೆಲ್‌ಕಮ್ ವೈದ್ಯಕೀಯ ಚರಿತ್ರೆ ಸಂಗ್ರಹಾಲಯದವರು ೧೯೬೬ ರಲ್ಲಿ ಏರ್ಪಡಿಸಿದ್ದು. ಅದು ಅಂದು ತುಂಬಾ ಪ್ರಖ್ಯಾತಿ ಪಡೆಯಿತು. ಇದರಲ್ಲಿ ಚೀನಾದ ಪರಂಪರಾಗತ ವೈದ್ಯಕೀಯಕ್ಕೆ ಸಂಬಂಧಿಸಿದ ಶ್ರೀಮಂತ ಕೌಶಲದ ವಸ್ತುಗಳ ಜೊತೆಗೆ ಪುಸ್ತಕ ಭಂಡಾರವಲ್ಲಿಯ ಜಪಾನಿನ ವೈದ್ಯಕೀಯಕ್ಕೆ ಸಂಬಂಧಿಸಿದ ಆಯ್ದ ಕಲ್ಲಚ್ಚಿನ ಪ್ರತಿಗಳನ್ನು, ಹಸ್ತಪ್ರತಿಗಳನ್ನು ಅಚ್ಚು ಮತ್ತು ರೇಖಾ ಚಿತ್ರಗಳನ್ನು ಕೂಡ ಸೇರಿಸಲಾಗಿತ್ತು. ಜಪಾನಿ ಸಂಗ್ರಹವು ೧೪೦ ಕಲ್ಲಚ್ಚಿನ ಪ್ರತಿಗಳನ್ನು ಮತ್ತು ೧೧ ಹಸ್ತಪ್ರತಿಗಳನ್ನು ಹೊಂದಿದೆ ವಿಷಯ ವೈವಿಧ್ಯದಿಂದ ಕೂಡಿದ ಹಸ್ತಪ್ರತಿಗಳಲ್ಲಿ ವೈದ್ಯಕೀಯಕ್ಕೆ ಸಂಬಂಧಿಸಿದುವೇ ಪ್ರಮುಖವಾಗಿವೆ. ಇದರಲ್ಲಿ ಕ್ರಿ. ಶ. ೧೬೨೦ ರ ಡಚ್-ಜಪಾನಿನ ಗಿಡಮೂಲಿಕೆಯ ಗ್ರಂಥವು ಕುತೂಹಲಕಾರಿಯಾಗಿದೆ. ಈ ಸಂಪುಟದಲ್ಲಿ ಕೈಯಿಂದ ರಚಿಸಿದ ಔಷಧೀಯ ಮೂಲಿಕೆಗಳ ಚಿತ್ರಗಳಿದ್ದು ಅವುಗಳ ಹೆಸರುಗಳನ್ನು ಜಪಾನಿ, ಚೀನಿ, ಡಚ್ ಮತ್ತು ಲ್ಯಾಟಿನ್‌ಗಳಲ್ಲಿ ಬರೆಯಲಾಗಿದೆ. ಇದನ್ನು ಜಪಾನಿ ಕಲಾವಿದನು ಡಚ್ ವೈದ್ಯನಿಗಾಗಿ ತಯಾರಿಸಿದುದಾಗಿರಬೇಕು. ಮತ್ತೊಂದು ಕುತೂಹಲಕಾರಿ ಜಪಾನಿ ಹಸ್ತಪ್ರತಿಯೆಂದರೆ ಝೆಂಗೋ ಇಚೆನ್ ಶೂ (Zengo iehien shu) ಎಂಬ ಹೆಸರಿನದು. ಪ್ರಸವ ಶಾಸ್ತ್ರವನ್ನು ಕುರಿತಾದ ಇದನ್ನು ಚೂಜೋ ಟಟೇವಕಿ (Chujo Tatewaki)ಯಿಂದ ಸಂಸ್ಥಾಪಿಸಲ್ಪಟ್ಟ ಚೂಜೋ ವೈದ್ಯಕೀಯ ಶಾಲೆಯಿಂದ ಗುಪ್ತವಾಗಿ ರವಾನಿಸಿದ್ದು ಸುಂದರ ಚಿತ್ರಗಳಿಂದ ಕೂಡಿದ ಈ ಹಸ್ತಪ್ರತಿಯು ೧೮೩೦ ರಲ್ಲಿ ಟೌಜಾನ್ ಗ್ಯೆಕುಶಾಯ್ (Tougan Gyokusui)ನಿಂದ ಪ್ರತಿಮಾಡಲ್ಪಟ್ಟಿತ್ತು. ದೂರ ಪೌರ್ವಾತ್ಯ ಪ್ರದೇಶವಾದ ತಿಬೇಟಿಯನ್‌ದ ೧೧೯ ಪ್ರತಿಗಳಲ್ಲಿ ೨೨ ಹಸ್ತಪ್ರತಿಗಳು, ಇನ್ನುಳಿದವು ಮರದ ಕೆತ್ತನೆಗಳು. ವೈದ್ಯಕೀಯ

ಮಹತ್ವದ ಕೃತಿಗಳಾದ ರುಗ್‌ಯುದ್ ಬ್ಗೀ (Rugyud bgi) ಮತ್ತು ಲಾನ್ ತಾಬ್ಸ (Lhan thabs)ಗಳು ಅಲ್ಲದೆ. ೧೯೦೪ ರಲ್ಲಿ ಟಿಬೇಟಕ್ಕೆ ಬಂದಿದ್ದ ಯಂಗ್ ಹಸ್ಬಂಡ್ ಸಾಹಸ ತಂಡದ ಎಲ್.ಎ. ವಾಡೆಲ್ ಅವರು ಸ್ವತಃ ಬರೆದ ಆಕರ್ಷಕವಾದ ಸಂಸ್ಕೃತ ಮತ್ತು ಟಿಬೇಟಿಯನ್ ಶಬ್ದಕೋಶವು ಈ ಸಂಗ್ರಹದಲ್ಲಿದೆ. ಹಾಗೆಯೇ ಕಳೆದ ಶತಮಾನದ ಅಂತ್ಯದಲ್ಲಿ ಫರಿ (Phari) ಪ್ರಾಂತದಿಂದ ಲಾಸಾ (Lhas)ಗೆ ಕೊಟ್ಟ ಕಪ್ಪ ಕಾಣಿಕೆಯ ಅಪರೂಪವಾದ ಅಧಿಕೃತ ದಾಖಲೆಯೂ ಇದೆ. ಈ ಪಾಶ್ಚಾತ್ಯ ಸಂಗ್ರಹದ ವಿವರಗಳನ್ನು ಮುಗಿಸುವ ಪೂರ್ವದಲ್ಲಿ ಈ ಪುಸ್ತಕ ಭಂಡಾರವು ತಾನು ಹೊಂದಿದ್ದ ಮಹತ್ವದ 'ಕಲ್‌ಮುಖ್' (Kalmuck) ಅಚ್ಚಾದ ಪ್ರತಿಯ ಬಗ್ಗೆ ಹೇಳಲೇಬೇಕು. ಕಳೆದ ಶತಮಾನದ ಆರಂಭದಲ್ಲಿ ಸಂಗ್ರಹಿಸಲಾದ ಮತ್ತು ಒಂದು ಕಾಲಕ್ಕೆ ತುಂಬಾ ಪ್ರಚಲಿತವಾಗಿದ್ದ ರಶಿಯದ ಪ್ರಾಥಮಿಕ ವೈದ್ಯಕೀಯ ಕೃತಿಯಿದು. ಇದಲ್ಲದೆ, ಮೂರು ಮಂಚೂ (Manchu) ಶಾಸನ ಪತ್ರಗಳು ಹಾಗೆಯೇ, ಅತ್ಯಂತ ವಿರಳವಾದ ಕೃತಿ ಕಂಜೂರ (Kanjur)ನ ಮಂಚೂ ಅನುವಾದ ಮತ್ತು ಒಂದು ಮಂಗೋಲಿಯನ್ ಹಸ್ತಪ್ರತಿಯು ಈ ಪುಸ್ತಕ ಭಂಡಾರದ ವಶದಲ್ಲಿದೆ.

ಅಚ್ಚಾದ ಪುಸ್ತಕಗಳು ಮತ್ತು ಹಸ್ತಪ್ರತಿಗಳನ್ನು ಹೊರತುಪಡಿಸಿ, ವೆಲ್‌ಕಮ್ ಸಂಸ್ಥೆಯಲ್ಲಿ ಅಚ್ಚಿನ ಮತ್ತು ರೇಖಾ ಚಿತ್ರಗಳ ಸಂಗ್ರಹಿತ ಸಂಪತ್ತು ಇದೆ. ಇದು ಭಾರತದ ಮತ್ತು ಪರ್ಶಿಯಾದ ಚಿಕಣಿ ಚಿತ್ರ ಕೃತಿಗಳನ್ನು ಒಳಗೊಳ್ಳುತ್ತದೆ. ನೂರಕ್ಕಿಂತೂ ಹೆಚ್ಚು ಭಾರತದ ರೇಖಾಚಿತ್ರಗಳೂ, ತುರ್ಕ ಮತ್ತು ಅರಬ್ಬೀ ಅಲಂಕಾರ ಲಿಪಿಯ ಮಾದರಿಗಳು ಇಲ್ಲಿವೆ. ಹಾಗೆಯೇ ಚೀನ ಮತ್ತು ಜಪಾನಿನ ಪಡಿಯಚ್ಚುಗಳ ಚಿತ್ರಗಳನ್ನೂ ರೇಖಾಚಿತ್ರಗಳನ್ನೂ ಹೊಂದಿದೆ. ಇಲ್ಲಿ ೪೦೦ಕ್ಕೂ ಹೆಚ್ಚು ಶರೀರರಚನಾ ಶಾಸ್ತ್ರ (Anatomical drawings)ದ ರೇಖಾಚಿತ್ರಗಳಿವೆ. ಸೂಜಿ ಚಿಕಿತ್ಸೆಗೂ ಸಂಬಂಧಿಸಿದ ಹಲವಾರು ಚಿತ್ರಪಟಗಳಿದ್ದು ಅದರಲ್ಲಿ ಒಂದು ಮಗ್ಗಲು ನೋಟದ ಮತ್ತು ಎದುರುಗಡೆಯ ಎಡಭಾಗವನ್ನು ಬಿಂಬಿಸುವ ಪೂರ್ಣ ಪರಿಮಾಣದ ಆಕೃತಿಯನ್ನು ಹೊಂದಿದೆ. ಇದನ್ನು ಸೌಮ್ಯವರ್ಣದ ರೈಸ್‌ಕಾಗದದ ಮೇಲೆ ಚಿತ್ರಿಸಲಾಗಿದೆ. ೭೫ x ೨೫ ಸೆ.ಮಿ ಅಳತೆಯ ಇದು ಮಿಂಗ್ ಅರಸರ ಕಾಲಕ್ಕೆ ಸೇರಿದ್ದಾಗಿದೆ. ಇಂತಹದೆ ಪಾತಳಿಗಳನ್ನು ತೋರುವ ಇದೇ ಕಾಲಾವಧಿಗೆ ಸೇರಿದ ಇನ್ನೊಂದು ಚಿತ್ರಪಟವು ಇದರ ಅರ್ಧ ಪರಿಮಾಣದ್ದಾಗಿದ್ದು ದೇಹದ ಒಳರಚನೆಗಳನ್ನು ತೋರಿಸುತ್ತದೆ. ಈ ಭಂಡಾರದಲ್ಲಿ ಕಪ್ಪು ಮತ್ತು ಬಿಳಿ ಹಾಗೂ ವರ್ಣಮಯ ಗಾಜಿನ ಚಿತ್ರಫಲಕ (Slides)ಗಳ ಮೈಕ್ರೊ ಫಿಲಂಗಳು, ವರ್ಣ ಪಾರದರ್ಶಿಕೆಗಳು ಮತ್ತು ಅಚ್ಚಾದ ವರ್ಣಚಿತ್ರಗಳ ಮತ್ತು ಏಶಿಯಾ ಆಫ್ರಿಕಾಗಳಲ್ಲಿ ಪರಂಪರಾನುಗತವಾಗಿ ಬಂದ, ಚಿಕಿತ್ಸೆಗೆ ಸಂಬಂಧಿಸಿದ ಹಳೆಯ ಛಾಯಾಗ್ರಹಣ ಚಿತ್ರಗಳ ಸಂಗ್ರಹದ ಸಂಪತ್ತೂ ಇದೆ. ಭಂಡಾರದ ಸಂಗ್ರಹದ ಬಹುಭಾಗವು ಏಶಿಯಾಕ್ಕೆ ಸಂಬಂಧಪಟ್ಟ ಪೌರ್ವಾತ್ಯ ಹಸ್ತಪ್ರತಿಗಳದೇ ಆಗಿದೆ.

೧೬೫೦ ಕ್ಕೂ ಮೊದಲು ಬರೆಯಲಾದವುಗಳನ್ನು ಅಚ್ಚಾದ ಸೂಚಿಯ ಮೊದಲ ಸಂಪು-ಟದಲ್ಲಿ ವಿವರಿಸಲಾಗಿದೆ ಅನಂತರ ಬರೆಯಲಾದ ಹಸ್ತಪ್ರತಿಗಳನ್ನು ಎರಡು ಭಾಗಗಳಲ್ಲಿ ಪ್ರಕಟವಾದ ಎರಡನೆಯ ಸಂಪುಟದಲ್ಲಿ ವಿವರಿಸಲಾಗಿದೆ. ಈ ಸಂಸ್ಥೆಯ ಈಚಿನ ತುಂಬಾ ಮಹತ್ವದ ಸಂಗ್ರಹಣವೆಂದರೆ ಲಿಟಾರ್ಡನ ಸಂಗ್ರಹವೆ. ಏಶಿಯಾ ವೈದ್ಯಕೀಯ ಚರಿತ್ರೆಯ ಅಧ್ಯಯನದ ಮೂಲ ಪುರುಷನೂ ಫ್ರೆಂಚ್ ವೈದ್ಯನೂ, ಪ್ರಾಚ್ಯವಿದ್ಯಾ ವಿದ್ವಾಂಸನೂ ಆಗಿದ್ದ ಗಸ್ಟೇವ್ ಅಲೆಕ್ಸಾಂಡ್ರೆ ಲಿಟಾರ್ಡ್ (೧೮೩೩-೧೯೦೪)ನ ಈ ಸಂಗ್ರಹದಲ್ಲಿ ಹಸ್ತಪ್ರತಿಗಳೂ ಅಚ್ಚಾದ ಪುಸ್ತಕಗಳು ಇವೆ. ಲಿಟಾರ್ಡನ ಸಂಗ್ರಹದಲ್ಲಿನ ಕೆಲವೊಂದು ಭಾಗವು ಪ್ರಾಚ್ಯ ವೈದ್ಯಕೀಯಕ್ಕೆ ವಿಶೇಷವಾಗಿ ಭಾರತೀಯ ವೈದ್ಯಕೀ-ಯಕ್ಕೆ ಸಂಬಂಧಿಸಿದ್ದಾಗಿದೆ. ಈ ಹಸ್ತಪ್ರತಿಗಳಲ್ಲಿ ಅರಬ, ಯಹೂದಿ, ಚೀನಾ, ತಿಬೇಟ, ಜಪಾನ, ಗ್ರೀಕ ಮತ್ತು ಇಜಿಪ್ತಿನ ವೈದ್ಯಕೀಯ ವಿಷಯವನ್ನು ಚರ್ಚಿಸ-ಲಾಗಿದೆಯಲ್ಲದೆ ಸಂದರ್ಭ ಗ್ರಂಥ ಸೂಚಿಯ ಟಿಪ್ಪಣೆಗಳಿಗೆ ಆದ್ಯತೆ ಕೊಡಲಾಗಿದೆ. ಇದೇ ಸಂಗ್ರಹದಲ್ಲಿ ಲೇಖಕನಿಗೆ ಇಂದಿನ ಪ್ರಖ್ಯಾತ ವಿದ್ವಾಂಸರಿಂದ, ವಿಜ್ಞಾನಿಗಳಿಂದ ಬಂದ ೭೦ ಪತ್ರಗಳು ಸೇರಿವೆ.

ವೆಲ್‌ಕಮ್ ಸಂಸ್ಥೆಯ ಸಂಗ್ರಹದಲ್ಲಿಯ ಪ್ರಾಚ್ಯ ಮತ್ತು ಪೌರ್ವಾತ್ಯ ಹಸ್ತಪ್ರತಿ-ಗಳು ಮತ್ತು ಇನ್ನುಳಿದ ಸಾಧನ ಸಾಮಗ್ರಿಗಳನ್ನು ಸಂರಕ್ಷಿಸಬೇಕಾದುದು ಒಂದು ನಿರಂತರವಾದ ಸಾಹಸಕಾರ್ಯ. ಇದನ್ನು ನಿರ್ವಹಿಸಿಕೊಂಡು ಹೋಗಲು ಅದೃಷ್ಟ-ವಶಾತ್ ಈ ಸಂಸ್ಥೆಯು ಸ್ವಯಂ ಪೂರ್ಣವಾದ ಸಂರಕ್ಷಣಾ ಕೋಣೆಯೊಂದನ್ನು ಪಡೆದಿದೆ. ಈ ದೇಶಕ್ಕೆ ಬಂದ ಬಹಳಷ್ಟು ಹಸ್ತಪ್ರತಿಗಳು ಹುಳುವಿನಿಂದಾಗಲಿ ಅಥವಾ ಹವಾ-ಮಾನದ ಕಾರಣದಿಂದಾಗಲಿ ತ್ರುಟಿತವಾಗಿದ್ದು ಇನ್ನುಳಿದವುಗಳು ಹವೆಯಲ್ಲಿನ ದೋಷಕ್ಕೆ ವಿಶೇಷವಾಗಿ ಪಟ್ಟಣದ ವಾತಾವರಣದಲ್ಲಿರುವ ಗಂಧಕಾಮ್ಲಕ್ಕೆ ಬಲಿಯಾದವುಗಳು. ಹೀಗಾಗಿ ಈ ಸಂಗ್ರಹವನ್ನು ಕಾಪಾಡಿಕೊಂಡು ಬರುವಲ್ಲಿ ಸಂರಕ್ಷಿಸುವ ಮತ್ತು ಪುನರುಜ್ಜೀವಿಸುವ ಕಾರ್ಯವು ಮಹತ್ವದ ಪಾತ್ರವಹಿಸುತ್ತದೆ. ಒಂದಕ್ಕೊಂದು ಸಂಬಂಧವಿಲ್ಲದ ಮತ್ತು ತ್ರುಟಿತವಾದುವುಗಳನ್ನು ಪಾರದರ್ಶನ ಲಕೋಟೆಗಳಲ್ಲಿ ಹುದುಗಿಸಿಡುವುದು ತಾತ್ಕಾಲಿಕ ತೀವ್ರ ಸಂರಕ್ಷಣೆಯಾಗಿದೆ. ಇದು ಓದುಗರ ಕೈಯಲ್ಲಿಯೇ ಪುಡಿಯಾಗಿ ಹೋಗಬಹುದಾದ ಗಂಡಾಂತರವಿಲ್ಲದೆ ಅಭ್ಯಾಸ ಮಾಡಲು ಅನುಕೂಲ-ವೊದಗಿಸಿದೆ. ಮುರಿದು ಹೋದ ತುಂಡುಗಳನ್ನು ಒಂದೇ ಬಗೆಯ ವಿದ್ಯುತ್ ಮಾನದಲ್ಲಿ ಇಟ್ಟು ಗರಿಗಳಿಗೆ ಸ್ಥಿತಿ ಸ್ಥಾಪಕತೆಯನ್ನು ತಂದು ಉಪಯೋಗಿಸುವುದನ್ನು ಸುಲಭ-ಗೊಳಿಸಲಾಗಿದೆ. ಈ ವಿಧಾನವು ತಾತ್ಕಾಲಿಕವಾಗಿ ಮಾತ್ರ ಅನುಸರಿಸಲಾಗಿದೆ. ಯಾಕೆಂದರೆ, ಪುನರುಜ್ಜೀವನದ ಉಪಚಾರವು ಅಧಿಕ ವೆಚ್ಚದ್ದು ಮತ್ತು ಸಮಯ ತಗಲು-ವುದು ಆಗಿದೆ.

ಪ್ರಾಚ್ಯ ವಿದ್ಯೆಯ ಬಹುಭಾಗವು ವೆಲ್‌ಕಮ್ ಸಂಸ್ಥೆಯಲ್ಲಿದ್ದರೂ ಬಹಳ ವರ್ಷಗಳ ವರೆಗೆ ಸೂಚಿಯನ್ನೇ ಸಿದ್ಧಪಡಿಸಿರಲಿಲ್ಲವಾದ ಕಾರಣ ಈ ಹಿಂದೆ ಅವು ಅಧ್ಯಯನಕ್ಕೆ ಸುಲಭವಾಗಿ ದೊರೆಯುತ್ತಿರಲಿಲ್ಲ. ಅದರೊಂದಿಗೆ, ಈ ಸಂಗ್ರಹವು ಕೇವಲ ವೈದ್ಯಕೀಯಕ್ಕೆ ಮಾತ್ರ ಸಂಬಂಧಿಸಿದುದು ಎಂಬ ಸಂಕುಚಿತವಾದ ತಿಳುವಳಿಕೆಯ ಕಾರಣ ಪ್ರಾಚ್ಯವಿದ್ಯಾ ಅಧ್ಯಯನ ಕ್ಷೇತ್ರದಲ್ಲಿ ಒಂದು ಬಗೆಯ ಅನಾದರವನ್ನುಂಟುಮಾಡಿತ್ತು. ಸಧ್ಯಕ್ಕೆ ಈ ಸಂಗ್ರಹದ ಭಿನ್ನಭಿನ್ನ ಕ್ಷೇತ್ರಗಳಲ್ಲಿ ಕಾರ್ಯವು ಸಾಗಿದೆ. ಸಂಸ್ಕೃತ ವಿಭಾಗದಲ್ಲಿ ನಡೆಯುತ್ತಿರುವ ಕಾರ್ಯವನ್ನೊಳಗೊಂಡು ಜಾವಾ, ಮಲಯಾ, ಪರ್ಶಿಯನ್, ಸಿಂಹಳಿ, ತಿಬೇಟ ಮತ್ತು ಹಿಬ್ರೂ ಸಂಗ್ರಹಗಳಲ್ಲಿ ಸದ್ಯ ಕಾರ್ಯಸಾಗಿದೆ. ಈಗಾಗಲೇ ಲಭ್ಯವಾದ ಇನ್ನು ಹೆಚ್ಚುತ್ತಲೇ ಇರುವ ಪ್ರಾಚ್ಯ ಹಸ್ತಪ್ರತಿಗಳ ಮತ್ತು ಅಚ್ಚಾದ ಪುಸ್ತಕಗಳ ಸಂಖ್ಯೆಯಿಂದಾಗಿ ಇವುಗಳ ಅಧ್ಯಯನವು ನೂರಾರು ವಿದ್ವಾಂಸರುಗಳಿಂದ ಹಲವಾರು ವರ್ಷಗಳಲ್ಲಿ ಪೂರ್ಣಗೊಳ್ಳುವಂತಹವಾಗಿದೆ. ಈ ಬೆಲೆಬಾಳುವ ಮಹತ್ವದ ಸಂಗ್ರಹದ ವೈವಿಧ್ಯ ಮತ್ತು ಆಧಿಕ್ಯವು ಮೂಲ ಪ್ರಾಚ್ಯವಿದ್ಯಾ ಆಧಾರ ಭೂತವಾದ ಸಾಹಿತ್ಯವೆಂಬುದಾಗಿ ವಿದ್ವಾಂಸರಿಂದ ಪರಿಗಣಿಸಲ್ಪಟ್ಟಿದೆ. ಪ್ರಾಚ್ಯವಿದ್ಯಾ ಕೊಠಡಿಯಲ್ಲಿ ಅಧ್ಯಯನದ ಉದ್ದೇಶಕ್ಕಾಗಿಯೇ ಸಿದ್ಧಪಡಿಸಲಾದ ಮೇಜನ್ನು ಪೂರೈಸಲಾಗುತ್ತಿದ್ದು ಅದರಲ್ಲಿ ಪ್ರಾಚ್ಯವಿದ್ಯಾ ಸಾಮಗ್ರಿಗಳ ಜೊತೆಗೆ ವಿಪುಲ ಆಧಾರ ಗ್ರಂಥಗಳನ್ನು, ಶಬ್ದಕೋಶಗಳನ್ನು ಮತ್ತು ಬೇರೆ ಸಂಗ್ರಹಗಳಲ್ಲಿಯ ಸೂಚಿಗಳನ್ನು ಇಡಲಾಗಿರುತ್ತದೆ. ತನ್ಮೂಲಕ ಈ ದೇಶದ ಮತ್ತು ಪರದೇಶದ ಪ್ರಾಚ್ಯವಿದ್ಯಾ ಪರಿಣತರುಗಳು ಈ ಅಪೂರ್ವವಾದ ಆದರೆ ಅಷ್ಟೊಂದು ಬೆಳಕಿಗೆ ಬಾರದ ಜ್ಞಾನ ಸಂಪತ್ತಿನ ಪ್ರಯೋಜನ ಪಡೆಯುವರೆಂದೂ ಈ ಮೂಲಕ ಪ್ರಾಚ್ಯವಿದ್ಯಾ ಅಧ್ಯಯನದಲ್ಲಿ ವಿಶೇಷವಾಗಿ ವೈದ್ಯಕೀಯ ಚರಿತ್ರೆ ಮತ್ತು ಅದರ ಸಂಲಗ್ನ ವಿಷಯಗಳಲ್ಲಿ ಮಹತ್ವಪೂರ್ಣ ಪಾತ್ರವಹಿಸುವರೆಂದು ಆಶಿಸಲಾಗಿದೆ.

ಜನಪದ ಭಾಷಾವಿಜ್ಞಾನ : ಕ್ಷೇತ್ರ ಕಾರ್ಯ

● ವಿಲ್ಯಂ ಮಾಡ್ತ

ಯಾವುದಾದರೂ ಸಮಾನಧರ್ಮ[1] (Shared identity) ವುಳ್ಳ ಜನಸ್ತೋಮವನ್ನು ಜಾನಪದ ವಿಜ್ಞಾನಿಗಳು (folklorists) ಜನಪದ (folk) ಎಂದು ಕರೆಯುತ್ತಾರೆ. (ಮಾಡ್ತ, 1982(ಖ)81) ಈ ಜನಪದದ ಸದಸ್ಯರೇ ಜನಪದರು. ಆದುದರಿಂದ ಜನಪದರೆಂದರೆ ಕೇವಲ ಗ್ರಾಮೀಣರು, ಅನಾಗರಿಕರು, ಅನಕ್ಷರಸ್ಥರು ಎಂಬ ಕಲ್ಪನೆ ಜಾನಪದ ವೈಜ್ಞಾನಿಕ ದೃಷ್ಟಿಯಿಂದ ತಪ್ಪಾಗಿ ತೋರುತ್ತದೆ. (Durdes, 1965; 2 & Brunvard, 21-2). ಜನಪದರ ಸಮುಷ್ಟಿ ಜೀವನಾಭಿವ್ಯಕ್ತಿ (folk life) ಯೇ ಜಾನಪದ (folklore -ಮಾಡ್ತ, ಅದೇ 82)[2] ಅದು ಜನಪದರ ಸಮುಷ್ಟಿಕ್ರಿಯೆಯಿಂದ ಹುಟ್ಟುವುದರಿಂದ ಆಯಾಯ ಜನಪದಕ್ಕೆ ಸೀಮಿತವಾಗಿದ್ದು ಮೂಲತಹ ಆ ಜನಪದದ ಖಾಸಗಿ ಕ್ರಿಯೆ (esotetic function) ಯಾಗಿರುತ್ತದೆ. ಈ ಸಮುಷ್ಟಿ ಖಾಸಗಿ ಕ್ರಿಯೆ ಗ್ರಾಮೀಣವಾದರೆ ಅದನ್ನು ಗ್ರಾಮೀಣ ಜಾನಪದ (Rural folklore) ಎಂದೂ ನಗರಕ್ಕೆ ಸೇರಿದುದಾದರೆ ನಗರ ಜಾನಪದ (Urban folklore) ಎಂದೂ ಕರೆಯುತ್ತಾರೆ. ಆದುದರಿಂದ ಜಾನಪದವನ್ನು ಕೇವಲ ಗ್ರಾಮಾಂತರ ಪ್ರದೇಶಗಳಿಗೆ ಸೀಮಿತಗೊಳಿಸುವುದು ತೀರಾ ತಪ್ಪು.

---

1. ಭಾಷೆ, ವೃತ್ತಿ, ಧರ್ಮ, ಶಿಕ್ಷಣ, ಇತ್ಯಾದಿಗಳು ಸಮಾನ ಧರ್ಮವಾಗಿರಬಹುದು; ಆಗ ಭಾಷಿಕ, ವೃತ್ತಿಪರ, ಧಾರ್ಮಿಕ, ಶೈಕ್ಷಣಿಕ ಜನಪದಗಳುಂಟಾಗುತ್ತವೆ. ಹೀಗೆ ಒಂದೇ ಪ್ರದೇಶದಲ್ಲಿ ಹಾಲಕ್ಕಿ, ನಾಡವ, ಹವ್ಯಕ; ರೈತ ಕಾರ್ಮಿಕ, ಕಾಲೇಜು, ಕ್ರೈಸ್ತ, ಮುಸ್ಲಿಂ ಮುಂತಾಗಿ ಅನೇಕ ಜನಪದಗಳು ಅಸ್ತಿತ್ವದಲ್ಲಿರಹುದು.

2. ಜಾನಪದದ ವಿಭಿನ್ನ ವ್ಯಾಖ್ಯೆಗಳಿಗೆ ನೋಡಿ : *Furk & Wagnalles Standard Dictionary of Folklore Mythology and Legend*, Eds. Maria Leach & Jerome Fried, New York. 1949, Vol. I, pp. 398-403 and *Journal & American Folklore*, Vol. 84, No 1, 1971.

ಜಾನಪದ ಮೂಲತಹ ಜನಪದರ ಖಾಸಗಿ ಕ್ರಿಯೆಯೊದುದರಿಂದ ಒಂದು ಜನಪದದ ಜಾನಪದ (ಉದಾ : ಗ್ರಾಮೀಣ) ಇನ್ನೊಂದು ಜನಪದಕ್ಕೆ (ನಗರ) ಒಪ್ಪಿತವಾಗಬೇಕಾಗಿಲ್ಲ; ಆನಂದವನ್ನು ಕೊಡಬೇಕಾಗಿಲ್ಲ. ಆದ್ದರಿಂದ ಅನ್ಯ ಜನಪದ-ದವರು (ಉದಾ : ನಗರ) ತಮ್ಮ ದೃಷ್ಟಿಕೋನವನ್ನಿಟ್ಟುಕೊಂಡು ಇನ್ನೊಂದು ಜನ-ಪದದ (ಉದಾ : ಗ್ರಾಮೀಣ) ಜಾನಪದ ಪ್ರಕಾರವನ್ನು ನವೀಕರಣಗೊಳಿಸುವುದು, ಪರಿಷ್ಕೃತಗೊಳಿಸುವುದು, ವಿಮರ್ಶೆ ಮಾಡುವುದು 'ಶಿಷ್ಟ' ಕಲಾದೃಷ್ಟಿಯಿಂದ ಉದಾತ್ತ-ಗೊಳಿಸುವುದು, ಜಾನಪದ ವೈಜ್ಞಾನಿಕ ದೃಷ್ಟಿಯಿಂದ, ತೀರಾ ಹಾಸ್ಯಾಸ್ಪದ ಹಾಗೂ ಖಂಡನೀಯ. ಗ್ರಾಮೀಣ ಜಾನಪದ, ನಗರ ಜನಪದರ ಅಭಿರುಚಿಗೆ ಸೇರುವುದಿಲ್ಲ-ವೆಂದು ಅದನ್ನು ಬದಲಾಯಿಸುವ **ದೃಷ್ಟಿ ಪ್ರಯತ್ನ** ವ್ಯಕ್ತಿ ಅಥವಾ ಮತ್ತು ಸಂಸ್ಥೆಗಳು ಮಾಡಿದ್ದಲ್ಲಿ, ಇವರಿಗೆ **ಸಮಷ್ಟಿ ಕಲಾಪ್ರಕ್ರಿಯೆಯ**— ಜಾನಪದದ— ಸ್ಪಷ್ಟ ಕಲ್ಪನೆಯೇ ಇಲ್ಲವೆಂಬುದನ್ನು ಸ್ಪಷ್ಟಗೊಳಿಸುತ್ತದೆ ಮಾತ್ರವಲ್ಲದೆ ಅವರು ಜನಪದರ ಖಾಸಗಿ ಜೀವನಾಭಿವ್ಯಕ್ತಿಯಲ್ಲಿ ಕೈಹಾಕಿದಂತೆ (Poking one's nose) ಆಗು-ತ್ತದೆ. ಜಾನಪದ, ಜನಪದರ ಭೌಗೋಲಿಕ, ಸಾಮಾಜಿಕ ಆರ್ಥಿಕ, ಮನೋಧಾರ್ಮಿಕೇತರ ಪರಿಸರಗಳನ್ನು ಹೊಂದಿಕೊಂಡು ಬದಲಾಗುತ್ತದೆಂಬುದು ನಿರ್ವಿವಾದ. ಈ ಪ್ರಕ್ರಿಯೆ ತಾನಾಗಿ, ಸಹಜವಾಗಿ, ಜಾನಪದೀಯವಾಗಿ ಅರ್ಥಾತ್ ಸಮಷ್ಟಿಕ್ರಿಯೆ-ಯಾಗಿ ನಡೆಯಬೇಕೇ ಹೊರತು ವ್ಯಷ್ಟಿರೂಪದ ಪ್ರಯತ್ನಗಳಿಂದಲ್ಲ; ಯಾಕೆಂದರೆ, ವ್ಯಷ್ಟಿಕ್ರಿಯೆ ಜಾನಪದದ ಲಕ್ಷಣವಲ್ಲ. ಕನ್ನಡ ಗ್ರಾಮೀಣ ಜಾನಪದವನ್ನು, ಇತರರು (ಉದಾ : ಪಾಶ್ಚಾತ್ಯರು) ಮೆಚ್ಚುವಂತೆ, ನವೀಕರಿಸಿದರೆ ಅದು ಕನ್ನಡ ಗ್ರಾಮೀಣ ಜಾನಪದವಾಗಿ ಉಳಿಯಲಾರದು. ನಿರ್ದಿಷ್ಟ ಜನಪದಕ್ಕೆ ಸೀಮಿತವಾಗಿ ಹುಟ್ಟಿ ಅದರ ಪರಂಪರೆಯಾಗಿ ಬೆಳೆಯುವುದೇ ಜಾನಪದದ ಇನ್ನೊಂದು ಪ್ರಮುಖ ಲಕ್ಷಣ. ವಾಚಿಕ ಕಲೆಯ ಹೆಗ್ಗುರಿ ಅದನ್ನು ಹುಟ್ಟಿಸಿದ ಜನಪದರ ಆನಂದವೇ ಹೊರತು ನೇರವಾಗಿ ಉಳಿದವರ ಆನಂದವಲ್ಲ ಅಥವಾ ಅನ್ಯಮೌಲ್ಯಗಳ ಪ್ರಚಾರಸಾಧನವಾಗಿ-ರುವುದೂ ಅಲ್ಲವೆಂಬುದನ್ನು ತೀವ್ರವಾಗಿ ಗಮನಿಸಬೇಕಾದುದು ಅತ್ಯಗತ್ಯ. ಇದೇ ಜನಪದ ಕಲಾಭಿವ್ಯಕ್ತಿ ಹಾಗೂ ಇತರ ಕಲಾಭಿವ್ಯಕ್ತಿಗಳಿಗೆ ಇರುವ ಮೂಲವ್ಯತ್ಯಾಸ.

ಜಾನಪದ ಸ್ವರೂಪಲಕ್ಷಣಗಳ ಮೂಲಭೂತ ಹಾಗೂ ಆಳ ಅಧ್ಯಯನ ಮಾಡದೆ ತಮಗೆ ಅನಿಸಿದಂತೆ 'ಸಂಶೋಧನಕಾರರು' ಬರೆಯುತ್ತಾ ಹೇಳುತ್ತಾ ಹೋದರೆ ಅವರಿಂದಾಗಿ ನೈಜ ಜಾನಪದ (authentic folklore) ಜಾನಪದ (folk-lore) ಆದೀತು.

ಜಾನಪದದಲ್ಲಿ ಮುಖ್ಯವಾಗಿ ವಿಷಯಿಕ (Material) ಮತ್ತು ಅಭಿವ್ಯಕ್ತಕ (Expressive) ಎಂದು ಎರಡು ತೆರ. ಜನಪದದ ವಸತಿ, ಊಟ, ಉಡಿಗೆ,

ತೊಡಿಗೆ, ಔಷಧೋಪಚಾರ ಇತ್ಯಾದಿಗಳು ವಿಷಯಿಕ ಜಾನಪದದ ಅಂಗಗಳಾದರೆ ಗಾದೆ, ಕಥೆ; ಒಗಟು, ಹಾಡು, ಪುರಾಣ; ಕುಣಿತ, ವೇಷ ಆಟ ಇತ್ಯಾದಿಗಳು ಅಭಿವ್ಯಕ್ತಕ ಜಾನಪದದ ಅಂಗಗಳಾಗಿವೆ. (ಅದೇ. 82)

ಅಭಿವ್ಯಕ್ತಕ ಜಾನಪದದಲ್ಲಿ ಪ್ರಮುಖವಾಗಿ ವಾಚಿಕ (Verbal) ಮತ್ತು ಅ-ವಾಚಿಕ (non-verbal) ಎಂದು ಎರಡು ಬಗೆ. ಗಾದೆ, ಕಥೆ, ಒಗಟು, ಹಾಡು, ಪುರಾಣ, ಇತ್ಯಾದಿಗಳು ವಾಚಿಕ ಜಾನಪದದ ಅಂಗಗಳಾದರೆ ಕುಣಿತ, ವೇಷ, ಆಟ ಮೊದಲಾದವುಗಳು ಅ-ವಾಚಿಕ ಜಾನಪದ ಅಂಗಗಳು. ಸಮಗ್ರ ಜಾನಪದದ ಸಾಮಾನ್ಯ ವೈಜ್ಞಾನಿಕ ಅಧ್ಯಯನವನ್ನು ಜಾನಪದ ವಿಜ್ಞಾನ (folk lorist) ವೆಂದು ಕರೆದರೆ ವಾಚಿಕ ಜಾನಪದದ ಆಳವಾದ ಹಾಗೂ ವಿಶೇಷವಾದ ಭಾಷಿಕ ಅಧ್ಯಯನವನ್ನು ಜನಪದ-ಭಾಷಾ ವಿಜ್ಞಾನ (folk linguistics) ಎಂದು ಹೆಸರಿಸಬಹುದು.[3] ವಾಚಿಕ ಜಾನಪದವನ್ನು ವಾಚಿಕ ಕಲೆ (Verbal art) ಎಂದು ಕರೆಯುವುದು ರೂಢಿಯಾಗಿರುವುದರಿಂದ ವಾಚಿಕ ಕಲೆಯ ಭಾಷಿಕ ಅಧ್ಯಯನವೇ ಜನಪದ ಭಾಷಾ ವಿಜ್ಞಾನವೆಂದು ಹೊಸತಾಗಿ ವ್ಯಾಖ್ಯಾಯಿಸಬಹುದು.

ಜನಪದ ಭಾಷಾವಿಜ್ಞಾನದಲ್ಲಿ ಕ್ಷೇತ್ರಕಾರ್ಯ (Field-Work) ಮತ್ತು ವಿಶ್ಲೇಷಣೆ (analysis) ಪ್ರಮುಖ ಅಂಗಗಳಾಗಿವೆ. ಪ್ರಸ್ತುತ ಅಧ್ಯಯನ ಕ್ಷೇತ್ರ ಕಾರ್ಯಕ್ಕೆ ಸೀಮಿತವಾಗಿದೆ.[4]

ಜನಪದ ಭಾಷಾವೈಜ್ಞಾನಿಕ ಕ್ಷೇತ್ರಕಾರ್ಯ :

ವಾಚಿಕ ಕಲೆಗೆ ಸಂಬಂಧಿಸಿದ ದಸ್ತ ಸಂಗ್ರಹವೇ ಜನಪದ ಭಾಷಾವೈಜ್ಞಾನಿಕ ಕ್ಷೇತ್ರಕಾರ್ಯ. ಈ ಕಾರ್ಯನಿರ್ವಹಣೆಯಲ್ಲಿ ಕ್ಷೇತ್ರಭಾಷಾವಿಜ್ಞಾನಿ (field-linguist) ನಿರೂಪಕ (informant) ಮತ್ತು ಕ್ಷೇತ್ರಕಾರ್ಯ ವಿಧಾನ ಪ್ರಮುಖವಾದ ಅಧ್ಯಯನ ವಸ್ತುಗಳು.

---

3. ಇಲ್ಲಿಯುವರೆಗೆ ಜನಪದ ಭಾಷಾವಿಜ್ಞಾನವನ್ನೇ ಹೆಚ್ಚಾಗಿ ಜಾನಪದ ವಿಜ್ಞಾನವೆಂದು ಕರೆದುದನ್ನು ಗಮನಿಸಬೇಕು. ಹೆಚ್ಚಾಗಿ ವಿಷಯಿಕ ಹಾಗೂ ಅವಾಚಿಕ ಜಾನಪದದತ್ತ ಹೆಚ್ಚಿನ ಗಮನ ಹರಿಯದಿರುವುದೇ ಇದಕ್ಕೆ ಕಾರಣವೆಂದು ನನ್ನ ಅನಿಸಿಕೆ.

4. ಜನಪದ ಭಾಷಾವೈಜ್ಞಾನಿಕ ವಿಶ್ಲೇಷಣೆಯಲ್ಲಿ ರಾಚನಿಕ (Structural) ಮತ್ತು ರೂಪಾಂತರ (Transformational) ಮಾದರಿಗಳು ಕಂಡುಬರುತ್ತವೆಯಾದರೂ ರಾಚನಿಕ ಮಾದರಿಗಳ ಬಳಕೆಯೇ ಈ ಮಾದರಿಗಳ ರೂಪರೇಖಾತ್ಮಕ ಪರಿಚಯ ಈಗಾಗಲೇ ಬೇರಡೆ ಮಾಡಲಾಗಿದೆ. (ಮಾಡ್ತ) 1981 (ಖ) : 1982 (ಖ)
ರಾಚನಿಕ ಮಾದರಿಗಳನ್ನು ಅಳವಡಿಸಿ ಕನ್ನಡ ಜನಪದ ಕಥೆಗಳಲ್ಲಿಯ ಆಂತರಿಕ ಶ್ರೇಣಿಯನ್ನೂ ತೋರಿಸುವ ಮಾದರಿಯನ್ನು (ಮಾಡ್ತ – 1976) ಅಂತೆಯೇ ಪಠ್ಯವಿಶ್ಲೇಷಣೆ (Text-analysis) ಯ ಮಾದರಿಯನ್ನೂ (ಮಾಡ್ತ–1981 (ಕ)) ಈ ಹಿಂದೆಯೇ ಪರಿಚಯಿಸಲಾಗಿದೆ.

ಕ್ಷೇತ್ರಭಾಷಾವಿಜ್ಞಾನಿ :

ಕ್ಷೇತ್ರಭಾಷಾವಿಜ್ಞಾನಿ : ಅನ್ವೇಷಕ (investigator) ದತ್ತಾನ್ವೇಷಣಕ್ಕಾಗಿ ನಿರ್ದಿಷ್ಟ ಕ್ಷೇತ್ರ (field) ಕ್ಕೆ ಹೋಗಬಹುದು. ಅಥವಾ ಆ ಕ್ಷೇತ್ರವನ್ನೇ ತನ್ನಲ್ಲಿಗೆ ಬರಮಾಡಿಕೊಳ್ಳಬಹುದು. ಎಷ್ಟೋ ಸಲ ಅನುಕೂಲತೆಗೋಸ್ಕರ ನಿರೂಪಕರನ್ನು ತಮ್ಮ ಕೊಠಡಿಗೆಯೇ ಕರೆಯಿಸಿ ಕ್ಷೇತ್ರಭಾಷಾವಿಜ್ಞಾನಿಗಳು ಕ್ಷೇತ್ರಕಾರ್ಯವನ್ನು ನಡೆಯಿಸುವುದುಂಟು.

ಜನಪದ ಭಾಷಾವೈಜ್ಞಾನಿಕ ಕ್ಷೇತ್ರಕಾರ್ಯದಲ್ಲಿ ಕ್ಷೇತ್ರಭಾಷಾವಿಜ್ಞಾನಿಗಳು ಅತ್ಯಗತ್ಯವಾದ ವ್ಯಕ್ತಿಗಳಾದರೂ ಅವರು ಸುಲಭವಾಗಿ ಸಿಗುವಂತಿಲ್ಲ. ಅನ್ವೇಷಕರಾಗಲಾರರು. ಪ್ರಸ್ತುತದಲ್ಲಿ ಸಂಗ್ರಹಗಾರ (Collector) ನಲ್ಲಿರಬೇಕಾದ ಕೆಲವು ವಿಶಿಷ್ಟ ಗುಣಲಕ್ಷಣಗಳನ್ನು ಸ್ವಲ್ಪದರಲ್ಲಿ ನಿಮ್ಮ ಗಮನಕ್ಕೆ ತರಬಯಸುತ್ತೇನೆ.

—ಜನಪದ ಸಂಸ್ಕೃತಿಯ ಒಳವ್ಯಾಯನ್ನು ಹೊಕ್ಕು ಜನಪದ ಜೀವನದ ಸೂಕ್ಷ್ಮ ಸಂವೇದನೆಗಳನ್ನು (Five Sensibilities) ತಿಳಿದುಕೊಳ್ಳುವ. ಜನಪದರ ಕ್ರಿಯೆಪ್ರತಿಕ್ರಿಯೆಗಳನ್ನು ಅರ್ಥೈಸುವ ಸಾಮರ್ಥ್ಯ ಯಶಸ್ವೀ ಅನ್ವೇಷಕನಲ್ಲಿರಬೇಕು;

—ಜನಪದರ ಮನಸ್ಸನ್ನು ತಾನು ತಿಳಿದುಕೊಳ್ಳುವಂತೆ ತನ್ನ ಮನವನ್ನು ಅವರಿಗೆ ಬಿಚ್ಚಿ ತಿಳಿಸುವ ಶಕ್ತಿ (Open-mindedness) ಆತನಲ್ಲಿರಬೇಕು;

—ಜನಪದರ ಆಚಾರ ವಿಚಾರಗಳನ್ನು ಚೆನ್ನಾಗಿ ತಿಳಿದುಕೊಂಡು ಅವರ ಸಂಸ್ಕೃತಿಯಲ್ಲಿಯ ಒಪ್ಪಿತ ಹಾಗೂ ನಿಷಿದ್ಧ ಆಚಾರೋಪಚಾರಗಳಾವುವು ಎಂಬುದನ್ನು ಸಾಕಷ್ಟು ತಿಳಿದುಕೊಳ್ಳಬೇಕಲ್ಲದೆ ವಿಭಿನ್ನಲಿಂಗಿಗಳೊಡನೆ, ಸಮವಯಸ್ಕರೊಡನೆ, ಗುರುಹಿರಿಯರೊಡನೆ, ಪ್ರತಿಷ್ಠಿತ ವ್ಯಕ್ತಿ ಹಾಗೂ ಧರ್ಮಾಧಿಕಾರಿಗಳೊಡನೆ ಯಾವ ರೀತಿಯಲ್ಲಿ ವರ್ತಿಸಬೇಕೆಂಬುದನ್ನು ಖಚಿತವಾಗಿ ತಿಳಿದುಕೊಳ್ಳಬೇಕು. (Paul-430-51)

—ಅನ್ವೇಷಕನು ತಾನು ಆರಿಸಿಕೊಂಡ ಜನಪದ ಸಮಾಜ folk-community) ದಲ್ಲಿ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ ಸಕ್ರಿಯಾತ್ಮಕ ಪಾಲುದಾರ (active participant) ನಾಗಬೇಕು (Paul, 441). ಸ್ಥಳೀಯ 'ರಾಜಕೀಯ' ದಿಂದ ಆದಷ್ಟು ದೂರವಿದ್ದು ಜನರ ಸಮಸ್ಯೆಗಳನ್ನು ನಿವಾರಿಸುವಲ್ಲಿ ಸಹಾಯಕನಾಗಿ ಬಾಳಬೇಕು.

—ಆ ಸಮಾಜದ ಸಂಘ-ಸಂಸ್ಥೆಗಳಲ್ಲಿ, ಸಾಮಾಜಿಕ ಧಾರ್ಮಿಕ ಸಭೆಗಳಲ್ಲಿ ಪಾತ್ರವಹಿಸಿ, ತಾನು ಪ್ರತ್ಯೇಕ (alien) ನಾಗಿ ಉಳಿದುಕೊಳ್ಳದೆ ಆ ಗುಂಪಿನ ಸದಸ್ಯನಾಗಿರುವಂತೆ ಬಾಳಬೇಕು;

—ಸಮವಯಸ್ಕರೊಡನೆ, ಸಮಲಿಂಗಿಗಳೊಡನೆ ಆದಷ್ಟು ಬೆರೆತುಕೊಂಡು ಒಂದಾಗಿ ಜೀವಿಸಬೇಕು.

—ಜನಪದರ ನಡಾವಳಿಕೆಯನ್ನು ಗಮನಿಸಿ ತನಗೆ ಅನುಕೂಲವಾದ ಸಾಮೂಹಿಕ ಕೆಲಸಗಳಲ್ಲಿ ಸಸಿ ನೆಡುವುದು, ಕಳೆ ಕೀಳುವುದು, ನೀರು ಸೇದುವುದು ಇತ್ಯಾದಿ ಸಹಭಾಗಿಯಾಗಬೇಕು;

—ಆರೋಗ್ಯಕ್ಕೆ ಸಂಬಂಧಿಸಿ ಸಾಮಾನ್ಯ ಔಷಧೋಪಚಾರಗಳನ್ನು ಮಾಡುವುದು, ಕಾಗದಪತ್ರಗಳನ್ನು ಓದಿ ಹೇಳುವುದು, ಅಥವಾ: ಮತ್ತು ಕೇಳಿ ಬರೆಯುವುದು, ಸರಕಾರಿ ಅಥವಾ ಅರೆಸರಕಾರಿ ಸಂಸ್ಥೆಗಳಿಂದ ದೊರಕಬಹುದಾದ ಸೌಲಭ್ಯಗಳನ್ನು ವಿಶ್ರಾಂತಿ ವೇತನ, ಹೊಲಮನೆಗಳ ಹಕ್ಕು, ನಿವೇಶನಗಳ ಒದಗಿಸುವಿಕೆ, ವಿದ್ಯಾರ್ಥಿವೇತನಗಳಿಕೆ ಇತ್ಯಾದಿ – ಒದಗಿಸಿ ಕೊಡುವುದು ಇವೇ ಮೊದಲಾದ ರೀತಿಗಳಲ್ಲಿ ಅನ್ವೇಷಕನಾದವನು ಸಮಾಜದ ಒಳಿತಿಗೆ ದುಡಿದರೆ ಆತ ಆ ಜನರ ಸೌಹಾರ್ದತೆ (rapport) ಯನ್ನು ಬೆಳೆಯಿಸಬಲ್ಲ, ಉಳಿಸಬಲ್ಲ. ಇದು ಕ್ಷೇತ್ರಕಾರ್ಯದಲ್ಲಿ ಪ್ರಮುಖವಾದುದು.

—ಅನ್ಯ ಸಮಾಜದಲ್ಲಿ ಹೊಂದಿಕೊಂಡು ಒಂದಾಗಿ ಬಾಳುವುದು ಸುಲಭಸಾಧ್ಯವಲ್ಲ. ಇಂತಹ ಬಾಳ್ವೆಗೆ ಮಾನಸಿಕ ಹಾಗೂ ಶಾರೀರಿಕ ಆರೋಗ್ಯ ಅತ್ಯಾವಶ್ಯಕ. ಕೆಲವೊಮ್ಮೆ ಆತ : ಆಕೆ ಎಷ್ಟೋ ಅಡ್ಡಿ ಆತಂಕಗಳನ್ನು ಎದುರಿಸಬೇಕಾಗುತ್ತದೆ. ಕೆಲವೊಂದು ಸಮಾಜದವರೆ ಅತ್ಯಂತ ಆದರದಿಂದ ಹೊರಗಿನವರನ್ನು ಬರಮಾಡಿಕೊಳ್ಳುವ ಮನೋಪ್ರವೃತ್ತಿಯವರಾದರೆ (Goldstein, 33, f n 10) ಉಳಿದವರು ಸಂಶಯ ಭಾವದಿಂದ ಅವರನ್ನು ಕಂಡು ಆದಷ್ಟು ದೂರವಿಡುವ ಮನೋಧರ್ಮದವರಾಗಿರುತ್ತಾರೆಂಬುದು ಕ್ಷೇತ್ರ ಭಾಷಾವಿಜ್ಞಾನಿಗಳ ಅನುಭವ (Herskovits, 1950: 85) ಊಟ ನಿದ್ರೆಗಳ ಅವ್ಯವಸ್ಥೆ ಜನರ ವಿಶಿಷ್ಟ ಆಚಾರ ವಿಚಾರ, ನೈರ್ಮಲ್ಯವಿಲ್ಲದಿರುವಿಕೆ, ಅಸಹ್ಯ ರೀತಿನೀತಿಗಳು. ಆತನನ್ನು ಭಾವೋದ್ರೇಕ ಗೊಳಿಸಬಹುದು. ಇವುಗಳನ್ನೆಲ್ಲ ಸಹಿಸಿ, ಅವುಗಳಿಗೆ ಒಗ್ಗಿಕೊಂಡು ತಾನೂ ಆ ಸಂಸ್ಕೃತಿಯನ್ನು ಮೈಗೂಡಿಸಿದರೆ ಮಾತ್ರ ಆ ಸಮಾಜದ ಸದಸ್ಯನಾಗಿ ಆತ ಇರಬಲ್ಲ; ಇದರಿಂದಾಗಿ ಯಶಸ್ವಿ ಅನ್ವೇಷಕನಾಗಬಲ್ಲ;

—ಕ್ಷೇತ್ರಕಾರ್ಯದಿಂದ ಉಂಟಾಗುವ ಆಯಾಸ ಅಷ್ಟಿಷ್ಟಲ್ಲವಾದುದರಿಂದ ಆತ ಕೆಟ್ಟ ಹವ್ಯಾಸಗಳಿಂದ ಆದಷ್ಟು ದೂರವಿರಬೇಕಲ್ಲದೆ ಯೋಗ್ಯವಾದ ನೀರು ಆಹಾರಗಳ ಸೇವನೆಗಳೊಂದಿಗೆ ಸರಳ ವ್ಯಾಯಾಮ ಹಾಗೂ ಯೋಗ್ಯ ಬಿಡುವುಗಳ ಮೂಲಕ ತನ್ನ ಆರೋಗ್ಯಾಯುಷ್ಯಗಳನ್ನು ಕಾಪಾಡಿಕೊಂಡು ಬೆಳೆಯಿಸಿಕೊಳ್ಳಬೇಕು. (Paddington, 539).

—ಆತ ತನ್ನ ನಿರೂಪಕನೊಂದಿಗೆ ಪ್ರೀತಿಯಿಂದಿರಬೇಕು.(Thompson,-167) ಇವರಿಬ್ಬರ ನಡುವೆ ಸೌಹಾರ್ದತೆಯಿಲ್ಲದಿದ್ದರೆ ದತ್ತಸಂಗ್ರಹಕಾರ್ಯ ಸಾಧ್ಯವಾಗಲಾರದು. (Paul, 445);

—ಭಿನ್ನಲಿಂಗಿ ನಿರೂಪಕರಿಗಿಂತ ಸ್ವಲಿಂಗಿ ನಿರೂಪಕರನ್ನು ಆರಿಸಿಕೊಳ್ಳುವುದೇ ಬಹುರೀತಿಯಿಂದ ಒಳ್ಳೆಯದು. ಅನ್ವೇಷಕರ ಆಸಕ್ತಿ ದತ್ತಸಂಗ್ರಹಣೆಯತ್ತ ಕೇಂದ್ರೀಕೃತಗೊಳ್ಳುವುದು ಇದರಿಂದಾಗಿ ಹೆಚ್ಚು ಸಾಧ್ಯ;

—ನಿರೂಪಕರನ್ನು ಸರಿಯಾಗಿ ಬಳಸಿಕೊಳ್ಳಬೇಕಾದರೆ ಜನಪದ ಭಾಷೆಯಲ್ಲಿ ಚೆನ್ನಾಗಿ ವ್ಯವಹರಿಸಲು ಕ್ಷೇತ್ರಜ್ಞ ಕಲಿತುಕೊಳ್ಳಬೇಕು (Goldstein, 31);

—ಮೇಲೆ ಹೇಳಿದ ವ್ಯಕ್ತಿಗಳ ಗುಣಲಕ್ಷಣಗಳ ಜೊತೆ ತನ್ನ ಕಾರ್ಯನಿರ್ವಹಣೆಗೆ ಅಗತ್ಯವಾದ ವೈಜ್ಞಾನಿಕ ತರಬೇತಿಯೂ ಅನ್ವೇಷಕನಿಗೆ ಬೇಕಾಗುತ್ತದೆ. ಧ್ವನಿವಿಜ್ಞಾನದ ಜ್ಞಾನ, ಧ್ವನಿಲಿಪಿಯನ್ನು ಬಳಸುವ ಕೌಶಲ್ಯ, ವಿಶ್ಲೇಷಣೆಯ ಪದ್ಧತಿಗಳನ್ನು ಬಳಸುವಲ್ಲಿ ಪರಿಣತಿ ಇತ್ಯಾದಿ ಆತನಿಗೆ ಅವಶ್ಯಕ ವಿಭಿನ್ನ ವಾಚಿಕಕಲೆಗಳ ಲಕ್ಷಣಗಳು (O' Suilleabhain) ಅವುಗಳ ವಿಶ್ಲೇಷಣೆಯಲ್ಲಿ ಬಳಸಿದ ಮಾದರಿಗಳ ಪರಿಚಯ (ಮಾದ್ರ, 1982 (ಖ.)) ಸುಪ್ರಸಿದ್ಧ ಜನಪದ ಭಾಷಾವಿಜ್ಞಾನಿಗಳ ಒಡನಾಟ್ಟ ಪರಿಚಯ (Karpalis, 8), ಇತ್ಯಾದಿಗಳು ಆತನಿಗೆ ಹೆಚ್ಚಿನ ಪ್ರಮಾಣದಲ್ಲಿದ್ದಷ್ಟೂ ಒಳ್ಳೆಯದು.

ನಿರೂಪಕ :

ಸಂಗ್ರಹಕಾರನ ಕಾರ್ಯದಲ್ಲಿ ನಿರೂಪಕನ ಪಾತ್ರ ಅತ್ಯಂತ ಪ್ರಮುಖವಾದುದು. ಆತನಿಲ್ಲದೆ ದತ್ತಸಂಗ್ರಹ ಅಸಾಧ್ಯ ಜನಪದ ಭಾಷಾವೈಜ್ಞಾನಿಕ ಮಾದರಿಗಳನ್ನು ಕೊಡುವುದೇ ನಿರೂಪಕನ ಪ್ರಪ್ರಥಮ ಕಾರ್ಯ. ಸಂಗ್ರಹಿತ ದತ್ತದ ಪರಿಷ್ಕರಣಕ್ಕೂ ಆತನ ಸಹಾಯ ಅನಿವಾರ್ಯ. ಮಹತ್ವವುಳ್ಳ ಅಂಶಗಳೆಲ್ಲವೂ ಮೊದಲಬಾರಿಯ ದತ್ತಾಭಿಲೇಖ (data recording) ದಲ್ಲಿ ಸಂಪೂರ್ಣವಾಗಿ ದೊರೆಯುವುದು ದುಸ್ಸಾಧ್ಯ. ಅನ್ವೇಷಕನ ಸ್ವಭಾಷೆಗಿಂತ ಭಿನ್ನ ಸ್ವರೂಪವುಳ್ಳ ಭಾಷೆಯನ್ನು ಕುರಿತು ಕ್ಷೇತ್ರಕಾರ್ಯ ನಡೆದರೆ ಹಲವಾರು ತಪ್ಪು ಮಾಹಿತಿಗಳು ದತ್ತ ಸಂಗ್ರಹಗದಲ್ಲಿ ಸೇರಿಕೊಳ್ಳುವುದು ಸ್ವಾಭಾವಿಕ. ಉದಾಹರಣಾರ್ಥವಾಗಿ ಅನೇಕ ಉಚ್ಚರಣಾತ್ಮಕ ವ್ಯತ್ಯಾಸಗಳು (phonetic differences) ಸರಿಯಾಗಿ ಕೇಳದೆ ಹೋಗಬಹುದು; ಅಥವಾ ವ್ಯತ್ಯಾಸವಿಲ್ಲದ ಎಡೆಗಳಲ್ಲಿ ವ್ಯತ್ಯಾಸಗಳನ್ನುಂಟು ಮಾಡಬಹುದು. (the problems of under-and over-differentiation) ಇಂತಹ ಸಂದಿಗ್ಧ ಪರಿಸರಗಳಲ್ಲಿ ನಿರೂಪಕನ ಸಹಾಯ ಅತ್ಯಗತ್ಯ. ಭಾಷೆಯನ್ನಾಡುವವರೆಲ್ಲರೂ ನಿರೂಪಕ-

ರಾಗಲಾರರು. ಒಂದು ಭಾಷಾಕ್ಷೇತ್ರದಿಂದ ನಿರೂಪಕರನ್ನು ಆರಿಸಿಕೊಳ್ಳಬೇಕಾಗುತ್ತದೆ. ಹೀಗೆ ಆರಿಸಿಕೊಳ್ಳುವಾಗ ಅಧ್ಯಯನದ ಸ್ವರೂಪ, ಸಂದರ್ಭ, ಪರಿಸರ ಇತ್ಯಾದಿಗಳ ಅಂತೆಯೇ ನಿರೂಪಕನ ಆರೋಗ್ಯ, ಸಾಮರ್ಥ್ಯ, ಭಾಷಾಪ್ರಭುತ್ವ, ಸಾಂಸ್ಕೃತಿಕ ಅನುಭವವೇ ಮೊದಲಾದ ವಿಷಯಗಳತ್ತ ಸೂಕ್ತ ಗಮನಕೊಡಬೇಕಾಗುತ್ತದೆ. ಯಾವ ನಿರೂಪಕ ಹೆಚ್ಚು ಸಮರ್ಥ ಹಾಗೂ ಪ್ರಾಮಾಣಿಕನೆಂಬುದನ್ನು ಗುರುತಿಸುವಲ್ಲಿ ಜನಪದರ ಸಲಹೆಯನ್ನು ಪಡೆದುಕೊಳ್ಳುವುದು ಉತ್ತಮ. ನಿರೂಪಕನಿಗೆ ಸಾಕಷ್ಟು ಕಾಲಾವಕಾಶವೂ ಇರಬೇಕು.

ಉತ್ತಮ : ಸೂಕ್ತ ನಿರೂಪಕರು ಸಿಗುವುದು ದುರ್ಲಭ. ಆದ್ದರಿಂದ ನಿರೂಪಕರನ್ನು ಕುರಿತು ಅನ್ವೇಷಕನು ಆದಷ್ಟು ತಾಳ್ಮೆಯಿಂದಿರಬೇಕು. ಅವರ ಮೇಲೆ ರೇಗಿ ಬೀಳುವುದು, ಅವರನ್ನು ಕಡೆಗಣಿಸುವುದು ಅಥವಾ ಅವರ ಶೋಷಣೆ ಮಾಡುವುದಾಗಲಿ ಎಂದೆದಿಂಗೂ ಸಲ್ಲದು. ಅವರಿಗೆ ತಕ್ಕುದಾದ ಧನಪರಿಹಾರ, ಪ್ರಯಾಣ, ಆಹಾರ, ಪಾನೀಯ ಹಾಗೂ ಇತರ ಸವಲತ್ತುಗಳನ್ನು ಸಂದರ್ಭಕ್ಕನುಸಾರವಾಗಿ ಸಾಕಷ್ಟು ಪ್ರಯಾಣದಲ್ಲಿ ದೊರಕಿಸಿಕೊಡಬೇಕು.

ನಿರೂಪಕನ ವೇತನ ನಿರ್ಣಯಿಸುವಾಗ, ಮನಸ್ಸಿಗೆ ಬಂದಂತೆ ವರ್ತಿಸಬಾರದು. ಇದರಿಂದ ಅನಾಹುತಗಳು ನಡೆಯುವುದೇ ಹೆಚ್ಚು (Goldstein 169 f. n. 13) ಒಮ್ಮಿಂದೊಮ್ಮೆಲೇ ಅತಿ ಹಿರಿಯ ವೇತನ ಕೊಟ್ಟರೆ ಉತ್ತಮ ನಿರೂಪಕರ ವೇತನವನ್ನು ಹೆಚ್ಚಿಸುವುದಾಗಲಿ, ನಿರೂಪಯುಕ್ತ ನಿರೂಪಕರ ವೇತನವನ್ನು ಇಳಿಸುವುದಾಗಲಿ ಅಥವಾ ಅವರನ್ನು ಕೆಲಸದಿಂದ ಕಿತ್ತುಹಾಕುವುದಾಗಲಿ ಬಹಳ ತೊಂದರೆಯ ಕೆಲಸವಾಗುತ್ತದೆ. ಆದ್ದರಿಂದ ಆರಂಭದಲ್ಲಿ ಸಾಧಾರಣ ವೇತನವನ್ನಿತ್ತು ಅರ್ಹತೆ ಹಾಗೂ ಉಪಯುಕ್ತತೆಯನ್ನವಲಂಬಿಸಿ ಅದನ್ನು ಏರಿಸುತ್ತಾ ಹೋಗುವುದು ಸೂಕ್ತ (Notes and Queries, 6th ed. 44; Piddington, 556, Karpales etal 9) ಪ್ರಾರಂಭದಲ್ಲಿ ಮಧ್ಯಮ ವರ್ಗದ ವೃತ್ತಿಕಾರರಿಗೆ (ಬೆರಳಚ್ಚುಕಾರರು, ಕಿರಿಯ ಶಾಲಾಪ್ರಾಧ್ಯಾಪಕರು, ಪ್ರತಿಕಾರರು) ಕೊಡುವ ವೇತನವನ್ನು ಕೊಡುವುದು ಲೇಸು. ಅದೇನೇ ಇದ್ದರೂ ಮನೆಕೆಲಸಕಾರರಿಗಿಂತ ಕಡಿಮೆ ವೇತನವನ್ನು ಅವರಿಗೆ ಕೊಡಬಾರದು.

ವೇತನವನ್ನು ಸ್ವೀಕರಿಸಲು ಒಪ್ಪದಿದ್ದಲ್ಲಿ (Karpales etal 9) ನಿರೂಪಕನಿಗೆ ಸೂಕ್ತ ಬಹುಮಾನಗಳನ್ನು (Thompson 13, 18) ಕಾಲಕಾಲಕ್ಕೆ ಕೊಟ್ಟು ಅವರ ಆದರ, ಪ್ರೇಮಗಳನ್ನು ದೀರ್ಘಕಾಲದವರೆಗೆ ಉಳಿಸಿಕೊಳ್ಳಬೇಕು. (Goldstein 172, f. n. 16 & 17) ಹೀಗೆ ಮಾಡದಿದ್ದಲ್ಲಿ ಅವರ ಉತ್ಸಾಹ ಕಳೆಗುಂದಿ ಕಾಲಕ್ರಮೇಣ ಅವರ ಸಹಕಾರ ಸಿಗದೆ ಹೋಗಬಹುದು.

ನಿರೂಪಕರು ಅನುಭವಸ್ಥರಾಗಿರಬೇಕು. ಆದ್ದರಿಂದ ಎಳೆಯ ಮಕ್ಕಳನ್ನಾಗಲಿ, ಬೇಜವಾಬ್ದಾರಿತನದ ಯುವಕರು ಪ್ರಾಯದಲ್ಲಿ ಅತಿ ಚಿಕ್ಕವರಾದರೆ ಅವರ ಬುದ್ಧಿ ಪರಿಪಕ್ವವಾಗಿರುವುದರಿಂದ ಏಷ್ಟೋ ರೀತಿಯ ಮಾಹಿತಿ ಸಂಗ್ರಹಗಾರನಿಗೆ ಅವರಿಂದ ದೊರಕಿಸಿಕೊಳ್ಳುವುದು ಅಸಾಧ್ಯವಾದೀತು; ಅಷ್ಟೇ ಅಲ್ಲದೆ ಅವರ ಆಸಕ್ತಿ ಅತಿ ತೀವ್ರ-ದಲ್ಲಿಯೇ ಕುಂದಿಹೋಗುತ್ತದೆ. ನಿರೂಪಕರು ಬಹಳ ಇಳಿವಯಸ್ಸಿನವರಾದರೆ ಅವರ ಶ್ರವಣ, ಗ್ರಹಣ ಶಕ್ತಿಗಳು ಕಡಿಮೆಯಾಗಿ ಕೂತಲ್ಲಿಯೇ ನಿದ್ರೆಹೋಗುವ ಪ್ರಸಂಗಗಳೇ ಜಾಸ್ತಿಯಾಗಬಹುದು; ಅವರ ಉಚ್ಚಾರ ತಿಳಿದುಕೊಳ್ಳುವುದು ಕಠಿಣವಾಗಿರಬಹುದು ಅಥವಾ ಅವರು ಬೇಗ ರೇಗಿಕೊಂಡು ಪ್ರಮಾದಗಳುಂಟಾಗಬಹುದು.

ನಿರೂಪಕನು ಸಲಿಲವಾಗಿ ಮಾತಾಡಬಲ್ಲವನಾಗಬೇಕು. ಹಲವಾರು ವಿಷಯ-ಗಳನ್ನು ಕುರಿತು ಹಾಗೆಯೇ ಜನಪದ ಜೀವನವನ್ನು ಕುರಿತು ಸಾಕಷ್ಟು ತಿಳಿದವನಾಗಿರ-ಬೇಕು. ಆತ ಬುದ್ಧಿವಂತನಾಗಿರಬೇಕು. ಮಂಕು ನಿರೂಪಕನಿಂದ ದತ್ತಸಂಗ್ರಹ ಕಾರ್ಯಕ್ಕೆ ಹೇಳಲಾರದ ಹಾನಿಯಾದೀತು. ನಿರೂಪಕನ ಬುದ್ಧಿಯ ಮಟ್ಟವನ್ನು ತಿಳಿದುಕೊಳ್ಳಲು ಆತನಿಗೆ ಹೂ, ಗಿಡಮರಬಳ್ಳಿ, ಪ್ರಾಣಿಪಕ್ಷಿ, ವಸತಿ ಊಟ, ಉಡಿಗೆ ತೊಡಿಗೆ, ಅಂಗರಂಗಗಳು ದಿನನಿತ್ಯ ಬಳಕೆಯ ವಸ್ತುಗಳು, ಪಾತ್ರೆಗಳು, ಸಾಮಾನುಗಳು, ಸಾಂಬಾರುಜೀನಸು, ಹಣ್ಣುಹಂಪಲು, ಕಾಯಿಪಲ್ಯಗಳು, ಅಡುಗೆ ವೈವಿಧ್ಯ ಇತ್ಯಾದಿಗಳ ಹೆಸರಗಳ ಪಟ್ಟಿಗಳನ್ನು ಮಾಡಲು ಹೇಳಬೇಕು. ಅಂತೆಯೇ, ಜನಪದ ವೈವಿಧ್ಯಗಳ ಪರಿಚಯ ಆತನಿಗೆ ಗೊತ್ತಿದೆಯೇ ಎಂಬುದನ್ನು ನಿಷ್ಕರ್ಷಿಸಲು ಆತನನ್ನು ಪರೀಕ್ಷಿಸಬೇಕು. ಇವುಗಳೆಲ್ಲವನ್ನು ಗಮನಿಸಿ ನಿರೂಪಕನ ಅರ್ಹತೆಯನ್ನು ಅಳೆಯ-ಬಹುದು. ಆತ ಸದಾ ಚುರುಕುಸ್ವಭಾವದನಾಗಿದ್ದು ಉತ್ಸಾಹಪೂರ್ಣನಾಗಿರಬೇಕು. ಸೋಮಾರಿತನ ಆತನಲ್ಲಿರಬಾರದು. ಕೆಲಸದ ವೇಳೆ, ಪ್ರಮಾಣ ಮುಂತಾದವುಗಳಲ್ಲಿ ಆತ ಬಹಳ ಪ್ರಾಮಾಣಿಕನಾಗಿರಬೇಕು.

ಎಲ್ಲ ಅರ್ಹತೆಗಳಿಗಿಂತಲೂ ಹೆಚ್ಚಾಗಿ ಕೆಲವೊಂದು ಭಾಷಿಕ್ ಅರ್ಹತೆಗಳು ನಿರೂಪಕನಲ್ಲಿರಬೇಕು. ಪ್ರಪ್ರಥಮತಹ ಜನಪದ ಭಾಷೆ ಆತನಿಗೆ ಮಾತೃಭಾಷೆ-ಯಾಗಿರಬೇಕು. ಆತನ ಉಚ್ಚಾರ ಸ್ಪಷ್ಟವಾಗಿರಬೇಕು, ಕಂಠ ಶುಭ್ರವಾಗಿರಬೇಕಲ್ಲದೆ, ಆತ ಮಾತುಗಾರ (Conversationalist) ನಾಗಿರಬೇಕು. ಹಾಗೂ ವಿಶ್ಲೇಷಣ ಶಕ್ತಿಯನ್ನು ತಕ್ಕ ಮಟ್ಟಿಗೆ ಪಡೆದವನಾಗಿರಬೇಕು. ಆಗ ಆತ ಅನ್ವೇಷಕನಿಗೆ ಯೋಗ್ಯ ಸಲಹೆಗಾರನೂ ಆಗಬಲ್ಲ.

ನಿರೂಪಕರ ಅರ್ಹತೆಯಷ್ಟೇ ಅವರ ಸಂಖ್ಯಾನಿರ್ಣಯವೂ ಅತ್ಯಗತ್ಯ. ಆಳವಾದ ಹಾಗೂ ಸವಿಸ್ತಾರವಾದ ಅಧ್ಯಯನಗಳಿಗೆ ಹಲವಾರು ನಿರೂಪಕರನ್ನು ನೇಮಿಸಿ-ಕೊಳ್ಳುವುದು ಉತ್ತಮ. ರೂಪರೇಖಾತ್ಮಕ ಹಾಗೂ ರಚನಾತ್ಮಕ ಅಧ್ಯಯನಕ್ಕೆ

ಓರ್ವ ಅರ್ಹ ನಿರೂಪಕನಿದ್ದರೆ ಸಾಕಾಗಬಹುದು. ಆದರೆ ಇವನ್ನೆಲ್ಲ ಹೆಚ್ಚು ಕಡಿಮೆ ಅಧ್ಯಯನದ ರೀತಿ ಹಾಗೂ ಸಂದರ್ಭಕ್ಕನುಗುಣವಾಗಿ ಬದಲಾಯಿಸಿಕೊಳ್ಳಬೇಕಾಗುತ್ತದೆ.

ದತ್ತಸಂಗ್ರಹ ವಿಧಾನ :

ದತ್ತಸಂಗ್ರಹ ನಡೆಯಬೇಕಾದದು ಸಹಜವಾಗಿ ಜನಪದ ಕ್ಷೇತ್ರ (folk-area) ದಲ್ಲಿಯೇ. ಕೆಲವೊಮ್ಮೆ ಜನಪದ ಕ್ಷೇತ್ರದಲ್ಲಿರದ ನಿರೂಪಕರನ್ನು ಅನ್ವೇಷಕರು ಆರಿಸುವುದುಂಟು. ಅನಿವಾರ್ಯ ಪ್ರಸಂಗಗಳಲ್ಲಿ ಅದನ್ನು ಮನ್ನಿಸಬಹುದಾದರೂ ಆದಷ್ಟು ಹೆಚ್ಚಾಗಿ ಜನಪದ ಕ್ಷೇತ್ರದಲ್ಲಿ ಇರುವವರನ್ನೇ ಆರಿಸಬೇಕಾದುದು ವೈಜ್ಞಾನಿಕ ಧರ್ಮ.

ಜನಪದ ಕ್ಷೇತ್ರದಿಂದಲೇ ನಿರೂಪಕರನ್ನು ಆಯ್ಕೆಮಾಡುವುದರಿಂದ ಸಾಂಸ್ಕೃತಿಕವಾಗಿ ಅರ್ಥಪೂರ್ಣವಾಗಿರುವಂತಹ ಹಾಗೂ ಭಾಷಾವೈಜ್ಞಾನಿಕವಾಗಿ ಸಮರ್ಪಕವಾದ ದತ್ತಸಂಗ್ರಹಣೆ (gathering) ಸಾಧ್ಯವಾಗುತ್ತದೆ. ಜನಪದ ಕ್ಷೇತ್ರವನ್ನು ಅಗಲಿ ದೂರಹೋದಂತೆ ಭಾಷಾವೈಜ್ಞಾನಿಕಾವಲೋಕನ ಕಷ್ಟವಾಗುತ್ತದೆಯಲ್ಲದೆ ಎಷ್ಟೋ ಸೂಕ್ಷ್ಮ ವಿಚಾರಗಳು ತಪ್ಪಿಹೋಗುವ ಸಾಧ್ಯತೆಯು ಹೆಚ್ಚುತ್ತದೆ. ಜನಪದ ಭಾಷಾವೈಜ್ಞಾನಿಕ ದತ್ತಸಂಗ್ರಹಣೆಯಲ್ಲಿ ಕೇವಲ ಶಾಬ್ದಿಕ ರೂಪ ಮತ್ತು ಅರ್ಥ (form & meaning) ಗಳಿಂದೊಡಗೂಡಿದ ಪಾಠ (text) ಮತ್ತು ಸಹಪಾಠ (co-text) ಗಳು ಮಾತ್ರ ಮುಖ್ಯವಲ್ಲ. ಅವುಗಳ ಸಂದರ್ಭ (con-text: ಮಾಡ್ತ 1981 (ಕ) : 196–7) ಅರ್ಥಾತ ಸಾಮಾಜಿಕ, ಮಾನಸಿಕ ಹಿನ್ನೆಲೆಗಳು, ಭೌಗೋಳಿಕ ಪರಿಸರ, ಚಾರಿತ್ರಿಕ ನೆಲೆಗಳು, ಧಾರ್ಮಿಕ ನಂಬಿಕೆ ಆಚಾರ ವಿಚಾರಗಳು ಅಗತ್ಯವಾಗಿ ಬೇಕಾಗುತ್ತವೆ. ಅವುಗಳನ್ನು ಜನಪದ ಕ್ಷೇತ್ರದಿಂದಲೇ ನೇರವಾಗಿ ದೊರಕಿಸಿಕೊಳ್ಳಬೇಕಾಗುತ್ತದೆ.

ಈ ಕಾರಣಗಳಿಂದಾಗಿ ಕ್ಷೇತ್ರಪೂರ್ವ ಸಿದ್ಧತೆ (pre-field preparation) ಯ ರೂಪದಲ್ಲಿ ಅನ್ವೇಷಕನಾದವನಿಗೆ ತನ್ನ ಕ್ಷೇತ್ರದ ಭೌಗೋಳಿಕ, ಸಾಮಾಜಿಕ, ಸಾಂಸ್ಕೃತಿಕ ಪರಿಚಯ ಸಾಕಷ್ಟು ಪ್ರಮಾಣದಲ್ಲಿರಬೇಕು (Notes & Queries, 28; Karpales, 8). ಇದಕ್ಕಾಗಿ ಈ ವಿಷಯಗಳನ್ನು ಕುರಿತು ಬರೆದ ಹಾಗೂ ವಾಚಿಕ ರೂಪದ ಎಲ್ಲ ಸಾಹಿತ್ಯ (literature) ವನ್ನು ಸಂಗ್ರಹಿಸಿ ಆತ ತಿಳಿದುಕೊಳ್ಳುವುದು ಆವಶ್ಯಕ. ತಾನು ಪ್ರವೇಶಿಸುವ ಜನಪದ ಕ್ಷೇತ್ರದ ಹವಾಮಾನ, ವಸತಿಸೌಕರ್ಯ, ರಸ್ತೆ ಸಂಪರ್ಕಗಳ ವ್ಯವಸ್ಥೆ, ಭೇಟಿಯಾಗಬೇಕಾದ ವ್ಯಕ್ತಿಗಳು, ಬೇಕಾಗಿರುವ ಕಾಗದ, ಪೆನ್ಸಿಲು, ಧ್ವನಿಮುದ್ರಿಕೆ, ಕ್ಯಾಮರಾ, ಚಲನಚಿತ್ರ ಮೊದಲಾದವುಗಳಿಗೆ ಬೇಕಾದ ಸಾಮಗ್ರಿಗಳು, ಅವುಗಳ ಸಾಗಾಟದ ವ್ಯವಸ್ಥೆ ಕೆಲಸದ ವೇಳಾಕ್ರಮ ಮೊದಲಾದವುಗಳನ್ನು ಆತ ಇತ್ಯರ್ಥಗೊಳಿಸಬೇಕು (Karpales, 9-13; Paul,

430) ತನಗಿಂತ ಪೂರ್ವದಲ್ಲಿ ಮಾಡಲಾದ ಕ್ಷೇತ್ರಕಾರ್ಯವನ್ನು ಗಮನಿಸುವುದೂ ಬಹಳ ಉಪಯುಕ್ತ (Goldstein, 41 f. n. 6).

ಸರ್ವ ರೀತಿಯಿಂದ ಸಿದ್ಧನಾಗಿರುವ ಕ್ಷೇತ್ರಭಾಷಾವಿಜ್ಞಾನಿಯ ಎದುರು ಇರುವ ದತ್ತಸಂಗ್ರಹವಿಧಾನ (method) ಹಾಗೂ ತಂತ್ರ (technique) ಗಳು ಹಲವಾರು (Goldstien 77-144) ಇವುಗಳಲ್ಲಿ ಅತ್ಯಂತ ಪ್ರಮುಖ ವಿಧಾನವೆಂದರೆ ನಿರೂಪಕ ವಿಧಾನ (informant method) ಸಂದರ್ಶನ ವಿಧಾನ (contact/interview method).

ನಿರೂಪಕ ವಿಧಾನದಲ್ಲಿ ಮೊತ್ತಮೊದಲನೆಯದಾಗಿ ಸಂಗ್ರಹಣೆಗೆ ಅನುಕೂಲವಾದ ರೀತಿಯಲ್ಲಿ ಜಾನಪದ ವೈವಿಧ್ಯತೆ ಹಾಗೂ ಸಂದರ್ಭಗಳನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ಪ್ರಶ್ನಾವಳಿಗಳನ್ನು (questionnaire) ಸಿದ್ಧಗೊಳಿಸಬೇಕು. (Lirdgren, Murduck, O' Suilleabhain, Gomne, Notes & Queries Chase) ಪ್ರಶ್ನಾವಳಿಗಳನ್ನು ಸಂಪರ್ಕ ಭಾಷೆ (link-language) ಯಲ್ಲಿ ಬರೆಯಬೇಕು. ಸಂಪರ್ಕ ಭಾಷೆ ಅಸಾಧ್ಯವಾದಲ್ಲಿ. ಕೈಸನ್ನೆ. ಚಿತ್ರ. ಪಟವೇ ಮೊದಲಾದ ಸಾಧನಗಳ (aids) ಮೂಲಕ ಜನಪದ ಭಾಷಾವಿಜ್ಞಾನಿ ನಿರೂಪಕರಿಂದ ದತ್ತಸಂಗ್ರಹ ಮಾಡಬೇಕಾಗುತ್ತದೆ ನಿರೂಪಕ ವಿಧಾನದ ಪ್ರಶಾವ್ನಳಿಯಲ್ಲಿ ನಿರೂಪಕರ ಸವಿವರಾತ್ಮಕ (full-scale ನೋಡಿ : Azadousky) ಪರಿಚಯಾತ್ಮಕ (thumb-nail sketch ನೋಡಿ Dorson, Korson, Beck Kluckhohn) ವ್ಯಕ್ತಿ ಪರಿಚಯ ಹಾಗೂ ಜೀವನಚರಿತ್ರೆ. ಅವರ ಕಲಾತ್ಮಕ ಪ್ರಜ್ಞೆ ಜನಪದ ಸಂಸ್ಕೃತಿಯ ಕುರಿತು ಅವರ ಅರಿವು ಹಾಗೂ ಸಂವೇದನೆಗಳು. ಜಾನಪದ ಹರಿದುಕೊಂಡು ಬಂದ ರೀತಿ. ಅದು ಹುಟ್ಟಿಬೆಳೆದುಬಂದ ಪರಿಸರ ಸನ್ನಿವೇಶಗಳು. ಜಾನಪದ ವೈವಿಧ್ಯತೆ ಇತ್ಯಾದಿಗಳು (Halpert & Herzog) ಪ್ರಶ್ನಾವಳಿಯಲ್ಲಿ ಅಡಕವಾಗಿರಬೇಕು (ಪೈ 41–65).

ಪ್ರಶ್ನಾವಳಿ ಇರುವುದು ಸಂಗ್ರಹಕಾರನ ಅನುಕೂಲಕ್ಕಾಗಿಯೇ ವಿನಹ ನಿರೂಪಕನ ಜ್ಞಾನವನ್ನು ಪರೀಕ್ಷಿಸಲು ಅಲ್ಲ. ಆದ್ದರಿಂದ, ದತ್ತಸಂಗ್ರಹ ಮಾಡುವಾಗ ನಿರೂಪಕನನ್ನು ಸಹಜವಾಗಿ ಸರಳವಾಗಿ ತನಗೆ ತಿಳಿದುದನ್ನು ಮಾತನಾಡಲು ಅವಕಾಶ ಕಲ್ಪಿಸಬೇಕು. ಅಗತ್ಯಬಿದ್ದಲ್ಲಿ ತನಗೆ ಬೇಕಾದ ಮಾಹಿತಿ ಸಿಗುವಂತೆ ಆತನ ಗಮನಹರಿಯಿಸಬೇಕೇ ವಿನಹ ಒತ್ತಾಯಪೂರ್ವಕವಾಗಿ ಪ್ರಶ್ನೆಗಳ ಸುರಿಮಳೆ ಸುರಿಸಿದರೆ ಇಡೀ ಸಂದರ್ಶನ ಕೃತ್ರಿಮಗೊಂಡು ಎಷ್ಟೋ ಅಂಶಗಳು ಸಿಗದೆ ಹೋಗಬಹುದು.

ದತ್ತಸಂಗ್ರಹವನ್ನು ದೀರ್ಘಕಾಲ ಉಳಿಸಿಕೊಳ್ಳಲು ಅದನ್ನು ಧ್ವನಿಸಂಗ್ರಹಕದಲ್ಲಿ ಹಿಡಿದಿಡುವುದು ಒಳ್ಳೆಯದು. ಆದರೆ ವಿಶ್ಲೇಷಣೆಗೆ ಅನುಕೂಲವಾಗಲು ಅದನ್ನು

ಧ್ವನಿಲಿಪಿ (Phonetic script) ಯಲ್ಲಿ ಬರೆದಿಟ್ಟುಕೊಳ್ಳುವುದು ಅನಿವಾರ್ಯ. ಇಂತಹ ದದ್ಮಾಭಿಲೇಖ (data recording) ಕ್ಕೆ ಯೋಜಿಸಿದ ಧ್ವನಿ ಸಂಕೇತ (Phonetic-Smybol) ಗಳೇ ಇವೆ[5]. ಉಚ್ಚಾರದ ಸೂಕ್ಷ್ಮಾಂಶಗಳನ್ನೆಲ್ಲ ಒಳಗೊಳ್ಳುವಂತೆ ಲಿಪಿಯನ್ನು ಬಳಸಿಕೊಂಡರೆ ಆಗ ಅದನ್ನು ಸೂಕ್ಷ್ಮ ಧ್ವನಿಲಿಪಿ (narrow phonetic script) ಎನ್ನುವರು. ಕೇವಲ ಸ್ಥೂಲಾಂಶಗಳನ್ನಷ್ಟೇ ಸಂಕೇತಿಸುವಂತೆ ಬಳಸಿಕೊಂಡರೆ ಅದನ್ನು ಸ್ಥೂಲಧ್ವನಿಲಿಪಿ (broad phonetic script) ಎನ್ನುವರು. ಆದಷ್ಟು ಮಟ್ಟಿಗೆ ಸೂಕ್ಷ್ಮಧ್ವನಿ ಲಿಪಿಯನ್ನು ಬಳಸಿಕೊಳ್ಳುವುದು ಒಳ್ಳೆಯದು.

ದತ್ತಸಂಗ್ರಹದ ಗುಣಾವಗುಣಗಳನ್ನು ಪದೇ ಪದೇ ಪರಿಕ್ಷೀಸಲು ಧ್ವನಿಸಂಗ್ರಹಕದ ಸಹಾಯ ಅತ್ಯಗತ್ಯ. ಅಂತೆಯೇ ಸಹಜ ಸಂಭಾಷಣೆ ಹಾಗೂ ನಿರರ್ಗಳ ಮಾತನ್ನು ಇದ್ದಕ್ಕಿದ್ದ ಹಾಗೆಯೇ ಪೂರ್ತಿ ತೆರೆ ಹಿಡಿಯಲು ಧ್ವನಿ ಸಂಗ್ರಹಕ ಬೇಕೇ ಬೇಕು. ಕೆಲವೊಮ್ಮೆ ಧ್ವನಿಸಂಗ್ರಹಕದಿಂದಾಗಿ ಕೆಲವು ತೊಂದರೆಗಳೂ ಉಂಟಾಗಬಹುದು. ಧ್ವನಿಸಂಗ್ರಹದ ಧ್ವನಿಗಾತ್ರ (Volume) ಹೆಚ್ಚಿಸಿದಾಗ ಅಕ್ಕಪಕ್ಕದ ಸದ್ದುಗದ್ದಲದ ಸಂಗ್ರಹಿತಗೊಂಡು ಎಲ್ಲವೂ ಸಪ್ಪಳ (noise) ವಾಗಬಹುದು. ಸೂಕ್ಷ್ಮಧ್ವನಿವರ್ಧಕ ಯಂತ್ರ (micro-phone) ವನ್ನು ಬಾಯಿಯ ಸಮೀಪದಲ್ಲಿಟ್ಟು ಮಾತನಾಡಿದರೆ ಧ್ವನಿ ಕರ್ಕಶಗೊಳ್ಳಬಹುದು, ಅಥವಾ ಧ್ವನಿ ಏಕರೀತಿಯಲ್ಲಿ ಸಂಗ್ರಹವಾಗದಿರಬಹುದು. ಇವನ್ನೆಲ್ಲ ಸರಿಯಾದ ತರಬೇತಿಯನ್ನು ಕೊಟ್ಟು ಹಾಗೂ ಪಕ್ಕಾದಾದ ಪರಿಸರವನ್ನು ಉಂಟು ಮಾಡಿ ಸರಿಗೊಳಿಸಬಹುದು.


ದತ್ತಸಂಗ್ರಹವನ್ನು ಆದಷ್ಟು ಶಾಂತವಾತಾವರಣದಲ್ಲಿ ಮಾಡಬೇಕಲ್ಲದೇ ಒಂದೇ ರೀತಿಯ ದತ್ತಸಂಗ್ರಹವನ್ನು ದೀರ್ಘಕಾಲದ ವರೆಗೆ ಮಾಡುತ್ತಾ ಹೋಗಬಾರದು. ಒಂದು ತಾಸಿನ ಅವಧಿಗಿಂತ ದೀರ್ಘವಾದ ಸಂಗ್ರಹ ಮಾಡುತ್ತಾ ಹೋಗುವುದು ಸರಿಯಲ್ಲ. ಸದಾ ಸಾಕಷ್ಟು ವಿಶ್ರಾಂತಿಗೆ ಅವಕಾಶಕೊಟ್ಟು ಬೇಸರವಾಗದ ರೀತಿಯಲ್ಲಿ ದತ್ತಸಂಗ್ರಹ ಮಾಡುವುದು ಅಪೇಕ್ಷಣೀಯ.

---

5. ಅಂತರರಾಷ್ಟ್ರೀಯ ಧ್ವನಿಲಿಪಿ (IPA) ಗಣ್ಯಸ್ಥಾನವನ್ನು ಪಡೆದಿದೆಯಾದರೂ ಧ್ವನಿವಿಜ್ಞಾನಿಗಳು ಅವುಗಳನ್ನು ಸೌಲಭ್ಯಕ್ಕೋಸ್ಕರ ಸಂದರ್ಭಕ್ಕನುಗುಣವಾಗಿ ಬದಲಾಯಿಸಿಕೊಂಡಿದ್ದಾರೆಂಬುದನ್ನು ಮರೆಯುವಂತಿಲ್ಲ.

ನೋಡಿ : Robert a Hall (Jr.), *Introductory Linguistics*, 1976 Delhi; pp. 486-7; and Bernard Block and G. L. Trager. *An Outline of Linguitsic Analysis, 1942*, Baltimore.

ಒಟ್ಟಿನಲ್ಲಿ ಜನಪದರ ಸಮಷ್ಟಿ ಹಾಗೂ ಖಾಸಗಿ ಜೀವನಾಭಿವ್ಯಕ್ತಿಯಾಗಿರುವ ಗ್ರಾಮೀಣ ಮತ್ತು / ಅಥವಾ ನಗರ ಜಾನಪದವನ್ನು ವಿಷಯಕ ಮತ್ತು ಅಭಿವ್ಯಕ್ತಕ ಜಾನಪದವೆಂದು ವಿಂಗಡಿಸಿದರೆ, ಅಭಿವ್ಯಕ್ತಕ ಜಾನಪದವನ್ನು ವಾಚಿಕ ಮತ್ತು ಅವಾಚಿಕವೆಂದು ವರ್ಗೀಕರಿಸಬೇಕಾಗುತ್ತದೆ. ವಾಚಿಕ ಅಭಿವ್ಯಕ್ತಕ ಜಾನಪದವನ್ನು ವಾಚಿಕ ಕಲೆ (Verbal art) ಎಂದೂ ಕರೆಯುತ್ತಾರೆ. ವಾಚಿಕ ಕಲೇಯೇ ಜನಪದ ಭಾಷಾವಿಜ್ಞಾನದ ವಸ್ತು (material objects) ವಾದರೆ ಜಾನಪದವಿಜ್ಞಾನಕ್ಕೆ ಸಮಗ್ರ ಜಾನಪದವೇ ವಸ್ತುವಾಗಿ ನಿಲ್ಲುತ್ತದೆ. ಕಾರಣ ಜನಪದ ಭಾಷಾವಿಜ್ಞಾನವೆಂಬುದು ಜಾನಪದವಿಜ್ಞಾನದ ಒಂದು ಅಂಗವಾದರೆ ಕ್ಷೇತ್ರಕಾರ್ಯ ಮತ್ತು ವಿಶ್ಲೇಷಣೆ ಜನಪದ ಭಾಷಾವಿಜ್ಞಾನದ ಉಪಾಂಗಗಳು. ಪ್ರಸ್ತುತ ವಿಷಯವನ್ನು ಮುಂದಿನ ಪುಟದಲ್ಲಿ ನಕಾಶೆಯಲ್ಲಿ ನಮೂದಿಸಲಾಗಿದೆ.


ಜಾನಪದ ಗ್ರಾಮೀಣ ಮತ್ತು/ನಗರ (Folklore)
ಜನಪದ ಸಮಷ್ಟಿ ಖಾಸಗಿ ಜೀವನಾಭಿವ್ಯಕ್ತಿ
ಅಭಿವ್ಯಕ್ತಕ
(expressive)
ವಿಷಯಕ
(material)
ವಾಚಿಕ (ಕಲೆ : verbal)
(art)
ಅವಾಚಿಕ (non-verbal)
ಗಾದೆ, ಕಥೆ, ಒಗಟು
ಹಾಡು, ಪುರಾಣ....
ಕುಣಿತ, ವೇಷ
ಆಟ ....
ವಸತಿ, ಊಟ, ಉಡುಗೆ
ತೊಡಿಗೆ ಔಷಧೋಪಚಾರ....
ಅಧ್ಯಯನ
ಭಾಷಿಕ
ಇತರ (ಸಾಂಸ್ಕೃತಿಕ
ಮನೋವೈಜ್ಞಾನಿಕ....)
ಜನಪದ ಭಾಷಾವಿಜ್ಞಾನ
Folk-linguistics
ಕ್ಷೇತ್ರಕಾರ್ಯ
ವಿಶ್ಲೇಷಣೆ
ವಿಧಾನಗಳು
ಮಾದರಿಗಳು
ಜಾನಪದ ವಿಜ್ಞಾನ
(folkloristics)

ವಿರಾಮ ಮತ್ತು ಮನರಂಜನೆ

● ಎಂ. ಬಿ. ಚರಂತಿಮಠ

ಭೌತಿಕ ಮತ್ತು ಬೌದ್ಧಿಕ ಜೀವಿಗಳು ಎಂಬ ಎರಡು ಪ್ರಕಾರದ ಸಾಮಾಜಿಕ ವರ್ಗಗಳನ್ನು ಹೊಂದಿದ ಒಂದು ಸೈಬರ್‌ನೇಟಿಕ್ (Cybernetic) ಸಮಾಜದತ್ತ ನಾವು ಸಾಗುತ್ತಿದ್ದೇವೆ. ಯಂತ್ರಗಳ ಅತಿಯಾದ ಬಳಕೆಯಿಂದ ಮತ್ತು ಯಂತ್ರಗಳನ್ನು ನಿಯಂತ್ರಿಸಲು ಮತ್ತಷ್ಟು ಯಂತ್ರಗಳ ಶೋಧನೆಯಾಗಿರುವುದರಿಂದ ಮಾನವನು ಯಂತ್ರದಲ್ಲಿಯ ಒಂದು ಬಿಡಿಭಾಗವಾಗಿ ಕೇವಲ ಸಂಪತ್ತನ್ನು ಉತ್ಪಾದಿಸುವ, ಉಪಭೋಗಿಸುವ ಮತ್ತು ರಕ್ಷಿಸುವ ಜೀವಿಯಾಗಿದ್ದಾನೆ. ಇಂಥ ಭೌತಿಕ ವಸ್ತುಗಳ ಸಲುವಾಗಿಯೇ ಮೀಸಲಾದ ವರ್ಗವು ಗ್ರೀಕ್ ನಾಗರಿಕತೆಯಲ್ಲಿ ಗುಲಾಮಗಿರಿಗೆ ಸಮೀಪವಾಗಿದ್ದ ವರ್ಗವಾಗಿದೆ. ಇನ್ನೊಂದು ಕಡೆಗೆ ನಿಪುಣ ರಾಜಕಾರಣಿಗಳು ಮಾನವೀಯ ವಿಚಾರವಾದಿಗಳು, ತತ್ವಜ್ಞಾನಿಗಳು, ಶಿಕ್ಷಣ ಪಂಡಿತರು, ಮತ್ತು ವಿಜ್ಞಾನಿಗಳನ್ನು ಹೊಂದಿರುವ ಬುದ್ಧಿಜೀವಿಗಳ ವರ್ಗ. ಒಂದು ಸಮಾಜದ ಸ್ಥಿರತೆ ಮತ್ತು ಸರ್ವಾಂಗೀಣ ಪ್ರಗತಿಯು ಇಂಥ ಬುದ್ಧಿ ಜೀವಿಗಳ ಮೇಲೆ ಅವಲಂಬಿಸಿವೆ. ಯಾಕಂದರೆ ದೊರೆತಂಥ ವಿರಾಮವನ್ನು ರಚನಾತ್ಮಕವಾಗಿ ಉಪಯೋಗಿಸುವುದು ಬುದ್ಧಿ ಜೀವಿಗಳ ಜವಾಬ್ದಾರಿಯಾಗಿದೆ.

ಉದ್ಯೋಗ ಎಷ್ಟು ಮಹತ್ವದ್ದೋ ಅಷ್ಟೇ ವಿರಾಮಕಾಲವೂ ಕೂಡಾ. ದುಡಿದು ದಣಿದು ಬಂದ ವ್ಯಕ್ತಿಗೆ ತನ್ನ ಕಾರ್ಯಶಕ್ತಿಯನ್ನು ಪುನಃ ಪಡೆಯಲು ವಿರಾಮ ಅತಿ ಅವಶ್ಯ. ಆದ್ದರಿಂದ ಶ್ರಮ ಮತ್ತು ವಿರಾಮ ಬೇರ್ಪಡಿಸಲಾರದಂಥವು. ಈ ಆಧುನಿಕ ಕಾಲದಲ್ಲಿ ಮಾನವನಿಗೆ ಹಿಂದೆಂದೂ ದೊರೆಯದಷ್ಟು ವ್ಯಾಪಕವಾಗಿ ವಿರಾಮ ಕಾಲ ಲಭಿಸಿದೆ. ಈ ವಿರಾಮಕಾಲವನ್ನು ರಚನಾತ್ಮಕವಾಗಿ ಕ್ರಿಯಾಶೀಲವಾಗಿ ಉಪಯೋಗಿಸಿದಾಗ ಸಮಾಜಕ್ಕೆ ಅದು ಒಂದು ಶ್ರೇಷ್ಠ ಆಸ್ತಿಯಾಗಿ ಪರಿಣಮಿಸುತ್ತದೆ. ಇಲ್ಲದೆ ಹೋದಲ್ಲಿ ಅದು ಬಹು ದೊಡ್ಡ ಸಮಸ್ಯೆಯಾಗಬಹುದು. ಉದ್ಯೋಗ ಅಥವಾ ಕೆಲಸ ಒಂದು ಸಮಾಜದ ಆರ್ಥಿಕ ಬೆಳವಣಿಗೆಗೆ ಅವಶ್ಯ-

ವಾಗಿರುತ್ತದೆ. ಆದರೆ, ವಿರಾಮಕಾಲವನ್ನು ಯಾವ ರೀತಿ ಆ ಸಮಾಜವು ಉಪಯೋಗಿಸುತ್ತದೆ ಎನ್ನುವುದು ಅದರ ಸಂಸ್ಕೃತಿಯನ್ನು ಅವಲಂಬಿಸಿರುತ್ತದೆ. ಉಪಯುಕ್ತ ಮತ್ತು ರಚನಾತ್ಮಕರೀತಿಯಲ್ಲಿ ವಿರಾಮಕಾಲ ಬಳಸಲ್ಪಟ್ಟಾಗ ನಾಗರಿಕತೆ ಮುಂದುವರೆಯುತ್ತದೆ. ವಿರಾಮ ಕಾಲವು ಉಪಯುಕ್ತ ರಹಿತ ಮತ್ತು ಹಾನಿದಾಯಕ ಚಟುವಟಿಕೆಗಳಿಗೆ ಮೀಸಲಾದಾಗ ನಾಗರಿಕತೆಯು ಅಧೋಗತಿಗಿಳಿಯುತ್ತದೆ.

ಸಾಂಪ್ರದಾಯಿಕ ಸಮಾಜದಲ್ಲಿ ಧಾರ್ಮಿಕ ಗುರುಗಳು ಸಂಪೂರ್ಣ ವಿರಾಮವನ್ನು ಪಡೆದಂಥ ಮೊದಲನೆಯ ವರ್ಗವಾಗಿತ್ತು. ಆಡಳಿತಮಾಡುವ ವರ್ಗವು ಎರಡನೆಯದು. ನಿಶ್ಚಿತವಾದ ಮತ್ತು ನಿಯಮಿತವಾದ ಆದಾಯವನ್ನು ಹೊಂದಿದ ಜಮೀನುದಾರರದು ಮೂರನೆಯವರ್ಗವಾಗಿತ್ತು. ಅಂದರೆ ಪ್ರತ್ಯೇಕವಾದ ವಿರಾಮವರ್ಗವು ಮಾನವನ ಇತಿಹಾಸದುದ್ದಕ್ಕೂ ಬೆಳೆದುಬಂದಿದೆ. ಈ ವಿರಾಮ ವರ್ಗವು ಹಲವಾರು ರಚನಾತ್ಮಕ ಕಾರ್ಯಗಳನ್ನು ಕೆಲವೊಂದು ರಾಷ್ಟ್ರಗಳಲ್ಲಿ ಮಾಡಿದೆ. ಉದಾಹರಣೆಗೆ ಇನ್ನುಳಿದ ಯಾವ ದೇಶಕ್ಕೂ ಸಾಟಿಯಾಗಲಾರದಂತಹ ರಾಜವಂಶ ಮತ್ತು ಪ್ರಜಾಪ್ರಭುತ್ವ ಸರಕಾರದ ಭವ್ಯ ಪರಂಪರೆ ಮತ್ತು ಯಶಸ್ಸನ್ನು ವಿರಾಮ ವರ್ಗವು ಇಂಗ್ಲಂಡ ದೇಶಕ್ಕೆ ಕೊಡುಗೆಯಾಗಿ ಕೊಟ್ಟಿದೆ. ಕಲೆ, ಸಾಹಿತ್ಯ, ಸಂಗೀತ, ತತ್ವಜ್ಞಾನ ಮತ್ತು ಸಮಾಜದ ಮೌಲ್ಯಗಳು ರೂಪುಗೊಳ್ಳುವುದು ವಿರಾಮ ಕಾಲದಿಂದಲೇ ಸಾಧ್ಯ. ಮೂಲತಃ ಜ್ಞಾನಭಂಡಾರವು ವಿರಾಮದಿಂದಲೇ ವಿಕಸಿತವಾದದ್ದು ಸುದೈವದ ಸಂಗತಿ. ಎಷ್ಟು ಹೆಚ್ಚು ವ್ಯಕ್ತಿಗಳು ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಸುವ್ಯವಸ್ಥಿತವಾಗಿ ಕಾರ್ಯವನ್ನು ನಿರ್ವಹಿಸುತ್ತಾರೆಯೋ ಅಷ್ಟೇ ಪ್ರಮಾಣದಲ್ಲಿ ಮತ್ತು ಗುಣಮಟ್ಟದಲ್ಲಿ ವಿರಾಮಕಾಲವನ್ನು ಉಪಯೋಗಿಸಿದರೆ ಒಂದು ಆದರ್ಶ ಸಮಾಜವನ್ನು ಹೊಂದಲಾಗದಿದ್ದರೂ, ಆದರ್ಶಕ್ಕೆ ಸಮೀಪದ ಸಮಾಜವನ್ನು ಪಡೆಯಲು ಸಾಧ್ಯ.

ಹಿಂದಿನ ಕಾಲದಲ್ಲಿ ಒಕ್ಕಲುತನ ಮುಖ್ಯ ಉದ್ಯೋಗವಾದದ್ದರಿಂದ ಬಹಳಷ್ಟು ಜನರು ತಮ್ಮ ಬಹಳಷ್ಟು ವೇಳೆಯನ್ನು ಉದ್ಯೋಗಕ್ಕಾಗಿಯೇ ಬಳಸುತ್ತಿದ್ದರು. ಆದರೆ ಈಗಿನ ಶ್ರಮ ಉಳಿತಾಯದ ಯಂತ್ರಗಳ ಬಳಕೆಯಿಂದ ಅತೀ ಸಾಮಾನ್ಯವಾದ ವ್ಯಕ್ತಿಯೂ ಕೂಡಾ ಸಾಕಷ್ಟು ವಿರಾಮಕಾಲವನ್ನು ಪಡೆದಿದ್ದಾನೆ. ಆದ್ದರಿಂದ ವಿರಾಮಕಾಲ ಈಗ ಕೇವಲ ಒಂದು ವರ್ಗದ ಸ್ವತ್ತಾಗಿಲ್ಲ. ಅಂತಹ ವಿರಾಮಕಾಲವು ಹೇಗೆ ಉಪಯೋಗಿಸಲ್ಪಡುತ್ತದೆ ಎನ್ನುವ ಹೊಸ ಪ್ರಶ್ನೆಯನ್ನು ವಿಚಾರಿಸುವ ಕಾಲವಿದಾಗಿದೆ.

ವಿರಾಮಾಕಾಲವನ್ನು ಎಲ್ಲ ಜನರು ಒಂದೇ ರೀತಿಯಾಗಿ ಉಪಯೋಗಿಸುವುದಿಲ್ಲ. ಒಂದು ಕಾರ್ಯವು ಒಬ್ಬನಿಗೆ ಮನರಂಜನೆಯಾದರೆ ಮತ್ತೊಬ್ಬನಿಗೆ ಉದ್ಯೋಗವಾಗಿಬಹುದು. ಲೀಜರ (Leisure) ಎಂಬ ಇಂಗ್ಲೀಷ ಪದವು (School)

ಶಾಲೆ ಎಂಬ ಅರ್ಥವನ್ನು ಹೊಂದಿದ ಗ್ರೀಕ್ ಪದದಿಂದ ಉತ್ಪತ್ತಿಹೊಂದಿದೆ. ಸಾಮಾನ್ಯವಾಗಿ ವಿರಾಮಕಾಲವೆಂದರೆ ಜೀವನಾವಶ್ಯಕ ಸಂಗತಿಗಳನ್ನು ಪೂರೈಸಿ ಉಳಿಯುವಂತಹ ಕಾಲ. ಎಲ್ಲ ಕರ್ತವ್ಯಗಳನ್ನೂ ಜವಾಬ್ದಾರಿಗಳನ್ನೂ ಅವಶ್ಯವಾದ ಕೃತಿಗಳನ್ನೂ ಪೂರೈಸಿ ಉಳಿಯುವಂತಹ ಕಾಲವನ್ನು ವಿರಾಮಕಾಲವೆಂದು ಹೇಳಬಹುದು. ಕೆಲವರಿಗೆ ತಾವು ಮಾಡುವ ಕಾರ್ಯವು ಸಂತೋಷವನ್ನಿಯುತ್ತಿದ್ದರೆ ವಿರಾಮದ ಅವಶ್ಯಕತೆ ಇಲ್ಲ. ದಿನನಿತ್ಯ ಊಟ ಮಾಡುವ ಕೃತಿ ಅವಶ್ಯವಾದದ್ದು. ಆದರೆ ಅತಿಥಿಗಳ ಜೊತೆಗೆ ಭೋಜನವನ್ನು ಏರ್ಪಡಿಸುವುದು ವಿರಾಮವೆನಿಸಬಲ್ಲದು. ಅದೇ ರೀತಿ ನಿದ್ದೆ ಮಾಡುವುದು ಅವಶ್ಯವಾದದ್ದು, ಅವಶ್ಯಕತೆಗಿಂತ ಹೆಚ್ಚಿನ ನಿದ್ದೆ ವಿರಾಮ. ವಿರಾಮ ಅಂದರೆ ಸೋಮಾರಿತನವಲ್ಲ. ಇವುಗಳ ನಡುವೆ ಬಹಳಷ್ಟು ಅಂತರವಿದೆ. ಒಂದು ವಿಶಿಷ್ಟವಾದ ಕಾರ್ಯವನ್ನು ಮಾಡುವ ಸ್ವಾತಂತ್ರ್ಯ ಅಥವಾ ಅವಕಾಶಕ್ಕೆ ವಿರಾಮವೆಂದರೆ ಬಯಸಿದ ಯಾವದೇ ಕಾರ್ಯವನ್ನು ಮಾಡದೇ ಇರುವುದು ಸೋಮಾರಿತನ.

ವಿರಾಮಕಾಲದಲ್ಲಿ ಯಾವುದೇ ಕಾರ್ಯವನ್ನು ಮಾಡಿ ದೈಹಿಕ ಮಾನಸಿಕ ಅಥವಾ ಭಾವನಾತ್ಮಕತೃಪ್ತಿಯನ್ನು ಪಡೆಯುವುದು ಮನರಂಜನೆ. ಮನರಂಜನೆಯು ವೈಯಕ್ತಿಕ ಅಥವಾ ಸಾಮೂಹಿಕವಾಗಿರಬಹುದು. ತಮ್ಮ ಶಕ್ತಿಗನುಸಾರವಾಗಿ ಬೇರೆ ಬೇರೆ ವ್ಯಕ್ತಿಗಳು ಬೇರೆ ಬೇರೆ ರೀತಿಯ ಮನರಂಜನೆಯನ್ನು ವಿರಾಮಕಾಲದಲ್ಲಿ ಪಡೆಯುತ್ತಾರೆ. ಮನರಂಜನೆಯನ್ನು ವಿರಾಮವಿದ್ದಾಗಲೇ ಪಡೆಯುವುದರಿಂದ ಮನರಂಜನೆ ಮತ್ತು ವಿರಾಮ ಒಂದೇ ತೆರನಾದ ಅರ್ಥವನ್ನು ಕೊಡುವ ಶಬ್ದಗಳೆಂದು ಭಾವನೆ ಉಂಟಾಗುತ್ತದೆ. ಈ ಶಬ್ದಗಳ ನಡುವೆ ಬಹಳಷ್ಟು ಅಂತರವಿದೆ. "ವಿರಾಮವು' 'ಕಾಲವನ್ನು" ಸೂಚಿಸಿದರೆ ವಿರಾಮಕಾಲವು ಹೇಗೆ ಉಪಯೋಗಿಸಲ್ಪಟ್ಟಿತು ಅನ್ನುವುದನ್ನು ಮನರಂಜನೆ ಸೂಚಿಸುತ್ತದೆ. ವಿರಾಮವು ಮನರಂಜನೆಗಾಗಿಯೇ ಮೀಸಲಾಗಿರದೆ ಇರಬಹುದು. ಆದರೆ ವಿಶಾಲದೃಷ್ಟಿಯಿಂದ ಯೋಚಿಸಿದರೆ ಬಹಳಷ್ಟು ರೀತಿಯ ಮನರಂಜನೆಗಳು ವಿರಾಮದಲ್ಲಿ ಜರುಗುತ್ತವೆ ಮತ್ತು ವಿರಾಮದಲ್ಲಿ ಮಾಡುವ ಕೃತಿಗಳೂ ಮನರಂಜನೆಯನ್ನೀಯುವ ಬೆಲೆಯನ್ನು ಹೊಂದಿರುತ್ತವೆ. ಮನರಂಜನೆಯು ಒಂದು ಸಮಾಜದ ಸಂಸ್ಕೃತಿ ಮಟ್ಟದ ಅಳತೆಗೋಲಾಗಿದೆ ಮತ್ತು ವಿರಾಮಕಾಲದ ಚಟುವಟಿಕೆಗಳು ಆ ಸಂಸ್ಕೃತಿಯ ಮೌಲ್ಯಗಳಾಗಿರುತ್ತವೆ.

ಶ್ರಮದ ಮಹತ್ವವನ್ನು ಹೇಳುವ ಒಂದು ಕಾಲವಿತ್ತು. ಆದರೆ ಈಗಿನ ಕಾಲದಲ್ಲಿ ಯಂತ್ರಗಳ ಬಳಕೆಯಿಂದ ಉತ್ಪಾದನೆ ಹೆಚ್ಚಿಸಲ್ಪಟ್ಟು ಶ್ರಮ ಕಡಿಮೆಯಾಗಿ ವಿರಾಮ ಹೆಚ್ಚು ದೊರೆತದ್ದರಿಂದ ವಿರಾಮ ಮತ್ತು ಮನರಂಜನೆಗಳನ್ನು ವೈಜ್ಞಾನಿಕ ದೃಷ್ಟಿಕೋನದಿಂದ ವಿಚಾರಿಸುವುದು ಉಚಿತವಾಗಿದೆ. ಈ ವಿಷಯು ಕೇವಲ ಭಾವಜೀವಿಗಳ ವೈಚಾರಿಕ ಸಂಗತಿಯಾಗಿ ಉಳಿದಿಲ್ಲ. ಯಾಕಂದರೆ ಒಬ್ಬ ಸಾಮಾನ್ಯನಾದ

ವ್ಯಕ್ತಿಯು ತಾನು ಪಡೆದ ಬಹಳಷ್ಟು ವಿರಾಮವನ್ನು ಉಪಯುಕ್ತ ರೀತಿಯಲ್ಲಿ ಬಳಸುವುದಿಲ್ಲ. ಆಟ, ಕ್ರೀಡಾಕೂಟ, ಕಲೆ ಸಾಹಿತ್ಯ, ಸಂಗೀತ ಮತ್ತು ಕಲ್ಯಾಣದ ಚಟುವಟಿಕೆಗಳಿಗೆ ಮೀಸಲಾಗಿಡುವುದು ಶ್ರೇಷ್ಠವಾದ ಸಂಗತಿ. ಆದರೆ ಸಮಾಜದ ಮೇಲಿನ ವರ್ಗದಲ್ಲಿರುವ ಪ್ರಾಧ್ಯಾಪಕರು, ವಕೀಲರು, ವೈದ್ಯರು, ಸರಕಾರಿ ಅಧಿಕಾರಿಗಳು ಮತ್ತು ವ್ಯಾಪಾರಸ್ಥರು ತಮ್ಮ ವಿರಾಮವನ್ನು ಹೇಗೆ ಉಪಯೋಗಿಸುತ್ತಾರೆ ಅನ್ನುವ ಬಗೆಗೆ ಲಖನೌ ವಿಶ್ವವಿದ್ಯಾಲಯದ ಸಮಾಜಶಾಸ್ತ್ರ ವಿಭಾಗದವರು ಒಂದು ಸಮೀಕ್ಷೆಯನ್ನು ಮಾಡಿದ್ದಾರೆ. ಆ ಸಮೀಕ್ಷೆಯ ವರದಿಯಂತೆ ಅವರು ತಮ್ಮ ವಿರಾಮವನ್ನು ಚಲನಚಿತ್ರ ನೋಡುವದರಲ್ಲಿ ಆಕಾಶವಾಣಿ ಮತ್ತು ಸಂಗೀತ ಕೇಳುವುದರಲ್ಲಿ ಹೋಟೆಲ್, ಕ್ಲಬ್ ಮತ್ತು ವೇಶ್ಯಾಗೃಹಗಳಿಗೆ ಭೆಟ್ಟಿಕೊಡುವದರಲ್ಲಿ ಕಲೆ, ನೃತ್ಯ, ವೀಕ್ಷಿಸುವುದರಲ್ಲಿ ಓದುವುದರಲ್ಲಿ, ಹರಟೆ, ನಿದ್ದೆ ಮತ್ತು ಧಾರ್ಮಿಕ ಚಟುವಟಿಕೆಗಳಲ್ಲಿ ಕಳೆಯುತ್ತಾರೆಂದು ಹೇಳಿದ್ದಾರೆ. ಅದರಂತೆ ಮಧ್ಯಮವರ್ಗದ ಹೆಣ್ಣು ಮಕ್ಕಳು ತಮ್ಮ ವಿರಾಮವನ್ನು ಹೇಗೆ ಕಳೆಯುತ್ತಾರೆ ಎನ್ನುವ ಸಮೀಕ್ಷೆ ಕೂಡಾ ಮಾಡಿದ್ದಾರೆ. ಹೆಚ್ಚಾಗಿ ಹೆಣ್ಣುಮಕ್ಕಳು ದಿನನಿತ್ಯಕಾರ್ಯಗಳಲ್ಲಿ ತೊಡಗಿರುತ್ತಾರೆ. ಮತ್ತು ತಾವು ಪಡದಂಥ ಸ್ವಲ್ಪೇ ವಿರಾಮವನ್ನು ಚಲಚಿತ್ರ ವಿಕ್ಷಿಸುವುದರಲ್ಲಿ ಮತ್ತು ಆಕಾಶವಾಣಿ ಕೇಳುವುದರಲ್ಲಿ ಕಳೆಯುತ್ತಾರೆ. ಮಧ್ಯಮ ವರ್ಗದ ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳು ಕ್ಲಬ್ ಮತ್ತು ಉಪಹಾರಗೃಹಗಳಿಗೆ ಹೋಗುವುದು ಸರ್ವ ಸಾಮಾನ್ಯವಾದ ಸಂಗತಿ. ಆದರೆ ಕೆಳ ವರ್ಗದ ಕೂಲಿಕಾರರಿಗೆ ಇಂಥ ಅವಕಾಶಗಳು ವಿರಳ. ನೃತ್ಯ ಗೃಹಗಳು, ರಾತ್ರಿಯ ಗೃಹಗಳು, ಜೂಜಾಟದ ಮನೆಗಳು, ಕುಡಿತ, ಇಸ್ಪೇಟ ಆಟ, ಇವು ಎಷ್ಟು ಹೆಚ್ಚು ಗಂಡಸರನ್ನು ಆಕರ್ಷಿಸಿವೆಯೋ ಅಷ್ಟೇ ಪ್ರಮಾಣದಲ್ಲಿ ಹೆಣ್ಣುಮಕ್ಕಳಿಗೆ ಹರಟೆ, ಆಕರ್ಷಣೀಯವಾಗಿದೆ. ಇಂಥವರು ಸಾಮಾಜಿಕ ಮತ್ತು ರಾಜಕೀಯ ಚಟುವಟಿಕೆಗಳಲ್ಲಿ ಭಾಗ ತೆಗೆದುಕೊಳ್ಳುವುದು ಅತಿ ಕಡಿಮೆ. ಮೇಲೆ ಹೇಳಿದ ಸಮೀಕ್ಷೆಯ ಸಂಪೂರ್ಣ ವಿವರಣೆ ಮುಂದಿನ ಪುಟದಲ್ಲಿ ಕೊಟ್ಟಿದೆ.

ಹಾಡುಗಳು, ಸಾಮೂಹಿಕ ನೃತ್ಯ, ನಾಟಕ, ಬೈಲಾಟ, ಕುಸ್ತಿ, ಕಬಡ್ಡಿ ಆಟ, ಭಜನೆ, ಕತೆ ಮತ್ತು ಪುರಾಣ ಇವು ಸಾಮಾನ್ಯವಾಗಿ ಹಳ್ಳಿಯಲ್ಲಿಯ ಮನರಂಜನೆಯ ಚಟುವಟಿಕೆಗಳು. ಎಷ್ಟು ವೇಳೆಯನ್ನು ಹಳ್ಳಿಯವರು ಇಂಥ ಮನರಂಜನೆಗಳಲ್ಲಿ ಕಳೆಯುತ್ತಾರೆ ಮತ್ತು ಅದರ ಪ್ರಭಾವ ಅವರ ವ್ಯಕ್ತಿತ್ವದ ಮೇಲೆ ಹೇಗೆ ಆಗುತ್ತದೆ ಎನ್ನುವುದು ಅವಶ್ಯವಾಗಿ ಅಧ್ಯಯನ ಮಾಡುವ ವಿಷಯ. ಆದರೆ ಸುಸಜ್ಜಿತ ಮತ್ತು ಸಂಘಟಿತವಾದ ಮನರಂಜನೆ ಹಳ್ಳಿಯಲ್ಲಿ ಇಲ್ಲ ಮತ್ತು ಹಳ್ಳಿಯ ಜನರು ತಮ್ಮ ದಿನನಿತ್ಯದ ಉದ್ಯೋಗದಲ್ಲಿ ಹೆಚ್ಚು ಕಾಲ ಕಳೆಯುತ್ತಾರೆ ಅಥವಾ ಸಾಕಷ್ಟು ವಿರಾಮವನ್ನು ಅವರು ಪಡೆಯುವುದಿಲ್ಲವೆಂದು ಹೇಳಬಹುದು. ಕೆಲಸ ಮತ್ತು ಮನರಂಜನೆ ಒಟ್ಟುಗೂಡಿಕೊಂಡಿರುತ್ತವೆ ಕೆಲಸಮಾಡುವಾಗಲೇ ಹಾಡಿ ಕುಣಿದು ಮನರಂಜನೆಯನ್ನು ಪಡೆಯುತ್ತಾರೆ.

ಅ ನಂ. ಮನರಂಜನೆಯ ಪ್ರಕಾರ	ಮೇಲಿನ ವರ್ಗದ ಗಂಡಸರಲ್ಲಿ		ಮಧ್ಯಮ ವರ್ಗದ ಹೆಣ್ಣುಮಕ್ಕಳಲ್ಲಿ	
	ಆಸಕ್ತಿ ಇದ್ದವರು	ಆಸಕ್ತಿ ಇಲ್ಲದವರು	ಆಸಕ್ತಿ ಇದ್ದದವರು	ಆಸಕ್ತಿ ಇಲ್ಲದವರು
1. ಚಲನಚಿತ್ರ	78	22	76	24
2. ಆಕಾಶವಾಣಿ	74	26	82	18
3. ಫಲಹಾರಮಂದಿರ	64	36	72	28
4. ಕ್ಲಬ್ಬಿಗೆ ಹೋಗುವುದು	52	48	28	72
5. ಕುಡಿತ	42	58	—	—
6. ಧೂಮ್ರಪಾನ	60	40	—	—
7. ಚಿತ್ರಕಲೆ	6	94	10	90
8. ಸಂಗೀತ	8	92	84	16
9. ನೃತ್ಯ	4	96	78	22
10. ಆಟಗಳು	46	54	32	68
11. ಓದುವದು	94	6	92	8
12. ಹರಟೆ	88	12	100	—
13. ನಿದ್ದೆ	66	34	—	—
14 ಧಾರ್ಮಿಕ ಕಾರ್ಯಗಳು	38	62	96	4

ಮನರಂಜನೆಯನ್ನು ಎರಡು ವಿಧವಾಗಿ ವಿಂಗಡಿಸಬಹುದು ಮೊದಲನೆಯದಾಗಿ ವಾಣಿಜ್ಯೀಕೃತ ಅಥವಾ ಹಣಗಳಿಕೆಯ ಮನರಂಜನೆ ಮತ್ತು ಎರಡನೆಯದಾಗಿ ವಾಣಿಜ್ಯೀಕೃತವಲ್ಲದ ಮನರಂಜನೆ. ವಾಣಿಜ್ಯೀಕೃತವಲ್ಲದ ಮನರಂಜನೆಯು ನಿಜವಾದ ಮನರಂಜನೆ, ಇದು ವ್ಯಕ್ತಿಯ ಸಂಸ್ಕೃತಿಯನ್ನು ವೃದ್ಧಿಸುತ್ತದೆ. ಮನಸ್ಸಿಗೆ ನೆಮ್ಮದಿಯನ್ನೀಯುತ್ತದೆ. ಸಾಹಿತ್ಯ, ಸಂಗೀತ, ನಾಟಕ, ನೃತ್ಯ ಇವು ವ್ಯಕ್ತಿಯಲ್ಲಿ ಹುದುಗಿರುವ ಕಲೆ ಮತ್ತು ಸಾಮರ್ಥ್ಯ ಇವುಗಳನ್ನು ಪ್ರದರ್ಶಿಸಲು ಅವಕಾಶ ಮಾಡಿಕೊಡುತ್ತವೆ. ಮತ್ತು ಇದರಿಂದ ವ್ಯಕ್ತಿಯ ಮತ್ತು ಸಮಾಜದ ಹಿತವಾಗುವುದು. ಖಚಿತವಾಗಿ ಹೇಳುವದಾದರೆ ವಾಣಿಜ್ಯೀಕೃತ ಮನರಂಜನೆ ಮನರಂಜನೆಯೇ ಅಲ್ಲ. ಇಂಥ ಮನರಂಜನೆಯನ್ನು ಪಡೆಯಲು ಹಣವನ್ನು ವಿಯೋಗಮಾಡಬೇಕು. ಅದರಿಂದ ಯಾವುದೇ ವಿಧಾನದಿಂದಲಾದರೂ ಹಣಗಳಿಸಬೇಕೆಂಬ ಪಾಶವೀಯ ಗುಣಗಳನ್ನು ಬೆಳೆಸುತ್ತದೆ. ಎಲ್ಲ ಆಧುನಿಕ ನಗರಗಳಲ್ಲಿ ಕೆಲಸದ ಒತ್ತಡ, ಆಯಾಸ ಮತ್ತು ಯಾಂತ್ರಿಕ ಜೀವನದಿಂದ ಹೊರಬರಲು ಅನೀತಿಕರ ಮನರಂಜನೆಯ ಕೇಂದ್ರಗಳಾದ ನಗ್ನ ನೃತ್ಯಗೃಹದ ರಾತ್ರಿಗೃಹ

ಜೂಜು ಮನೆ, ಹೆಂಡದ ಅಂಗಡಿ, ವೇಶ್ಯಾಗೃಹಗಳು ಸರ್ವಸಾಮಾನ್ಯವಾಗಿವೆ. ಈ ಗೃಹಗಳಲ್ಲಿ ಮದ್ಯದ ಮಾರಾಟವನ್ನು ಹೆಚ್ಚಿಸಲು ತರುಣಿಯರನ್ನು ಪಾನಸಖಿಯರನ್ನಾಗಿ ಉಪಯೋಗಿಸುತ್ತಾರೆ. ನೃತ್ಯವೆಂಬ ಮುಖವಾಡದಿಂದ ಲೈಂಗಿಕ ಪ್ರದರ್ಶನವಾಗುತ್ತದೆ. ಹೆಂಡ ಮತ್ತು ಹೆಣ್ಣಿನ ಮುಖಾಂತರ ಶ್ರೀ ಸಾಮಾನ್ಯನ ಶೋಷಣೆಯಾಗುತ್ತದೆ. ಈ ರೀತಿಯಾಗಿ ಬೇರೆ ಬೇರೆ ವಾಣಿಜ್ಯೀಕೃತ ಮನರಂಜನೆಗಳ ಪ್ರಭಾವ ಮತ್ತು ಪರಿಣಾಮಗಳನ್ನು ವಿಚಾರಿಸುವುದು ಸೂಕ್ತವಾಗಿದೆ.

ಚಲನಚಿತ್ರ ಅತಿ ಜನಪ್ರಿಯವಾದ ವಾಣಿಜ್ಯೀಕೃತ ಮನರಂಜನೆ. ಸಾಂಪ್ರದಾಯಿಕ ಪೂರ್ಣಮನರಂಜನೆಯ ಅಭಾವ ಹಾಗೂ ನಗರದ ಯಾಂತ್ರಿಕ ಜೀವನ ಇವೆಲ್ಲದರ ಕಾರಣಗಳಿಂದ ಚಲನಚಿತ್ರ ಎಲ್ಲ ವರ್ಗದ ಜನರನ್ನು ಆಕರ್ಷಿಸುತ್ತದೆ. ಆಧುನಿಕ ಚಲನಚಿತ್ರಗಳು ಜನರ ಅಭಿರುಚಿಗೆ ತಕ್ಕಂತೆ ರೂಪಿತವಾಗುತ್ತವೆ. ಈಗ ಅನೀತಿಕರ ಲೈಂಗಿಕತೆ, ಭ್ರಷ್ಟಾಚಾರ, ಕುಡಿತ, ಅಪರಾಧ ಮುಂತಾದವುಗಳನ್ನು ಪ್ರಚೋದಿಸುವ ಚಿತ್ರಗಳೇ ಹೆಚ್ಚಾಗಿವೆ. ನಮ್ಮ ಪ್ರಾಚೀನ ಸಂಸ್ಕೃತಿಯ ಭವ್ಯಪರಂಪರೆ, ಧಾರ್ಮಿಕ ಮತ್ತು ಸಾಮಾಜಿಕ ಮೌಲ್ಯಗಳನ್ನು ಆಧುನಿಕ ಚಿತ್ರಗಳು ಬಿಂಬಿಸುತ್ತಿಲ್ಲ. ಅನಪೇಕ್ಷಿತ ಪ್ರಣಯ ದೃಶ್ಯ, ಚುಂಬನ, ನಗ್ನ ನೃತ್ಯ, ಕುಡಿತ, ಅಪಹರಣ, ಅತ್ಯಾಚಾರ ಮೊದಲಾದ ದೃಶ್ಯಗಳನ್ನು ಚಿತ್ರಗಳು ಹೊಂದಿರುವದರಿಂದ ನಮ್ಮ ಯುವಕ ಯುವತಿಯರಲ್ಲಿ ವಾಸ್ತವಿಕ ಜೀವನದ ಬಗ್ಗೆ ತಪ್ಪು ಕಲ್ಪನೆಗಳನ್ನುಂಟು ಮಾಡುತ್ತಲಿವೆ. ಅವರನ್ನು ಕನಸಿನ ರಾಜ್ಯದಲ್ಲಿ ತೇಲಾಡುವ ಮತ್ತು ಹಗಲುಗನಸುಗಳನ್ನು ಕಾಣುವ ಭ್ರಮಿಷ್ಟರನ್ನಾಗಿ ಮಾಡುತ್ತಿವೆ. ನಾಯಕ ನಾಯಕಿಯರ ಪ್ರಣಯ ಸಲ್ಲಾಪ, ಖಳನಾಯಕನ ಮಧ್ಯಪ್ರವೇಶ, ಶೀಲಾಪಹರಣ ಮತ್ತು ಕಲಹಗಳನ್ನು ಸುತ್ತುವರೆದ ಚಿತ್ರಗಳೇ ಹೆಚ್ಚು ಹಣಗಳಿಸುವ ಚಿತ್ರಗಳಾಗಿವೆ. ಚಲನಚಿತ್ರದಲ್ಲಿಯ ದೃಶ್ಯಗಳನ್ನು ನಿಜ ಜೀವನದಲ್ಲಿ ಅನುಕರಿಸುವ ಆಶೆಯಿಂದ ನಮ್ಮ ಯುವಕ ಯುವತಿಯರು ತಮ್ಮ ಪಾವಿತ್ರ್ಯವನ್ನು ಕಳೆದುಕೊಳ್ಳುತ್ತಿರುವುದು ಆಧುನಿಕ ನಾಗರಿಕತೆಯ ಕೊಡುಗೆಯಾದರೆ, ತಾರೆಯರಂತೆ ಆಡಂಬರದ ಹಾಗೂ ಭೋಗ ಜೀವನದ ಬಯಕೆಯ ಭ್ರಮೆಯಿಂದ ಮುಗ್ಧ ತರುಣಿಯರು ಹಣದಾಶೆಗೆ ವೇಶ್ಯೆಯರಾಗುತ್ತಾ ಇರುವುದು ಆಧುನಿಕತೆಯ ಅಪರಾಧಕರವಾದ ಅಸಹಾಯಕತೆಯನ್ನು ಚಿತ್ರಿಸುತ್ತದೆ. ವಿವಾಹಿತರೂ ಕೂಡಾ ತೆರೆಯಮೇಲೆ ಕಂಡ ಪ್ರಣಯ ಸಲ್ಲಾಪಗಳನ್ನು ಅನುಕರಿಸಲು ತಮ್ಮ ಹೆಂಡತಿಯೂ ಕುಡಿಯಬೇಕು, ನಗ್ನನೃತ್ಯಮಾಡಬೇಕೆಂಬ ಬಯಕೆಯನ್ನು ಹೊಂದಿದ ಗಂಡಂದಿರ ಸಂಖ್ಯೆ ಏನೂ ಕಡಿಮೆ ಇಲ್ಲ. ಅಂಥ ಪ್ರಣಯ ಸಲ್ಲಾಪಗಳು ಹೆಂಡತಿಯಿಂದ ಸಿಗದೆ ಇದ್ದಾಗ ವೇಶ್ಯಾಗೃಹಗಳಿಗೆ ಹೋಗಿ ಪೂರೈಸಿಕೊಳ್ಳುವ ವ್ಯಕ್ತಿಗಳೂ ಇದ್ದಾರೆ. ಚಲನಚಿತ್ರಗಳು ವಿಶೇಷವಾಗಿ ಮಕ್ಕಳ ಮೇಲೆ ಹೆಚ್ಚು ಪರಿಣಾಮಕಾರೀ ಪ್ರಭಾವವನ್ನು ಬೀರುತ್ತವೆ. ಕೊಲೆ, ಸುಲಿಗೆ, ದರೋಡೆ, ಭೂತ ಪ್ರೇತಗಳಿಂದೊಡ ಗೂಡಿದ

ದೃಶ್ಯಗಳನ್ನು ನೋಡುವಾಗ ನಮ್ಮ ಮಕ್ಕಳು ಆವೇಶಪ್ರೇರಿತರಾಗುತ್ತಾರೆ. ಮತ್ತು ನಿದ್ದೆಯಲ್ಲಿಯೂ ಕನವರಿಸುವುದನ್ನು ನಾವೆಲ್ಲರೂ ನೋಡುತ್ತೇವೆ. ಚಲನ ಚಿತ್ರದ ಕಥೆ ಸಂಭಾಷಣೆ ಹಾಡು ಇವು ಓದು ಮತ್ತು ಬರಹಕ್ಕಿಂತಲೂ ಹೆಚ್ಚು ಆಕರ್ಷ-ಣೀಯವಾಗಿವೆ. ಅವರಿಗೆ ಚಿತ್ರದ ಕಥೆ ಸಂಭಾಷಣೆ ಹೆಚ್ಚು ನೆನಪು ಇರುತ್ತದೆ ಹೊರತು ಪಠ್ಯ ಪುಸ್ತಕಗಳ ವಿಷಯವಲ್ಲ. ಪುಸ್ತಕದಲ್ಲಿಯ ಕವಿತೆ ಅಥವಾ ರಾಷ್ಟ್ರಗೀತೆಯ ಬದಲು ಚಿತ್ರದ ಹಾಡುಗಳು ಕಂಠಪಾಠವಾಗಿರುವುದು ಸರ್ವಸಾಮಾನ್ಯ. ಶ್ರೇಷ್ಠ ವಿಜ್ಞಾನಿ, ಸಾಹಿತಿ, ಮೇಧಾವಿಗಳ ಹೆಸರಿಗಿಂತ ನಾಯಕ ನಾಯಕಿಯರ ಹೆಸರುಗಳು ಮಕ್ಕಳ ನಾಲಿಗೆಯ ಮೇಲಿರುವುದು ಚಲನ ಚಿತ್ರದ ದುಷ್ಪರಿಣಾಮವಾಗಿದೆ. ಚಿತ್ರದ ನಟ ನಟಿಯರು ಆದರ್ಶವ್ಯಕ್ತಿಗಳಾಗಿ ಕಾಣುತ್ತಿದ್ದಾರೆ. ಚಲನಚಿತ್ರದ ಪ್ರಭಾವದಿಂದ ನಮ್ಮ ಮಕ್ಕಳು ಪ್ರೇರಿತರಾಗಿ ಬ್ಯಾಂಕ ದರೋಡೆ, ಕೊಲೆ, ಕುಡಿತ, ಕಲಹ ಇಂಥ ಅಪರಾಧೀ ಕೃತಿಗಳನ್ನು ಮಾಡಿದಂಥ ಉದಾಹರಣೆಗಳು ಸಾಕಷ್ಟು. ಬಾಲಾಪರಾಧಕ್ಕೂ ಚಲನಚಿತ್ರಕ್ಕೂ ನೇರವಾದ ಸಂಬಂಧ ಇರದೇ ಇದ್ದರೂ ಚಲನಚಿತ್ರದ ಪ್ರಭಾವ ಸಾಕಷ್ಟು ಇದೆ ಎಂದು ಹೇಳಬಹುದು. ಚಲನಚಿತ್ರದ ಅನುಕೂಲತೆಗಳು ಇಲ್ಲವೆಂದಲ್ಲ. ಶೈಕ್ಷಣಿಕ ಪ್ರಸಾರವಷ್ಟೆ ಅಲ್ಲದೆ ಸಂಸ್ಕೃತಿಯನ್ನು ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ವರ್ಗಾಯಿಸಲು ಚಿತ್ರಗಳು ಸಹಕಾರಿಯಾಗಿವೆ. ನಿಜವಾಗಿ ಅವು ಒಂದು ಸಮಾಜದ ಗೌರವ ಘನತೆ ಮತ್ತು ಸಂಸ್ಕೃತಿಯ ಮೌಲ್ಯಗಳನ್ನು ಬಿಂಬಿಸುತ್ತವೆ. ಅಂಥ ಮೌಲ್ಯಗಳನ್ನು ಹೊಂದಿರುವ ಚಿತ್ರಗಳು ಬಹಳ ವಿರಳ ಮತ್ತು ಅಂಥ ಚಿತ್ರಗಳನ್ನು ವೀಕ್ಷಿಸುವವರ ಸಂಖ್ಯೆಯೂ ಕಡಿಮೆ. ಯುವಕರಲ್ಲಿ ಕ್ರಿಯಾಶೀಲತೆ, ಶಿಸ್ತು, ಸ್ವಾವ-ಲಂಬನೆ, ಮಾನಸಿಕ ವಿಕಾಸ, ಯೋಜನಾಶಕ್ತಿಯನ್ನು ಬೆಳೆಸುವ ಸಾಧನೆಗಳಾಗಬೇಕು. ಸಮಾಜದಲ್ಲಿರುವ ಜಾತಿ ಪದ್ಧತಿ, ವರದಕ್ಷಿಣೆ ಅಪರಾಧ, ಅಸ್ಪೃಶ್ಯತೆ, ವೇಶ್ಯಾವೃತ್ತಿ, ಕುಡಿತ, ಭಿಕ್ಷಾಟನೆ ಮುಂತಾದ ಸಾಮೂಹಿಕ ಸಮಸ್ಯೆಗಳ ತಿಳುವಳಿಕೆಯನ್ನು ಚಲನಚಿತ್ರಗಳು ಮಾಡಬೇಕು. ಯುವಕರಲ್ಲಿ ಸುಪ್ತ ಪ್ರತಿಭೆಯನ್ನು ಬೆಳಕಿಗೆ ತರುವ ಬದಲು ಮಾನಸಿಕ ತುಮುಲ, ಅಶಾಂತಿ, ಅತೃಪ್ತಿ, ದುಗುಡ ಮತ್ತು ಉದ್ರೇಕಗಳನ್ನು ಉಂಟುಮಾಡಿ ಪಾಶ-ವೀಯತೆಯನ್ನು ಕಲಿಸುವ ಚಿತ್ರಗಳಿವೆ.

ಜೂಜಾಟವು ಇನ್ನೊಂದು ವಾಣಿಜ್ಯೀಕೃತ ಮನರಂಜನೆ. ಇದು ಅನಾದಿಕಾಲ ದಿಂದ ಇದ್ದರೂ ಈಗ ಅವುಗಳ ಪ್ರಕಾರಗಳು ಹೆಚ್ಚಾದುದು ಕಂಡುಬರುತ್ತದೆ. ಪಂಥ ಕಟ್ಟುವುದಾಗಲಿ, ಇಸ್ಪೇಟಿನ ಆಟವಾಗಲಿ, ಕುದುರೆ ಪಂದ್ಯವಾಗಲೀ ನಡೆಯುತ್ತಿರುವುದು ಸರಕಾರದ ಅನುಮತಿಯಿಂದಲೇ. ಸೋಮಾರಿತನ, ಜೀವನೋಪಾಯಕ್ಕೆ ನಿರ್ದಿಷ್ಟವಾದ ಮಾರ್ಗವಿರದೇ ಇರುವದು, ಹಣಗಳಿಕೆಯ ಆಕರ್ಷಣೆ ಮತ್ತು ಒಮ್ಮೆಲೇ ಶ್ರೀಮಂತನಾ ಗಬೇಕೆಂಬ ಬಯಕೆ ಇವು ಜೂಜಾಟದ ಕೆಲವು ಪ್ರಮುಖ ಕಾರಣಗಳಾಗಿವೆ. ಇದರಿಂದ ವ್ಯಕ್ತಿಯ ಮೇಲೆ ಮತ್ತು ಅವನ ಕುಟುಂಬದ ಮೇಲೆ ದುಷ್ಪರಿಣಾಮಗಳಾಗಿ ವಿಭಜನೆ-

ಯನ್ನು ಹೊಂದುತ್ತವೆ. ಕಷ್ಟಪಟ್ಟುಗಳಿಸಿದ ಹಣವು ಜೂಜಾಟಗಳಲ್ಲಿ, ಕುಡಿತಗಳಲ್ಲಿ ವಿನಿಯೋಗವಾಗಿ ಕುಟುಂಬದ ಆರ್ಥಿಕ ಸ್ಥಿತಿ ಹದಗೆಡುತ್ತದೆ. ಅಲ್ಲದೆ ಕಲಹ, ಕೊಲೆ, ದ್ವೇಷ, ಸೇಡು ಇಂಥ ಸಮಾಜ ವಿರೋಧಿ ಕೃತಿಗಳಿಗೆ ಎಡೆಮಾಡಿಕೊಡುತ್ತದೆ.

ಆಕಾಶವಾಣಿ ಮತ್ತು ದೂರದರ್ಶನಗಳನ್ನು ಮನರಂಜನೆಗಾಗಿ ವ್ಯಾಪಕವಾಗಿ ಉಪಯೋಗಿಸಲಾಗುವುದು. ಆಕಾಶವಾಣಿಯಲ್ಲಿ ಬಿತ್ತರಿಸಲ್ಪಡುವ ಕಾರ್ಯಕ್ರಮಗಳಲ್ಲಿ ಚಲನಚಿತ್ರದ ಗೀತೆಗಳು ಮತ್ತು ದೂರದರ್ಶನದಲ್ಲಿ ಮೂಡುವ ಚಿತ್ರಗಳು ಹೆಚ್ಚು ಆಕರ್ಷಕವೆನಿಸಿವೆ. ಸುದ್ದಿ ಪ್ರಸಾರ ಮತ್ತು ಸಾಮಾಜಿಕ ಅರಿವು ಮೂಡಿಸುವುದರಲ್ಲಿ ಇವುಗಳ ಪಾತ್ರ ಹಿರಿದಾದುದು. ಆದರೆ ಆಕಾಶವಾಣಿ ಮತ್ತು ದೂರದರ್ಶನಗಳು ಸಂಪೂರ್ಣವಾಗಿ ಸರಕಾರದ ನಿಯಂತ್ರಣದಲ್ಲಿರುವುದರಿಂದ ಅವುಗಳ ದುಷ್ಪರಿಣಾಮ ಮತ್ತು ಸತ್ಪರಿಣಾಮಗಳೆಷ್ಟು ಎಂಬುದನ್ನು ಖಚಿತವಾಗಿ ಹೇಳಲು ಸಾಧ್ಯವಾಗುವುದಿಲ್ಲ.

ಬಿಡುವಿನ ಕಾಲವನ್ನು ಸದುಪಯೋಗಪಡಿಸಿಕೊಳ್ಳಲು ಒಳ್ಳೆಯ ಅವಕಾಶಗಳಿರುವ ವಾತಾವರಣವನ್ನು, ಅದರಲ್ಲಿಯೂ ವಿಶೇಷವಾಗಿ ನಗರಗಳಲ್ಲಿ ನಿರ್ಮಿಸುವುದು ಸರಕಾರದ ಕರ್ತವ್ಯವಾಗಿದೆ. ಕ್ಲಬ್, ನೃತ್ಯಮಂದಿರ, ಪಾನಗೃಹಗಳ ಮೇಲೆ ಸರಕಾರದ ಸಂಪೂರ್ಣ ನಿಯಂತ್ರಣವಿರಬೇಕು. ಆಟದ ಬಯಲಿನ ಅನುಕೂಲತೆಗಳಿಂದ ವಿವಿಧ ಪ್ರಕಾರದ ಆಟಗಳಾದ ಹಾಕಿ, ಫುಟ್‌ಬಾಲ್, ವಾಲಿಬಾಲ್, ಕ್ರಿಕೆಟ್‌ದಂಥ ಆಟಗಳನ್ನು ಆಡಬಹುದು. ಸಾಕಷ್ಟು ಆಟದ ಬಯಲಿನ ಅನುಕೂಲತೆ ಇರದೆ ಇದ್ದರೆ ನಮ್ಮ ದೇಶೀ ಆಟಗಳಾದ ಕಬಡ್ಡಿ, ಖೋಖೋ, ಕುಂಟಾಟ, ಕುಂಟಲಪಿ, ಹಗ್ಗದ ಆಟ ಮುಂತಾದವುಗಳನ್ನು ಕಡಿಮೆ ಖರ್ಚಿನಲ್ಲಿ ಆಡಿ ಮನರಂಜನೆಯನ್ನು ಪಡೆಯಬಹುದು. ವಾಚನಾಲಯ ಸೌಲಭ್ಯದಿಂದ ಮಕ್ಕಳಲ್ಲಿ ಓದುವ ಹವ್ಯಾಸ ಬೆಳೆಯುತ್ತದೆ ಮತ್ತು ಸಂಸ್ಕೃತಿಯು ಸಲೀಸಾಗಿ ಮುಂದಿನ ಪೀಳಿಗೆಗೆ ವರ್ಗಾಯಿಸಲ್ಪಟ್ಟು ಅದರ ಗುಣಮಟ್ಟವು ಹೆಚ್ಚುವುದು. ಉದ್ಯಾನಗಳು ನಗರದಲ್ಲಿ ಅತಿ ಅವಶ್ಯವಾದ ಸಂಗತಿಗಳು. ಬಿಡುವಿನ ವೇಳೆಯಲ್ಲಿ ಉದ್ಯಾನಗಳಿಗೆ ಹೋಗುವುದರಿಂದ ಮಾನವನು ಯಾಂತ್ರಿಕ ಜೀವನದಿಂದ ದೂರವಾಗುವನು ಮತ್ತು ಕೆಲಸ ಮಾಡಲು ಚೈತನ್ಯ ಪಡೆಯುವನು. ವಸ್ತು ಸಂಗ್ರಹಾಲಯಗಳು ನಿಜವಾಗಿ ಒಂದು ಸಮಾಜದ ಸಂಸ್ಕೃತಿ ಪರಂಪರೆಯ ಪ್ರತಿಬಿಂಬಗಳು. ಗತ ಕಾಲದ ವಸ್ತುಗಳನ್ನು ವೀಕ್ಷಿಸುವಾಗ ನಾವು ತನ್ಮಯರಾಗುತ್ತೇವೆ ಮತ್ತು ಆ ವಸ್ತುಗಳ ಬಗ್ಗೆ ಅಭಿಮಾನ ತಳೆಯುತ್ತೇವೆ ಅವು ಕೇವಲ ಮನರಂಜನೆಯನ್ನೀಯುವ ವಸ್ತುಗಳಾಗಿರದೆ ಸಮುದಾಯ ಭಾವನೆಯನ್ನು ಪ್ರೇರಿಸುತ್ತವೆ. ವಸ್ತು ಸಂಗ್ರಹಾಲಯವೆಂದರೆ ತೆರೆದಿಟ್ಟಂತಹ ಒಂದು ಐತಿಹಾಸಿಕ ಪುಸ್ತಕ, ಜ್ಞಾನ ಭಂಡಾರ. ಅದರಂತೆ ಪ್ರಾಣಿಸಂಗ್ರಹಾಲಯಗಳು ನಮ್ಮನ್ನು ವಿಚಿತ್ರವಾದ ಪ್ರಪಂಚಕ್ಕೆ ಒಯ್ಯುತ್ತವೆ. ವಿವಿಧ ಪ್ರಕಾರದ ಪ್ರಾಣಿಗಳು, ಅವುಗಳ ಚಟುವಟಿಕೆಗಳು ನಮ್ಮ ಮನವನ್ನು ರಂಜಿಸು-

ತ್ತವೆ. ಪ್ರಾಣಿಗಳ ಬಗ್ಗೆ ನಮ್ಮಲ್ಲಿ ಅನುಕಂಪ ಮೂಡುತ್ತದೆ. ಕಲಾಮಂದಿರ ಮತ್ತು ರಂಗ ಮಂಟಪಗಳು ಸುಪ್ತ ಪ್ರತಿಭೆಯನ್ನು ಪ್ರದರ್ಶಿಸಲು ಅವಕಾಶವನ್ನೀಯುತ್ತವೆ. ಪ್ರವಾಸಿ ಕೇಂದ್ರ ಮತ್ತು ಇತರ ಸ್ಥಳಗಳು ಸ್ವಾಭಾವಿಕವಾದ ಮನರಂಜನೆಗಳನ್ನು ಕೊಡುತ್ತವೆ. ಆದ್ದರಿಂದ ಬಿಡುವಿನ ವೇಳೆಯಲ್ಲಿ ಅಂತಹ ಸ್ಥಳಗಳನ್ನು ವೀಕ್ಷಿಸಲು ಸರಿಯಾದ ಸಾರಿಗೆ ವ್ಯವಸ್ಥೆ ಸರಕಾರದಿಂದ ಆಗಬೇಕು. ಈ ಮೇಲೆ ಹೇಳಿದ ಸೌಲಭ್ಯಗಳೂ ದೊರ-ಕಿದಲ್ಲಿ ವಾಣಿಜ್ಯೀಕೃತ ಮನರಂಜನೆಯ ಆಕರ್ಷಣೆ ಕಡಿಮೆಯಾಗಿ ಅದರ ದುಷ್ಪರಿಣಾ-ಮಗಳೂ ಕೂಡಾ ಕಡಿಮೆಯಾಗುವವು. ಇಷ್ಟಲ್ಲದೆ ಸಂಗೀತ ನೃತ್ಯ, ಭಜನೆ, ಬಯಲಾಟ ಕೋಲಾಟ, ಕರಡಿವಾದ್ಯ, ಕಹಳೆ. ಉತ್ಸವ, ಜಾತ್ರೆಯಂತಹ ಸಾಂಪ್ರದಾಯಿಕ ಮನರಂ-ಜನೆಗಳನ್ನು ಪ್ರೋತ್ಸಾಹಿಸುವುದು ಒಳಿತು.

ನವಭಾರತ ನಿರ್ಮಾಪಕ ಶ್ರೀ ಗೋವಿಂದ ಪೈ

● **ಡಾ. ಎಸ್. ಎಂ. ವೃಷಭೇಂದ್ರಸ್ವಾಮಿ**

ನಮ್ಮ ಈ ನವಭಾರತ ರಾಷ್ಟ್ರಕ್ಕೆ ಎರಡು ಮುಖಗಳು — ಒಂದು ರಾಜಕೀಯ, ಇನ್ನೊಂದು ಸಂಸ್ಕೃತಿ. ಭಾರತದ ಸ್ವಾತಂತ್ರ್ಯ, ಹೋರಾಟ, ನೂತನ ರಾಷ್ಟ್ರ ನಿರ್ಮಾಣ, ಹೊಸ ಸಮಾಜದ ಅವಿಷ್ಕರಣ ಮುಂತಾದ ಮಹಾಸಾಧನೆಗಳನ್ನೂ ಆಗು ಮಾಡಿದ ಪ್ರಣ್ಯಚೇತನಗಳು ಶ್ರೀ ಬಾಲಗಂಗಾಧರ ಟಿಳಕ್, ಶ್ರೀ ಗೋಪಾಲಕೃಷ್ಣ ಗೋಖಲೆ, ಮಹಾತ್ಮಾ ಗಾಂಧಿ, ಪಂಡಿತ ಜವಾಹರಲಾರ ನೆಹರು, ಸರ್ದಾರ್ ವಲ್ಲಭಬಾಯಿ ಪಟೇಲ, ರಾಜೇಂದ್ರ ಪ್ರಸಾದ, ಕಾಮರಾಜ ನಾಡರ್, ಎಸ್. ನಿಜಲಿಂಗಪ್ಪ, ಮುಂತಾದವರು. ಅದಕ್ಕೆ ಪೋಷಕವಾಗಿ ನಿಲ್ಲುವ ಸಾಂಸ್ಕೃತಿಕ ಕ್ರಾಂತಿ, ಕಲೆ ಸಾಹಿತ್ಯ ನಿರ್ಮಾಣ, ನೂತನ ಸಾಮಾಜಿಕ ಹಾಗೂ ರಾಷ್ಟ್ರಕ ಪ್ರಜ್ಞೆ ಬೆಳೆಯಿಸಿದ ನವನಿರ್ಮಾಪಕರಲ್ಲಿ ಶ್ರೀ ಸ್ವಾಮಿ ವಿವೇಕಾನಂದ, ಸುಬ್ರಹ್ಮಣ್ಯ ಭಾರತಿ, ರವೀಂದ್ರನಾಥ ಠಾಕೂರ, ಆರ್. ಜಿ. ಭಂಡಾರಕರ, ಡಾ. ನೀಲಕಂಠ ಶಾಸ್ತ್ರಿ, ಮುಂತಾದ ಮಹಾಪುರುಷರ ಮಾಲಿಕೆಯಲ್ಲಿ ಸೇರುವ ದಿವ್ಯಚೇತನ ರಾಷ್ಟ್ರಕವಿ ಗೋವಿಂದ ಪೈ ಅವರದು. ಕನ್ನಡ ನಾಡಿನ ಕಾಸರಗೋಡಿನಲ್ಲಿಯೇ ಕುಳಿತು, ಹೆಚ್ಚಾಗಿ ಕನ್ನಡದಲ್ಲಿಯೇ ಕಾವ್ಯ, -ಸಂಶೋಧನ ಮಾಡಿದರೂ ಅಖಿಲ ಭಾರತ ಮಟ್ಟದ. ಅಂತರರಾಷ್ಟ್ರೀಯ ಖ್ಯಾತಿಯ ಸಂಶೋಧಕರಾಗಿ, ಬೆಳಗಿದ ಮಹಾವ್ಯಕ್ತಿ ಶ್ರೀ ಗೋವಿಂದ ಪೈ. ರಾಷ್ಟ್ರದ ಬಿಡುಗಡೆ. ಕರ್ನಾಟಕ ಏಕೀಕರಣ, ನವಭಾರತ ನಿರ್ಮಾಣ, ಸಾಂಸ್ಕೃತಿಕ ಪುನರುತ್ಥಾನವೇ ಜೀವನದ ಗುರಿಯಾಗಿ ಬಾಳಿದ ಪೈಗಳ ಬದುಕಿನ -ಸಾಧನೆಗಳ (ಕ್ರಿ. ಶ. 1883-1963) ಸಮೀಕ್ಷೆ-ಮಾಡಿ, ಅವರು ನಮ್ಮ ಇಂದಿನ ಸಮಾಜಕ್ಕೆ ತೋರಿದ 'ದಾರೀದೀಪ' ಯಾವುದು ? ಅಂಥ ಮಹಾನ್ ವ್ಯಕ್ತಿಗಳು ನಮಗಿಂದು 'ಆದರ್ಶ' ರಾಗಬಾರದೇ ? ಮುಂತಾಗಿ ವಿಚಾರಮಾಡುತ್ತಿದೆ ಇಂದಿನ ಮನಸ್ಸು.

'ತಾಯೆ ಬಾರ ಮೊಗವ ತೋರ
ಕನ್ನಡಿಗರ ಮಾತೆಯೆ,
ಹರಸುತಾಯೆ, ಸುತರ ಕಾಯೆ
ನಮ್ಮ ಜನ್ಮದಾತೆಯೆ' ಎಂಬ ಕವಿವಾಣಿ ನಮ್ಮೆಲ್ಲರ

ಕಿವಿವಾಣಿಯಾಗಲಿ, ಕನ್ನಡ ಕುಲದೀಪಕರಾದ ಪೈ ಅವರೆಲ್ಲ ಸಾಧನೆಗಳನ್ನು ಗಮನಿಸಿ-ದರೆ ನವಭಾರತ ನಿರ್ಮಾಪಕ ಎಂಬುದರಲ್ಲಿ ಸಂಶಯವಿಲ್ಲ. ಇದು ಶ್ರೀ ಪೈಗಳ ಜನ್ಮಶತಮಾನೋತ್ಸವ ವರ್ಷ. ಕರ್ನಾಟಕದಾದ್ಯಂತ ಮುಂಬಯಿ, ಮದ್ರಾಸು, ತ್ರಿವೇಂದ್ರಂ, ದೇಹಲಿಗಳಲ್ಲಿ ಈ ಶತಮಾನೋತ್ಸವ ನೇರವೇರುತ್ತದೆ.

ಶ್ರೀ ಗೋವಿಂದ ಪೈ ಅವರು ಪರಶುರಾಮ ಕ್ಷೇತ್ರ-ವೆಂದು ಪ್ರಸಿದ್ಧವಾದ ಕರಾವಳಿ ಕನ್ನಡ ನಾಡಿನ ಮಂಜೇಶ್ವರದಲ್ಲಿ 23-3-1883 ರಲ್ಲಿ ಜನಿಸಿದರು. ಮಂಜೇಶ್ವರ, ಮದ್ರಾಸುಗಳಲ್ಲಿ ಅಭ್ಯಾಸಮಾಡಿ, ಯಾವ ನೌಕರಿಗೂ ಆಸೆಪಡದೆ, ತಮ್ಮ ಹೊಟ್ಟೂರನ್ನೇ, ಹಿರಿಯರಿಂದ ಬಂದ ಮನೆ-ಮಾರನ್ನೇ ಆಶ್ರಯಿಸಿ, ಸ್ವತಂತ್ರ ಧೀರ ವ್ಯಕ್ತಿತ್ವವನ್ನು ರೂಪಿಸಿಕೊಂಡರು. ದೈವದತ್ತವಾದ ಪ್ರತಿಭೆಯ ಸ್ಫುರಣವಾಗಿ ಕಾವ್ಯ ನಾಟಕ, ನೆನಪಿನ ಶಕ್ತಿಯ ವಿಶೇಷ ಕೊಡುಗೆ ಹಾಗೂ ನಿರಂತರ ಅಭ್ಯಾಸ ಚಿಂತನಗಳಲ್ಲಿ ಮೂಡಿಬಂದ ಚಾರಿತ್ರಿಕ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಸಂಶೋ-ಧನೆಗಳು, ಬರಹಗಳು ಪೈಗಳ ಪ್ರವೃತ್ತಿ—ವೃತ್ತಿಗಳಾದವು. ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಚೇತನ. ಸಾಮಾಜಿಕವಾಗಿ ಸ್ವತಂತ್ರವಾಗಿ ಬೆಳೆದು ಬಾಳಿದ್ದರಿಂದ. ಧೈರ್ಯ ಸಾಹಸ ಹಾಗೂ ಅಪ್ಪಟ ಅಪರಂಜಿ ವ್ಯಕ್ತಿತ್ವದ ಮಾದರಿಯಾದರು ಗೋವಿಂದ ಪೈ. ಬದುಕಿನ ಆಮಿಷಗಳಿಗೆ ವ್ಯಕ್ತಿತ್ವವನ್ನು ಮಾರಿಕೊಳ್ಳದೇ ಒಂದು ರೀತಿಯಲ್ಲಿ ವೀರ ಸಂನ್ಯಾಸಿಯಂತೆ, ಧೀರ ಸೇನಾನಿಯಂತೆ ಹೋರಾಡಿದರು. ದುಡಿದರು, ಬರೆದರು, ಕಿರಿಯರಿಗೆ ಮಾರ್ಗದರ್ಶಕರಾದರು ಗೋವಿಂದ ಪೈ. ಹೊಸ ಹಾದಿ-ಯನ್ನು ಹಿಡಿದೇ ನಡೆವ, ಹೊಸತನವನ್ನೇ ಸಾಧಿಸುವ, ಪ್ರತಿರೋಧನಲ್ಲಿಯೂ ಸೋಲದ ನಿಷ್ಠೆಯ ಬದುಕು ಪೈಗಳದು. ಅವರಿಗೆ ಅತ್ಯಂತ ಪ್ರಿಯ-ಪೂಜ್ಯನಾದ 'ಗೊಮ್ಮಟ' ನೇ ಅವರ ಜೀವನದ ಆದರ್ಶ. ಅದೇ ಎತ್ತರವನ್ನು ಮಾನವೀಯತೆ-ಯಲ್ಲಿ ಸಾಧಿಸಿದುದು ಶ್ರೀ ಗೋವಿಂದ ಪೈಗಳ ಹಿರಿಯ ಆದರ್ಶ. ಅವರ ಪ್ರಥಮ ಕವನ ಸಂಕಲನ 'ಗಿಳಿವಿಂಡು' —ಅದರ ಮುಖಪುಟದಲ್ಲಿ ಪೈಗಳು ಮುದ್ರಿಸಿರುವ 'Those who make nothing new, destroy' ಎಂಬ ಮೆಸ್ ಫೀಲ್ಡನ ಮಾತಿಗೆ ಸಮರ್ಥ ಉದಾಹರಣೆ ಅವರೇ ! ಇಂಥ ಪೈಗಳು 6-9-1963 ರಂದು ಇಹಲೋಕವನ್ನು ತ್ಯಜಿಸಿದರು.

ಶ್ರೀ ಸುಬ್ಬಣ್ಣ ಎಕ್ಕುಂಡಿಯವರೆನ್ನುವಂತೆ—

'ಹಣ್ಣು-ಜೀವದ ಕಣ್ಣು ಕಂಡದ್ದು ಇತಿಹಾಸ,
ಕಿವಿಗೊಟ್ಟು ಕೇಳಿದ್ದು ಯಾತನೆಯ ದೊಡ್ಡ ಕಥೆ
ಶಿಲುಬೆಗೇರಿಸಿದಂಥ ಕ್ರಿಸ್ತಪಟ್ಟಿರುವ ವ್ಯಥೆ
ಸಿದ್ಧಾರ್ಥ ಬುದ್ಧನಾಗಲು ಕಳೆದ ವನವಾಸ'

ಆದರೂ ಬದುಕಿನ ಕೊನೆಯುವರೆಗೂ ಪೈಗಳು 'ಬೆಳ್ಳಿ ಮೀಸೆಯ ಮಗು' ವಾಗಿಯೇ ಬಾಳಿದವರು. ೧೯೬೨ರಲ್ಲಿ ಪ್ರಕೃತ ಲೇಖಕ ಕಾಸರಗೋಡಿನ ಅವರ ಮನೆಯಲ್ಲಿ ಭೇಟಿಯಾದ ನೆನಪು. ಕರ್ನಾಟಕದ ಗವಿಯಲ್ಲಿ ಪುರುಷ ಸಿಂಹ ಪೈಗಳನ್ನು ಕಂಡು ಮಾತನಾಡಿದ ಘಟನೆ ಅವಿಸ್ಮರಣೀಯ. ಅವರ ಆತ್ಮೀಯತೆ ಅವರ ಬುದ್ಧಿ, ಮೃದು ಹೃದಯ, ನಗೆಮುಖ, ಕನ್ನಡಾಭಿಮಾನ, ತರುಣರನ್ನು ಒಡೆದೆಬ್ಬಿಸುವಂಥದು. ಆ ಪ್ರೀತಿಯ ಆದರದ 'ಹುಲಿಮುತ್ತಿ'ನ ಅನುಭವ ಮರೆಯಲಾರದಂಥದು.

ಶ್ರೀ ಗೋವಿಂದ ಪೈಗಳ ಜೀವನದ ಮಹಾಸಾಧನೆ, ಅವರ ಸಂಶೋಧನೆ. ಅನೇಕ ಸಂಗತಿಗಳನ್ನು ನೆನಪಿನಲ್ಲಿಟ್ಟುಕೊಳ್ಳಬಲ್ಲ ವಿಶೇಷ ಬುದ್ಧಿಶಕ್ತಿ ಪೈಗಳಿಗಿತ್ತು. ಬಂಗಾಲಿ, ಜಪಾನಿ, ಉರ್ದು, ತಮಿಳ್, ಹಿಂದಿ, ತುಳು, ಕೊಂಕಣಿ, ಇಂಗ್ಲೀಷ, ಕನ್ನಡ ಮುಂತಾದ ಇಪ್ಪತ್ತು ಭಾಷೆಗಳನ್ನು ಬಲ್ಲವರಾಗಿದ್ದರು; ಪೈ. ಸುಮಾರು 180 ಸಂಶೋಧನ ಲೇಖನಗಳನ್ನು ಬರೆದಿರುವ ವಿಶೇಷ ಕೀರ್ತಿ ಗೋವಿಂದ ಪೈಗಳದು. ಅವರ ನಿಶಿತಮತಿ, ವೈಜ್ಞಾನಿಕ ಮನೋಭಾವ, ಪ್ರಾಮಾಣಿಕತೆ – ದಿಗ್‌ಭ್ರಮೆಗೊಳಿಸುವಂಥ ಮೇಧಾವಿತನದ್ದು. ತುಳುನಾಡು, ಕೊಂಕಣಿ ಭಾಷೆಯ ಮೂಲಚೂಲಗಳ ಅನ್ವೇಷಣೆ, ತುಳು–ಗ್ರೀಕ್ ಸಂಬಂಧಗಳ ಸಂಶೋಧನೆ, ಪೈಗಳ ಕೀರೀಟದ ವಿಶೇಷ ವಜ್ರ. ಅಂತೆಯೇ ಕರ್ನಾಟಕದ ಪ್ರಾಚೀನತೆ, ಜೈನ ಧರ್ಮದ ಆಗಮನ, ಪ್ರಾಚೀನ ಭಾರತಕ್ಕಿದ್ದ ಗ್ರೀಕ್–ರೋಮ್ ಸಂಬಂಧಗಳು, ಕರ್ನಾಟಕದ ರಾಜಮನೆತನಗಳಾದ ಸಾತವಾಹನ, ಗಂಗ, ಕದಂಬ, ಚಾಳುಕ್ಯ, ರಾಷ್ಟ್ರಕೂಟ ವಿಜಯನಗರ ಮುಂತಾದವುಗಳ ಸಂಶೋಧನೆ, ವಿಚಾರ ವಿಶ್ಲೇಷಣೆ ಒಗಟುಗಳನ್ನು ಒಡೆಯುವಿಕೆ. ಜೈನ, ಬೌದ್ಧ, ವೀರಶೈವ, ಕ್ರೈಸ್ತ. ಮಹಮ್ಮದೀಯ ಧರ್ಮ ಹಾಗೂ ಧರ್ಮ ಪುರುಷರ ಜೀವನ - ಕಾಲ - ಸಾಧನೆಗಳ ಐತಿಹಾಸಿಕ ಪುನರಾರಚನೆ ಪೈಗಳ ಕಿರೀಟದ ಇನ್ನೊಂದು ಮುಕುಟಮಣಿ ಶ್ರೀ ಗೋವಿಂದ ಪೈಗಳನ್ನು ಬೇಂದ್ರೆಯವರು 'ನೀವು ಕಾಲಜ್ಞಾನಿ, ಮುಗ್ಧ ಅಕ್ಕರಿಗ, ವಿದಗ್ಧ' ಎಂದು ವರ್ಣಿಸಿರುವುದು ಅಕ್ಷರಶಃ ಸತ್ಯ. ಬುದ್ಧನ ಜನನ ಕ್ರಿ. ಪೂ. 30–3–581 ರಲ್ಲಿ. ಪರಿನಿರ್ವಾಣ ಕ್ರಿ. ಪೂ. 15–4–501 ರಲ್ಲಿ ಎಂದು ಪೈಗಳು ಸಂಶೋಧನಪೂರ್ವಕವಾಗಿ ನಿರ್ಧರಿಸಿದ್ದಾರೆ. ಅಂತೆಯೇ ಪೈಗಂಬರರ ಜೀವನ ದಿನಾಂಕಗಳು, ಪಂಚಾಚಾರ್ಯರ ಕಾಲಮಾನ, ಬಸವೇಶ್ವರ, ದೇವರ ದಾಸಿಮಾರ್ಯರ ಕಾಲ ಮುಂತಾದ ಭೂತಕಾಲದ ಹೃದಯಪ್ರವೇಶಿಸಿ ಆಯಾವ ವ್ಯಕ್ತಿ, ವಸ್ತು, ಘಟನೆಗಳ ಬಗೆಗೆ ಮಾಡಿದ ಕಾಲನಿರ್ಣಯ ಎಂಥ ಸಂಶೋಧಕರನ್ನೂ ಬೆರಗುಗೊಳಿಸುತ್ತದೆ. ಅಲ್ಲದೇ ಕಾಲ–ದೇಶ ವಿಚಾರಗಳ ಸಮಸ್ಯೆಯಾಗಿರುವ ಪಂಪ, ರನ್ನ, ಕುಮಾರವ್ಯಾಸ, ರತ್ನಾಕರವರ್ಣಿ. ಪಾರ್ತಿ - ಸುಬ್ಬ, ಮುದ್ದಣ್ಣ ಮುಂತಾದವರ ಬಗೆಗೆ ಪೈಗಳು ಮಾಡಿದ ಸಂಶೋಧನೆಗಳೇ ಒಂದು 'ಕನ್ನಡ ಸಾಹಿತ್ಯ ಚರಿತ್ರೆ' ಯ ಸಂಪುಟದಷ್ಟಿದೆ. ಶ್ರೀ ಗೋವಿಂದ ಪೈ ಸ್ಮಾರಕ ಸಂಪುಟವಾದ 'ದೀವಿಗೆ'

ಯಲ್ಲಿ ನಾನು ಬರೆದ ಲೇಖನದಲ್ಲಿ ಪೈಗಳ ಸಂಶೋಧನ ಚಾತುರ್ಯವನ್ನು ಹೀಗೆ ವರ್ಣಿಸಿದ್ದೆ. "ಸಿಂಹಸದೃಶ ಸಾಹಸ ಪಯಣಿಗ ಪೈ" ಗತಕಾಲದ ಸಾಗರದಲ್ಲಿ ಈಜಿ, ಶಾಸನಗಳ ದ್ವೀಪಗಳಲ್ಲಿ ಕಾಲೂರಿ, ಸಾಹಿತ್ಯ ಗ್ರಂಥಗಳ ಹೇಳಿಕೆಗಳ ಪ್ರವಾಹದಲ್ಲಿ ಳಿದು, ಮಿತಿ–ತಿಥಿಗಳ ಬಂಡೆಗೆ ಹಾಯ್ದು ಎಲ್ಲೆಲ್ಲಿಯೋ ಚಲಿಸಿ, ಸಮುದ್ರದಾಳದ ಕಾಳದ ತಿಳಿಮಣ್ಣಿನಲ್ಲಿ ಮೂಡಿದ ಮೀನಿನ ಹೆಜ್ಜೆಗಳನ್ನು ಸಿಂಹರಾಜ ತನ್ನ ಗುಹೆ-ಯಲ್ಲಿಯೇ ಕುಳಿತು ಗುರುತಿಸುವ ಸಾಹಸ ಒಂದು ಅದ್ಭುತ. ಹೀಗೆ, ಪೈಗಳ ಸಂಶೋ-ಧನೆ ಸಿಂಹದ ಗವಿಯಲ್ಲಿ ಮೀನಿನ ಹೆಜ್ಜೆಗಳನ್ನು ಹುಡುಕುವ ಸಾಹಸ".

ಸಾಮಾನ್ಯವಾಗಿ ಸಂಶೋಧನೆ ಮತ್ತು ಸೃಜನಶೀಲತೆ ಒಬ್ಬನೇ ವ್ಯಕ್ತಿಯಲ್ಲಿ ಕಾಣುವುದು ದುಸ್ತರವಾದುದು. ಆದರೆ, ಪೈಗಳು ಮಾತ್ರ ಇದಕ್ಕೆ ಬಹುಶಃ ಕನ್ನಡದಲ್ಲಿ ಏಕೈಕ ಉದಾಹರಣೆ. ಪೈಗಳು ನವರಾಷ್ಟ್ರ ನಿರ್ಮಾಪಕರಾದಂತೆ, ಕನ್ನಡದ ನವೋ ದಯ ಕಾವ್ಯ ನಿರ್ಮಾಪಕರಲ್ಲಿ ಒಬ್ಬರು. 'ಪ್ರಾಸ' ದ ಬಂಧನವನ್ನು ಕಡಿದೊಗೆದ ಧೈರ್ಯ ಪೈಗಳದು. ಕಾವ್ಯ ನೇರ-ಸರಳ-ಎಂಬುದನ್ನೊಪ್ಪದ ಕವಿ ಪೈ. ನಾರಿ-ಕೇಳಪಾಕಕ್ಕೂ ಮೀರಿದ 'ಪನಸಪಾಕ' (ಹಲಸಿನ ಹಣ್ಣಿನ ಪಾಕ) ಪೈಗಳ ಕವನಗಳು, ಕಾವ್ಯಗಳು. ಬಿಡಿಸುವುದು ಕಷ್ಟವಾದರೂ, ಪಡೆವ ರುಚಿ ವಿಶೇಷವೇ ಆದುದು. ಸುಮಾರು 180 ಸಣ್ಣ-ದೊಡ್ಡ ಕವನಗಳನ್ನು ನಿರ್ಮಿಸಿದ ಪೈಗಳ ಪ್ರತಿಭೆ ಅಸಾಮಾನ್ಯ-ವಾದುದು. ಅವರ 'ಗಿಳಿವಿಂಡು' 'ಗೊಲ್ಗೊಥಾ', 'ವೈಶಾಖಿ' ಮುಂತಾದ ಕವನ ಸಂಪುಟಗಳು, ಅಡಿಟಿಪ್ಪಣಿ ಕವಿತೆಗಳೆಂಬ ಅಪಪ್ರಥೆಗೆ ಪಕ್ಕಾದರೂ, ಅಲ್ಲಿ ಮಿಡಿ-ಯುವ ಭಾವ ವಿನ್ಯಾಸ ವಿಶ್ವಮಾನವೀಯವಾದದು, ಸೌಂದರ್ಯಾರಾಧಕ ದೃಷ್ಟಿ ಯದು.

ಭಾರತೀಯ ಸಾಂಸ್ಕೃತಿಕ ರಂಗದ ರಮ್ಯ ನಕ್ಷತ್ರಗಳಲ್ಲೊಂದಾಗಿರುವ ಶ್ರೀ ಗೋವಿಂದ ಪೈಗಳ ಬದುಕಿನ ಮಹತ್‌ಸಾಧನೆ ಅವರ ಸಾಹಿತ್ಯ. ಅಲ್ಲಿ ಮಾನವೀಯ ಅನುಕಂಪ, ಕೃಷ್ಣಭಕ್ತಿ, ಪ್ರಕೃತಿ ಪ್ರೇಮ, ನಾಡು–ನುಡಿಗೌರವ, ರಾಷ್ಟ್ರಾಭಿಮಾನಗಳು ಪ್ರಖರವಾಗಿ ಮೂಡಿ ನಿಂತಿವೆ. ಕ್ರಿಸ್ತ, ಬುದ್ಧ ಕೃಷ್ಣರಂಥ ದೇವಮಾನವರಲ್ಲಿ ಭಕ್ತಿ ನಿಷ್ಠೆ, 'ಹಿರೋಶಿಮಾ' 'ನಮಬಾನಿ' 'ಯುದ್ಧ ನಿಂತಿತೆ' ? 'ಗಾಂಧಿಯ ಅಂತ್ಯ', ಮುಂತಾದ ಸಮಕಾಲೀನ ಹಾಗೂ ಸಾರ್ವಕಾಲೀನ ವಿಚಾರ–ಭಾವ–ಕಲ್ಪನೆಗಳ ವಿನ್ಯಾಸ-ಗಳು ಅನ್ಯಾದೃಶವಾದುವು.

ಕತ್ತಿಯಿರಿದಾಟ, ಗುಂಡೆಸೆದುಕೊಲ್ಲಾಟ
ಎಣ್ಣೆ ಕಿಚ್ಚಿಕ್ಕಿ ಮನೆಮನೆಯ ಕೆಂಡಾಟ
ಹೆಂಗಸರ ಮಾನಭಂಗಿಸುವ ಬಂಡಾಟ

ಗಂಡು ಹೆಂಗಳ ಮತಾಂತರಿಪ ಹೊಲ್ಲಾಟ ಎಂದು
ನವಖಾಲಿಯ ನರಹತ್ಯೆಯನ್ನು ವರ್ಣಿಸಿರುವುದು.

ಇನ್ನಿನಿಸು ನೀ ಮಹಾತ್ಮಾ ಬದುಕಬೇಕಿತ್ತು !
ಈಗ ಭಾರತಕಗತ್ಯವಿದೆ ನಿನ್ನ........
ಸ್ವಾರ್ಥಪರರಾಗಿಹೆವು, ದೇವರಿಲ್ಲೆಮಗಿಂದು
ಸೋದರತೆ ಇಲ್ಲ, ಮುಂದಿನದಿಲ್ಲಗೊಡವೆ
ಧರ್ಮಬಾಹಿರರೆಮ್ಮನೆತ್ತಲಿನ್ನಾರೆಂದು
ತೋಚದೆ ಮಹಾತ್ಮಾ ನಿನಗಿಂತು ಮೊರೆಯಿಡುವೆ

ಎಂದು ರಾಷ್ಟ್ರಪ್ರಜ್ಞೆ—ಪ್ರಗತಿಗಾಗಿ ಮೊರೆಯಿಟ್ಟಿರುವರು. ಇಂದಿಗೂ ನಮ್ಮ ಸಮಕಾಲೀನ ಭಾರತಕ್ಕೆ ಇದೇ ಮಾತು ಅನ್ವಯವಾಗುತ್ತದೆ. ಹೀಗೆ, ಪೈಗಳ ಕಾವ್ಯ ಮಾನವ ಮಹಾಪುರುಷನ ಅನುಕಂಪದ, ಆತ್ಮೀಯತೆಯ, ಆದರ್ಶ ಬದುಕಿನ ಪ್ರೇರಣೆಯ ಕಾವ್ಯ. ಹೀಗೆ, ನವೋದಯ ಕಾವ್ಯದ ಸರ್ವಪ್ರೇರಣೆ—ಸ್ಫೂರ್ತಿಗಳಿಗೆ ಕೇಂದ್ರಶಕ್ತಿ ಗೋವಿಂದ ಪೈಗಳ ಕಾವ್ಯ. ನೂತನ ಭಾಷೆ. ವಿನೂತನ ಅಲಂಕಾರ, ಹೊಸ ಪ್ರಯೋಗ, ಹೊಸ ಪದಗಳ ಆಯ್ಕೆ ಪ್ರಯೋಗ, ಪೈಗಳಕಾವ್ಯದ ಗುಣಗಳು. ಅವರ ಸರಣಿ ರಗಳೆಯ 'ನೀಳ್ಗವನ'ಗಳಂತೂ — 'ಅದರಲ್ಲೂ' ಗೋಲ್ಗೊಥಾ. ವೈಶಾಖಿಗಳು, ಭಾಷೆ ಕನ್ನಡವಾದರೂ ಅವುಗಳ ದೃಷ್ಟಿ-ದರ್ಶನ ವಿಶ್ವಮಾನವೀಯವಾದುದು. ಅದೇ ರೀತಿ ಪೈಗಳ ನಾಟಕಗಳು-ಹೆಬ್ಬೆರಳು, ಚಿತ್ರಭಾನು ಜಪಾನಿನ 'ನೋ' ನಾಟಕ, ಗಮನಾರ್ಹ ಸಾಧನೆಗಳು. ಶ್ರೀ ಗೋವಿಂದ ಪೈಗಳ ಆತ್ಮಕಥನ ಪರ ಲೇಖನಗಳು, ವ್ಯಕ್ತಿ ಚಿತ್ರಗಳು, ರಸವಿಮರ್ಶೆಯ ಲೇಖನಗಳೂಅಷ್ಟೇ ಗಮನಾರ್ಹವಾಗಿ ಆದರ್ಶಸಾಧನೆಗಳು.

ಒಟ್ಟಿನಲ್ಲಿ ಶ್ರೀ ಗೋವಿಂದ ಪೈಗಳದು ಸಂಶೋಧನೆ ಮತ್ತು ಸೃಜನಶೀಲ ಬರಹಗಳ ಸಮ್ಮಿಳನ—ಸಾಧನೆಯ 'ಏಕಲವ್ಯ' ವ್ಯಕ್ತಿತ್ವ. ನಾಡು—ನುಡಿಪ್ರೇಮ. ರಾಷ್ಟ್ರ ಪ್ರೇಮದ ಮೆಟ್ಟಿಲಾಯಿತು ಪೈಗಳಿಗೆ. ಭಾರತೀಯತೆ ವಿಶ್ವ ಮಾನವೀಯ ಪ್ರಜ್ಞೆಯ ವಿಕಾಸದ ಹಾದಿ ತೆರೆಯಿತು. ಜಗತ್ತಿನ ಸಾಂಸ್ಕೃತಿಕ ಆಕಾಶದ ಚಿರತಾರೆಗಳಾದ ಕೃಷ್ಣ, ಬುದ್ಧ, ಪೈಗಂಬರ್ ಕ್ರೈಸ್ತ ಮುಂತಾದ ಮಹಾನ್ ಶಕ್ತಿಗಳು ಪೈಗಳ ಜೀವನ ಯಾನದ ದಾರಿದೀಪಗಳು. ನವಭಾರತದ ಕನಸು ಕಂಡ ನೂತನ ಸಮಾಜದ ಬರುವಿಕೆಯನ್ನು ಹಾರೈಸಿದ, ಬರಹ-ಬದುಕುಗಳಲ್ಲಿ ಸಮಾಂತರ ನಿಷ್ಠೆ ಮೆರೆದ ರಾಷ್ಟ್ರಕವಿ ಗೋವಿಂದ ಪೈ ನಮ್ಮ ಇಂದಿನ ಪೀಳಿಗೆಗೆ ಮಾರ್ಗದರ್ಶಕ ಚೇತನ. ಸ್ಫೂರ್ತಿದಾಯಕ ಶಕ್ತಿಕೇಂದ್ರ. ಪೈಗಳ ಜನ್ಮದಿನ, ಇಂದಿಗೆ ನೂರು ವರ್ಷಗಳ ಹಿಂದೆ. ಮುಂದಿನ ನೂರಾರು ವರ್ಷಗಳಲ್ಲಿ ನಮ್ಮ ಪೈ ತರುಣರನ್ನು ಕೈಹಿಡಿದು ನಡೆಸುವ ಪುಣ್ಯಚೇತನ ●

ತೆಲುಗಿನಲ್ಲಿ ಸಹಾಯಕ ಕ್ರಿಯಾಪದಗಳು
(Auxiliary Verbs in Telugu)

● ಎಸ್. ಪಿ. ಕಿಲಾರಿ

ತೆಲುಗಿನಲ್ಲಿ ಕ್ರಿಯಾಪದಗಳನ್ನು ಪ್ರಧಾನ ಕ್ರಿಯಾಪದಗಳು ಮತ್ತು ಸಹಾಯಕ ಕ್ರಿಯಾಪದಗಳೆಂದು ವಿಭಜನೆ ಮಾಡಬಹುದು. ಈ ಲೇಖನದಲ್ಲಿ ತೆಲುಗಿನ ಸಹಾಯಕ ಕ್ರಿಯಾಪದಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಕನ್ನಡದಲ್ಲಿ ಇದ್ದ ಹಾಗೆಯೇ ತೆಲುಗಿನಲ್ಲಿಯೂ ಕೂಡ ಪ್ರತ್ಯೇಕವಾಗಿ ಸಹಾಯಕ ಕ್ರಿಯಾಪದಗಳು ಇಲ್ಲ. ಕ್ರಿಯಾಪದಗಳಲ್ಲಿ ಕೆಲವನ್ನು ಸಹಾಯಕ ಕ್ರಿಯಾಪದಗಳಂತೆಯೂ ಪ್ರಧಾನ ಕ್ರಿಯಾಪದಗಳಂತೆಯೂ ಬಳಸುತ್ತಾರೆ. ಆದಕಾರಣ ಸಹಾಯಕ ಕ್ರಿಯಾಪದಗಳನ್ನು ಗುರುತಿಸುವುದು ಸ್ವಲ್ಪ ಕಷ್ಟಕರವಾದ ಕೆಲಸ.

ಈ ಕೆಳಗೆ ಕೊಟ್ಟಿರುವ ವಾಕ್ಯಗಳನ್ನು ನೋಡಿ.

1. ವನಜ ಮುಷ್ಟಿ ವಾಡಿಕಿ ಅನ್ನಂ ವೇಸಿಂದಿ.
   ವನಜ ಭಿಕ್ಷುಕನಿಗೆ ಅನ್ನ ಹಾಕಿದಳು.
2. ವನಜ ಅನ್ನಂ ತಿನೇಸಿಂದಿ (ತಿಸಿ–ವೇಯು–ಇಂದಿ)
   ವನಜ ಅನ್ನ ತಿಂದು ಬಿಟ್ಟಳು—**ಅವಧಾರಣಾಪೂರ್ಣ**
   (emphatic completion)

ವಾಕ್ಯ (1) ರಲ್ಲಿ ಕ್ರಿಯಾಪದ ವೇಯು 'ಹಾಕು' ಪ್ರಧಾನ ಕ್ರಿಯಾಪದವಾಗಿ ಬಳಸಲಾಗಿದೆ. ಆದರೆ (2) ರಲ್ಲಿ —ಕ್ರಿಯಾಪದ ವೇಯು ಪ್ರಧಾನ ಕ್ರಿಯಾಪದ ತಿನು 'ತಿನ್ನು' ದ ಭೂತಕೃದಂತರೂಪ (past participle form) ದ ನಂತರ ಬಂದು ಅವಧಾರಣಾಪೂರ್ಣ (emphatic completion) ಎನ್ನುವ ಅರ್ಥವನ್ನು ಕೊಡುತ್ತಲಿದೆ. ಆದಕಾರಣ ಒಂದೇ ಕ್ರಿಯಾಪದ ಪ್ರಧಾನ ಕ್ರಿಯಾಪದವಾಗಿಯೂ ಸಹಾಯಕ ಕ್ರಿಯಾಪದವಾಗಿಯೂ ಬಳಸಲಾಗಿದೆಯೆಂದು ಹೇಳಬೇಕಾಗುತ್ತದೆ. ವೇಯು ವಾಕ್ಯ (1) ರಲ್ಲಿ 'ಹಾಕು' ಎನ್ನುವ ಅರ್ಥವನ್ನು, (2) ರಲ್ಲಿ

'ಅವಧಾರಣಾಪೂರ್ಣ' (emphatic completion) ಎನ್ನುವ ಅರ್ಥವನ್ನೂ ಕೊಡುತ್ತದೆ. ಇದರಿಂದ ಒಂದು ಕ್ರಿಯಾಪದ, ಸಹಾಯಕ ಕ್ರಿಯಾಪದವಾಗಿ ಬಳಸಿದಾಗ ಅದರ ನಿಘಂಟು ಅರ್ಥ (lexical meaning) ವನ್ನು ಕಳೆದುಕೊಂಡು ವ್ಯಾಕರಣಾತ್ಮಕ ಅರ್ಥ (grammatical meaning) ವನ್ನು ಹೊಂದುತ್ತದೆ ಎಂಬುದು ತಿಳಿಯುತ್ತದೆ. ಯಾವ ಕ್ರಿಯಾಪದಗಳು ವ್ಯಾಕರಣಾತ್ಮಕ ಅರ್ಥಗಳನ್ನು ಕೊಡುತ್ತಾ, ಕ್ರಿಯಾಪದ 'ವೇಯು' ತರಹ ಪ್ರವರ್ತಿಸುತ್ತವೆಯೋ ಅವುಗಳನ್ನು ಸಹಾಯಕ ಕ್ರಿಯಾಪದಗಳೆಂದು ತೋರಿಸಲಾಗಿದೆ.

1.1 ಈ ಕೆಳಗೆ ಕೊಟ್ಟಿರುವ ಕ್ರಿಯಾಪದಗಳ ಲಕ್ಷಣಗಳನ್ನು ಗಮನದಲ್ಲಿಟ್ಟುಕೊಂಡು ತೆಲುಗಿನ ಸಹಾಯಕ ಕ್ರಿಯಾಪದಗಳನ್ನು ಗುರುತಿಸಲಾಗಿದೆ.

1) ಕಾರ್ಯ (function)
2) ಪ್ರಧಾನ ಕ್ರಿಯಾಪದ (main verb)
3) ಸಾಂದ್ರ ರಚನೆ (close knit construction)
4) ಆಕೃತಿಮಾ ರೂಪ ಬದಲಾವಣೆಗಳು (morphophonemic changes)

1.1—1 ಕಾರ್ಯ (function)

ಕನ್ನಡದಲ್ಲಿಯ ಹಾಗೆಯೇ ತೆಲುಗಿನಲ್ಲಿಯೂ ಕೂಡ ಸಹಾಯಕ ಕ್ರಿಯಾಪದಗಳನ್ನು ಅವಧಾರಣಾಪೂರ್ಣ (emphatic completion), ಅನುಮತಿ (permission), ಸಾಧ್ಯತೆ (possibility), ಸಂಭವನೀಯತೆ (probability), ಕೋರಿಕೆ (desire), ಸಾಮರ್ಥ್ಯತೆ (capability), ಅವಶ್ಯಕತೆ (necessity), ಆತ್ಮಾರ್ಥಕ (reflexive), ಕರ್ಮಣಿ (passive), ನಿಷೇಧ (negation) ಮುಂತಾದ ವ್ಯಾಕರಣ ಅರ್ಥಗಳನ್ನು ತಿಳಿಸುವುದಕ್ಕೆ ಬಳಸುತ್ತಾರೆ.

ಉದಾ :—

3. ವನಜ ಕಾಫೀ ತಾಗೇಸಿಂದಿ (ತಾಗಿ-ವೇಯು-ಇಂದಿ)
   ವನಜ ಕಾಫೀ ಕುಡಿದುಬಿಟ್ಟಳು –ಅವಧಾರಣಾಪೂರ್ಣ (emphatic completion)
4. ವನಜ ಊರಿಗೆ ವೆಳ್ಳವಚ್ಚು (ವೆಳ್ಳ-ವಚ್ಚು)
   ವನಜ ಊರಿಗೆ ಹೋಗಬಹುದು –ಅನುಮತಿ (permission)
5. ವನಜ ಕೊಟ್ಟುಕುನ್ನದಿ (ಕೊಟ್ಟು ಕನ್–ಅದಿ)
   ವನಜ ಹೊಡೆದುಕೊಂಡಳು – ಆತ್ಮಾರ್ಥಕ (reflexive)

6. ವನಜ ಕೊಟ್ಟಬಡ್ಡದಿ (ಕೊಟ್ಟು–ಬಡು–ಅದಿ)
   ವನಜ ಹೊಡೆಯಲ್ಪಟ್ಟಳು – ಕರ್ಮಣಿ (passive)
7. ವನಜ ಕೊಟ್ಟಲೇದು (ಕೊಟ್ಟು–ಲೇದು)
   ವನಜ ಹೊಡೆಯಲಿಲ್ಲ – ಭೂತನಿಷೇಧ (past negative)

1.1.2 **ಪ್ರಧಾನ ಕ್ರಿಯಾಪದ** (main verb)

ತೆಲುಗಿನಲ್ಲಿ ಸಹಾಯಕ ಕ್ರಿಯಾಪದಗಳು ಪ್ರಧಾನ ಕ್ರಿಯಾಪದದ ಭೂತಕೃದಂತ (Past participle form) ಮತ್ತು ಭಾವರೂಪ (infinitive form)ಗಳ ನಂತರವೂ ಇನ್ನಿತರ ಸಹಾಯಕ ಕ್ರಿಯಾಪದಗಳ ನಂತರವು ಬರುತ್ತವೆ.

ಉದಾ :—

ಭೂತಕೃದಂತದನಂತರ : (after past participle)

8. ವನಜ ಇಂಟಿಕಿ ವೆಳ್ಳಿಪೋಯಿಂದಿ (ವೆಳ್ಳಿ–ಪೋ–ಇಂದಿ)
   ವನಜ ಮನೆಗೆ ಹೋಗಿಬಿಟ್ಟಳು – ಅವಧಾರಣಾಪೂರ್ಣ (emphatic completion)

ಭಾವರೂಪದನಂತರ (after infinitive)

9. ವನಜ ಹಾಸ್ಪಲುಕು ವೆಳ್ಳವಚ್ಚು (ವೆಳ್ಳ–ವಚ್ಚು)
   ವನಜ ಹಾಸ್ಪೆಲಿಗೆ ಹೋಗಬಹುದು – ಅನುಮತಿ (permission)

ಮತ್ತೊಂದು ಸಹಾಯಕ ಕ್ರಿಯಾಪದದ ನಂತರ

10. ವನಜ ಇಂಟಿಕೆ ವೆಳ್ಳಿಪೋವಾಲಿ (ವೆಳ್ಳಿ–ಪೋ–ಆಲಿ)
    ವನಜ ಮನೆಗೆ ಹೋಗಿಬಿಡಬೇಕು – ನಿಯತತ್ವ+ಕೋರಿಕೆ (certainty + desire)

1.1.3 **ಸಾಂಧ್ರ ರಚನೆ** (close knit construction)

ಒಂದು ಕ್ರಿಯಾಪದ ರಚನೆಯಲ್ಲಿಯ ಭಿನ್ನಕ್ರಿಯಾಪದಗಳ ನಡುವೆ ಯಾವುದಾದರೊಂದು ನಿಘಂಟು ಪದ (lexical item) ವನ್ನು ಸೇರಿಸಿ ಸಹಾಯಕ ಕ್ರಿಯಾಪದಗಳನ್ನು ಗುರುತಿಸಲಾಗಿದೆ. ಸಹಾಯಕ ಕ್ರಿಯಾಪದದ ರಚನೆ ಒಂದು ಸಾಂದ್ರ ರಚನೆ. ಸಹಾಯಕ ಕ್ರಿಯಾಪದ ಮತ್ತು ಪ್ರಧಾನ ಕ್ರಿಯಾಪದಗಳ ಮಧ್ಯೆ ಕೆಲವು ತುಣುಕುಗಳು (particles) ಮತ್ತು ಕೆಲವು ಸಹಾಯಕ ಕ್ರಿಯಾಪದಗಳನ್ನು ಬಿಟ್ಟು ಬೇರೆ ಯಾವ ನಿಘಂಟುಪದಗಳನ್ನು ಸೇರಿಸಲು ಸಾಧ್ಯವಿಲ್ಲ. ಹಾಗೆ ಮಾಡಿದರೆ ಆ ರಚನೆ ವ್ಯಾಕರಣ ರಹಿತವಾಗುತ್ತದೆ.

ಉದಾ :— ಪ್ರಧಾನ ಕ್ರಿಯಾಪದ ಮತ್ತು ಸಹಾಯಕ ಕ್ರಿಯಾಪದಗಳ ನಡುವೆ ವಿರಾಮ (pause) ಬಿಡುವುದರಿಂದ ವಾಕ್ಯ ವ್ಯಾಕರಣ ವಿರುದ್ಧವಾಗುತ್ತದೆ.

11. ವನಜ ವಿಮಲಕು ಅನ್ನಂ ವಂಡಿಪೆಟ್ಟಂಡಿ.
ವನಜ ವಿಮಲೆಗೆ ಅನ್ನ ಮಾಡಿಕೊಟ್ಟಳು – ದತ್ತಿ (benefaction)

12. ವನಜ ಅನ್ನಂ ವಂಡಿ ಪೆಟ್ಟಂದಿ
ವನಜ ಅನ್ನ ಮಾಡಿ ಇಟ್ಟಳು.

ವಾಕ್ಯ (11) ರಲ್ಲಿ ಕ್ರಿಯಾಪದದ ರಚನೆ 'ವಂಡಿಪೆಟ್ಟು' ಅನ್ನುವದು ಒಂದು ಸಹಾಯಕ ಕ್ರಿಯಾಪದ ರಚನೆ. ಪ್ರಧಾನ ಕ್ರಿಯಾಪದ ವಂಡು 'ಮಾಡು' ಮತ್ತು ಸಹಾಯಕ ಕ್ರಿಯಾಪದ ಪೆಟ್ಟು ದತ್ತಿ (benefaction) ನಡುವೆ ವಿರಾಮವಿಲ್ಲ. ಇಲ್ಲಿ –ಪೆಟ್ಟು ಸಹಾಯಕ ಕ್ರಿಯಾಪದವಾಗಿ ತೆಗೆದುಕೊಳ್ಳಲಾಗಿದೆ. ಆದರೆ ವಾಕ್ಯ (12) ರಲ್ಲಿ ಕ್ರಿಯಾಪದದ ರಚನೆ ಸಹಾಯಕ ಕ್ರಿಯಾಪದದ ರಚನೆಯಲ್ಲಿ ಪ್ರಧಾನ ಕ್ರಿಯಾಪದ ವಂಡು 'ಮಾಡು' –ಮತ್ತು ಪ್ರಧಾನ ಕ್ರಿಯಾಪದ ಪೆಟ್ಟು ನಡುವೆ ವಿರಾಮವಿದೆ. ಇಲ್ಲಿ ಕ್ರಿಯಾಪದ ಪೆಟ್ಟು ಯಾವ ವ್ಯಾಕರಣ ಅರ್ಥವನ್ನು ಕೊಡು-ತ್ತಿಲ್ಲ. ಪೆಟ್ಟು ಅನ್ನು 'ಇಡು' ಎನ್ನುವ ಅರ್ಥದಲ್ಲಿ ಬಳಸಲಾಗಿದೆ. ಆದ್ದರಿಂದ ವಾಕ್ಯ (12) ರಲ್ಲಿ ಇರುವ ಪೆಟ್ಟು ಸಹಾಯಕ ಕ್ರಿಯಾಪದವಾಗಿ ಪರಿಗಣಿಸುವು-ದಿಲ್ಲ. ಸಹಾಯಕ ಕ್ರಿಯಾಪದದ ರಚನೆಯಲ್ಲಿ ಒತ್ತು ತುಣುಕು (emphatic particle) ಸೇರಿಸಬಹುದು.

13. ವನಜ ವೆಳ್ಳಿ ಪೋಯಿಂದಿ (ವೆಳ್ಳಿ–ಪೋ–ಇಂದಿ)
ವನಜ ಹೋಗಿಬಿಟ್ಟಳು – ಅವಧಾರಣಾಪೂರ್ಣ
(emphatic completion)

14. ವನಜ ವೆಳ್ಳೀ ಪೋಯಿಂದಿ (ವೆಳ್ಳಿ–ಏ–ಪೋ–ಇಂದಿ)
ವನಜ ಹೋಗಿಯೇ ಬಿಟ್ಟಳು–ಅವಧಾರಣಾಪೂರ್ಣ+ಅವಧಾರಣೆ
(emphatic completion + emphasis)

ವಾಕ್ಯ (14) ರಲ್ಲಿ ಒತ್ತು ತುಣುಕು–ಏ–ನ್ನು ಪ್ರಧಾನ ಕ್ರಿಯಾಪದ ವೆಳ್ಳು 'ಹೋಗು' ಮತ್ತು ಸಹಾಯಕ ಕ್ರಿಯಾಪದ '–ಪೋವು' 'ಅವಧಾರಣಾಪೂರ್ಣ' ನಡುವೆ ಸೇರಿಸಲಾಗಿದೆ. ಸಹಾಯಕ ಕ್ರಿಯಾಪದ ಕೊಡು 'ಆತ್ಮಾರ್ಥಕ' ವನ್ನು ಕೆಲವು ಸಹಾಯಕ ಕ್ರಿಯಾಪದಗಳ ರಚನೆಯಲ್ಲಿ ಸೇರಿಸಬಹುದು.

ಉದಾ :—

15. ರಂಗಡು ಕೊಟ್ಟೇಶಾಡು (ಕೊಟ್ಟು-ವೇಯು-ಆಡು)
ರಂಗನು ಹೊಡೆದು ಬಿಟ್ಟ-ಅವಧಾರಣಾಪೂರ್ಣ
(emphatic completion)

16. ರಂಗಡು ಕೊಟ್ಟಕುನೇ ಶಾಡು (ಕೊಟ್ಟು-ಕೊನು-ವೇಯು-ಆಡು)
ರಂಗನು ಹೊಡೆದುಕೊಂಡುಬಿಟ್ಟ -ಅವಧಾರಣಾಪೂರ್ಣ+ಆತ್ಮಾರ್ಥಕ
(emphatic completion + reflexive)

ವಾಕ್ಯ (15) ರಲ್ಲಿ ಒಂದು ಪ್ರಧಾನ ಕ್ರಿಯಾಪದ ಕೊಟ್ಟು 'ಹೊಡೆ' ಮತ್ತು ಒಂದು ಸಹಾಯಕ ಕ್ರಿಯಾಪದ ವೇಯು 'ಅವಧಾರಣಾಪೂರ್ಣ' ಇವೆ. ಈ ಎರಡು ಕ್ರಿಯಾಪದಗಳ ಮಧ್ಯದಲ್ಲಿ 'ಕೊನು' 'ಆತ್ಮಾರ್ಥಕ' ಎಂಬ ಸಹಾಯಕ ಕ್ರಿಯಾಪದ-ವನ್ನು ಸೇರಿಸಬಹುದು. ಇದನ್ನು ವಾಕ್ಯ (16) ರಲ್ಲಿ ನೋಡಿ. (16) ರಲ್ಲಿ ಪ್ರಧಾನ ಕ್ರಿಯಾಪದ ಕೊಟ್ಟು 'ಹೊಡೆ' ಮತ್ತು ಸಹಾಯಕ ಕ್ರಿಯಾಪದ -ವೇಯು 'ಅವ-ಧಾರಣಾಪೂರ್ಣ' ನಡುವೆ -ಕೊನು-ಸಹಾಯಕ ಕ್ರಿಯಾಪದವನ್ನು ಸೇರಿಸಲಾಗಿದೆ.

ಮೇಲೆ ಹೇಳಲಾದ ಸಹಾಯಕ ಕ್ರಿಯಾಪದಗಳನ್ನು ಗುರ್ತಿಸುವ ಪರೀಕ್ಷೆಗೆ ವಿರುದ್ಧವಾಗಿ ಯಾವುದಾದರೂ ನಿಘಂಟು ಪದವನ್ನು (lexical item) ಪ್ರಧಾನ ಕ್ರಿಯಾಪದ ಮತ್ತು ಸಹಾಯಕ ಕ್ರಿಯಾಪದಗಳ ನಡುವೆ ಸೇರಿಸಿದಲ್ಲಿ ವಾಕ್ಯ ವ್ಯಾಕರಣ ನಿಯಮವಿರುದ್ಧವಾಗುತ್ತದೆ. ಅಥವಾ ಅಸಮ್ಮತ ವಾಕ್ಯವಾಗುತ್ತದೆ. (unacceptable sentence) ಈ ಕೆಳಗಿನ ಉದಾಹರಣೆಗಳನ್ನು ಗಮನಿಸಿ :

17. ವನಜ ಅಮೇರಿಕಾಕು ವೆಳ್ಳಿ ಪೋಯಿಂದಿ
ವನಜ ಅಮೇರಿಕಾಕ್ಕೆ ಹೋಗಿಬಿಟ್ಟಳು. -ಅವಧಾರಣಾಪೂರ್ಣ
(emphatic completion)

18. ವನಜ ಅಮೇರಿಕಾಕು ವೆಳ್ಳಿ ನಿನ್ನ ಪೋಯಿಂದಿ
ವನಜ ಅಮೇರಿಕಾಕ್ಕೆ ಹೋಗಿ, ನಿನ್ನೆ ಬಿಟ್ಟಳು.

19. ವನಜ ಕಾಫೀ ತಾಗೇಸಿಂದಿ.
ವನಜ ಕಾಫೀ ಕುಡಿದುಬಿಟ್ಟಳು. ಅವಧಾರಣಾಪೂರ್ಣ
(emphatic completion)

20. ವನಜ ಕಾಫೀ ತಾಗಿ ನಿನ್ನ ವೇಸಿಂದಿ.
ವನಜ ಕಾಫೀ ಕುಡಿದು ನಿನ್ನೆ ಬಿಟ್ಟಳು.

ಪ್ರಧಾನ ಕ್ರಿಯಾಪದ ವೆಳ್ಳು 'ಹೋಗು' ಮತ್ತು ಸಹಾಯಕ ಕ್ರಿಯಾಪದ ಪೋವು 'ಅವಧಾರಣಾಪೂರ್ಣ' ಗಳ ಮಧ್ಯೆ ನಿನ್ನ 'ನಿನ್ನೆ' ಅನ್ನುವ ಪದವನ್ನು ಸೇರಿ-ಸುವುದರಿಂದ ವಾಕ್ಯ [18] ಮತ್ತು ತಾಗು 'ಕುಡಿ ಮತ್ತು –ವೇಯು 'ಅವಧಾರಣಾ-ಪೂರ್ಣ ಮಧ್ಯೆ ನಿನ್ನ' ನಿನ್ನೆ, ಅನ್ನುವ ಪದವನ್ನು ಸೇರಿಸುವದರಿಂದ ವಾಕ್ಯ 20 ವ್ಯಾಕರಣ ರಹಿತವಾಗಿವೆ.

1.1.4. ಆಕೃತಿಮಾ ರೂಪ ಬದಲಾವಣೆಗಳು : (morphophonemic changes)

ಸಹಾಯಕ ಕ್ರಿಯಾಪದಗಳ ರಚನೆಯಲ್ಲಿ ಕೆಲವು ಪ್ರತ್ಯೇಕವಾದ ಆಕೃತಿಮಾ ರೂಪ ಬದಲಾವಣೆಗಳನ್ನು ಕಾಣಬಹುದು. ಉದಾಹರಣೆಗೆ ಪ್ರಧಾನ ಕ್ರಿಯಾಪದಕ್ಕೆ ಸಹಾಯಕ ಕ್ರಿಯಾಪದ –ವೇಯು ಅವಧಾರಣಾಪೂರ್ಣವನ್ನು ಸೇರಿಸಿದಾಗ ಅದರ -ವ್ ವ್ಯಂಜನ ಲೋಪವಾಗುತ್ತದೆ. ಆದರೆ ವೇಯು ಕ್ರಿಯಾಪದವನ್ನು ಪ್ರಧಾನ ಕ್ರಿಯಾಪದವಾಗಿ ಬಳಸಿದಾಗ ವ್ ವ್ಯಂಜನ ಲೋಪವಾಗುವದು ಕಡ್ಡಾಯವಲ್ಲ. ಸಹಾಯಕ ಕ್ರಿಯಾಪದವಾಗಿ ಬಳಸಿದಾಗ ಮಾತ್ರ ಕಡ್ಡಾಯವಾಗಿ ವ್ ಲೋಪ-ವಾಗುತ್ತದೆ.

ಸಹಾಯಕ ಕ್ರಿಯಾಪದ –ಇಚ್ಚು 'ಅನುಮತಿ' ಆಜ್ಞಾರ್ಥಕ (imperative) ದಲ್ಲಿ ಬಳಸಿದಾಗ ಆಜ್ಞವಾಗುತ್ತದೆ. ಆದರೆ ಕ್ರಿಯಾಪದ ಇಚ್ಚು 'ಕೊಡು'ವನ್ನು ಪ್ರಧಾನ ಕ್ರಿಯಾಪದವಾಗಿ ಆಜ್ಞಾರ್ಥಕ ಏಕವಚನದಲ್ಲಿ ಬಳಸಿದಾಗ ಇಯ್ಯಿ ಇವ್ವು ಆಗುತ್ತದೆ.

ಉದಾ :—

ವ್ → Φ

21. ವನಜ ಅನ್ನಂ ತಿನೇಸಿಂದಿ (ತಿನಿ–ವೇಯು–ಇಂದಿ)
ವನಜ ಅನ್ನ ತಿಂದು ಬಿಟ್ಟಳು –ಅವಧಾರಣಾಪೂರ್ಣ.
—ಇಚ್ಚು → ಈ

22. ವಾಡಿನಿ ಚೆಪ್ಪನೀ (ಚೆಪ್ಪು+ಈ)
'ಅವನನ್ನು ಹೇಳಬಿಡು - ಅನುಮತಿ.
(ಅವನು ಹೇಳಲಿ)

ಈ ಕೆಲವೊಂದು ಪ್ರತ್ಯೇಕ ಆಕೃತಿಮಾರೂಪ ಬದಲಾವಣೆಗಳು ಸಹಾಯಕ ಕ್ರಿಯಾಪದ ರಚನೆಯಲ್ಲಿ ಮಾತ್ರ ಬರುತ್ತವೆ. ಅಂತಹ ಆಕೃತಿಮಾರೂಪ ಬದಲಾ-ವಣೆಗಳು ಕೆಲವೊಂದು ಸಹಾಯಕ ಕ್ರಿಯಾಪದ ರಚನೆಗಳಲ್ಲಿ ಮಾತ್ರ ಕಾಣಬಹುದು.

1. 2, ಭಾಗ 1.1ರಲ್ಲಿ ಹೇಳಿರುವ ಪ್ರಕಾರ ಈ ಕೆಳಗಿನ ಸಹಾಯಕ ಕ್ರಿಯಾ-ಪದಗಳನ್ನು ತೆಲುಗಿನ ಸಹಾಯಕ ಕ್ರಿಯಾಪದಗಳೆಂದು ಗುರ್ತಿಸಲಾಗಿದೆ.

1. ಅಲಿ (ವಾಲಯನು)	'ಕೋರಿಕೆ' (desire), 'ಬದ್ಧತೆ' (obligation), 'ಅವಶ್ಯಕತೆ' (necessity), 'ಊಹೆ' (information).
2. ವಚ್ಚು	'ಅನುಮತಿ' (permission), 'ಸಾಧ್ಯತೆ' (possibility), 'ಸಂಭವನೀಯತೆ' (probability).
3. ವದ್ದು (ವಲದು)	'ವಿಧ್ಯರ್ಥಕ ನಿಷೇಧ' (negation of imperative mood).
4. ಕೂಡದು	'ಪ್ರತಿಬಂಧನ' (prohibition)
5. ಗಲ	'ಸಾಮರ್ಥ್ಯತೆ' (capability), ಸಾಧ್ಯತೆ (possibility)
6. -ಇಚ್ಚು	'ಅನುಮತಿ' (permission)
7. ಪೊವು	'ಉಪಕ್ರಮ' (inception) ಅವಧಾರಣಾಪೂರ್ಣ (emphatic completion), ಅನಿರೀಕ್ಷಿಪತೆ (unexpectedness) ಅಹಿತತೆ (unpleasantness) ಅನಿಯುಕ್ತತೆ (involuntariness) ಸೌಮ್ಯೋಕ್ತಿ (euphemism)
8. -ವೇಯು	ಅವಧಾರಣಾಪೂರ್ಣ (emphatic completicn), ಕ್ರಿಯೆಯ ಶೀಘ್ರತೆ (Swiftness of action), ಅಂದುಕೊಂಡ ಹೊತ್ತಿಗೆ ಮೊದಲು (earlier than expected), ಅಸೌಚಿತ್ಯ (impropriety),

ಪರಿಣಾಮ ಎದುರಿಸಲು ನಿರ್ಧರಿಸುವಿಕೆ (determination to face the consequences)
ಅನಗತ್ಯತೆ (unwantedness)
ಅಹಿತತೆ (unpleasantness)
ನಿಯತತೆ (certainty),
ಅನುಚಿತ ತ್ವರೆ (undue haste)

9. ಲೇ — 'ಅಸಮರ್ಥತೆ' (negative potentiality)
10. ಲೇದು — 'ಭೂತನಿಷೇಧ' (past negative)
11. ಪಡು — 'ಕರ್ಮಣಿ' (passive)
12. ಕೊನು — 'ಆತ್ಮಾರ್ಥಕ' (reflexive)
ಪರಸ್ಪರತೆ (reciprocation)
13. ಪೆಟ್ಟು — 'ದತ್ತಿ' (benefaction).

ಮೇಲೆ ಕೊಟ್ಟಿರುವ ಸಹಾಯಕ ಕ್ರಿಯಾಪದಗಳಿಗೆ ಕೆಳಗೆ ಉದಾಹರಣೆಗಳನ್ನು ಕೊಡಲಾಗಿದೆ.

–ಅಲಿ

23. ವನಜ ಬಡಿಕಿ ವೆಳ್ಳಾಲಿ (ವೆಳ್ಳ–ಆಲಿ). ವನಜ ಶಾಲೆಗೆ ಹೋಗಬೇಕು.

ಎ. It is desired that Vanaja go to the school-Desire.

ಬಿ. Vanaja is in obligation to go to the school-Obligation.

ಸಿ. Vanaja has to go to school-necessity.
ವನಜ ಬಡಿಕಿ ವೆಳ್ಳುಂಡಾಲಿ (ವೆಳ್ಳಿ–ಉಂಡ–ಆಲಿ)

ಡಿ. ವನಜ ಶಾಲೆಗೆ ಹೋಗಿರಬೇಕು-inference.

–ವಚ್ಚು

24. ವನಜ ಇಂಟಿಕಿ ವೆಳ್ಳವಚ್ಚು (ವೆಳ್ಳ–ವಚ್ಚು)
ವನಜ ಮನೆಗೆ ಹೋಗಬಹುದು (ಅನುಮತಿ) (permission)

ಸಾಧ್ಯತೆ (possibility)
ಸಂಭವನೀಯತೆ (probability)

-ವದ್ದು

25. ಪಾಟಿ ಪಾಡವದ್ದು (ಪಾಡ-ವದ್ದು)
ಹಾಡು ಹಾಡಬೇಡ -**ವಿಧ್ಯರ್ಥಕ ನಿಷೇಧ** (negation of imperative mood)

-ಕೂಡದು

26. ವನಜ ಪಾಟ ಪಾಡಕೂಡದು (ಪಾಡ-ಕೂಡದು)
ವನಜ ಹಾಡು ಹಾಡಬಾರದು : ಕೂಡದು-**ಪ್ರತಿಬಂಧನ** (prohibition)

-ಗಲ

27. ವನಜ ವಿನಗಲದು (ವಿನ-ಗಲದು)
ವನಜ ಕೇಳಬಲ್ಲಳು -**ಸಾಮರ್ಥ್ಯತೆ** (capability)
ವನಜ ಕೇಳಬಹುದು -**ಸಾಧ್ಯತೆ** (possibility)

-ಇಚ್ಚು, ಈ

28. ಜಲಜ ವನಜನಿ ನಿಜಂ ಚೆಪ್ಪನಿಚ್ಚಿಂದಿ (ಚೆಪ್ಪ-ಇಚ್ಚು-ಇಂದಿ)
ಜಲಜ ವನಜಳನ್ನು ನಿಜ ಹೇಳಲು ಅನುಮತಿ ಕೊಟ್ಟಳು-**ಅನುಮತಿ** (permission)

29. (ನುವ್ವು) ವಾಡಿನಿ ನಿಜಂ ಚೆಪ್ಪನೀ (ಚೆಪ್ಪ-ನೀ)
(ನೀನು) ಅವನನ್ನು ನಿಜ ಹೇಳಲು ಬಿಡು -**ಅನುಮತಿ** (permission)

-ಪೋವು

30. ವನಜ ವೂರಿಕಿ ವೆಳ್ಳಬೋಯಿಂದಿ (ವೆಳ್ಳ-ಪೋ-ಯಿಂದಿ)
ವನಜ ಊರಿಗೆ ಹೋಗಹತ್ತಿದಳು -**ಉಪಕ್ರಮ** (inception)

-ಲೇ

31. ರಂಗಮೆಲ್ಲಗಾ ನವ್ವಲೇಡು (ನವ್ವ-ಲೇಡು)
ರಂಗನು ಮೆಲ್ಲಗೆ ನಗಲಾರ -**ಅಸಮರ್ಥತೆ** (negative potentiality)

-ಲೇದು

32. ರಂಗಡು ಊರಿಗೆ ವೆಳ್ಳಲೇದು (ವೆಳ್ಳ-ಲೇದು)
ರಂಗನು ಊರಿಗೆ ಹೋಗಲಿಲ್ಲ-**ಭೂತನಿಷೇಧ** (past negative)

-ಪಡು

33. ರಂಗಡು ಕೊಟ್ಟಿಬಡ್ಡಾಡು (ಕೊಟ್ಟಿ-ಪಡು-ಆಡು)
ರಂಗನು ಹೊಡೆಯಲ್‌ಪಟ್ಟನು -**ಕರ್ಮಣಿ** (passive)

-ಪೋವು

34. ವನಜ ಊರಿಗೆ ವೆಳ್ಳಿ ಪೋಯಿಂದಿ (ವೆಳ್ಳಿ-ಪೋ-ಯಿಂದಿ)
ವನಜ ಊರಿಗೆ ಹೋಗಿಬಿಟ್ಟಳು - **ಅವಧಾರಣಾಪೂರ್ಣ**
(emphatic completion)

35. ವಾಡಿ ಗದಿಲೋ ನಾ ಪುಸ್ತಕಾಲು ವುಂಡಿ ಪೋಯಾಯಿ.
ಅವನ ಕೋಣೆಯಲ್ಲಿ ನನ್ನ ಪುಸ್ತಕಗಳು ಉಳಿದು ಬಿಟ್ಟವು.
-**ಅನಿರೀಕ್ಷಕತೆ** (unexpectedness)

36. ಎಂಡಿ ಪೋತುನ್ನ ಪೆದವುಲನು ನಾಲಿಕತೋ ತಡಿ ಚೇಸುಕೊಂದಿ
(ಎಂಡಿ-ಪೋವು-ತುನ್ನ)
ಒಣಗಿಹೋಗುತ್ತಿರುವ ತುಟಿಗಳನ್ನು ನಾಲಿಗೆಯಿಂದ ಒದ್ದೆ
ಮಾಡಿಕೊಂಡಳು -**ಅಹಿತತೆ** (unpleasantness)

37. ರಾಜು ಚೆರುವುಲೋ ಮುನಿಗಿ ಪೋಯಾಡು
ರಾಜನು ಕೆರಯಲ್ಲಿ ಮುಳುಗಿಹೋದನು-**ಅನಿಯುಕ್ತತೆ**
(involuntariness)

38. ರಂಗಾರಾವುಗಾರು ಚಚ್ಚಿ ಪೋಯಾರಂಟಿ (ಚಚ್ಚಿ-ಪೋ ಯಾರಂಟಿ)
ರಂಗಾರಾವ ಅವರು ಸತ್ತುಹೋದರಂತೆ -**ಸೌಮ್ಯೋಕ್ತಿ**
(euphemism)

ವೇಯು-

39. ರಂಗ ಪಾಠಂ ಚದಿವೇಗಾಡು (ಚದಿ-ವೇಯು-ಆಡು)
ರಂಗ ಪಾಠ ಓದಿಬಿಟ್ಟನು -**ಅವಧಾರಣಾಪೂರ್ಣ**
(emphatic completion)

40. ವನಜ ಗಬಗಬ ಅನ್ನಂ ತಿನೇಸಿಂದಿ
ವನಜ ಗಬಗಬನೆ ಅನ್ನ ತಿಂದುಬಿಟ್ಟಳು -**ಕ್ರಿಯೆಯ ಶೀಘ್ರತೆ**
(swiftness of action)

41. ವನಜ ಅಪುಡೇ ವಚ್ಚೇಸಿಂದಾ ?
ವನಜ ಆಗಲೇ ಬಂದುಬಿಟ್ಟಳಾ ?
-ಅವಧಾರಣಾಪೂರ್ಣ+ಅಂದುಕೊಂಡ ಹೊತ್ತಿಗೆ ಮೊದಲು
(emphatic completion + earlier than expected)

42. ವಾಳ್ಳು ಮಾ ಅಜ್ಬಾಯಿಸಿ ಕೊಟ್ಟೇಶಾರು
ಅವರು ನಮ್ಮ ಹುಡುಗುನನ್ನು ಹೊಡೆದುಬಿಟ್ಟರು **-ಅನೌಚಿತ್ಯ**
(impropriety)

43. ಪ್ಯೂನು ಆಫೀಸರನು ತಿಟ್ಟೇಶಾಡು
ಪ್ಯೂನು ಆಫೀಸರನ್ನು ಬೈದುಬಿಟ್ಟ
-ಪರಿಣಾಮ ಎದುರಿಸಲು ನಿರ್ಧರಿಸುವಿಕೆ
determination to face the consequences

44. ವನಜನು ಸಿನಿಮಾ ಚೂಡೊದ್ದನ್ನಾ ಚೂಸೇಸಿಂದಿ
ವನಜಳಿಗೆ ಸಿನಿಮಾ ನೋಡಬೇಡಯೆಂದರೂ ನೋಡಿಬಿಟ್ಟಳು
-ಅನಗತ್ಯತೆ (unwantedness)

45. ವನಜ ರೇಪು ವಚ್ಚೇಸ್ತುಂದಿ.
ವನಜ ನಾಳೆ ಬಂದುಬಿಡುತ್ತಾಳೆ-**ನಿಯತತೆ** (certainty)

46. ನೇನು ವಾಡಿನಿ ವೇಥವ್ಯ ಅನೇಸಿವಚ್ಚಾನು
ನಾನು ಅವನನ್ನು ಥಡ್ಡ ಎಂದುಬಿಟ್ಟು ಬಂದೆ - **ಅಹಿತತೆ**
(unpleasantness)

47. ವನಜ ಪಿಲ್ಲಾಡು ಗ್ಲಾಸು ಪಗಲಕೊಟ್ಟಾಡು ಅನೇಸಿಕೊಟ್ಟೇಸಿಂದಿ
ವನಜ ಹುಡುಗನನ್ನು ಗ್ಲಾಸು ಒಡೆದುಹಾಕಿದನೆಂದು ಹೊಡದು ಬಿಟ್ಟಳು.
-ಅನುಚಿತ ತ್ವರೆ (undue haste)

–ಕೋನು

48. ವನಜ ರಾಸುಕೊನ್ನದಿ (ರಾಸು-ಕೊನು-ಇಂದಿ)
ವನಜ ಬರೆದುಕೊಂಡಳು - **ಆತ್ಮಾರ್ಥಕ** (reflexive)

49. ವಾಳ್ಳುಕೊಟ್ಟುಕುನ್ನಾರು (ಕೊಟ್ಟು-ಕುನು-ಅರು)
ಅವರು ಹೊಡೆದುಕೊಂಡರು - **ಪರಸ್ಪರತೆ** (reciprocation)

50. **ಪೆಟ್ಟು**- ವನಜ ರಾಮುಡಿಕೆ ಅನ್ನಂ ವಂಡಿಪೆಟ್ಟಿಂದಿ
ವನಜ ರಾಮುನಿಗೆ ಅನ್ನ ಮಾಡಿಕೊಟ್ಟಳು. -**ದತ್ತಿ** (Benefaction)

ಕರ್ನಾಟಕದಲ್ಲಿ ನೀರಾವರಿ ಪ್ರಗತಿ

● ಪಿ. ಎಸ್. ಮುಂದಿನಮನಿ

ಕರ್ನಾಟಕವು ಕೃಷಿ ಪ್ರಧಾನವಾದ ರಾಜ್ಯವಾಗಿದೆ. ಇಲ್ಲಿ ನೂರಕ್ಕೆ 70 ರಷ್ಟು ಜನರು ಬೇಸಾಯುವನ್ನವಲಂಬಿಸಿದ್ದಾರೆ. ಬಹಳಷ್ಟು ಸಾಗುವಳಿ ಜಮೀನು ಮನ್ಸೂನ ಗಾಳಿ ಮಳೆಯ ಮೇಲೆ ಅವಲಂಬಿಸಿದೆ. ಆದರೆ ಮಳೆಯು ಸರಿಯಾಗಿ ಎಲ್ಲ ಪ್ರದೇಶ-ಗಳಲ್ಲಿ ಆಗುತ್ತಿಲ್ಲ. ಕೆಲವು ಪ್ರದೇಶಗಳಲ್ಲಿ ಸಾಕಷ್ಟು ಮತ್ತು ಸರಿಯಾಗಿ ಆದರೆ ಮತ್ತೆ ಕೆಲವು ಕಡೆ ಅದು ಅನಿಯಮಿತವೂ ಆಗಿರುತ್ತದೆ. ಇದು ಅಲ್ಲದೆ, ಮಳೆಯು ಕೇವಲ ನಾಲ್ಕು ತಿಂಗಳು ಮಾತ್ರ ರಾಜ್ಯದಲ್ಲಿ ಬೀಳುತ್ತದೆ. ರಾಜ್ಯದಲ್ಲಿ ಮಳೆಯು ಬಹಳ ಅನಿಶ್ಚಿತ-ವಾಗಿರುವದರಿಂದ ಭೂವ್ಯವಸಾಯಕ್ಕೆ ಕೃತಕ ನೀರಾವರಿ ಸೌಕರ್ಯ ಒದಗಿಸುವದು ತೀರಾ ಅವಶ್ಯವಾಗಿದೆ. ಇಲ್ಲವಾದರೆ ಮಳೆ ಕಡಿಮೆ ಆಗುವ ಪ್ರದೇಶಗಳಲ್ಲಿ ಒಕ್ಕ-ಲಿಗರು ಒಂದು ಬೆಳೆಯನ್ನೂ ತೆಗೆಯಲು ಸಾಧ್ಯವಾಗುವದಿಲ್ಲ, ಆದುದರಿಂದ ಅಂಥಾ ಪ್ರದೇಶದ ರೈತರಿಗೆ ಸರಿಯಾಗಿ ಸಾಕಷ್ಟು ಪ್ರಮಾಣದಲ್ಲಿ ನೀರಿನ ಸೌಕರ್ಯ ಒದಗಿಸಿ-ಕೊಟ್ಟರೆ, ಎಲ್ಲ ಪ್ರಕಾರದ ಬೆಳೆಯನ್ನು ಬೆಳೆಯುವದರಲ್ಲಿ ಅನುಕೂಲವಾಗುತ್ತದೆ. ಇದರಿಂದಾಗಿ ರೈತರು ವರ್ಷದಲ್ಲಿ ಎರಡು ಬೆಳೆಗಳನ್ನು ಬೆಳೆದು ಅಧಿಕ ಉತ್ಪಾದನೆ-ಯನ್ನು ಪಡೆದು ತಮ್ಮ ಉತ್ಪನ್ನವನ್ನು ಹೆಚ್ಚಿಸಿಕೊಳ್ಳಲು ಅನುಕೂಲವಾಗುತ್ತದೆ.

1947 ರ ವರೆಗೆ ನಮ್ಮ ರಾಜ್ಯದಲ್ಲಿ ನೀರಾವರಿ ಬೆಳವಣಿಗೆ ಬಹಳ ಮಂದ-ಗತಿಯಲ್ಲಿದ್ದು ಸ್ವಲ್ಪ ಸಾಗುವಳಿ ಭಾಗ ಮಾತ್ರ ನೀರಾವರಿ ಸೌಲಭ್ಯವನ್ನು ಪಡೆದಿತ್ತು.

ಉದಾಹರಣೆಗೆ :- 1900-01 ರಲ್ಲಿ 5.04 ಲಕ್ಷ ಹೆಕ್ಟೇರು ಭೂಮಿ ನೀರಾ-ವರಿಗೊಳಪಟ್ಟಿತ್ತು. ಮುಂದೆ ಅದು 1947 ರಲ್ಲಿ 6.68 ಲಕ್ಷ ಹೆಕ್ಟೇರುಗಳಿಗೆ ಏರಿತು. ರಾಜ್ಯಸರಕಾರವು ಪ್ರಥಮ ಯೋಜನೆಯಿಂದಲೂ ನೀರಾವರಿಗೆ ಅತಿ ಹೆಚ್ಚಿನ ಪ್ರಾಶ-ಸ್ತ್ಯವನ್ನು ಕೊಡುತ್ತಬಂದಿದೆ ಮೊದಲನೆಯ ಯೋಜನೆಯ ಅವಧಿಯಲ್ಲಿ ನೀರಾವರಿ-ಗಾಗಿ ರೂ 41 42 ಕೋಟಿ ಖರ್ಚು ಮಾಡಿದರೆ, ಮುಂದೆ ಐದನೆಯ ಯೋಜನೆಯಲ್ಲಿ 225.57ಕೋಟಿ ರೂಪಾಯಿಗಳನ್ನು ಖರ್ಚು ಮಾಡಿತು. ಆರನೆಯ ಪಂಚವಾರ್ಷಿಕ

ಯೋಜನೆಯ ಅವಧಿಯಲ್ಲಿ ನೀರಾವರಿಗಾಗಿ ಒಟ್ಟು 600.00 ಕೋಟಿ ರೂಪಾಯಿ-ಗಳನ್ನು ವೆಚ್ಚ ಮಾಡುವ ಅಂದಾಜಿದೆ. ಇದರ ಮೇಲಿಂದ ತಿಳಿಯುವ ಅಂಶವೆಂದರೆ, ರಾಜ್ಯಸರಕಾರವು ಪ್ರತಿಯೊಂದು ಯೋಜನೆಯಲ್ಲಿ ನೀರಾವರಿಗೆ ಹೆಚ್ಚಿನ ಪ್ರಾಶಸ್ತ್ಯ-ವನ್ನು ಕೊಟ್ಟು ನೀರಾವರಿಯ ಸೌಲಭ್ಯವನ್ನು ಹೆಚ್ಚಿಸಿದೆ. ಇದೂ ಅಲ್ಲದೆ ಅದರ ನೀರಾ-ವರಿಯ ಉದ್ದೇಶಗಳೂ ಸಹ ಹೆಚ್ಚಿನ ಪ್ರೋತ್ಸಾಹಕವಾಗಿರುತ್ತವೆ. ಆರನೆಯ ಪಂಚ-ವಾರ್ಷಿಕ ಯೋಜನೆಯು ಈ ಕೆಳಗಿನ ಗುರಿಗಳನ್ನು ಇರಿಸಿಕೊಂಡಿದೆ.

1) ಈಗಾಗಲೇ ಹಮ್ಮಿಕೊಂಡ ನೀರಾವರಿ ಯೋಜನೆಗಳನ್ನು ಮುಕ್ತಾಯ-ಗೊಳಿಸುವದು. 2) ಸಾಕಷ್ಟು ಕೃತಕ ನೀರಿನ ಸೌಲಭ್ಯವನ್ನು ಕಡಿಮೆ ಮಳೆ ಆಗುವ ಜಿಲ್ಲೆಗೆ ಕಲ್ಪಿಸುವದು. 3) ರಾಜ್ಯದ ಜಲಸಂಪನ್ಮೂಲಗಳನ್ನು ಸಂಪೂರ್ಣ ಹಾಗೂ ಸರಿಯಾಗಿ ಉಪಯೋಗಿಸುವದು ಇಂಥ ಸುಯೋಜಿತ ಕ್ರಮಗಳಿಂದ ರಾಜ್ಯದಲ್ಲಿ ನೀರಾವರಿ ಸೌಲಭ್ಯಗಳು ವೃದ್ಧಿಯಾಗುತ್ತ ಬಂದಿವೆ.

ಕರ್ನಾಟಕದಲ್ಲಿ 1950–51 ರಲ್ಲಿ ಸುಮಾರು 6.14 ಲಕ್ಷ ಹೆಕ್ಟೇರು ಭೂಮಿ ನೀರಾವರಿಗೊಳಪಟ್ಟಿತು. 1980–81 ರಲ್ಲಿ 13.61 ಲಕ್ಷ ಹೆಕ್ಟೇರು ಭೂಮಿಗೆ ನೀರಾವರಿ ಸೌಲಭ್ಯ ಒದಗಿಸಲಾಗಿದೆ. 30 ವರ್ಷಗಳ ಯೋಜನೆಯ ಅವಧಿಯಲ್ಲಿ ಕೇವಲ 7.47 ಲಕ್ಷ ಹೆಕ್ಟೇರು ಹೆಚ್ಚಿನ ಭೂಮಿಯು ನೀರಾವರಿ ಸೌಕರ್ಯಗಳಿ-ಗೊಳಪಟ್ಟಂತಾಯಿತು. ವಿವಿಧ ಪ್ರಕಾರದ ನೀರಾವರಿಗಳಲ್ಲಿ ಕಾಲುವೆ ನೀರಾವರಿ ಅತ್ಯಂತ ಮಹತ್ವದ ಪ್ರಗತಿ ಸಾಧಿಸಿವೆ. 1950-51 ರಲ್ಲಿ ನದಿ ಕಾಲುವೆಗಳ ನೀರಾ-ವರಿ ಸೌಲಭ್ಯ 146 ಸಾವಿರ ಹೆಕ್ಟೇರುಗಳಿತ್ತು. ಮುಂದೆ 1980-81 ರಲ್ಲಿ 547 ಸಾವಿರ ಹೆಕ್ಟೇರುಗಳಿಗೆ ಏರಿತು. ಅಂದರೆ ಹಿಂದಿನದಕ್ಕಿಂತ ಸುಮಾರು ನಾಲ್ಕು ಪಟ್ಟು ಹೆಚ್ಚಳವಾದಂತಾಯಿತು. ನದಿ ಕಾಲುವೆಗಳ ನೀರಾವರಿ ತರುವಾಯ, ಭಾವಿ(ಗಳಿಂದ) ನೀರಾವರಿಯು ಪ್ರಗತಿ ದ್ವಿತೀಯ ಸ್ಥಾನವನ್ನು ಹೊಂದಿದೆ. ಉಳಿದ ಎರಡು ಪ್ರಕಾ-ರದ ನೀರಾವರಿ ಸೌಲಭ್ಯಗಳಾದ ಕೆರೆ ಮತ್ತು ಇತರೆ ನೀರಾವರಿಗಳು ಕಡಿಮೆ ಪ್ರಮಾಣದ ಪ್ರಗತಿ ಸಾಧಿಸಿವೆ. ರಾಜ್ಯದಲ್ಲಿ ಇತ್ತೀಚೆಗೆ ಕೆರೆಗಳಿಂದ ನೀರಾವರಿ ಸೌಲಭ್ಯ ಕಡಿಮೆ ಆಗುತ್ತಿರುವದು ಕಂಡುಬಂದಿದೆ. 1950-51 ರಲ್ಲಿ ಒಟ್ಟು ನೀರಾ-ವರಿಯ ಭೂಮಿಯಲ್ಲಿ ಶೇಕಡಾ 47.3 ರಷ್ಟು ಭೂಮಿಯು ಕೆರೆ ನೀರಾವರಿ ಸೌಕರ್ಯವನ್ನು ಹೊಂದಿತ್ತು, ಮುಂದೆ 1980-81 ರಲ್ಲಿ ಅದರ ಪ್ರಮಾಣ ಶೇಕಡಾ 22.3 ಕ್ಕೆ ಇಳಿಯಿತು. ಒಟ್ಟಿನಲ್ಲಿ ಇತ್ತೀಚೆಗೆ ನದಿ ಕಾಲುವೆಗಳ ಮತ್ತು ಕೊಳವೆ ಭಾವಿಗಳು ಬಹಳ ಪ್ರಚಾರದಲ್ಲಿ ಬಂದಿವೆ. 1980-81 ರಲ್ಲಿ ಒಟ್ಟು ನೀರಾವರಿಯ ಭೂಮಿಯಲ್ಲಿ ಶೇಕಡಾ 40.2 ರಷ್ಟು ಭೂಮಿಯು ನದಿ ಕಾಲುವೆಗಳ ಸೌಲಭ್ಯ-ದಿಂದಲೂ, ಶೇಕಡಾ 26.7 ರಷ್ಟು ಕೆರೆಗಳಿಂದಲೂ, ಶೇಕಡಾ 22.3 ರಷ್ಟು ಭಾವಿ-

ಗಳಿಂದಲೂ ಮತ್ತು ಶೇಕಡಾ 10.7 ರಷ್ಟು ಇತರ ನೀರಾವರಿ ಸೌಲಭ್ಯಗಳಿಂದಲೂ ಕೂಡಿವೆ.

ವಿವಿಧ ಪ್ರಕಾರದ ನೀರಾವರಿ ಸೌಲಭ್ಯ ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಸರಿಯಾಗಿ ಬೆಳವಣಿಗೆಯಾಗಿಲ್ಲ. ನದಿ ಕಾಲುವೆ ನೀರಾವರಿ ಸೌಲಭ್ಯಗಳನ್ನು ಒದಗಿಸುವದರಲ್ಲಿ ಬಳ್ಳಾರಿ ಜಿಲ್ಲೆ ಪ್ರಥಮ ಸ್ಥಾನ ಪಡೆದಿವೆ. ರಾಯಚೂರ ಮತ್ತು ಮಂಡ್ಯ ಜಿಲ್ಲೆಗಳು ಅನುಕ್ರಮವಾಗಿ ದ್ವಿತೀಯ ಮತ್ತು ತೃತೀಯ ಸ್ಥಾನಗಳನ್ನು ಹೊಂದಿವೆ. ಶಿವಮೊಗ್ಗ, ಮೈಸೂರು, ಚಿತ್ರದುರ್ಗ ಮತ್ತು ಬೆಳಗಾಂವಿ ಜಿಲ್ಲೆಗಳಲ್ಲಿಯೂ ಸಹ ನದಿ ಕಾಲುವೆ ನೀರಾವರಿ ಸೌಲಭ್ಯಗಳು ಹೆಚ್ಚಿನ ಪ್ರಮಾಣದಲ್ಲಿವೆ. ಬೆಂಗಳೂರು. ಗುಲ್ಬರ್ಗಾ ಕೊಡಗು, ತುಮಕೂರು ಜಿಲ್ಲೆಗಳಲ್ಲಿ ಈ ಸೌಲಭ್ಯವು ಶೀರಾ ಕಡಿಮೆ ಪ್ರಮಾಣದಲ್ಲಿದೆ. ಉತ್ತರ ಕನ್ನಡ, ಕೋಲಾರ, ದಕ್ಷಿಣ ಕನ್ನಡ ಮತ್ತು ಬೀದರ ಜಿಲ್ಲೆಗಳಲ್ಲಿ ನದಿ ಕಾಲುವೆಗಳ ನೀರಾವರಿ ಸೌಲಭ್ಯ ಇಲ್ಲವೇ ಇಲ್ಲ. ಕೆರೆ ನೀರಾವರಿ ಸೌಲಭ್ಯವು 5 ಜಿಲ್ಲೆಗಳಲ್ಲಿ ಅಧಿಕ ಪ್ರಮಾಣದಲ್ಲಿದೆ. ತುಮಕೂರು, ಶಿವಮೊಗ್ಗ, ಹಾಸನ ಧಾರವಾಡ ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಕೆರೆ ನೀರಾವರಿಯು ಹೆಚ್ಚಿನ ಪ್ರಮಾಣದಲ್ಲಿದೆ. ಭಾವಿ ನೀರಾವರಿ ಸೌಲಭ್ಯವು ಸಹ 5 ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ಕೋಲಾರ, ವಿಜಾಪುರ, ಬೀದರ, ಬೆಳಗಾಂವಿ ಹಾಗೂ ಬೆಂಗಳೂರು ಜಿಲ್ಲೆಗಳಲ್ಲಿ ಈ ಸೌಲಭ್ಯವು ಅಧಿಕ ಪ್ರಮಾಣದಲ್ಲಿದೆ. ಕರ್ನಾಟಕದಲ್ಲಿ ಅತ್ಯಧಿಕ ಪ್ರಮಾಣದಲ್ಲಿ ನೀರಾವರಿ ಸೌಲಭ್ಯವನ್ನು ಹೊಂದಿದ ಜಿಲ್ಲೆಗಳೆಂದರೆ: ಶಿವಮೊಗ್ಗ (42 6-ಶೇ) ಮಂಡ್ಯ (40.6 ಶೇ) ದಕ್ಷಿಣಕನ್ನಡ (ಶೇ. 36.4) ಕೊಡಗು (ಶೇ. 22.3) ಬಳ್ಳಾರಿ (ಶೇ.21.6) ಈ ಜಿಲ್ಲೆಗಳಲ್ಲಿ ನೀರಾವರಿ ಅನುಕೂಲತೆಯು ಯೋಜನೆಯಿಂದ ಯೋಜನೆಗೆ ತ್ವರಿತಗತಿಯಿಂದ ಏರುತ್ತ ನಡೆದಿದೆ. ಇನ್ನೂ ಕೆಲವು ಜಿಲ್ಲೆಗಳಲ್ಲಿ ನೀರಾವರಿ ಸೌಲಭ್ಯ ಕಡಿಮೆ ಅಲ್ಲದೆ, ನಿಧಾನಗತಿಯ ಪ್ರಗತಿಯನ್ನು ಹೊಂದಿವೆ. ಉದಾಹರಣೆಗೆ: ಗುಲ್ಬರ್ಗ ಜಿಲ್ಲೆಯಲ್ಲಿ 1960-61 ರಲ್ಲಿ ಒಟ್ಟು ನಿವ್ವಳ ಸಾಗುವಳಿ ಭೂಮಿಯ ಶೇಕಡಾ 1.2 ರಷ್ಟು ನೀರಾವರಿಗೊಳಪಟ್ಟಿತ್ತು. ಆದರೆ ಎರಡು ದಶಕಗಳ ನಂತರ 1980-81 ರಲ್ಲಿ ಅದು ಶೇಕಡಾ 2.2 ಕ್ಕೆ ಹೆಚ್ಚಿತು. ಇದೇ ರೀತಿ ಧಾರವಾಡ, ಬೀದರ, ವಿಜಾಪೂರ. ಮತ್ತು ತುಮಕೂರು ಜಿಲ್ಲೆಗಳಲ್ಲಿ ನೀರಾವರಿ ಸೌಲಭ್ಯ ಮತ್ತು ಪ್ರಗತಿ—ನಿಧಾನಗತಿಯಿಂದ ನಡೆದದ್ದು ಕಂಡುಬರುತ್ತದೆ.

ನೀರಾವರಿ ಸಮಸ್ಯೆಗಳು :

1) ಮಂದಗತಿಯ ನೀರಾವರಿಯ ಅನುಕೂಲತೆಗಳು

30 ವರ್ಷಗಳ ಯೋಜನೆಯ ಅವಧಿಯಲ್ಲಿ ಕೇವಲ 7.47 ಲಕ್ಷ ಹೆಕ್ಟೇರು ಹೆಚ್ಚಿನ ಭೂಮಿಯು ನೀರಾವರಿ ಸೌಕರ್ಯಕ್ಕೊಳಪಟ್ಟಿತ್ತು. ರಾಜ್ಯದಲ್ಲಿ 1960-61

ರಲ್ಲಿ ಒಟ್ಟು ನಿವ್ವಳ ಸಾಗುವಳಿ ಭೂಮಿಯು ಶೇಕಡಾ 8.4 ರಷ್ಟು ನೀರಾವರಿ-ಗೊಳಪಟ್ಟಿತ್ತು. ಮುಂದೆ ಅದು 1980-81 ರಲ್ಲಿ ಶೇಕಡಾ 13.7 ರಷ್ಟಕ್ಕೆ ಏರಿತು. ದಕ್ಷಿಣ ರಾಜ್ಯಗಳ ನೀರಾವರಿ ಪ್ರಗತಿಗೆ ರಾಜ್ಯದ ಪ್ರಗತಿಯನ್ನು ಹೋಲಿಸಿದಾಗ ರಾಜ್ಯದ ನೀರಾವರಿ ಪ್ರಗತಿ ಕಡಿಮೆ ಎಂದು ಕಾಣುತ್ತದೆ. ಉದಾಹರಣೆಗೆ: ಆಂಧ್ರ-ಪ್ರದೇಶದಲ್ಲಿ ಸಾಗುವಳಿ ಪ್ರದೇಶದ ಶೇಕಡಾ 33.1 ಭಾಗ ನೀರಾವರಿಗೊಳಪಟ್ಟಿದೆ. ತಮಿಳು ನಾಡಿನಲ್ಲಿ ಸಾಗುವಳಿಯಾದ ಒಟ್ಟು ಪ್ರದೇಶದ ಶೇಕಡಾ 42.4 ರಷ್ಟು ಭೂಮಿ ನೀರಾವರಿ ಸೌಲಭ್ಯ ಪಡೆದಿರುತ್ತದೆ. ಇದಕ್ಕೆಲ್ಲ ಕಾರಣಗಳೆಂದರೆ, ಕಡಿಮೆ ಪ್ರಮಾಣದ ನೀರಿನ ಉಪಯೋಗ ಮತ್ತು ದುರುಪಯೋಗ, ಆರ್ಥಿಕ ಅಭದ್ರತೆ, ನಿಧಾನಗತಿಯಿಂದ ನಿರ್ಮಾಣವಾಗುತ್ತಿರುವ ಆಣೆಕಟ್ಟುಗಳು ಮತ್ತು ಕುಂಠಿತವಾಗು-ತ್ತಿರುವ ಕೆರೆ ನೀರಾವರಿ ಸೌಲಭ್ಯಗಳು. ಇವುಗಳಲ್ಲದೆ, ರೈತರು ಚಿಕ್ಕ ನೀರಾವರಿ ಸೌಲಭ್ಯಗಳಿಗೆ ವೆಚ್ಚ ಮಾಡಲು ಹಿಂಜರಿಯುತ್ತಿರುವದು ಒಂದು ಅತೀ ಮುಖ್ಯ ಕಾರಣವಾಗಿದೆ.

2) ಪ್ರಾಂತೀಯ ಅಸಮಾನತೆಗಳು

ಕೆಲವೊಂದು ಜಿಲ್ಲೆಗಳಲ್ಲಿ ನೀರಾವರಿ ಸೌಲಭ್ಯಗಳು ಮತ್ತು ನೀರಾವರಿಗೊಳ-ಪಟ್ಟಿರುವ ಸಾಗುವಳಿ ಭೂಮಿಯಲ್ಲಿ ತೀರಾ ವೈಪರೀತ್ಯಗಳನ್ನು ಕಾಣುತ್ತೇವೆ. ರಾಜ್ಯ ಸರಕಾರವು ಸಣ್ಣ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಗಮನ ಕೊಡದಿರುವದೇ ಪ್ರಾಂತೀಯ ಅಸಮಾನತೆಗೆ ಮುಖ್ಯ ಕಾರಣವಾಗಿದೆ. ಆರನೆಯ ಪಂಚವಾರ್ಷಿಕ ಯೋಜನೆಯಲ್ಲಿಯೂ ಸಹ ಸರಕಾರವು ಸಣ್ಣ (ಚಿಕ್ಕ) ನೀರಾವರಿ ಯೋಜನೆಗಳಿಗೆ ಪ್ರಾಶಸ್ತ್ಯ ಕೊಡದೇ ಇರುವದು ವಿಷಾದಕರ.

3) ಸಣ್ಣ ಹಿಡುವಳಿಗಾರರ ನೀರಿನ ಸಮಸ್ಯೆ

ನೀರಾವರಿಯ ಉಪಯೋಗವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ, ಹೆಚ್ಚಾಗಿ ಸಣ್ಣ ರೈತರು ಕೃತಕ ನೀರಿನ ಉಪಯೋಗವನ್ನು ಅಲ್ಪಪ್ರಮಾಣದಲ್ಲಿ ಮಾಡುತ್ತಿ-ರುವದು ಕಂಡುಬರುತ್ತದೆ.

4 ವಿದ್ಯುಚ್ಛಕ್ತಿಯ ರೇಚಕ ಯಂತ್ರಗಳ ಬೆಳವಣಿಗೆಯಲ್ಲಿ ಪ್ರಾಂತೀಯ ಅಸಮಾನತೆ

ಬೆಂಗಳೂರು, ಚಿತ್ರದುರ್ಗ, ಕೋಲಾರ, ದಕ್ಷಿಣ ಕನ್ನಡ ಮತ್ತು ತುಮಕೂರು ಜಿಲ್ಲೆಗಳಲ್ಲಿ ಈ ಯಂತ್ರಗಳ ಉಪಯೋಗ ಕೇಂದ್ರೀಕೃತವಾಗಿರುವದು ಕಂಡುಬ-

ರುತ್ತದೆ. ಇತರ ಕೆಲವು ಜಿಲ್ಲೆಗಳಲ್ಲಿ ಈ ಯಂತ್ರಗಳ ಬಳಕೆ ಬಹಳ ಕಡಿಮೆ ಇದೆ. ಇದರಿಂದಾಗಿ ರಾಜ್ಯದಲ್ಲಿ ಹೆಕ್ಟೇರುವಾರು ಉತ್ಪನ್ನ ಮತ್ತು ಆದಾಯದಲ್ಲಿ ವ್ಯತ್ಯಯ ಕಂಡುಬರುತ್ತದೆ.

5) ಜಲ ಸಂಪನ್ಮೂಲಗಳ ಅಪೂರ್ಣ ಉಪಯೋಗ

ಕೃತಕ ನೀರಿನ ಉಪಯೋಗವನ್ನು ರೈತರು ಸಂಪೂರ್ಣವಾಗಿ ಉಪಯೋಗಿಸುತ್ತಿಲ್ಲ. ಉದಾಹರಣೆಗೆ: 1978-79 ರಲ್ಲಿ ಪ್ರತಿಶತ 63 ರಷ್ಟು ಕೃತಕ ನೀರನ್ನು ಮಾತ್ರ ರೈತರು ಬಳಸಿಕೊಂಡಿದ್ದರು. ಉಳಿದ ನೀರು ವ್ಯರ್ಥವಾಗಿ ಹೋಗಿದ್ದು ಕಂಡುಬರುತ್ತದೆ. ಇದೂ ಅಲ್ಲದೆ, ರಾಜ್ಯದಲ್ಲಿ ವಿವಿಧ ಪ್ರಕಾರದ ನೀರಾವರಿಗಳಿಂದ ಸುಮಾರು 54.55 ಲಕ್ಷ ಹೆಕ್ಟೇರು ಭೂಮಿಗೆ ನೀರು ಒದಗಿಸಬಹುದಾಗಿದೆ. ಆದರೆ ಈ ವರೆಗೆ ಕೇವಲ 20 ಲಕ್ಷ ಹೆಕ್ಟೇರು ಭೂಮಿಗೆ ಮಾತ್ರ ನೀರಾವರಿಯ ಮೂಲಕ ನೀರನ್ನು ಒದಗಿಸಲಾಗಿದೆ. ಇದರಿಂದ ಕಂಡು ಬರುವ ಅಂಶವೆಂದರೆ ರಾಜ್ಯದಲ್ಲಿ ಜಲ ಸಂಪನ್ಮೂಲಗಳನ್ನು ಸಂಪೂರ್ಣವಾಗಿ ಉಪಯೋಗಿಸಿಲ್ಲವೆಂಬುದು ಸ್ಪಷ್ಟವಾಗುತ್ತದೆ.

ಕರ್ನಾಟಕದ ನೀರಾವರಿ ಅಭಿವೃದ್ಧಿಗೆ ಕೆಲವು ಸೂಕ್ತ ಸಲಹೆಗಳು

ತೀವ್ರಗತಿಯ ನೀರಾವರಿ ಬೆಳವಣಿಗೆಗೆ ರಾಜ್ಯ ಸರಕಾರವು ನಿರ್ಮಾಣ ಹಂತದಲ್ಲಿರುವ ಎಲ್ಲಾ ನೀರಾವರಿ ಯೋಜನೆಗಳನ್ನು ಪೂರ್ಣಗೊಳಿಸುವ ಕಾರ್ಯವನ್ನು ಕೈಕೊಳ್ಳಬೇಕು ಮುಂದಿನ ವರ್ಷಗಳಲ್ಲಿ ಸರಕಾರವು ಸಣ್ಣ ಪ್ರಮಾಣದ ನೀರಾವರಿ ಯೋಜನೆಗೆ ಅತೀ ಹೆಚ್ಚಿನ ಪ್ರಾಶಸ್ತ್ಯ ನೀಡಿ, ಅಂತರ್ಜಲ ಸಂಪನ್ಮೂಲಗಳನ್ನು ಹೆಚ್ಚಾಗಿ ಉಪಯೋಗಿಸಿಕೊಳ್ಳಬೇಕು. ಇದರ ಸಲುವಾಗಿ ಅಂತರ್ಜಲ ಸಮೀಕ್ಷೆ, ಮಣ್ಣು ಪರೀಕ್ಷೆ ಭೂಮಿ ಸಮಗೊಳಿಸುವದು, ಸಣ್ಣ ಹಿಡುವಳಿಗಳನ್ನು ಒಂದುಗೂಡಿಸುವದು, ಮುಂತಾದ ಕಾರ್ಯಕ್ರಮಗಳನ್ನು ಕ್ರಮವಾಗಿ ಯೋಜಿಸಿಕೊಳ್ಳಬೇಕು. ಸಣ್ಣ ಪ್ರಮಾಣದ ನೀರಾವರಿ ಯೋಜನೆಗಳಾದ ಕೆರೆ, ಭಾವಿ, ಹೊಂಡ ಮುಂತಾದವುಗಳನ್ನು ಅಭಿವೃದ್ಧಿಗೊಳಿಸಿ ವ್ಯರ್ಥವಾಗಿ ಹರಿದುಹೋಗುತ್ತಿರುವ ಮಳೆ ನೀರನ್ನು ಸದುಪಯೋಗ ಮಾಡಿಕೊಳ್ಳಬೇಕು. ಇದನ್ನು ಸಾಧಿಸಬೇಕಾದರೆ ಸರಕಾರವು ರೈತರಿಗೆ ಸಾಕಷ್ಟು ಅಲ್ಪಾವಧಿ ಮತ್ತು ದೀರ್ಘಾವಧಿ ಸಾಲಗಳನ್ನು ವಿದ್ಯುಚ್ಛಕ್ತಿಯ ರೇಚಕ ಯಂತ್ರಗಳ ಪೂರೈಕೆ, ಕಡಿಮೆ ಬೆಲೆಯಲ್ಲಿ ವಿದ್ಯುತ್ ಪೂರೈಕೆ ಮುಂತಾದ ಸೌಕರ್ಯಗಳನ್ನು ಒದಗಿಸುವದು ತೀರಾ ಅಗತ್ಯವಾಗಿದೆ. ಇದೂ ಅಲ್ಲದೆ, ಪ್ರತಿಯೊಂದು ಸಹಕಾರಿ ಪತ್ತಿನ ಸಂಘಗಳು ಇನ್ನು ಮುಂದೆ. ಎರಡು ಅಥವಾ ಮೂರು ವಿದ್ಯುಚ್ಛಕ್ತಿಯ ರೇಚಕ ಯಂತ್ರಗಳನ್ನು ಖರೀದಿ ಮಾಡಿ ಸಣ್ಣ ರೈತರಿಗೆ ಉಪಯೋಗ ಮಾಡಲು ಕೊಡಬೇಕು. ಅಥವಾ ಕೆಲವು ಸಣ್ಣ ರೈತರು ಕೂಡಿಕೊಂಡು ಈ ಯಂತ್ರವನ್ನು

ಖರೀದಿಮಾಡಿ ಉಪಯೋಗಿಸಿಕೊಳ್ಳಬೇಕು. ಸಣ್ಣ ರೈತರ ಸಲುವಾಗಿ. ಇನ್ನೊಂದು ಅತೀ ಮುಖ್ಯ ಸಲಹೆ ಏನೆಂದರೆ: ಕಡಿಮೆ ವೆಚ್ಚದ ಸ್ಥಳೀಯ ನೀರಾವರಿ ತಂತ್ರಗಳನ್ನು ಹುಡುಕಿ ತೆಗೆಯಬೇಕು. ಇತ್ತೀಚಿನ ವರ್ಷಗಳಲ್ಲಿ ಅಂಥ ತಂತ್ರವನ್ನು ಉತ್ತ-ರಪ್ರದೇಶದ ಘಾಜೀಪೂರ ಜಿಲ್ಲೆಯಲ್ಲಿ ಸ್ಥಳೀಯ ತಂತ್ರಜ್ಞರು ಆಚರಣೆಗೆ ತಂದಿ-ರುತ್ತಾರೆ.

ನೀರಾವರಿಯ ಸೌಲಭ್ಯದ ಜೊತೆಗೆ ರೈತರ ಸಾಮಾನ್ಯ ಶಿಕ್ಷಣ, ಸಾರಿಗೆ-ಸಂಪರ್ಕ ಬ್ಯಾಂಕು ಮಾರುಕಟ್ಟೆ, ವ್ಯವಸಾಯ ಸಲಕರಣೆಗಳು, ವಿದ್ಯುಚ್ಛಕ್ತಿ, ವೈದ್ಯಕೀಯ ಸೌಲಭ್ಯಗಳನ್ನು ರೈತರಿಗೆ ಸರಕಾರವು ಒದಗಿಸಿಕೊಡಬೇಕು. ಈ ಸೌಕರ್ಯಗಳನ್ನು ಒದಗಿಸುವಲ್ಲಿ ಕೃಷಿ ಸಂಶೋಧನೆ ಸಂಸ್ಥೆಗಳು, ಕೃಷಿ ಮಹಾವಿದ್ಯಾಲಯಗಳು. ಗ್ರಾಮ ಸೇವಕ ತರಬೇತಿ ಕೇಂದ್ರ ಮುಂತಾದವುಗಳು ರೈತರಲ್ಲಿ ನೀರಾವರಿಯಿಂದಾಗುವ ಲಾಭಗಳನ್ನು ಮನವರಿಕೆ ಮಾಡಿಕೊಡಬೇಕು. ●

ಮುಕ್ತಾಯಕ್ಕಗಳ ಒಂದು ವಚನದ ವಿರಾಮ ಚಿಹ್ನ ಪರಿಶೀಲನೆ

● ಡಾ. ವ್ಹಿ. ಎಸ್. ಕಂಬಿ

ಪರಿಚಯ :

ತಾಡೋಲೆಯ ಹಸ್ತಪ್ರತಿ ಮತ್ತು ವಿರಾಮ ಚಿಹ್ನ :

ತಾಡೋಲೆಯಲ್ಲಿರುವ ವಚನಗಳನ್ನು ನೋಡಿದಾಗ ವಿರಾಮ ಚಿಹ್ನಗಳಿಲ್ಲದುದು ಕಂಡುಬರುವಂತೆ, ಆ ವಚನಗಳನ್ನು ಅರ್ಥಪೂರ್ಣವಾಗಿ ಓದುವಾಗ ವಿರಾಮ ಚಿಹ್ನಗಳ ಅವಶ್ಯಕತೆ ಕಂಡುಬರುತ್ತದೆ. ಆಗ ವಿರಾಮ ಚಿಹ್ನಗಳನ್ನು ಸಾಧ್ಯವಾದಷ್ಟು ದೋಷ ರಹಿತವಾಗಿ ಉಪಯೋಗಿಸಲು ಎಚ್ಚರಿಕೆಯನ್ನು ನಿರ್ವಹಿಸಬೇಕಾಗುತ್ತದೆ. ಈ ಕೆಲಸವು ವಚನಗಳನ್ನು ಸಂಪಾದಿಸುವ ಪಂಡಿತರ ಸಂಪಾದನಾ ಕಾರ್ಯಕ್ಷೇತ್ರಕ್ಕೆ ಸೇರಿದ್ದು. ಪದಗಳನ್ನು ಬಿಂಗಡಿಸಿ ಅಥವ ಕೂಡಿಸಿ ಬರೆಯುವುದು ಕೂಡ ವಿರಾಮಚಿಹ್ನಗಳನ್ನು ಉಪಯೋಗಿಸುವಷ್ಟೇ ಮಹತ್ವದ ಕಾರ್ಯ. ಇದೂ ಅಲ್ಲದೆ ಸಂಪಾದನಾಕಾರ್ಯದ ಸಮಯದಲ್ಲಿ ಸಂಪಾದಕರು ಒಂದು ಗ್ರಂಥದ ಹಸ್ತಪ್ರತಿಗಳು ದೊರತವುಗಳೆಲ್ಲವನ್ನೂ ಉಪಯೋಗಿಸುವುದು ಅಪರ ಮಹತ್ವದ ಜವಾಬ್ದಾರಿ ಕಾರ್ಯ. ಹೀಗೆ ಪ್ರತಿಗಳನ್ನು ಬಳಸಿಕೊಳ್ಳುವಾಗ ಭಿನ್ನ ಭಿನ್ನ ಪದಗಳು, ವಾಖ್ಯ ಖಂಡಗಳು ಅಥವಾ ವಾಕ್ಯಗಳು ಹೆಚ್ಚಿಗೆ ದೊರೆಯುವದುಂಟು: ಇಲ್ಲವೆ ಇಲ್ಲದಿರುವುದೂ ಉಂಟು. ಇಂಥ ಪ್ರಸಂಗದಲ್ಲಿ ಪತ್ರದ ಅಡಿಯಲ್ಲಿ ಈ ಪದಗಳ ಉಲ್ಲೇಖಮಾಡುವದು ಸಂಪಾದಕರ ಹೊಣೆ. ಇದರಿಂದ ಕೃತಿಕಾರನು ಪ್ರಯೋಗಿಸಿದ ಪದದ ಪರಿಚಯ, ಅರ್ಥ ಪರಿಚಯ ಮಾಡಿಕೊಳ್ಳಲು ನೆರವಾಗುವದು. ಇದೇ ಶುದ್ಧಪತ್ರ ನಿರ್ಣಯ ಕಾರ್ಯ. ಇದು ಒಂದು ವಿಜ್ಞಾನವೆಂದು ಇಂದು ಪ್ರಸಿದ್ಧವಾಗಿದೆ. ಇದು ಆಧುನಿಕ ಕಾಲದಲ್ಲಿ ಪ್ರಚಾರಕ್ಕೆ ಬಂದಿದೆ. ಈ ಕಾರ್ಯಕ್ಕೆ ನಿಮ್ನವಿಮರ್ಶೆ (lower criticism ಎಂದು ಪ್ರಾಜ್ಞರ ಅಭಿಪ್ರಾಯ. ಆಧುನಿಕ ವಿದ್ವಾಂಸರು ಸಂಪಾದಿಸಿದ ಗ್ರಂಥಗಳ ವಿಶ್ಲೇಷಣಾತ್ಮಕ ಅಧ್ಯಯನಮಾಡಿ ಸಾಹಿತ್ಯಶಾಸ್ತ್ರ, ಅಥವ ಮತಧರ್ಮಶಾಸ್ತ್ರ, ಇಲ್ಲವೆ ಸಮಾಜವಿಜ್ಞಾನ ಹಾಗೂ ಮಾನವಿಕ ವಿಜ್ಞಾನ ಸಿದ್ಧಾಂತಗಳ ಸೃಷ್ಟಿಮಾಡುವುದು ಉನ್ನತ ವಿಮರ್ಶೆ

[higher criticism] ಎಂದು ಪ್ರಾಜ್ಞರು ತಿಳಿಸುತ್ತಾರೆ. ಈ ಕಾರ್ಯದ ಅವಶ್ಯಕತೆ ವೀರಶೈವ ಸಾಹಿತ್ಯದಲ್ಲಿ ಬಹುಮುಖವಾಗಿ, ಅಧಿಕ ಪ್ರಮಾಣದಲ್ಲಿ ನಡೆಯಬೇಕಾಗಿದೆ ಇಂದು.

ಪ್ರಸ್ತುತ ವಚನವು **'ಶೂನ್ಯ ಸಂಪಾದನೆ'** ಎಂಬ ಗ್ರಂಥದಲ್ಲಿಯ 'ಮುಕ್ತಾಯಕ್ಕಗಳ ಸಂಪಾದನೆಯಲ್ಲಿಯ ಎರಡನೆಯ ವಚನ **'ಶೂನ್ಯ ಸಂಪಾದನೆ'** ಎಂಬುದು ಶಿವಶರಣರು ಹಲವಾರು ಮಹತ್ವದ ಪ್ರಶ್ನೆಗಳನ್ನು ಚರ್ಚಿಸಿದ (ಸಂಪಾದಿಸಿದ) ಚರ್ಚೆಗಳ (ಸಂಪಾದನೆಗಳ) ಸಂಕಲನಗ್ರಂಥ. ಇದರಲ್ಲಿ ಒಟ್ಟಿಗೆ ಇಪ್ಪತ್ತೊಂದು ಸಂಪಾದನೆಗಳು ಇರುತ್ತವೆ. **'ಬಸವಣ್ಣನವರು ಪೂರ್ವಮೀಮಾಂಸಕರೊಡನೆ ಗೈದ ಸಂಪಾದನೆ'** ಯೂ ಕೂಡ ಇವರಲ್ಲಿ ಸೇರಬೇಕಾದಂಥ ಸಂಪಾದನೆಯೆಂದು ಪ್ರಸ್ತುತ ಲೇಖಕರ ಅಭಿಪ್ರಾಯ. ಆಧುನಿಕ ಸಂಪಾದಕರು **'ಮುಕ್ತಾಯಕ್ಕಗಳ ಸಂಪಾದನೆ'** ಯ ಎರಡನೆಯ ವಚನದಲ್ಲಿ ಬಳಸಿದ ವಿರಾಮ ಚಿಹ್ನೆಗಳನ್ನು ಬಳಸಿದ್ದು, ಅದು ಅರ್ಥಗ್ರಹಣಕ್ಕೆ ನೆರವಾಗುವದೇ ಎಂಬ ಆಲೋಚನೆಗೆ ಪ್ರಸ್ತುತ ಲೇಖಕರು ತೊಡಗಿದಾಗ ಉಂಟಾದ ಚಿಂತನದ ಫಲವು ಈ ಪರಿಶೀಲನೆ. ಪ್ರಾಜ್ಞರ ಮುಂದೆ ಈ ಚಿಂತನವನ್ನು ಇಡಲು ಪ್ರಯತ್ನಿಸಿದ್ದುದನ್ನಿಲ್ಲಿ ನೋಡಬಹುದು.

ವಿಧಾನ :

ಮೊದಲು ತಾಡೋಲೆಯಲ್ಲಿ ಈ ವಚನವಿದ್ದಂತೆಯೇ ಪ್ರತಿಮಾಡಲಾಗುವದು. ಆಮೇಲೆ ಅಚ್ಚಾದ ಗೂಳೂರ ಸಿದ್ಧವೀರಣ್ಣೊಡೆಯರ **'ಶೂನ್ಯ ಸಂಪಾದನೆ'** ಯಿಂದ ಹಾಗೂ ಶಿವಗಣ ಪ್ರಸಾದಿ ಮಹಾದೇವಯ್ಯಗಳ ಮತ್ತು ಗುಮ್ಮಳಾಪುರದ ಸಿದ್ಧಲಿಂಗಯತಿಗಳ **'ಶೂನ್ಯ ಸಂಪಾದನೆ'** ಗಳಿಂದ ಇದೇ ವಚನವನ್ನು ಪ್ರತಿಮಾಡಲಾಗುವದು. ಇದು ಆಧುನಿಕ ವಿದ್ವಾಂಸರು ಬಳಸಿದ ವಿರಾಮಚಿಹ್ನಗಳಲ್ಲಿರುವ ವೈವಿಧ್ಯದ ಪರಿಚಯ ಮಾಡಿಕೊಡುವದು. ಕರ್ನಾಟಕ ವಿಶ್ವವಿದ್ಯಾಲಯವು ಗೂಳೂರವರ **'ಶೂನ್ಯ ಸಂಪಾದನೆ'** ಯನ್ನು ಆಂಗ್ಲ ಭಾಷೆಗೆ ಪರಿವರ್ತಿಸಿದ್ದು, ಅದರಲ್ಲಿ ಇದೇ ವಚನದ ಭಾಷಾಂತರವಿದ್ದು ಅದನ್ನು ಪ್ರತಿ ಮಾಡಲಾಗುತ್ತದೆ. ಇದೂ ಕೂಡ ಈ ಕಾರ್ಯದ ಚಿತ್ರಣ ಕೊಡುವದನ್ನು ಅವಗಾಹನಕ್ಕೆ ತೆಗೆದುಕೊಳ್ಳಬಹುದು. ಆ ಮೇಲೆ ವಚನದ ಭಾವವನ್ನು ಕೊಟ್ಟು, ಆ ಭಾವವನ್ನು ಕುರಿತು ಆಲೋಚನೆ ಮಾಡಲಾಗುವದು. ಈ ಆಲೋಚನೆಯ ಹಿನ್ನೆಲೆಯಲ್ಲಿ ಅಚ್ಚಾದ ಗ್ರಂಥದಲ್ಲಿದ್ದ ವಿರಾಮ ಚಿಹ್ನಗಳನ್ನು ಕೊಡುವದವಶ್ಯವೆಂದು ಕಂಡುಬಂದುದನ್ನವಲಂಬಿಸಿ ಹಾಗೆ ಮಾಡುವದು. ಕೊನೆಗೆ ವಾಕ್ಯರಚನಾ ತಂತ್ರದ ವಿಚಾರ ಮತ್ತು ಮುಕ್ತಾಯ. ಇದು ವಿಧಾನ. ತಾಡೋಲೆಯಲ್ಲಿರುವ ವಚನದ ಪ್ರತಿ ಮಾಡಿಕೊಂಡದನ್ನು ನೋಡಿದರೆ ವಿರಾಮಚಿಹ್ನಗಳ ಪ್ರಯೋಗವು ಕಂಡುಬರುವದಿಲ್ಲ.

(೨) ರಾವೂರ ಶ್ರೀ ಸಿದ್ಧಲಿಂಗೇಶ್ವರಮಠ ಮತ್ತು ಆದವಾನಿಯ ಕಲ್ಲು-ಮಠದ ಅಧಿಪತಿಗಳು ೧೭-೨-೧೯೩೮ರಲ್ಲಿ ಪ್ರಕಾಶಪಡಿಸಿದ ಗೂಳೂರ ಸಿದ್ಧವೀರ-ಣ್ಣೊಡೆಯರು ಸಂಗ್ರಹಿಸಿದ ಪ್ರಭುದೇವರ **'ಶೂನ್ಯ ಸಂಪಾದನೆ'** ಎಂಬ ಗ್ರಂಥ ದಿಂದ ಎತ್ತಿಕೊಂಡ ಪ್ರಸ್ತುತ ವಚನ.

"ಅಂಧಕನ ಕಯ್ಯ ಅಂಧಕ ಹಿಡಿದಂತಿರಬೇಕು. ಮೂಗನ ಕಯ್ಯಲ್ಲಿ ಕಾವ್ಯವ ಕೇಳಿದಂತಿರಬೇಕು. ದರ್ಪಣದೊಳಗಣ ಪ್ರತಿಬಿಂಬದಂತೆ ಹಿಡಿವರಿಗಳವಲ್ಲದಿರಬೇಕು ಅಣ್ಣಾ. ಕೂರ್ಮನ ಶಿಶುವಿನ ಸ್ನೇಹದಂತಿರಲೊಲ್ಲದೆ ಆಜೂಢಗೆಟ್ಟಿಯೊ ಅಜಗಣ್ಣಾ."

(೩) ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆ ಧಾರವಾಡ ಪ್ರಕಟಗೊಳಿಸಿದ ಶಿವಗಣ ಪ್ರಸಾದಿ ಮಹಾದೇವಯ್ಯನವರ **'ಶೂನ್ಯ ಸಂಪಾದನೆ'** (ಮಾರ್ಚ ೧೯೭೧) ಯಲ್ಲಿರುವ ಪ್ರಸ್ತುತ ವಚನದ ಪ್ರತಿ.

"ಅಂಧಕನ ಕೈಯ ಅಂಧಕ ಹಿಡಿದಂತೆ ಇರಬೇಕು.
ಮೂಗನ ಕೈಯಲಿ ಕಾವ್ಯವ ಕೇಳಿದಂತಿರಬೇಕು.
ದರ್ಪಣದೊಳಗಣ ಪ್ರತಿಬಿಂಬದಂತೆ, ಹಿಡಿವರಿಗಳವಲ್ಲದಿರಬೇಕು.
ಅಣ್ಣಾ, ಕೂರ್ಮನ ಶಿಶುವಿನ ಸ್ನೇಹದಂತಿರಲೊಲ್ಲದೆ
ಆರೂಢಿಗೆಟ್ಟೆರಿ ಅಜಗಣ್ಣಾ!"

(4) ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನಪೀಠ ಧಾರವಾಡ ಪ್ರಕಟಗೊಳಿಸಿದ ಗುಮ್ಮಳಾಪೂರದ ಸಿದ್ಧಲಿಂಗದೇವರ **'ಶೂನ್ಯ ಸಂಪಾದನೆ'** (ಮಾರ್ಚ 1972) ರಲ್ಲಿರುವ ಪ್ರಸ್ತುತ ವಚನದ ಪ್ರತಿ :

"ಅಂಧಕನ ಕೈಯ ಅಂಧಕ ಹಿಡಿದಂತಿರಬೇಕು;
ಮೂಗನ ಕೈಯಲ್ಲಿ ಕಾವ್ಯವ ಕೇಳಿದಂತಿರಬೇಕು;
ದರ್ಪಣದೊಳಗಣ ಪ್ರತಿಬಿಂಬದಂತೆ ಹಿಡಿವರಿಗಳವಲ್ಲದಿರಬೇಕು,
ಅಣ್ಣಾ.
ಕೂರ್ಮನ ಶಿಶುವಿನ ಸ್ನೇಹದಂತಿರಲೊಲ್ಲದೆ
ಆರೂಢಗೆಟ್ಟೆಯೊ ಅಜಗಣ್ಣಾ !"

(5) ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗ ಧಾರವಾಡ ಪ್ರಕಟ-ಗೊಳಿಸಿದ 'ಶೂನ್ಯಸಂಪಾದನೆಯ' ಆಂಗ್ಲ ಭಾಷಾಂತರ ಪ್ರಥಮ ಸಂಪುಟದಲ್ಲಿಯ ಪ್ರಸ್ತುತ ವಚನದ ಭಾಷಾಂತರದ ಪ್ರತಿ:

"We could be like the blind
Holding each other's hand;

Like listening to a lay
Recited by a mute;
Like the image in a glass
Elusive to all touch!
You have fallen from the Height,
Retreating from that love
A tortise shows her young!"

ಭಾಷಾಂತರಗೊಂಡ ವಚನದಲ್ಲಿ ಬಸಳಲಾದ ವಿರಾಮಚಿಹ್ನಗಳು ನೋಡಲು ಲಭ್ಯವಿರುತ್ತವೆ. **'ಅರೂಢಿಯ ಕೂಟ'** ವೆಂಬ ಪದದ ಭಾಷಾಂತರವೂ ಇಲ್ಲಿ ದೊರೆಯುತ್ತದೆ.

ಬೇರೆ ಬೇರೆ ಸಂಪಾದಕರು ಮತ್ತು ಭಾಷಾಂತರಕಾರರು ಬಳಸಿದ ವಿರಾಮ ಚಿಹ್ನಗಳಾವುವು ಎಂಬುದು ಇಲ್ಲಿ ಗೊತ್ತಾಗುತ್ತದೆ. ಅವುಗಳ ಪ್ರಯೋಜನದಿಂದ, ಅವುಗಳ ಔಚಿತ್ಯದ ಅರ್ಥವೂ ಗೊತ್ತಾಗುತ್ತದೆ. ಸಂಪಾದಕರು ವಿರಾಮಚಿಹ್ನಗಳ ಬಳಕೆಯಲ್ಲಿ ತೋರಿದ ವೈವಿಧ್ಯತೆಯಿಂದ ಅವರವರ ಸಂಪಾದನಾವಿಜ್ಞಾನ ನೈಪುಣ್ಯ-ತೆಯೂ ಸ್ಫುಟವಾಗಿ ವ್ಯಕ್ತವಾಗುತ್ತದೆ.

ವಚನದ ಭಾವ ಪ್ರತಿ ಮಾಡಿದುದಕ್ಕನುಸರಿಸಿ* :

(೧) ಒಬ್ಬ ಕುರುಡನ ಕೈಯನ್ನು ಇನ್ನೊಬ್ಬ ಕುರುಡನು ಹಿಡಿದ ಹಾಗೆ ಇರಬೇಕು.

(೨) ಮೂಗನೊಬ್ಬನ ಕಡೆಗೆ ಕಾವ್ಯವೊಂದನ್ನು ಊಕೆಟ್ಟು, ಕಾವ್ಯವನ್ನು ಓದು-ವದನ್ನು ಕೇಳಿದಂತಿರಬೇಕು.

(೩) ಕನ್ನಡಿಯಲ್ಲಿರುವ ಪ್ರತಿಬಿಂಬಕ್ಕೆ ಮಾರುಹೋಗಿ ಹಿಡಿಯಹೋದಾಗ ಅದು ಕೈಗೆ ಸಿಗದಂತೆ ಇರುವದು. ಹಾಗೆ ಇರಬೇಕು ಅಣ್ಣಾ.

(೪) ಆಮೆ (ಕೂರ್ಮ) ಹಾಗೂ ಅದರ ಮರಿಗಳಲ್ಲಿರುವ ಸ್ನೇಹದಂತೆ ಇರು-ವದನ್ನು ಬಿಟ್ಟುದರಿಂದ ಸರ್ವಶ್ರೇಷ್ಠವಾದಂಥ ಆರೂಢಸ್ಥಿತಿಯಲ್ಲಿ ಉಳಿಯಲಿಲ್ಲೊ-ಅಜಗಣ್ಣಾ.

---

*ಆದವಾನಿ ಕಲ್ಲುಮಠ ಅಧಿಪತಿಗಳು ಪ್ರಕಟಿಸಿದ ಗೂಳೂರು ಸಿದ್ಧವೀರಣ್ಣೊಡೆಯರು ಪ್ರಕ-ಟಿಸಿದ 'ಶೂನ್ಯಸಂಪಾದನೆಯಲ್ಲಿಯ' ಈ ವಚನವನ್ನು ಪರಿಶೀಲನೆಗೆತ್ತಿಗೊಳ್ಳಲಾಗಿದೆ.

ಆಲೋಚನೆ :

ಇಲ್ಲಿ ಗೈದ ಭಾವಾನುವಾದವು ಗೂಳೂರ ಸಿದ್ಧವೀರಣ್ಣೊಡೆಯರ '**ಶೂನ್ಯ-ಸಂಪಾದನೆ**' ಯಲ್ಲಿಯ ವಚನದ ಪ್ರತಿಮಾಡಿಕೊಂಡುದರದಾಗಿದೆ. ಅಲ್ಲಿ ಬಳಸಲಾದ ವಿರಾಮಚಿಹ್ನವನ್ನು ಭಾವಾನುವಾದದಲ್ಲಿ ಉಳಿಸಿಕೊಳ್ಳಲಾಗಿದೆ. ಈ ವಚನದಲ್ಲಿ ಬಳ-ಸಲಾದ ವಿರಾಮಚಿಹ್ನವು **ಪೂರ್ಣವಿರಾಮಚಿಹ್ನ**ವಾಗಿದೆ. ಆದುದರಿಂದ ಈ ವಚ-ನದಲ್ಲಿಯ ನಾಲ್ಕು ವಾಕ್ಯಗಳು ಪೂರ್ಣವಾಕ್ಯಗಳಾಗಿವೆ. ಅವುಗಳಲ್ಲಿ ಮೊದಲಿನ ಮೂರು ಪೂರ್ಣವಾಕ್ಯಗಳು **ವಿಧಿವಾಕ್ಯ**ಗಳಾಗಿವೆ. ನಾಲ್ಕನೆಯ ವಾಕ್ಯದಲ್ಲಿ ವಿಧಿವಾಕ್ಯದ ಉಲ್ಲೇ-ಖವು, ಅದನ್ನು ಮೀರಿದುದರಿಂದುಂಟಾದ ಪರಿಣಾಮಸಹಿತ ನಮೂದವಾಗಿದೆ–ಅಂದರೆ **"ಕೂರ್ಮನ ಶಿಶುವಿನ ಸ್ನೇಹದಂತಿರಬೇಕು"** ಎಂಬುದು ವಿಧಿ. 'ಇರಲೊಲ್ಲದೆ' ಎಂಬ ಪದವು ಈ **ವಿಧಿ**ಯನ್ನು ಮೀರಿರುವುದನ್ನು ತಿಳಿಸುತ್ತದೆ. ಈ ವಿಧಿಯನ್ನು ಮೀರಲಾಗಿ ಆದ ಪರಿಣಾಮವನ್ನು '**ಅಜಊಢಗಟ್ಟಿ**' ಎಂಬ ಪದದಿಂದ ತಿಳಿಸಲಾಗಿದೆ.

ಈ **ವಿಧಿವಾಕ್ಯಗಳನ್ನು** ಮತ್ತು **ಪರಿಣಾಮ**ವನ್ನು ಹೇಳಿದವರು ಮುಕ್ತಾ-ಯಕ್ಕಗಳು. ಹೇಳಿದ ಪ್ರಸಂಗವು ಅಜಗಣ್ಣನವರನ್ನಗಲಿದಾಗ. ಇಲ್ಲಿರುವ **ವಿಧಿ-ವಾಕ್ಯ**ಗಳ ಮೂಲಸ್ವರೂಪವೇನಿದ್ದಿರಬೇಕೆಂಬ ನಿರ್ಣಯಕ್ಕೆ ಬರುವದಕ್ಕೆ ಪೂರ್ವ-ದಲ್ಲಿ, ಇವೆಲ್ಲ ವಿಧಿವಾಕ್ಯಗಳಿಗಿರುವ ವಿರಾಮಚಿಹ್ನದ ಪ್ರಯೋಗವನ್ನು ಶಂಕಿಸಿದ್ದೇಕೆ ಎಂಬುದರ ವಿಚಾರ ಮಂಥನ ಅವಶ್ಯ.

ಪ್ರಸ್ತುತ ವಚನವು ಸ್ವಸಂಭಾಷಣಾರೂಪದ್ದು. ಸ್ವಸಂಭಾಷಣೆ ಆಳವಾದ ತಾತ್ತ್ವಿಕ ಬದುಕು ಮತ್ತು ಅದರ ಆದರ್ಶಗಳನ್ನು ಕುರಿತು ನಡೆದುದಾಗಿದೆ. ಇದು ಅತ್ಯಂತ ಮಹತ್ವದ ಗಮನೀಯ ಅಂಶ ಈ ಸಂದರ್ಭದಲ್ಲಿ. ಇನ್ನೊಂದು ಸಂಗತಿ ನಮಗೆ ಗೊತ್ತಿರಬೇಕಾದದ್ದೆಂದರೆ ಅನುಭಾವ ಸಾಹಿತ್ಯದಲ್ಲಿ **ಮೌನವಾಕ್ಯ**ಗಳು (silence-passages) ಮತ್ತು **ಮಾತುವಾಕ್ಯ**ಗಳು (speech passages) ಎಂಬ ಭೇದಗಳಿರುವುದು ಮುಕ್ತಾಯಕ್ಕಗಳ ವಚನವನ್ನು ನೋಡುವಾಗ ನಾವು ಅನುಭಾವ ಸಾಹಿತ್ಯ ಪ್ರಕಾರಗಳ ದೃಷ್ಟಿಯಿಂದ ನೋಡಬೇಕೊ ? ಇಲ್ಲವೆ ಪ್ರಸುತ್ತ ವಿಶಿಷ್ಟ-ಪ್ರಸಂಗದಲ್ಲಿ ಅವಳು ತೊಡಗಿದ **ಸ್ವಸಂಭಾಷಣಾ** ದೃಷಿಯಿಂದ ನೋಡಬೇಕೊ ? ಎಂಬ ಪ್ರಶ್ನೆಗಳು ಹುಟ್ಟಿಕೊಳ್ಳುವಂತೆ; ಇವೆರಡೂ ದೃಷ್ಟಿಯಿಂದ ನೋಡಬೇಕೊ ? ಎಂಬ ಮತ್ತೊಂದು ಪ್ರಶ್ನೆಯೂ ಹುಟ್ಟಿಕೊಳ್ಳಬಹುದು. ಪ್ರಸ್ತುತ ಲೇಖಕರು ಈ ವಚನವು **ಸ್ವಸಂಭಾಷಣಾ** ಸ್ವರೂಪದ್ದೆಂಬುದನ್ನು ಗಣನೆಗೆ ತೆಗೆದುಕೊಂಡು, ಅದ-ರಲ್ಲಿರುವ ವಿಧಿವಾಕ್ಯಗಳ ವಾಕ್ಯರಚನಾ ಸ್ವರೂಪವನ್ನರಿತುಕೊಳ್ಳಲು ಪ್ರಯತ್ನ-ಮಾಡುವರು.

ಪೂರ್ಣವಿರಾಮಯುಕ್ತ ಮೊದಲನೆಯ ವಿಧಿವಾಕ್ಯದ ಪ್ರಕಾರ ಮಾರ್ಗದರ್ಶಕ (ಗುರು) ನು ಅಂಧಕ; ಮಾರ್ಗದರ್ಶನಾಪೇಕ್ಷಿ (ಶಿಷ್ಯ) ಅಂಧಕ. ಈ ಪಥವಲ್ಲಿ ಇಬ್ಬರೂ ಅಂಧಕರಂತೆ ಒಬ್ಬರನ್ನು ಒಬ್ಬರು ಹಿಂಬಾಲಿಸಬೇಕು ಎಂಬುದು ಇಲ್ಲಿಯ ವಿಧಿ (injunction). ಈ ವಿಧಿಯು ಮುಕ್ತಾಯಕ್ಕಗಳಮುಖದಿಂದ ಬರುತ್ತದೆ. ಯಾರನ್ನು ಉದ್ದೇಶಿಸಿದ ವಿಧಿವಾಕ್ಯವಿದು ? ಇಡೀ ವಚನದ ಹಿನ್ನೆಲೆಯಲ್ಲಿ ಅಗಲಿದ ಅಜಗಣ್ಣನನ್ನುದ್ದೇಶಿಸಿ ಎಂಬ ಉತ್ತರ ಬರುತ್ತದೆ. ಇದನ್ನು ಸಾಧಕರೆಲ್ಲರಿಗೂ ಹೇಳಲಾಗಿರುವುದು ಎಂದು ಗ್ರಹಿಸಲೂ ಪ್ರಯತ್ನಿಸಬಹುದು. ಆದರೆ ನಾಲ್ಕನೆಯ ಸಾಲಿನಲ್ಲಿ ಹೇಳಿದ ಆದರ್ಶದ ಹಿನ್ನೆಲೆಯಲ್ಲಿ ಮತ್ತು ಅದನ್ನು ಮೀರಿನಡೆದುದರಿಂದುಂಟಾದ ಪರಿಣಾಮದ ಹಿನ್ನೆಲೆಯಲ್ಲಿ ಇದು ಸಾರ್ವತ್ರಿಕವಾಗಿ ಬಳಸಲು ಯೋಗ್ಯವಾದ ವಿಧಿಯಾಗಲಾರದು. ಸಂದರ್ಭ ಅಂಥ ಬಳಕೆಗೆ ವಿರುದ್ಧವಾಗಿದೆ. ಇದೇ ವಿಚಾರ ಎರಡನೆಯ ಮತ್ತು ಮೂರನೆಯ ವಿಧಿ ವಾಕ್ಯಗಳಿಗೂ ಅನ್ವಯಿಸುತ್ತದೆ.

ಅನುಭಾವಸಿದ್ಧಿ ಮತ್ತು ಅನುಭಾವ ಜೀವನ ಮಾರ್ಗದರ್ಶನ :

ಮುಕ್ತಾಯಕ್ಕಗಳ ಈ ವಚನವು ಅಜಗಣ್ಣಗಳು ನಿರಾಕಾರಾವಸ್ಥೆಯಿಂದ ತನಗೆ ಮಾರ್ಗದರ್ಶನ ಮಾಡಲಸಮರ್ಥರಾದುದನ್ನು ತಿಳಿಸುವಂತೆ, ಆರೂಢಸ್ಥಿತಿಯಲ್ಲಿ ಉಳಿಯಲಸಮರ್ಥರಾಗಿರುವುದನ್ನೂ ತಿಳಿಸುತ್ತದೆ.

ಈ ವಚನದ ಪ್ರಕಾರ ಅನುಭಾವ ಸ್ಥಿತಿಯು ಆರೂಢಸ್ಥಿತಿ ಸಂಪಾದನೆಯಾಗಿರುತ್ತದೆ. ಇದರ ಸಂಪಾದನೆಗೆ ಕುರುಹೇನೆಂದರೆ ತನ್ನನ್ನವಲಂಬಿಸಿದ ಸಾಧಕನಿಗೆ ದೊರೆವ ಮಾರ್ಗದರ್ಶನ. ಈ ಮಾನದಂಡದಿಂದ ಅವರ ಆರೂಢಸ್ಥಿತಿಯನ್ನು ಅಳೆದು ನೋಡುತ್ತಾಳೆ. ಆಗ ಅವಳ ಆಶ್ಚರ್ಯಕ್ಕೆ ಅಗೂಢಸ್ಥಿತಿಯಲ್ಲಿರುವನೆಂದು ತಿಳಿದ ಅವಳಿಗೆ ಮಾರ್ಗದರ್ಶನ ಲಭ್ಯವಾಗಲಿಲ್ಲ. ಆದುದರಿಂದ ಅವಳು ಅಜಗಣ್ಣನು ಆರೂಢಗೆಟ್ಟ ಎಂಬ ನಿರ್ಣಯಕ್ಕೆ ಬರುತ್ತಾಳೆ. ಇದು ವಿಶ್ಲೇಷಣಕಾರನ ಗಮನದ ಕೇಂದ್ರದಲ್ಲಿರಬೇಕಾದ ವಿಚಾರ. ಈ ವಿಚಾರದಿಂದ ಪ್ರಚೋದನೆಗೊಂಡ ಮುಕ್ತಾಯಕ್ಕಗಳು ಅನುಭಾವಪದದ ಮಾರ್ಗದರ್ಶನದ ವಿಚಾರಮಾಡಲು ತೊಡಗಿದ ಅವಳ ರೀತಿಯೇನೆಂಬುದನ್ನು ಗುರುತಿಸಬಹುದಾಗಿದೆ.

'ಅನುಭಾವ' ಅಂದರೆ ಗ್ರಹಣ (apprehension) ಅಥವ ಅರ್ಪಜ್ಞಾನ (intuition) ವಾಗಿರುವಂತೆ ಅದು ಪರಬ್ರಹ್ಮವೂ ಆಗಿದೆ. ವಚನ ಸಾಹಿತ್ಯವು ಈ ಮಾತುಗಳಿಗೆ ಆಕರ ಸಾಹಿತ್ಯ. ಇವುಗಳೇ ಅನುಕ್ರಮವಾಗಿ ಸಾಧನ (ಪ್ರಮಾಣ) ಮತ್ತು ಸಿದ್ಧಿ (accomplishment). ಪ್ರಸ್ತುತ ವಚನದ ಪ್ರತಿಯೊಂದು ಸಾಲಿನಲ್ಲಿ ಯಾವ ಅರ್ಥ ಉಂಟು ಇವೆರಡರಲ್ಲಿ ಎಂಬುದನ್ನು ಗುರುತಿಸಲು ಪ್ರಯತ್ನ ಮಾಡಬಹುದು.

(೧) **"ಅಂಧಕನ ಕಯ್ಯ ಅಂಧಕ ಹಿಡಿದಂತಿರಬೇಕು"** ಎಂಬುದು ಮೊದಲನೆಯ ವಾಕ್ಯ ಇಲ್ಲಿ ಮಾರ್ಗದರ್ಶಕ (ಗುರು) ಮತ್ತು ಮಾರ್ಗದರ್ಶನಾ-ಪೇಕ್ಷಿ (ಶಿಷ್ಯ) ಎಂಬಿಬ್ಬರನ್ನು ಕುರಿತು ವಿಚಾರವಿರುವುದುಂಟು. ಇದು ವಿಧಿರೂಪದಲ್ಲಿದೆ.

'ಅನುಭಾವ' ವೆಂಬುದು ಮಾರ್ಗ (ಪ್ರಮಾಣ-means) ವಾಗಿರುವಾಗ, ಅದರ ಲಕ್ಷಣಗಳನ್ನು ತಿಳಿಸಿ ಅನುಷ್ಠಾನಮಾಡಲು ಹಚ್ಚುವದನ್ನು ಜಗತ್ತಿನ ನಾನಾಬಗೆಯ ಅನುಭಾವ ಪದ್ಧತಿಗಳೆಲ್ಲವೂ ಪ್ರತಿಪಾದಿಸುತ್ತವೆ.

'ಅನುಭಾವ'ವು ಸಿದ್ಧಿ ಎಂದು ಇಟ್ಟುಕೊಂಡಾಗ ಅದು ಶಬ್ದಾತೀತ. ಅಂದರೆ ಅದನ್ನು ಶಬ್ದದಲ್ಲಿ ಇದ್ದಕ್ಕಿದ್ದಂತೆ. ಅಭಿವ್ಯಕ್ತಗೊಳಿಸುವುದಸಾಧ್ಯವೆಂಬುದನ್ನೂ ಅನುಭಾವಿಗಳು ಒಕ್ಕೊರಲಿನಿಂದ ಹೇಳುವರು ಆದರೂ ಆ ಸಿದ್ಧಿಯನ್ನು ಅಭಿವ್ಯಕ್ತ ಗೊಳಿಸದ ಅನುಭಾವಿಗಳಿಲ್ಲ.

ಪ್ರಸ್ತುತ ಸಾಲು 'ಅನುಭಾವಪಥ' ವೆಂಬುದನ್ನು ಸೂಚಿಸುತ್ತದೆ. ಯಾಕಂದರೆ ಇಲ್ಲಿಯ ಕುರುಡರಿಬ್ಬರೂ ಪಥಿಕರು ಮಾರ್ಗದರ್ಶನ ಮಾಡುವವನು ದರ್ಶನ ಹೀನ-ನಾಗಿದ್ದರೆ ಸಾಧ್ಯವಿಲ್ಲ. ಒಂದು ವೇಳೆ 'ವಿಶ್ವಾಸ'ವನ್ನು ಈ ಸಾಲು ಸೂಚಿಸುತ್ತದೆ-ಯೆಂದಾಗ 'ಕುರುಡುವಿಶ್ವಾಸ'ವೆನ್ನಬಹುದೊ ? ಈ ಎರಡೂ ಒಪ್ಪಿತವಲ್ಲದ ವಿವ-ರಣೆಗಳೆಂದು ಈ ಸಾಲಿನಲ್ಲಿರುವ ಧ್ವನಿಯಿಂದ ಗೊತ್ತಾಗುತ್ತದೆ. ಈ ಧ್ವನಿಯು ಇಡೀ ವಚನದ ದೃಷ್ಟಿಯಿಂದ ನಿನದಿಸುತ್ತದೆ. ಈ ಧ್ವನಿ ಕೇಳಬೇಕಾದರೆ ಇಲ್ಲಿ ಬಳಸ-ಲಾದ ಪೂರ್ಣವಿರಾಮದ ಸ್ವರ್ಣತಳಿಗೆಯನ್ನು ತಗೆಯಬೇಕಾಗುತ್ತದೆ. ಅದರ ಬದಲು ಬೇರೊಂದು ವಿರಾಮುಚಿಹ್ನ ಬಳಸಬೇಕಾಗುತ್ತದೆ. ಯಾವುದೆಂಬುದನ್ನು ತಿಳಿಸುವ ಬದಲು ಬಳಸಿನೋಡುವಾ.

(೨) **"ಮೂಗನ ಕಯ್ಯಲ್ಲಿ ಕಾವ್ಯವ ಕೇಳಿದಂತಿರಬೇಕು"** ಎಂಬುದು ಎರಡನೆಯ ವಾಕ್ಯವು. ಇಲ್ಲಿ ಅನುಭಾವದ ಸೊಗಸಿನ ನಿವೇದನೆ ಮಾಡುವವ, ಕೇಳು-ವವ ಹೀಗೆ ಇಬ್ಬರು ಇದ್ದಾರೆ. ಜಿಜ್ಞಾಸು ಆಲಿಸಿ ತಿಳಿದುಕೊಳ್ಳಬೇಕೆನ್ನುವವನು. ಆಲಿಸುವ ಈತನು ಹೇಳುವವನ ಹತ್ತಿರ ಹೋಗಲೇಬೇಕು. ಇವರಿಬ್ಬರ ನಡುವೆ ನಡೆಯುವ ವ್ಯಾಪಾರವನ್ನು ಕಾವ್ಯದ ಓದಿಗೆ ಮತ್ತು ಕೇಳುವದಕ್ಕೆ ಹೋಲಿಸಲಾ-ಗಿದೆ. ಆದರೆ ಇಲ್ಲಿ 'ಮೂಗ' ಕಾವ್ಯ ಓದಬೇಕೆಂದು ಗೊತ್ತಾಗುತ್ತದೆ. ಅಭಿವ್ಯಕ್ತ-ತೆಗೆ ಅಸಾಧ್ಯವೆನ್ನುವದು ಬೇರೆ, ಅಭಿವ್ಯಕ್ತಿಯ ಸಾಧನ ವಿಹೀನತೆ ಬೇರೆ. ಇವೆರ-ಡರ ಅಂತರವನ್ನು ಮರೆಯಲಾಗದು. ಇವೆರಡರ ಅಂತರವು ಇಲ್ಲಿ ಹುದುಗಿರುವ ಧ್ವನಿಯನಾಲಿಸಲು ನೆರವಾಗುತ್ತದೆ. ಇದು ಸಾಧ್ಯವಾಗಬೇಕಾದರೆ ಪೂರ್ಣವಿರಾಮದ

ಚಿಹ್ನದ ಮುದ್ರೆಯನೊಡೆದು, ಬೇರೊಂದು ಬಗೆಯ ವಿರಾಮಚಿಹ್ನವನ್ನಳವಡಿಸಬೇಕು. ಇದನ್ನು ಅಳವಡಿಸಿಯೇ ನೋಡಬೇಕು.

(೩) **"ದರ್ಪಣದೊಳಗಣ ಪ್ರತಿಬಿಂಬದಂತೆ ಹಿಡಿವರಿಗಳವಲ್ಲದಿರಬೇಕು ಅಣ್ಣಾ"** ಇದು ಮೂರನೆಯ ವಾಕ್ಯವು **'ಪ್ರತಿಬಿಂಬ'** ಎಂಬ ಪದವು ಮೂಲದ '**ಬಿಂಬ**'ವನ್ನು ಸೂಚಿಸುತ್ತದೆ. ಕನ್ನಡಿಯಲ್ಲಿ ಪ್ರತಿಬಿಂಬವು ಮೂಲಬಿಂಬವಿರುವದೆಂದು ಸಿದ್ಧಪಡಿಸುತ್ತದೆ. ಇಲ್ಲಿಯ '**ಪ್ರತಿಬಿಂಬ**' ವೆಂಬುದು '**ಅನುಭಾವ**' ವೆಂಬ ವಸ್ತು-ವಿನದು. ಪ್ರತಿಬಿಂಬದಿಂದ ಬಿಂಬವನ್ನು ಹಿಡಿಯುವುದು ವೀರಶೈವ ಸಿದ್ಧಾಂತದ ರೀತಿ. ದರ್ಪಣವೆಂದರೆ ಲಿಂಗ. ಲಿಂಗದಲ್ಲಿ ತನ್ನ ಇರವನ್ನು ಅರಿಯುವುದೇ ಶರಣತ್ವಸಿದ್ಧಿ. ಇದು ಅನುಭಾವದ ಇನ್ನೊಂದು ಮುಖ. ಇಲ್ಲಿ ದರ್ಪಣದೊಳಗಣ ಪ್ರತಿಬಿಂಬ ಹಿಡಿವರಿಗಳವಲ್ಲದಿರಬೇಕು ಎಂದಾಗ ಹಾಗೆ ಅಸಾಧ್ಯವೆಂಬರ್ಥ ಪೂರ್ಣವಿರಾಮದ ಬಳಕೆಯಿಂದ ಬರುತ್ತದೆ. ಲಿಂಗದಿಂದ ತನ್ನನ್ನರಿತುಗೊಳ್ಳುವದು ವಿಶಿಷ್ಟವಾಗಿದೆ ವೀರ-ಶೈವ ರೀತಿ. ಅದಕ್ಕೆ ಪೂರ್ಣ ವಿರಾಮದ ಬಳಕೆ ವ್ಯತಿರಿಕ್ತವಾದ ನಿಲವಾಗುತ್ತದೆ. ಆದುದರಿಂದ ಪೂರ್ಣವಿರಾಮವಿಲ್ಲ ಬೇಡ.

(೪) **"ಕೂರ್ಮನ ಶಿಶುವಿನ ಸ್ನೇಹದಂತೆ ಇರಲೊಲ್ಲದೆ ಆರೂಢ-ಗಟ್ಟಿಯೊ ಅಜಗಣ್ಣಾ"** ಇದು ಪ್ರಸ್ತುತ ವಚನದಲ್ಲಿಯ ಕೊನೆಯ ವಾಕ್ಯವು. ಇದರಲ್ಲಿ ಎರಡು ವಿಚಾರಗಳು ಇವೆ. ಒಂದು ಗುರು ಶಿಷ್ಯರ ಸಂಬಂಧ ಹೇಗೆ ಇರ-ಬೇಕೆಂಬುದನ್ನು ಕೂರ್ಮಕಿಶೋರ ನ್ಯಾಯದಿಂದ ತಿಳಿಸಲಾಗಿದೆ. ಅದರಂತೆ ಇರದಿದ್ದರೆ ಅನುಭಾವಿಯು ಆರೂಢಸ್ಥಿತಿಯಲ್ಲಿ ಉಳಿಯಲಾರ. ಇದು ಆ ವಿಧಿಯ ಉಲ್ಲಘಂನೆಯ ಪರಿಣಾಮ. ಪೂರ್ಣವಿರಾಮ ಕೊಡುವ ಪೂರ್ವದಲ್ಲಿ ಇಲ್ಲಿಯ '**ಇರಲೊಲ್ಲದೆ**' ಎಂಬುವುದರ ಮುಂದೆ ಬೇರೆ ವಿರಾಮ ಚಿಹ್ನ ಬಳಸಬೇಕು. ಆಗ ಹಿಂದಿನ ವಾಕ್ಯಗ-ಳಿಗೂ ಇದಕ್ಕೂ ಇರುವ ಸಂಬಂಧ ಗೊತ್ತಾಗುತ್ತದೆ. **'ಆರೂಢಗಟ್ಟಿಯೊ ಅಜ-ಗಣ್ಣಾ'** ಎಂಬುದನ್ನು ಸ್ವತಂತ್ರ ವಾಕ್ಯವನ್ನು ಮಾಡಬೇಕು.

ಬದಲಿ ವಿರಾಮ ಚಿಹ್ನ ಪ್ರಯೋಗಿಸಿದ ವಚನ :

"ಅಂಧಕನ ಕಯ್ಯ ಅಂಧಕ ಹಿಡಿದಂತಿರಬೇಕು ?
ಮೂಗನ ಕೈಯಲ್ಲಿ ಕಾವ್ಯವಕೇಳಿದಂತಿರಬೇಕು ?
ದರ್ಪಣಮೊಳಗಣ ಪ್ರತಿಬಿಂಬದಂತೆ ಹಿಡಿವರಿಗಳವಲ್ಲದಿರಬೇಕು ?
ಅಣ್ಣಾ, ಕೂರ್ಮನ ಶಿಶುವಿನ ಸ್ನೆಹದಂತಿರಲೊಲ್ಲದೆ,
ಆರೂಢಗಟ್ಟಿಯೊ ಅಜಗಣ್ಣಾ !".

ಇಲ್ಲಿ ಪೂರ್ಣವಿರಾಮಗಳಿರದೆ ಪ್ರಶ್ನಾರ್ಥಕ ಮತ್ತು ಉದ್ಗಾರವಾಚಕ ಚಿಹ್ನೆಗಳಿರುತ್ತವೆ. ಮೂರನೆಯ ಸಾಲಿನಲ್ಲಿದ್ದ 'ಅಣ್ಣಾ' ಎಂಬ ಪದವನ್ನು ನಾಲ್ಕನೆಯ ಸಾಲಿನ ಆರಂಭದಲ್ಲಿ ಇಡಲಾಗಿದೆ. **"ಆಜಿಯೂಥಗಟ್ಟೆಯೊ ಅಜಗಣ್ಣಾ"** ಎಂಬುದನ್ನು ಸ್ವತಂತ್ರ ವಾಕ್ಯಮಾಡಿ ಉದ್ಗಾರವಾಚಕ ಚಿಹ್ನೆ ಬಳಸಲಾಗಿದೆ. ಇಲ್ಲಿ ಕಂಡುಬರುವ ಬದಲಾವಣೆ ಇಷ್ಟು.

ಬದಲಾದ ವಿರಾಮ ಚಿಹ್ನೆಗಳಿಂದುಂಟಾಗುವ ವಚನದ ಭಾವ :

ಮೊದಲನೆಯ ಸಾಲಿನಲ್ಲಿ ಬಳಸಲಾದ ಪ್ರಶ್ನಾರ್ಥಕ ಚಿಹ್ನೆದಿಂದಾಗಿ ಅಂಧಕನ ಕಯ್ಯ ಅಂಧಕ ಹಿಡಿಯಬಾರದೆಂಬ ಧ್ವನಿಬೋಧಕವಾಗಿದೆ. ಇದು ವ್ಯವಹಾರಿಕ ಮತ್ತು ಪಾರಮಾರ್ಥಿಕಬದುಕುಗಳೆರಡರಲ್ಲಿಯೂ ಅನುಸರಿಸಬೇಕಾದ ವಿಚಾರ ಅಥವ ವಿಧಿ. ಇಲ್ಲದಂತೆ ಅಲ್ಲಿ ಇದೆ ಎಂಬ ಸಿದ್ಧಾಂತವು ಇದನ್ನು ಸಮರ್ಥಿಸುತ್ತದೆ. ಎರಡನೆಯ ವಾಕ್ಯದಲ್ಲಿ ಬಳಸಲಾದ ಪ್ರಶ್ನಾರ್ಥಕ ವಿರಾಮ ಚಿಹ್ನೆವು ಕೂಡ ಮೂಗನ ಕಯ್ಯಲ್ಲಿ ಕಾವ್ಯವನ್ನು ಕೇಳಲುಬಾರದು ಎಂದೇ ಅರ್ಥವನ್ನು ಧ್ವನಿಸುತ್ತದೆ. ವ್ಯವಹಾರಿಕ ಮತ್ತು ಪಾರಮಾರ್ಥಿಕ ವಿಷಯಗಳೆರಡಕ್ಕೂ ಅನ್ವಯಿಸುತ್ತದೆ. ಮೂರನೆಯ ವಾಕ್ಯದಲ್ಲಿ ಬಳಸಲಾದ ಪ್ರಶ್ನಾರ್ಥಕ ಚಿಹ್ನೆವು ಸಹಿತ ಪ್ರತಿಬಿಂಬ ಹಿಡಿದವರಿಗೆ ಅಳವಲ್ಲದಂತಿರಬಾರದು ಎಂಬ ವಿಧಿಯನ್ನೇ ಅಂದರೆ ಹಿಡಿಯಲಳವಿನಲ್ಲಿರಬೇಕೆಂಬ ವಿಧಿಯನ್ನೇ ಸೂಚಿಸುತ್ತದೆ.

ಈ ಮೊದಲಿನ ಮೂರು ವಾಕ್ಯಗಳ ವಿಚಾರನಿರ್ಣಯಗಳನ್ನು, ನಾಲ್ಕನೆಯ ವಾಕ್ಯದಲ್ಲಿ ಬಳಸಲಾದ ಪ್ರಶ್ನಾರ್ಥಕ ಚಿಹ್ನೆವು ಅತ್ಯಂತ ಸಬಲ ರೀತಿಯಲ್ಲಿ ಸಮರ್ಥಿಸುತ್ತದೆ. ಇಲ್ಲಿ ಬರುವ ಕೂರ್ಮ ಕಿಶೋರನ್ಯಾಯದ ಮುಂದಿರಿಸಿದ ಪ್ರಶ್ನಾರ್ಥಕ ಚಿಹ್ನೆವು ಹಿಂದಿನ ಮೂರು ಪ್ರಶ್ನಾರ್ಥಕ ಚಿಹ್ನೆಗಳಿಗೆ ಅರ್ಥವನ್ನೊದಗಿಸಿದೆ. ಪ್ರಸ್ತುತ ಲೇಖಕರು ಅರ್ಥಸ್ಪಷ್ಟತೆಗಾಗಿ, ಪುಷ್ಟಿಗಾಗಿ ಹೀಗೆ ಓದುವರು.

೧. ಅಣ್ಣಾ, ಕೂರ್ಮನ ಶಿಶುವಿನ ಸ್ನೇಹದಂತಿರಲೊಲ್ಲದೆ—
೨. ಅಂಧಕನಕೈ ಅಂಧಕ ಹಿಡಿದಂತಿರಬೇಕು ?
೩. ಮೂಗನ ಕೈಯಲ್ಲಿ ಕ್ಯಾವವ ಓದಿದಂತಿರಬೇಕು ?
೪. ದರ್ಪಣದೊಳಗಣ ಪ್ರತಿಬಿಂಬದಂತೆ ಹಿಡಿವರಿಗಳವಲ್ಲದಿರಬೇಕು ?
೫. ಆಜಿಯೂಥಗೆಟ್ಟೆಯೊ ಅಜಗಣ್ಣಾ !

ಇಲ್ಲಿಯ ಪ್ರಥಮ ವಾಕ್ಯದಲ್ಲಿರುವ ಸಂಬಂಧವು ಸಹಜವಿದೆ. ಆ ಸಹಜ ಸಂಬಂಧವು ಮುಂದಿನ ಮೂರು ವಾಕ್ಯಗಳಲ್ಲಿಯೂ ಇರಬೇಕೆಂದು ಈ ರೀತಿಯ ವಿರಾಮದ ಚಿಹ್ನೆದಿಂದ ಸ್ಪಷ್ಟವಾಗುತ್ತದೆ. ಈ ಸಹಜ ಸಂಬಂಧವಂತಿರದಿದ್ದರೆ ಆರೂ-

ಥಗೆಡಬೇಕಾಗುತ್ತದೆ ಎಂಬ ನಿರ್ಣಯ. ಇದೆಲ್ಲ ಮುಕ್ತಾಯಕ್ಕಗಳ ಅಂತರಂಗದಲ್ಲಿ ನಡೆವ ವೈಚಾರಿಕ-ತುಮುಲವನ್ನು ತಿಳಿಸುತ್ತದೆ ತನಗೆ ತನ್ನ ಗುರುವಿಗೆ ಇರುವ ಸಂಬಂಧ ಹೀಗಾಯಿತೆ ಎಂದವಳ ಅಸಂತೃಪ್ತಿ.

ಮುಕ್ತಾಯಕಗಳ ಈ ವಚನದಲ್ಲಿ ಬರುವ ಆರೂಢ ಸ್ಥಿತಿಯು ಅವಳ ವಿಚಾರದ ಪ್ರಕಾರ ಎರಡು ಬಗೆಯದಿದೆಯೆಂದು ಹೇಳಬಹುದು: (೧) ಆರೂಢಸ್ಥಿತಿಯಲ್ಲಿ ಕರೆದೊಡೋ ಎನ್ನುವಂಥದು (೨) ಆರೂಢಗೆಟ್ಟಂಥ ಸ್ಥಿತಿ—ಅಲ್ಲಿ ಕರೆದೋಡೋ ಎನ್ನದ ಸ್ಥಿತಿ. ಇವೆರಡು ಬೌದ್ಧರಲ್ಲಿ ಬರುವ ಎರಡುಬಗೆಯ ನಿರ್ವಾಣದಂತೆ. ಕಾಣುತ್ತವೆಯೆಂದು ತೋರುತ್ತದೆ.

ಸಾದಾವಾಕ್ಯವೊಂದನ್ನು ಇದ್ದಕ್ಕಿದ್ದಂತೆ ಪ್ರಶ್ನಾರ್ಥಕದಲ್ಲಿ ಪರಿವರ್ತಿಸಲು ಸಾಧ್ಯವೆ ?

ಈ ಪ್ರಶ್ನೆಯು **ಅನುಭಾವದ, ಸಾಧನೆ** ಮತ್ತು **ಸಿದ್ಧಿ**ಗಳ ದೃಷ್ಟಿಯಿಂದ ಎತ್ತಿದುದಾಗಿರದೆ ವಾಕ್ಯ ರಚನಾತಂತ್ರಕ್ಕೆ ಸಂಬಧಿಸಿ ಎತ್ತಿರುವಂಥದಾಗಿದೆ. ಕೆಳಗೆ ಕೊಟ್ಟ ಪ್ರಯೋಗಗಳು ಈ ತೊಂದರೆಯನ್ನು ನಿವಾರಿಸಬಹುದು.

(೧) ಸಕಲ ಪ್ರಾಣಿಗಳಲ್ಲಿ ದಯವಿರಬೇಕು.
ಸಕಲ ಪ್ರಾಣಿಗಳಲ್ಲಿ ದಯವಿರಬೇಕು ?

(೨) ಸ್ಥಾವರ ಜಂಗಮ ಒಂದೇ ಎಂಬೆ.
ಸ್ಥಾವರ ಜಂಗಮ ಒಂದೇ ಎಂಬೆ ?

(೩) ನುಡಿದಂತೆ ನಡೆದರೆ ಇದೇ ಜನ್ಮ ಕಡೆ.
ನುಡಿದಂತೆ ನಡೆದರೆ ಇದೇ ಜನ್ಮ ಕಡೆ ?

(೪) ಅರಿದರೆ ಶರಣ, ಮರೆದರೆ ಮಾನವ.
ಅರಿದರೆ ಶರಣ, ಮರೆದರೆ ಮಾನವ ?

(೫) ಈ ಮೊಕದ್ದಮೆಯನ್ನು ಕಿತ್ತುಹಾಕಬೇಕು.
ಈ ಮೊಕದ್ದಮೆಯನ್ನು ಕಿತ್ತುಹಾಕಬೇಕು ?

ಈ ವಾಕ್ಯಗಳ ವಿರಾಮ ಚಿಹ್ನದ ಬದಲಾವಣೆಯಿಂದ ಮೂಲವಾಕ್ಯಗಳಲ್ಲಿ ಯಾವ ಬದಲಾವಣೆಯು ಆಗಿಲ್ಲ. ಆದರೆ ಧ್ವನಿಯಲ್ಲಿ ವ್ಯತ್ಯಾಸವಾದದ್ದು ಸ್ಪಷ್ಟವಿದೆ. ಇದು ಸ್ವಾಗತಾರ್ಥ ಬದಲಾವಣೆ. ಇದೇ ರೀತಿ ಪ್ರಸ್ತುತ ವಚನದಲ್ಲಿ ಮಾಡಿದ ವಿರಾಮ ಚಿಹ್ನದ ಬದಲಾವಣೆಯಿಂದ ರಚನೆಯಲ್ಲಿ ಬದಲಾಗದೆ ಧ್ವನಿಯಲ್ಲಿ ಬದ-

ಲಾಗಿದ್ದು ಅರ್ಥಸ್ಪಷ್ಟತೆ ಉಂಟಾಗಿದೆ. ತಾಡೋಲೆಯಿಂದ ಪ್ರತಿಮಾಡಿಕೊಂಡು ಅಚ್ಚಿಗೆ ಪ್ರತಿ ಸಿದ್ಧಗೊಳಿಸುವಾಗ ಆಳವಾದ ವಚನಾರ್ಥವನ್ನು ಗಮನಕ್ಕೆ ತಂದುಕೊಳ್ಳಬೇಕೆಂಬುದನ್ನಿದು ಸೂಚಿಸುತ್ತದೆ. '**ಮುಕ್ತಾಯಕ್ಕಗಳ ಸಂಪಾದನೆಯು**' ಅಧ್ಯಯನದ ಕಾಲಕ್ಕೆ ಹೀಗೆ ಬದಲಾವಣೆ ಮಾಡದಿದ್ದರೆ ಅರ್ಥವಾಗುವದಿಲ್ಲವೆಂಬುದನ್ನು ಗುರುತಿಸುವದರಿಂದ ಈ ಕಾರ್ಯಮಾಡಲಾಯಿತು. ಈ ಬದಲಾವಣೆಯ ಸಮರ್ಥನೆಗಾಗಿ ಇಲ್ಲಿ ಸಾರ್ವಜನಿಕವಾಗಿ ಚಿಂತನ ಮಂಥನ ಮಾಡಲಾಗಿದೆ. ಇದರ ಹೆಚ್ಚಿನ ವಿಶ್ಲೇಷಣೆಯನ್ನು ಪ್ರಾಜ್ಞರು ಕೈಕೊಳ್ಳಬಹುದಲ್ಲವೆ ?

"ಪೂರ್ಣತ್ವ" ಒಂದು ವಿಶ್ಲೇಷಣೆ

● ಮೋಹನ್ ಹೆಗಡೆ

ಸಾಗರ ತಾಲೂಕಿನ ಕೆಳದಿ ಒಂದು ಐತಿಹಾಸಿಕ ಸ್ಥಳ, ಇಲ್ಲಿಗೆ ೧ ಮೈಲು-ದೂರದ ಬಂದಗದ್ದೆಯಲ್ಲಿ ರಾಜ ಮನೆತನಕ್ಕೆ ಸಂಬಂಧಿಸಿದ ವೀರಶೈವ "ಹಿರೇಮಠ"-ವಿದೆ. ಪರಂಪರಾಗತ ಗುರುಮಠವಿದು. ಇಲ್ಲಿಯ ಈಗಿನ ಸ್ವಾಮಿಗಳವರು ಶ್ರೀಗುರು-ಸಿದ್ಧ ಶಿವಾಚಾರ್ಯ ಸ್ವಾಮಿಗಳು. ಅವರು ಬರೆದ ಪೂರ್ಣ ಆಧ್ಯಾತ್ಮಿಕ ತತ್ವಗಳನ್ನು ನಿರೂಪಿಸುವ ೩೬ ಸೂತ್ರರೂಪದಲ್ಲಿ ಬರೆದ ಗ್ರಂಥವೇ "ಪೂರ್ಣತ್ವ ಕಿರಿದ-ರೊಳ್ ಪಿರಿದರ್ಥ" ಎಂಬುದಕ್ಕೆ ಸಾಕ್ಷಿರೂಪವಾಗಿದೆ.

ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮುದಚ್ಯತೇ ।

ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ ॥

ಎಂಬ ಉಪನಿಷತ್ ವಾಕ್ಯವೇ ೩೬ ಸೂತ್ರಗಳ ಕಂಗ್ಗಂಟಿನ ರೂಪದಲ್ಲಿ ಹೊರಬಂದಿದೆ. ಈ ಗ್ರಂಥಕಾವ್ಯದಲ್ಲಿ ಕೆಳಗಿಳಿದಷ್ಟೂ ಆಳದ ಅನುಭವವಾಗುತ್ತದೆ. ತನ್ಮೂಲಕ ಆಧ್ಯಾತ್ಮಿಕತೆಯನ್ನು ಸುಲಭೀಕರಿಸುವಯತ್ನ ನಡೆದಿದೆ. ದಿ॥ ದ. ರಾ ಬೇಂದ್ರೆಯವರು ಹೇಳಿದಂತೆ ಇದು ಪಂಡಿತರಿಗಾಗಿ ಬರೆದ ಗ್ರಂಥವೇ ಹೊರತು ಪಾಮರರಿಗಲ್ಲ. ಈ ೩೬ ಸೂತ್ರಗಳಿಗೂ ಸೂತ್ರಕಾರರೇ ಭಾಷ್ಯವನ್ನು ಬರೆದಿದ್ದಾರೆ.

ಯಾವುದೇ ಕಾರ್ಯವನ್ನು ಬೇಸರಿಸಿ ಪೂರ್ಣಗೊಳಿಸದೇ ಅರ್ಧಕ್ಕೆ ನಿಲ್ಲಿಸಬೇಡ "ಪೂರ್ಣ ಮುಗಿಸದೇ ಬಿಡಬೇಡ ಬೇಸತ್ತು" ಎಂದು ನಮ್ಮ ಜೀವನಕ್ಕೆ ಒಂದು ತತ್ತ್ವವಾಕ್ಯವನ್ನು ಆದ್ಯಂತವಾಗಿ ೩೪ ಸಲ ಉಪದೇಶಿಸಿದ್ದಾರೆ. ಅವರ ಈ ವಾಕ್ಯ ಇಡೀ ಗ್ರಂಥವನ್ನು ಎಷ್ಟು ಲಕ್ಷವಹಿಸಿ ಅಧ್ಯಯನ ಮಾಡಬೇಕೆಂದು ಸೂಚಿಸುತ್ತದೆ.

ಪ್ರತಿ ಶ್ಲೋಕದ ದ್ವಿತೀಯ ಪಾದಾಂತ್ಯಪ್ರಾಸ "ತ್" ವ್ಯಂಜನವನ್ನು ಹೊಂದಿದೆ. ಈ ಪ್ರಾಸ ವರ್ಣವು ಕೇವಲ ಛಂದಸ್ಸಿನ ದೃಷ್ಟಿಯಿಂದಲೇ ಅರ್ಥ ಸಾರ್ಥಕ್ಯ-ವನ್ನು ಹೊಂದಿದೆ.

ಗ್ರಂಥದ ಪ್ರಥಮ ವೃತ್ತಿ ಹೀಗಿದೆ.

"ಶ್ರಮವಹಿಸಿ ಶ್ರುತಿ—ಗಾಣ ತಿರುತಿರುಗಿ ಕೊನೆ ಹೊತ್ತು ।
ಗತಿ-ಎಣ್ಣೆ ಬರದೆ ವೃತ್ತಿ....ಬಿಡಲದು ಅರೆ ಸುತ್ತು ।
ಅಮ್ಮ ! ಪೂರ್ಣ ಮುಗಿಸದೆ ಬಿಡಬೇಡ ಬೇ ! ಸತ್ತು
ತಮ್ಮ ! ಪೂರ್ಣ ಮುಗಿಸದೆ ಬಿಡಬೇಡ ! ಬೇಸತ್ತು"

ಮಾನವ ಜೀವನದ ಒಂದು ಸ್ಥಿತಿಯನ್ನು ಮುಟ್ಟಲು ಗತಿಶೀಲತೆ ಕ್ರಿಯಾ-ಶೀಲತೆ ಇರಲೇಬೇಕು. ಇದು ಪ್ರಪಂಚದ ಮೂಲ ತತ್ವವೂ ಹೌದು. ಸೃಷ್ಟಿ ಮೂಲ-ವಾದ ಪಂಚ ತತ್ವಗಳು ಕೂಡ ಗತಿಶೀಲತ್ವವನ್ನು ಪಡೆದಿರುವದರಿಂದಲೇ ಇದಕ್ಕೆ ಮಹತ್ವ ಬಂದಿದೆ. ೧) ಗಾಳಬೀಸುವದು ೨) ಬೆಂಕಿ ಜ್ವಲಿಸುವದು ೩) ಭೂಮಿಯು ಬದಲಾಗುತ್ತಿರುವದು ೪) ಸೂರ್ಯನ ಗತಿಶೀಲತ್ವ ಆಕಾಶ ಪೂರ್ಣತ್ವವಾಗಿ ವಿಶಾಲ-ವಾಗುತ್ತಲೇ ಇದೆ. ನೀರಿನ ಮೂಲ ಹನಿ ಬಿಂದು ಶೂನ್ಯಾಕಾರ ಪೂರ್ಣ. ಪೂರ್ಣತೆ ಎಂದರೆ ಜೀವನ ಸಾರ್ಥಕತೆ ಹೊಂದುವದು.

ಎಣ್ಣೆ ಹೊರಬರಲು ಗಾಣ ತಿರುಗುವದು ಅವಶ್ಯಕ. ಅದು ಸುತ್ತುತ್ತಲೇ ಇರಬೇಕು. ಸುತ್ತು ಎಂದರೆ ವೃತ್ತಿ. ಒಂದೇ ವೃತ್ತಿಗೆ ಕಾರ್ಯ ಪೂರ್ಣವಾಗಲಾರದು. ಇಂಥ ಅನೇಕ, ಅಸಂಖ್ಯ. ಅಮಿತ ಸುತ್ತುಗಳಿಂದಲೇ ಪೂರ್ಣತ್ವಸಾಧ್ಯ. ಅರ್ಧಗತಿ-ಯಿಂದ ಕಾರ್ಯ ಅಪೂರ್ಣ. ಪೂರ್ಣ ಫಲ ಸಿಗುವವರೆಗೂ ಶ್ರಮ ಅಗತ್ಯ. ಗತಿಶೀಲರು ವಿಮುಖರಾಗಬಾರದು ಎಂಬ ಎಚ್ಚರಿಕೆ ಇದೆ. ಶಿವ ಶಿವ ಎಂಬರ್ಥದಲ್ಲಿ ಅಮ್ಮ ತಮ್ಮ, ಶಬ್ದಪ್ರಯೋಗವಾಗಿದೆ.

ಶಿವನ ೩೬ ತತ್ತ್ವಗಳೇ ೩೬ ಸೂತ್ರಗಳಾಗಿ ಹೊರಹೊಮ್ಮಿವೆ. ಪ್ರಪಂಚಕ್ಕೆ ಪ್ರಕೃತಿ ಎಂದು ಪರ್ಯಾಯ ಪದ. ಶಕ್ತಿಯು ಮೂಲ ಕಾರಣ ತಾಯಿಗೆ ಆ ಮಹಾ-ಮಾತೆಗೆ ಮೊದಲ ಸಂಬೋಧನೆ, 'ಅಮ್ಮ'ನ ನಂತರದ ಸ್ಥಾನ ಶಿವನದು. ಆದ್ದರಿಂದ "ತಮ್ಮ" ಪದ. ಜೀವಾತ್ಮನೇ ಸಂಬೋಧಕ. ಜೀವಾತ್ಮನ ತಮ್ಮ "ಶಿವ" ಎಂಬರ್ಥದಲ್ಲಿ, ಶಿವ ಸರ್ವ ಕಾರ್ಯ ಸಮರ್ಥನಾದ ಕಾರಣ ಕಿರಿಯನಾದರೂ ಶ್ರೇಷ್ಠತೆ ಅವನದೇ. ಹೇಳುವವ ಜೀವಾತ್ಮ, ತಮ್ಮನೆಂದು ಕರೆವದಕ್ಕೂ ಹಿರಿಯನಾದ ಅವನದು ಎಂತಲೇ ಜೀವಾತ್ಮ—ಪರಮಾತ್ಮನನ್ನು ಅವಿನಾಭಾವದಿಂದ "ತಮ್ಮ" ಎಂದು ಕಳಕಳಿಯಿಂದ ಕರೆಯುತ್ತಿದ್ದಾನೆ.

ಕ್ರಿಯಾಶೀಲತೆ ಶಿವನ ಶಕ್ತಿ ಸಾಮರ್ಥ್ಯ. ಸತ್ಯ—ಶಿವ ಸೌಂದರ್ಯ ಮಿಳಿತವಾದಾಗ—ಸಮಷ್ಟಿಯಾದಾಗ ಶೂನ್ಯತ್ವ ಪ್ರಾಪ್ತಿ. ಶೂನ್ಯತ್ವವೇ ಪೂರ್ಣತ್ವ. ದೈವ ಸಾನ್ನಿಧ್ಯ-ಸೇರುವಿಕೆ ಜೀವಾತ್ಮ—ಪರಮಾತ್ಮನಲ್ಲಿ ಸೇರುವದು. ಅನಾದಿಯಿಂದಲೂ ಸಾಧಕರ.

ಯತಿ ಮುನಿಗಣಗಳ ಜೀವನದ ಅಂತಿಮ ಗುರಿ. ಆದ್ದರಿಂದ ಪಂಚತತ್ವದಿಂದ ಸೃಷ್ಟಿಯಾದ ಈ ಜೀವ ಪಂಚತ್ವದಲ್ಲಿ ಲೀನವಾಗುತ್ತದೆ.

ಈ ಸುತ್ತುವ ವೃತ್ತಿ ಕೇವಲ ಮಾನವರಿಗಷ್ಟೇ ಅಲ್ಲ. ಆ ಸೃಷ್ಟಿಕರ್ತತ್ರಯ-ರಿಗೂ ಇದು ಹೊರತಾಗಿಲ್ಲ. ಬ್ರಹ್ಮಸೃಷ್ಟಿವೃತ್ತ. ವಿಷ್ಣುವಿನದು ದಶಾವತಾರ ವೃತ್ತ. ಶಿವನದು ವೃಷಭವಾಹನ ಮೂರ್ತ್ಯಾದಿ ೨೫ ಲೀಲಾವೃತ್ತಿ. ಕಾರಣ ತ್ರಿಮೂರ್ತಿಗಳೂ ಈ ಶ್ರಮಕ್ಕೆ ಒಳಗಾದವರೇ. ಇದಕ್ಕಾಗಿಯೇ ಅವರು ಪೂರ್ಣರು.

ಪೂರ್ಣತೆ ಲಭ್ಯತೆಗೆ ಸದ್‌ವೃತ್ತಿ ತೀರ ಅಗತ್ಯ. ಸದ್ವ್ಯಕ್ತಿ ಮಾತ್ರ ಸುಲಭ-ವಾಗಿ ಪೂರ್ಣತ್ವ ಪಡೆಯಬಲ್ಲ. ಆದರೆ ಫಲದತ್ತ ಲಕ್ಷ್ಯ ನೀಡುವದಿಲ್ಲ. ಪೂರ್ಣತ್ವ-ವನ್ನು ಎರಡು ರೀತಿಯಿಂದ ಸಾಧಿಸಬಹುದೆಂದು ಸುಲಭ ರೀತಿಯನ್ನು ಗ್ರಂಥಕರ್ತರು ತಿಳಿಸಿದ್ದಾರೆ.

ಒಂದನೇಯದು—ಸಾಧಕನ ಪೂರ್ವ ಜನ್ಮದ ಪುಣ್ಯದೊಂದಿಗೆ ಸಹಕರಿಸಿದ ಗುರು-ಕೃಪೆಯಿಂದ, ಎರಡನೇದು—ನಿಗಮಾಗಮ—ಕಾವ್ಯಾದಿಗಳ ಅಕ್ಷರಾಭ್ಯಾಸದ ಬಲದಿಂದ, ಇದು ಸಾಮಾನ್ಯ ಜನಸುಲಭ. ಇದಕ್ಕಾಗಿ ಪ್ರತಿಯೊಬ್ಬನಿಗೆ ಅಕ್ಷರಾಭ್ಯಾಸ ಅಗತ್ಯ. ನಮ್ಮ ನಾಡಿನಲ್ಲಿ ಸಾಕ್ಷರತೆ ಹೆಚ್ಚಿಸುವ ಸೂಚನೆಯನ್ನು ಒತ್ತಿ ಹೇಳುತ್ತಿದ್ದಾರೆ.

ಅ—ಕ್ಷ ವರೆಗಿನ ವರ್ಣಮಾಲೆಯ ೫೦ ಅಕ್ಷರಗಳು. ಸಂಕೇತವೇ ಅಕ್ಷ–ಅಚ್ಚು. ಗಾಡಿಗೆ ಅಥವಾ ಯಾವುದೇ ವಾಹನಕ್ಕೆ ಅಚ್ಚು (axil) ಅಗತ್ಯ. ನಮ್ಮ ಐಹಿಕ ಜೀವನಕ್ಕೆ ಶಿಕ್ಷಣ ಕಲಿಕೆಯೇ ಅಚ್ಚು. ಅವಿದ್ಯೆಯೇ ಮೃತ್ಯು, ವಿದ್ಯೆಯೇ ಅಮೃತತ್ವ. "ಅವಿದ್ಯಯಾ ಮೃತ್ಯುಂತೀರ್ತ್ವಾ ವಿದ್ಯಯಾ ಅಮೃತಂ ಅಶ್ನುತೇ" ವಿದ್ಯಾ ಗಳಿಕೆ-ಯಿಂದ ಮಾನವ ಶಿವಸ್ವರೂಪನಾಗಬಲ್ಲ.

ಗಡಿಯಾರದಿಂದ ಕಾಲವನ್ನಳೆಯುತ್ತೇವೆ. ೧೨ ಗಂಟೆಗಳಿಗೊಮ್ಮೆಯಂತೆ ಗಡಿ-ಯಾರದಲ್ಲಿಯ ತಾಸಿನ ಮುಳ್ಳು ಸುತ್ತುವದು. ಯಾರೇ ಗಮನಿಸಲೀ, ಗಮನಿಸದಿರಲೀ ಅದು ಕಾರ್ಯ ನಿಮಗ್ನ, ಅದೇ ಪೂರ್ಣತೆಯ ಪ್ರತೀಕ ಎಂದಿದ್ದಾರೆ ಪೂರ್ಣತ್ವ-ಕಾರರು.

ಕೆಲವು ಕಡೆ ವಿಷಯವು ಮೂಲೋದ್ದೇಶಕ್ಕೆ ದೂರವಾಗಿ ಗ್ರಂಥದ ಗಾತ್ರ ಹೆಚ್ಚಿಸಲು ತುಂಬಿದಂತೆ ಕಂಡು ಬರುತ್ತದೆ.

ಉದಾ : ಒಂದು ವಸ್ತು ಮತ್ತೊಂದಕ್ಕಿಂತ ದೂರದಲ್ಲಿ ಅಥವಾ ಸಮೀಪದಲ್ಲಿ ಇರುತ್ತದೆ. ಎಂಬ ತಿಳುವಳಿಕೆಯಿಂದ ನಮಗೆ ದಿಕ್ಕಿನ ಅರಿವಾಗುತ್ತದೆ. ಒಬ್ಬನ

ಮುಖದ ಎಡಗಡೆಯು ಕಣ್ಣು ಎಡಗಣ್ಣು, ಎಡಕ್ಕಿರುವ ಕಣ್ಣು. ಆದರೆ ಅದೇ ಕಣ್ಣು ಅವನ ಎಡಗಣ್ಣು ಅವನ ಎಡಗಡೆ ಕುಳಿತವನ ಬಲಕಣ್ಣಿನ ಬಲಕ್ಕಿರುವ ಕಣ್ಣೂ ಆಗುತ್ತದೆ."

ಇಲ್ಲಿ ಅರ್ಥದ ಜೋಡಣೆಯೇ ಅನಿಸದೇ ಕೊಂಡಿಯನ್ನು ಹೇಗೆ ಹೇಗೋ ಸೇರಿಸಿದಂತೆ ಅನಿಸುತ್ತದೆ.

ಪೂರ್ಣತ್ವ ಪಡೆಯಲು ಗುರುವಿನ ಸಹಾಯ ಅತ್ಯವಶ್ಯಕ ಎಂಬುದನ್ನು ಸುಲಭ-ಸರಳ ಸರ್ವಜನಮಾನ್ಯ ಉದಾಹರಣೆಯಿಂದ ವಿವರಿಸಿದೆ. ಸೂರ್ಯನು ಮೂಡುವ ದಿಕ್ಕನ್ನು ಮೂಲವನ್ನಾಗಿಟ್ಟು ಬಲಕ್ಕೆ ತಿರುಗಿದಂತೆ ಎಂಟೂ ದಿಕ್ಕುಗಳ ದರ್ಶನ ಜ್ಞಾನ ಉಂಟಾಗಿ ಪುನಃ ಪೂರ್ವವೇ ಕಾಣುತ್ತದೆ ಎಂದಿದ್ದಾರೆ. ಇಂಥ ಅಸಂಖ್ಯ ಉದಾ-ಹರಣೆಗಳನ್ನು ಪೂರ್ಣತ್ವ ವಿವರಿಸಿವೆ.

ಎದೆ ಗುಂಡಿಗೆಯಿಂದ ಹೊರಟ ರಕ್ತ ಇಡೀ ಶರೀರ ಸಂಚರಿಸಿ ದೇಹಕ್ಕೆ ಚೈತನ್ಯ ನೀಡುತ್ತದೆ. ನೀಡುತ್ತಲೇ ಪುನಃ ತನ್ನ ಶುದ್ಧೀಕರಣಕ್ಕೆ ಮೊದಲ ಸ್ಥಾನ-ವನ್ನು ಸೇರಿ ಒಂದು ಪೂರ್ಣ ಸುತ್ತು ಮುಗಿಸುತ್ತದೆ. ಹೀಗೆ ಮಾಡಿದುದರಿಂದಲೇ ಶರೀರ ಸುಸ್ಥಿತಿಯಲ್ಲಿದೆ. ಅದೇ ಒಂದು ಪರಿಕ್ರಮ, ವೃತ್ತಿಯ ಸುತ್ತು.

"ಜನರೇಟರಿನಿಂದ ಹೊರಹೊರಟ ನೆಗೆಟಿವ್ ಮತ್ತು ।
ಪೊಸಿಟಿವ್ ವಾಯ್ರು ಸರ್‌ಕಿಟ್ಟು ಸರ್ಕಲ್=ಸುತ್ತು ।
ಪೂರ್ಣ ಇದೆ, ಪಾವರ್ ವ ಲೈಟ್ ಸ್ವಿಚ್—ಆನ್ ಒತ್ತು ।
ಇರಿಸು : ಪೂರ್ಣ ಇರಿಸದೆ ಬಿಡಬೇಡ ಬೇಸತ್ತು." ೧.

ಎಂಬಲ್ಲಿ ವಿದ್ಯುಚ್ಛಕ್ತಿಯಂಥ ಶಕ್ತಿಯ ಉತ್ಪನ್ನ ಕೂಡ ಪೂರ್ಣದಿಂದಲೇ ಸಾಧ್ಯವೆಂದು ಉದಾಹರಣೆಯಿಂದ ವ್ಯಕ್ತವಾಗಿದೆ. ಉದಾಹರಣೆಯು ದೃಷ್ಟಿಯಿಂದ ಇಂಗ್ಲೀಷಿನ ಶಬ್ದ-ಗಳ ಬಳಕೆ, ಈ ಕನ್ನಡ ಮಾಧ್ಯಮದಲ್ಲಿ ಏಕೋ ಅಸಮಂಜಸ ಎನಿಸುತ್ತದೆ. "ಸರ್‌ಕಿಟ್ಟು" (circuit) ಮುಂದೆ "ಹೊಲ್‌ಡರಿ" ನಲ್ಲಿರುವಂಥ (holder) ಕನ್ನಡದಲ್ಲಿ ಬಳಸಿದ ರೀತಿ ಸರಿಯಲ್ಲ ಎನಿಸುತ್ತದೆ. ಬಲು ಹಿಂದೆಯೇ ಈ ರೀತಿಯ ಶಬ್ದ ಬಳಕೆಯನ್ನು ಗ್ರಂಥದಲ್ಲಿ ತರಲು ಪ್ರಯತ್ನಿಸಿ ಕನ್ನಡದ ಕಣ್ವ "ಶ್ರೀ"ಯವರು ಇದೇ ರೀತಿಯ ವ್ಯಂಜನ ಬಳಕೆಯಲ್ಲೇ "ಕನ್‌ನಡದ ಬ್ಯವುಟ" ದಂಥ ಸಂಕಲನ ಹೊರ ತಂದಿದ್ದಾರೆ. ಆದರೆ ಅದು ಸಫಲವಾಗಲಿಲ್ಲ. ಅಂತೇ ಇಲ್ಲಿ ಇಂಗ್ಲೀಷ್ ಶಬ್ದವನ್ನು ಈ ರೀತಿ ಬಳಸಿದುದು ಅಸಮಂಜಸ ಎನಿಸುತ್ತದೆ.

ಆಧ್ಯಾತ್ಮಿಕತೆಯಲ್ಲಿ ಶ್ರೇಷ್ಠ ಸ್ಥಾನ ಪಡೆದ ನಿರಂಜನ ಪ್ರಣವ (ಓಂಕಾರ)ವು ವರ್ಣತ್ರಯ ವಿಭಾಗ ಹೊಂದಬಾರದು. (ಅ + ಉ + ಮ್) ಕೇವಲ ವ್ಯಂಜನಕ್ಕೇ

ಮಹತ್ವವಲ್ಲ ಎಂಬುದಕ್ಕೆ ಶ್ರೇಷ್ಠ ವೈಯ್ಯಾಕರಣಿ ಪಾಣಿನೀಯು "ಮೋನುಸ್ವಾರೋಹಲಿ" ಎಂಬ ಸೂತ್ರದಿಂದ ವರದರಾಜನ "ಮಾಸ್ತಸ್ಯ ಪದಸ್ಯ ಅನುಸ್ವಾರೋ ಹಲಿ" ಎಂಬ ವಾರ್ತಿಕದಿಂದ ಉಪನಿಷತ್ತಿನ "ಸಹನಾವವತು ಸಹ ನೌ ಭುನಕ್ತು" ಎಂಬ ಸೂಕ್ತಿಯಿಂದ ಅಮರಕೋಶದ "ಓಂಕಾರ ಪ್ರಣವೌ ಸಮೌ" ಎಂಬುದರ ಬಲ ನೀಡಿದ್ದಾರೆ. ಇದಕ್ಕಾಗಿ "ಆರೇನಾದರೂ ಒರಂತಿಪ್ಪುದೇ ಸಮತೆ" ಎಂದು ಸ್ಥಿತ ಪ್ರಜ್ಞ ಸ್ಥಿತಿಯಲ್ಲಿರಬೇಕು ಎಂದಿದ್ದಾರೆ.

ಐದಕ್ಷರಗಳ ಪಂಚಾಕ್ಷರೀ ಮಂತ್ರ ಪೂರ್ಣತ್ವಕ ಮೂಲ ಸಹಾಯಕ ಮಂತ್ರ, ಆಧ್ಯಾತ್ಮ ಜ್ಞಾನದ ಮೊದಲ ನೆಲೆ ಮೂಲ ಪ್ರಣವ ಸಹಿತ ಪಂಚಾಕ್ಷರೀ ಮಂತ್ರ ಜಪಿಸುವಲ್ಲಿ, ಮಂತ್ರದಲ್ಲಿ, ಅರ್ಥದಲ್ಲಿ ವೈವಿಧ್ಯತೆಯೇ ಇಲ್ಲವೆಂದು ಜಪಿಸುವದನ್ನು ಬಿಡಬಾರದು ಎಂಬ ಎಚ್ಚರಿಕೆ ಕೂಡ ಇದೆ.

ಶಿವನ ಇಷ್ಟ ಲಿಂಗ ಪೂರ್ಣಾಕಾರ (ಗುಂಡಗೆ) ಇದೆ. ಎಲ್ಲ ದೇವ ದೇವತಾ ಪ್ರಭಾ ಮಂಡಳ ಗುಂಡಾಕಾರವಾಗಿದೆ. ಮಂದಿರಗಳಲ್ಲಿಯ ಪ್ರದಕ್ಷಿಣಾವೀಥಿ ವೃತ್ತಾಕಾರ. ನಾವು ನಿತ್ಯವೂ ಸುತ್ತುವ, ಅರಳಿ, ಬಿಲ್ವ ಮರಗಳು ಉನ್ನತವಾಗಿದ್ದರೂ ಸುತ್ತಳತೆ ದುಂಡಾಗಿದ್ದು ಪೂರ್ಣಸುತ್ತನ್ನು ಪಡೆದಿವೆ.

ಅಜ್ಜಿ–ಅಜ್ಜರ ಊರುಗೋಲು, ಹೊಗೆ ಸೊಪ್ಪಿನ ಕೊಳವೆ. ಪೂಜ್ಯರ ಚಿತ್ರ, ಹಾವುಗೆಯ ಅಂಗುಷ್ಠ, ಭಿಕ್ಷಾಪಾತ್ರ, ತಾಟು. ತಂಬಿಗೆ. ಥಾಲಿ. ವಾಹನ. ಯಂತ್ರದ ಗಾಲಿ, ರೊಟ್ಟಿ, ಇಡ್ಲಿ, ದೋಸೆ, ಬುಟ್ಟಿ. ಮುಂತಾದ ಕೃತ್ರಿಮ ವಸ್ತುಗಳ ಮೈ ಸುತ್ತಳತೆ ದುಂಡಗೆ ಇವೆ. ಎಂಬ ಪೂರ್ಣತ್ವ ದರ್ಶಕ ಉದಾಹರಣೆಗಳು ತೀರ ಸಾಮಾನ್ಯವಾಗಿದ್ದು ಈ ಗ್ರಂಥಕ್ಕೆ ಯೋಗ್ಯ ಎನಿಸುವದಿಲ್ಲ. ಇಂಥ ಅಸಂಖ್ಯ ಉದಾಹರಣೆಗಳು ಗ್ರಂಥಬರೆಹದಲ್ಲಿ ನುಸುಳಿವೆ.[1]

ಗ್ರಹಣ ಎಂದರೇನು ? ಎಂಬುದಕ್ಕೆ ೧) ಭೌತಿಕ ಕಾರಣಗಳು. ೨) ದೈವಿಕ ಕಾರಣಗಳು ೩) ಆತ್ಮ ವಿಜ್ಞಾನದ ಕಾರಣ ಕೊಟ್ಟಿದ್ದಾರೆ.

೧) ಸೂರ್ಯಗೋಲ—ಚಂದ್ರಗೋಲ—ಭೂಗೋಳಗಳ ನೆರಳು ಬೀಳುವಿಕೆ.
೨) ಸೂರ್ಯ—ಚಂದ್ರ ದೇವತೆಗಳು ರಾಕ್ಷಸರ ಬಂಧನಕ್ಕೊಳಗಾಗುವಿಕೆ
೩) ಪರಮಾತ್ಮ—ಜೀವಾತ್ಮರಿಗೆ ಮುಸುಕುವ ಮಾಯೆಯ ಹಾಗೂ ಅವಿದ್ಯೆಯ ವ್ಯಾಮೋಹದ ಪ್ರತಿಕ್ರಿಯೆಯ ದ್ಯೋತಕ ಎಂಬ ವಿವರಣೆ ತೀರ ಸಮರ್ಪಕ.

---

1. ಇಂಥ ಹಲವು ಉದಾಹರಣೆಗಳು ಪುನರುಕ್ತಿ ದೋಷಕ್ಕೆ ಗುರಿಯಾಗಿವೆ

ಪಿಂಡಾಡದ ರೂಪ, ರೂಪೋತ್ಪತ್ತಿ.—ಕ್ರಮ ಕುರಿತಾಗಿರುವ (ಸೂತ್ರ ೧೬) ಆರೋಗ್ಯ ರಚನಾ ಜ್ಞಾನವು ಅದ್ಭುತವಾಗಿದೆ.

"ಕ್ರೀಡಾ ವಿನೋದದಲ್ಲಿ ತೊಡಗಿದ ರೇತಸ್ಸನ್ನು ರೆಜಸ್ಸು ನುಂಗುತ್ತದೆ. ಆ ಶುಕ್ಲ ರೇತಸ್ಸೇ ಪ್ರಾಣಿಗಳ ಎಲುವು. ಕಾರಣ ಪ್ರತಿಯೊಬ್ಬರ ಎಲುವು ಬಿಳಿ (ಶ್ವೇತ) ಯಾಗಿದೆ. ರೇತಸ್ಸನ್ನು ಸ್ವಾಹಾ ಮಾಡಿ, ಅದರೊಂದಿಗೆ ತಾನೂ ಬೆಳೆದು ರಜಸ್ಸೇ ಮಜ್ಜೆ-ಮಾಂಸಾದಿಗಳು. ವೀರ್ಯ ಬಿಂದುವೇ ರಜಸ್ಸನ್ನು ಆಶ್ರಯಿಸಿ ರೂಪಾಂತರ-ಗೊಂಡು ನವಮಾಸದ ದೀರ್ಘಾವಧಿಯ ನಂತರ ಕೂಸಾಗಿ ಆತನ ಕೈಗೆ ಬಂದು ಆನಂದ ತರುವದೂ ಒಂದು ಪೂರ್ಣ ಸುತ್ತು. ಅದೇ ಪೂರ್ಣತೆ ಅದಕ್ಕೆ "ಆತ್ಮಾ ವೈ ಪುತ್ರ ನಾಮಾಸಿ" ಎನ್ನುವುದು "ಆತ್ಮಾ ವೈ ಜಾಯತೇ ಪುತ್ರಃ ಉಪನಿಷತ್ ಹೇಳುವದೂ ಇದನ್ನೇ.

ಇದರ ವಿವರಣೆ ಕೆಲವಾರು ಸಲ ಚರ್ವಿತ ಚರ್ವಣವಾದಂತೆ ಪುನರ್ ಪ್ರಯೋಗ ದೋಷಕ್ಕೆ ಗುರಿಯಾಗಿದೆ.

"ಜಲಬಿಂದು" ವಿವರಣೆ (ಪುಟ ೬೧) ಸ್ತ್ರೀಯ ಬಾಲ್ಯ, ಕೌಮಾರ್ಯ, ಯೌವ-ನಾವಸ್ಥೆಯ ವರ್ಣನೆಗಳು, ಮಾನವನ ಬಾಲ್ಯಾದಿ ಪಂಚಾವಸ್ಥೆಗಳ ವರ್ಣನೆ ತೀರ ಅಪ್ರಸ್ತುತ ಎನಿಸುತ್ತವೆ.

ಜಲದ ಅವಸ್ಥೆಯ ಆಕರಗಳು ಜಲನಿಧಿ ಎಂದು ಹೇಳಿ "ಸರ್ವಂ ಖಲ್ವಿದಂ ಬ್ರಹ್ಮ" ದ ಭಾಮಿನೀ ಷಟ್ಪದಿ ಸ್ತೋತ್ರದ ಶ್ಲೋಕದಲ್ಲಿ ಬೆಳೆಯ ಅವಸ್ಥೆಯ ಜೊತೆಗೆ ಜಲಬಿಂದು ಪೂರ್ವದ ಹಾಗೂ ತದನಂತರದ ಅವಸ್ಥೆಗಳನ್ನು ಕೆಳಗಿನಂತೆ ವಿಸ್ತರಿಸಲಾಗಿದೆ.

"ಥಳಕು ನೀನೇ ಬೀಜ ನೀನೇ
ಚಳಿಯು ನೀನೇ ಮೊಳಕೆ ನೀನೇ
ಸೆಳವು ನೀನೇ ಸಸಿಯು ನೀನೇ

ಮಂಜು ಬೆಳೆ ನೀನೇ।
ಮಳೆಯು ನೀನೇ ತೆನೆಯು ನೀನೇ!
ಹೊಳೆಯು ನೀನೇ ಕಾಳು ನೀನೇ!
ಜಳಧಿ ನೀನೇ ಶಕ್ತಿ ನೀನೇ!
ಈ ಕ್ರಮವು ನೀನೇ॥

ಥಳಕು, ಚಳಿ, ಸೆಳವು, ಮಂಜು, ಮಳೆ,
ಹೊಳ, ಜಲಧಿ, ನೀರಿನ ಸಪ್ತವಸ್ಥೆಗಳು!

ಆರೋಹ, ಅವರೋಹ ಕ್ರಮದಿಂದಾಗುವ!
ಪೂರ್ಣತ್ವದ ಸುತ್ತು— ಸರ್ವಮೂಲ ತತ್ತ್ವ!
—ವೇ ಸತ್ಯಂ—ಶಿವಂ—ಸುಂದರಂ (ಪುಟ ೯೩)

ಬ್ರಹ್ಮಸೂತ್ರದ "ಜನ್ಮಾದ್ಯಸ್ಯ ಯತಃ" ಸೂತ್ರದಿಂದ ಶಕ್ತಿಸಹಿತ ಶಿವನೇ ೩೬ ತತ್ತ್ವಗಳಾಗಿದ್ದಾನೆ. ಇದನ್ನೇ ತೈತ್ತಿರೀಯ ಉಪನಿಷತ್ತೂ ಕೂಡ ಹೇಳಿದೆ. ಈ ತತ್ತ್ವಗಳೆಲ್ಲ ಲೀನವಾಗಿ ಪುನಃ ಅವನೇ ಆಗುತ್ತಾನೆ. ಈ ತತ್ತ್ವಗಳಿಂದ ವಿಶ್ವವಾದ ಕಾರಣ ವಿಶ್ವವೇ ಶಿವ, ಶಿವನೇ ವಿಶ್ವ ಎನಿಸಿದೆ.

ಮುತ್ತೈದೆ— ಮುತ್ + ಮುತ್ತು + ಐದೆ.

ಶಬ್ದ ಮಣಿದರ್ಪಣಕಾರನ ಅಭಿಮತದಂತೆ ವಿಶ್ಲೇಷಣೆ ಹಾಗೂ ವ್ಯುತ್ಪತ್ತಿಯನ್ನು ವಿವರಿಸಿದ್ದಾರೆ.

ಶತ್ರು—ಮಿತ್ರರಾಗವ ವಿಚಾರ ಕುರಿತು "ಭಾರತೀ-ಚೀನೀ ಭಾಯೀ ಭಾಯೀ "ಘೋಷಣೆ" ಎನಿಸದೆ ಮಾವ್ಸೇ ಲಾಯೀ "ಹಾಯ್ - ಹಾಯ್ ಆದದ್ದನ್ನು ಅನುಭವಿಸಿದ್ದೇವೆ" ಎಂದು ರಾಜಕೀಯ ಸಂಗತಿಯನ್ನು ಸೇರಿಸಿದೆ. ಗ್ರಂಥದಲ್ಲಿ ಇಂಥ ಉದಾಹರಣೆಗಳು ಸೇರುವದು ಅನುಚಿತ.

ಪಂಚಾಚಾರಗಳ ಕುರಿತು ಚೆನ್ನಬಸವಣ್ಣನ ವಚನಗಳನ್ನು ಅಲ್ಲಲ್ಲಿ ಬಳಸಿದುದು ಗ್ರಾಹ್ಯ ಹಾಗೂ ಸುಸೂಕ್ತವಾಗಿದೆ.

ನಡತೆಯಲ್ಲಿ ರಾಮನಂತಿರಬೇಕು—ರಾವಣನಂತಲ್ಲ ಎಂಬ ರಾಮಾಯಣದ ಉದಾಹರಣೆ, ಅಂತರಂಗ-ಬಹಿರಂಗ ಶುದ್ಧಿಯ ಕುರಿತಾದ ಬಸವಣ್ಣನವರ ವಚನಗಳು ಯೋಗ್ಯವಾಗಿ ಬಳಸಲ್ಪಟ್ಟಿವೆ.

"ಸಿದ್ಧಾಂತ ಶಿಖಾಮಣಿ"ಯ ಉದಾಹರಣೆ— ಮಾನವನಿಗೆ ಯಾವುದು ಬೇಕು ಯಾವುದು ಬೇಡ ಎಂಬುದರ ಕುರಿತಾದ ಚೆನ್ನಬಸವಣ್ಣನ ವಚನ ಜನ-ಸಾಮಾನ್ಯನಿಗೆ ಉದ್ಬೋಧಕವಾಗಿದೆ.

"ಕಾಮಬೇಕು ಲಿಂಗದಲ್ಲಿ, ಕಾಮಬೇಡ ಪರಸ್ತ್ರೀಯರಲ್ಲಿ।
ಕ್ರೋಧ ಬೇಕು ಕರಣಂಗಳಲ್ಲಿ; ಕ್ರೋಧ ಬೇಡ ಗುರುವಿನಲ್ಲಿ।
ಲೋಭ ಬೇಕು ಪಾದೋದಕ--ಪ್ರಸಾದದಲ್ಲಿ ಲೋಭ ಬೇಡ
ತನು-ಮನ-ಧನದಲ್ಲಿ।
ಮೋಹ ಬೇಕು ಗುರು ಲಿಂಗ-ಜಂಗಮದಲ್ಲಿ।
ಮೋಹ ಬೇಡ ಸಂಸಾರದಲ್ಲಿ।

ಮದ ಬೇಕು ಶಿವಾಚಾರದಿಂದ ಘನವಿಲ್ಲವೆಂಬಲ್ಲಿ।
ಮದ ಬೇಡ ಶಿವಭಕ್ತರಲ್ಲಿ।
ಮತ್ಸರ ಬೇಕು ಹೊನ್ನು-ಹೆಣ್ಣು ಮಣ್ಣಿನಲ್ಲಿ।
ಮತ್ಸರ ಬೇಡ ಸಕಲ ಪ್ರಾಣಿಗಳಲ್ಲಿ॥

ಹತ್ತೊಂಬತ್ತನೇ ಸೂತ್ರದ ವಿಶ್ಲೇಷಣೆ ಅನಗತ್ಯವಾಗಿ ೧೭ ಪುಟಗಳಷ್ಟು ಬೆಳೆದಿವೆ. ೨೦ನೇ ಸೂತ್ರಕ್ಕೂ ಕೂಡ ಅನುಸ್ವಾರ—ಓಂಕಾರದ ವಿವರಣೆ ಇನ್ನೂ ಸಂಕ್ಷೇಪಿಸಬಹುದಿತ್ತು. ವ್ಯರ್ಥವಾಗಿ ೮ ಪುಟಗಳಿಗೆ ಹರಿದಿದೆ.

ರೇಫ ಹಾಗೂ ರಳ-ಕುಳ-ಕ್ಷಳಗಳ ವ್ಯಾಕರಣ ವಿಶೇಷಗಳನ್ನು (ಪುಟ ೧೩೩). ಅನುಸ್ವಾರ—ವಿಸರ್ಗಗಳ (ಪುಟ ೧೩೬) ಆಕಾರವನ್ನು ಚಕ್ಕಡಿಯ ಗಾಲಿ, ಗಡ್ಡೆಗಳ ಆಕಾರ, (ಪುಟ ೧೩೭) "ಪೂರ್ಣತ್ವ"ದ ಕುರಿತಾಗಿ ಶ್ರೇಷ್ಠರೊಬ್ಬರ (ಮರಾಠಿ) ಅಭಿಪ್ರಾಯ ಅಕ್ಷರಗಳ ಆಕಾರ, ರಾಷ್ಟ್ರಗೀತೆಯೊಳಗಿನ ಅಕ್ಷರಗಳು (೧೩೯) ಉರ್ದು ಅಕ್ಷರಗಳ ಆಕಾರ, (ಪುಟ ೧೪೦) ಕನ್ನಡ ಅಂಕೆಗಳು, ಆಕಾರಗಳೆಲ್ಲ ಪೂರ್ಣತ್ವವನ್ನೇ ದರ್ಶಿಸುತ್ತವೆ ಎಂದು ಸಂಬಂಧ ಜೊಡಿಸಿರುವದು "ಪೂರ್ಣತ್ವ" ಅಧ್ಯಯನದಲ್ಲಿ ಒಂದು ಶಬ್ದ ಜಾಲವೆನ್ನಿಸುತ್ತದೆ.

ಇಂಗ್ಲಿಷ ಅಕ್ಷರಗಳ ಗುರುತಿನಿಂದ ರೋಮನ್ ಅಂಕೆಗಳ ಅರ್ಥ ಪೂರ್ಣತ್ವದ ದರ್ಶಕ ಎಂದಿರುವದು (ಪುಟ ೧೪೮) ಪ್ರತಿ ಒಂದು ದಶಕದ ಸ್ಥಾನಸೂಚಕವಾದ ಪೂರ್ಣಾಕಾರದ ಈ ದುಂಡು ಪೂಜಿಯ ನೆರವಿಲ್ಲದೇ, ಸಂಖ್ಯಾಶಾಸ್ತ್ರವೇ ಬೆಳೆಯು-ತ್ತಿದ್ದಿಲ್ಲ, ಬಾಳುತ್ತಿದ್ದಿಲ್ಲ, ಎಳೆಯುತ್ತಿದ್ದಿಲ್ಲ.— ಮುಂತಾದ ವಿವರಣೆ (ಪುಟ ೧೫೧) ಸಾಹಿತ್ಯದ ವಿರಾಮಾದಿ ಚಿಹ್ನೆಗಳಲ್ಲಿ ಪೂರ್ಣತ್ವದ ಪೂರ್ಣ ಬಿಂದುವಿನ ದುಂಡಾಕಾರದ ಸಂಕೇತ ಇದೆ. (ಪುಟ ೧೫೨) ವರ್ತುಲಾಕಾರದ ಚೌಕಾಕಾರದ. ವಿೂಸೆ ಆಕಾರದ ಚಿಹ್ನೆಗಳನ್ನು ಸಕ್ರಮವಾಗಿ ಇದಿರುಬದುರು, ಜೊಡಣೆಯಿಂದ, ಪೂರ್ಣತ್ವದ ಪೂರ್ಣ ವೃತ್ತಾಕಾರದ ಬೋಧವಾದಂತಾಗುತ್ತದೆ. (ಪುಟ ೧೫೫) ಮುಂತಾದವು ಕೇವಲ ಶಬ್ದಗಳ ಕಸರತ್ತಾಗಿವೆ.

ಷಟ್ಸ್ಥಲ ವಿವರಣೆ (ಪುಟ ೧೬೩) ಸದ್ವಿಚಾರ—ಸದಾಚಾರಗಳ ಸಮನ್ವಯ-ದಿಂದ ಪೂರ್ಣತೆಯ ಸುಖಜೀವನ ಹೊಂದುವದು ಮುಂತಾದವುಗಳ ವಿಶ್ಲೇಷಣೆಯು ಪೂರ್ಣತ್ವಕಾರರ "ಷಟ್ಸ್ಥಲ ಸಿದ್ಧಾಂತಿ" ಬಿರುದಿಗೆ ಯೋಗ್ಯವಾದುದು. (ಪುಟ ೧೬೩-೧೭೧).

ಇಷ್ಟ ಲಿಂಗದ ವಿವರಣೆ ಪಾಂಡಿತ್ಯಪೂರ್ಣವಾಗಿ ವಿಸ್ತೃತವಾಗಿದೆ. (ಪುಟ ೧೮೧-೮೩). ವೇದೋಕ್ತವಾದ ಓಂಕಾರದರ್ಥವು "ಅಕ್ಷರಾತ್ ಸಂಭವತೀಹ ವಿಶ್ವಮ್"

ಎಂಬುದರ ಸಾರ್ಥಕತೆಯನ್ನು ಓಂಕಾರವರ್ಣ ಸರ್ವ ಶಬ್ದಗಳ ಉತ್ಪಾದಿಗಳಿಗೆ ಕಾರಣ ನಾದಬಿಂದು ಕಲೆ, "ಏಕೋನಾದಾತ್ಮಕೋ ವರ್ಣಃ ಸರ್ವ-ನಾದ, ವಿಭಾಗವಾನ್" ಆಗಿದೆ ಎಂದು ಅರ್ಥೈಸುವವರಲ್ಲಿ ಅಡಗಿಸಿದ್ದಾರೆ.

ಓಂಕಾರವು ನಾದಬ್ರಹ್ಮ ಎಂದು, ಪ್ರಪಂಚವೆಲ್ಲ ಓಂಕಾರದಲ್ಲೇ ಲೀನವಾಗಿದೆ-ಎಂಬುದದು ನಿತ್ಯ ಸತ್ಯ.

ಗ್ರಂಥವು ಒಟ್ಟಿನ ಅಭಿಪ್ರಾಯದಲ್ಲಿ ಪಾಂಡಿತ್ಯಪೂರ್ಣವೆನಿಸಿದ್ದರೂ ಕೆಲವೆಡೆ ಪೊಳ್ಳುತನ, ಶಬ್ದಕಸರತ್ತು, ಅನವಶ್ಯಕ ಉದಾಹರಣೆಗಳು ಇಣುಕಿವೆ. "ಓಂಕಾರಃ ಸಂಪ್ರಾಸ್ರವತ್ ಓಂಕಾರೇಣ ಸರ್ವಾ ವಾಕ್—ಓಂಕಾರ ಏ ವೇದಂ ಸರ್ವಮ್" ಎಂಬ ಛಾಂದೋಗ್ಯೋಪನಿಷತ್ ಉಕ್ತ ವಾಕ್ಯವು ಆಧ್ಯಾತ್ಮಿಕ ಪೂರ್ಣ ಈ ಗ್ರಂಥಕ್ಕೆ ಮಂಗಳವನ್ನುಂಟು ಮಾಡಿದೆ.

ಪೂರ್ಣತ್ವದ ಗುಣಗಾನವು ಮಂದಾನಿಲ ರಗಳೆಯ ರೂಪದಲ್ಲಿ ನಾಲ್ಕು ಪುಟ ವಿಸ್ತ್ರತವಾದುದು ಗ್ರಂಥಕರ್ತರ ಛಂದಸ್ ಜ್ಞಾನವನ್ನು ಪ್ರಕಾಶಿಸಿದೆ.

ಮಹಾಮಸ್ತಕಾಭಿಷೇಕ

● ಜಿ. ಎಸ್. ಸಿದ್ಧಲಿಂಗಯ್ಯ

ಎಲ್ಲ ಬಿಟ್ಟಿರುವ ನಿನಗೆ ಮೈತೊಳೆದು ಪೂಜಿಸುವ
ಸಂಭ್ರಮ—ಮಹಾಮಸ್ತಕಾಭಿಷೇಕ—ದೊಡ್ಡ ಹೆಸರೇ.
ಶತ ಶತ ಸಹಸ್ರ ಜನ ಕುಂಭಕುಂಭಗಳಲ್ಲಿ
ತುಂಬಿ ಅಭಿಷೇಕಕ್ಕೆ ಸಾಗಿಸಿದ್ದರು ಗಂಧ
ಕರ್ಪೂರ ಮಣಿಮುತ್ತು ವಜ್ರ ವೈಡೂರ್ಯಗಳ
ನೂರು ಬಣ್ಣಗಳಾಡಿ ಹೋದುವು ಮೈಮೇಲೆ
ಉಯ್ಯಾಲೆಯಾಡಿದುವು ಕಾಮನಬಿಲ್ಲು
ಗಂಧವಾತಗಳಲಿ ಹರಡಿದುವು ದಿಕ್ಕುದಿಕ್ಕಿಗೆ
ನಡೆದಿತ್ತು ಮಂತ್ರ ಸುರಿದೇ ಸುರಿದಿತ್ತು ಮತ್ತೆ ಮತ್ತೆ
ಹಾಲು ಕಬ್ಬಿನರಸ ಶ್ರೀಗಂಧ ಕುಂಕುಮ
ಮಂತ್ರ ಜಾಗಟೆ ಗಂಟೆ ಶಬ್ದ ಗಿಮಿಗುಟ್ಟಿತ್ತು
ನಿನ್ನ ಮೀಯಿಸಿದವರು ಮತ್ತೆ ಮಿಂದರು
ಬಟ್ಟೆ ಬಿಚ್ಚಿದರು ಬಟ್ಟೆ ಉಟ್ಟರು
ಈ ಮಕ್ಕಳಾಟಕ್ಕೆ ನೀನು ನಗುತಲೆ ಇದ್ದೆ ನಿರ್ಲಿಪ್ತ.

●

ಹೇಳಲಾರೆ; ಹೇಳದಿರಲಾರೆ

● ತಿರುಮಲ ಮಾವಿನಕುಳಿ

ಮೂರು ಸಂಜೆಯ ಮಬ್ಬುಗತ್ತಲ ಮುಂಜುಗರದಲ್ಲಿ
ಕತ್ತೆತ್ತಿ ಕುಳಿತರೆ ಸಾಕು
ನೀಲಾಕಾಶದಲಿ ಹಾಯಾಗಿ ಹಾರುವ ಪಕ್ಷಿಕುಲ ನೋಟ
ಕಲರವಗಳ ನಿನಾದ ವಿನೋದ
'ರುವ್ವೋ' ಎಂದು ಹಾಡುವ ಎಳೆ ತಂಗಾಳಿ
ಸೃಷ್ಟಿ ಸೊಬಗಿನ ಮೋಹಕ ಭಾವಪರವಶತೆ
ಪ್ರಶಾಂತ ಮುಗಿಲು ದಿಗಿಲು ಹುಟ್ಟಿಸುತ್ತವೆ.

ಪ್ರೀತಿಯ ವಸ್ತುಗಳು, ಸಂಗತಿಗಳು ಯಾವತ್ತೂ ಹಾಗೇ
ಕಾಯದೊಳಗೆ ಕುದಿವ ನೆನಪನ್ನು ನನ್ನಿ ಮಾಡಿಕೊಂಡು
ಹಿತ ಶತ್ರುಗಳಂತೆ ಬೆನ್ನಿಗೆ ಚೂರಿಹಾಕುತ್ತ
ಹತ್ತಿರ ಹೋದರೆ ದೂರಕ್ಕೆ
ದೂರ ಹೋದರೆ ಹತ್ತಿರಕ್ಕೆ ಜಿಗಿಯುತ್ತ
ಕೈಗೆಟುಕದೆ, ಮಾತಿಗೆ ದೊರಕದೆ ಹುಡುಗಾಟ ಮಾಡುತ್ತವೆ
ಈಗಿನ ಕಾಲದ ಹುಡುಗಿಯರ ಹಾಗೆ !
ದಿಗಿಲಿನ ಜೊತೆಗೆ ಎದೆಯನ್ನು ದಹಿಸುತ್ತ
ಒಟ್ಟಾರೆಯಾಗಿ ಹಿಸುಕಿ ಹಿಸುಕಿ ಅಪ್ಪಪ್ಪೇ ಕೊಲ್ಲುತ್ತವೆ.

●

ಜನಸಂಖ್ಯಾ ನಿಯಂತ್ರಣ

● ಶಿವಾನಂದ ಮೂಲಿಮನಿ

ಮ್ಯಾಗಡೀಂದಽ ಕೇಡನೀರಽ
ದುಮುಗುಡಿಸಿ ಬರಾಕಹತ್ರ,
ರೈತ ಒಡ್ಡ ಕಟ್ಟಿ,
ನೀರ ತಡೀತಾನ;
ಮಣ್ಣೂ-ಬೆಳ್ಳೂ ಕೊಚ್ಚಿಹೋಗಧ್ಹಾಂಗ
ಕಾಳಜೀ ವಹಿಸ್ತಾನ.

ಇಂದ—

ಜನಸಂಖ್ಯೆ ಅನ್ನೋಕೇಡನೀರ
ಹುಚ್ಚೆದ್ದ ಹೊಳೀ ಆಗಿ
ಊರು-ಕೇರಿ,
ಹೊಲ-ಮನಿ,
ರಸ್ತೆ-ಬೈಲು,
ಸುತ್ತ-ಹಾದೈತಿ;
ನಮ್ಮನ್ನ ದಿಕ್ಕಗೆಡಿಸೇತಿ.
ನಮ್ದೇನಾದ್ರೂ ಸ್ವಲ್ಪ ಹೈಗೈ ಆದ್ರ
ಬತ್ತೀಕಟ್ಟೋಹೊತ್ತಿನೊಳಗಽ
ಊರಽ ನುಂಗತೈತಿ;
ನಮ್ಮನ್ನಿಲ್ಧಂಗ ಮಾಡತೈತಿ.

●

ಉಯ್‌ಗುನ್* ಕವಿಯ ಎರಡು ಕವನಗಳು

● ಅನು : ಡಾ| ಬುದ್ದಣ್ಣ ಹಿಂಗಮಿರೆ

೧. ಚಿತ್ರ

(ರವೀಂದ್ರನಾಥ್ ಟ್ಯಾಗೋರ್ ಅವರಿಗೆ)

ಸುರುಳಿಸುತ್ತಿದ ಮುಂಗುರುಳು, ನೀಳನರೆಗೂದಲ ತೆರೆಗಳು;

ಯಾರಿಗೂ ತಲೆಬಾಗದ ಹೆಮ್ಮೆಯ ಉತ್ತುಂಗ ಪರ್ವತ ಹೌದು, ಅವನೊಂದು ಶಿಖರ; ಔನ್ನತ್ಯದ ತುದಿಯಿಂದಿಳಿವಂತೆ ತೋರುವ, ಕುದಿವ, ವರ್ಣರಂಜಿತ ಬದುಕು.

ಒಳಿತು - ಕೆಡಕು ನ್ಯಾಯಾನ್ಯಾಯದ ಕೃತ್ಯಗಳಲ್ಲಿ ಗಂಭೀರಚಿತ್ತದ ದಣಿದ ಕಣ್ಣುಗಳ ಸುಜ್ಞಾನಿ ಉತ್ತುಂಗ ಗಿರಿಶಿಖರಗಳೊಂದಾಗಿ ಪ್ರತಿಬಿಂಬಿಸುವ ಭವ್ಯ ಹಿಮಾಲಯ ಸಂಕೇತಿಸುವ ಮಾನವ.

....

೨. ಸ್ಮಾರಕ

"ನನ್ನ ಗೋರಿಯ ಮೇಲೆ ಕಟ್ಟದಿರಿ ಯಾವುದೇ ಸ್ಮಾರಕವನಿಲ್ಲಿ"
—ಹೀಗಿಹುದು ಹಿರಿಯ ಸಾಹಿತಿ ಟಾಲ್‌ಸ್ಟಾಯ್ ಅಂತಿಮ ಇಚ್ಛೆ;
ನಾವು ಕಾಣುತ್ತೇವೆ ಅದರಂತೆ ತೀರ ಸರಳ ಸಮಾಧಿಯನ್ನೆ,
ಉನ್ನತ ವೃಕ್ಷಗಳು ಕಿಕ್ಕಿರಿದಿರುವ ಪ್ರಶಾಂತ ನೆರಳಿನಲ್ಲಿ.

ಮೃತರಾದ ನಮ್ಮ ಸಂಬಂಧಿಕರನ್ನು ಅಮರಗೊಳಿಸಲೆಂದು
ಸರ್ವಪ್ರಯತ್ನಗಳ ಮಾಡುತ್ತೇವೆ ನೆನಪು ಮಾಸದಂತೆ:
ಸಂಗಮರವರಿ ಕಲ್ಲಿನ ಮೇಲೆ ಇಲ್ಲವೆ ಕೆತ್ತುತ್ತೇವೆ ಶಿಲೆಗಳಲ್ಲಿ,
ಸುವರ್ಣಾಕ್ಷರಗಳಲ್ಲಿ ಹೆಸರು ಅಚ್ಚಳಿಯದುಳಿವಂತೆ.

ಈ ಹಿರಿಯ ಸಾಹಿತಿಯ ಚಿರಂತನ ಸ್ಮಾರಕಕ್ಕೆ
ಯಾವ ಗೌರವಗಳೂ ಬೇಕಿಲ್ಲ; ಅವಿಲ್ಲದೆ ದೊಡ್ಡವನೀತ,
ಜೀವಂತ ಸಾಕ್ಷಿಯಾಗಿ ನಿಂತಿವೆ ಕಾಲಕಾಲಕ್ಕೆ
ಅವನ ಉನ್ನತ ಕೃತಿಗಳು ಮತ್ತು ಜೀವನ ದರ್ಶನ
ಕೃತಿಗಳಲ್ಲಡಗಿರುವ ಸತ್ಯ ಅತ್ಯಂತ ಹರಿತವಾದದ್ದು
ಶಿಲಾಪತಾಕೆಯ ಗೋರಿಗಳಂತೆ ನಶ್ವರತೆಯ ಮೀರಿದ್ದು;
ಆತನಜರಾಮರಕೀರ್ತಿ ತಣ್ಣಗಲ್ಲ ಸಂಗಮರಿವರಿಯಂತೆ,
ಬೆಚ್ಚಗಿರುವುದು ಜನಹೃದಯದಲ್ಲಿ ಎಂದಿಗೂ ಜ್ವಲಂತ.

* ಉಯ್‌ಗುನ್—ಉಜ್ಬೆಕಿಸ್ತಾನದ ಅತ್ಯಂತ ಜನಪ್ರಿಯ ಕವಿ.

ಕರ್ನಾಟಕ ಭಾರತಿ

(ತ್ರೈಮಾಸಿಕ ಪತ್ರಿಕೆ)

ಆಜೀವ ಸದಸ್ಯತ್ವ : ಯಾವುದೇ ವ್ಯಕ್ತಿ ಅಥವಾ ಸಂಘ-ಸಂಸ್ಥೆಗಳು ರೂ ೧೦೦ (ಒಂದು ನೂರು ರೂಪಾಯಿಗಳು) ಕಳಿಸಿ ವಿಶ್ವವಿದ್ಯಾಲಯ ಪ್ರಕಟಿಸು-ತ್ತಿರುವ ''ಕರ್ನಾಟಕ ಭಾರತಿ'' ತ್ರೈಮಾಸಿಕ ಪತ್ರಿಕೆಯ ಆಜೀವ ಸದಸ್ಯತ್ವ ಪಡೆಯಬಹುದು. ಪತ್ರಿಕೆ ಪ್ರಕಟವಾದಂತೆಲ್ಲ ಅವರಿಗೆ ಪ್ರತಿಗಳನ್ನು ಕಳಿಸುವ ವ್ಯವಸ್ಥೆ ಮಾಡಲಾಗುವದು.

ವಿದ್ಯಾರ್ಥಿ ಭಾರತಿ

(ತ್ರೈಮಾಸಿಕ ಪತ್ರಿಕೆ)

ವಾರ್ಷಿಕ ಚಂದಾ : ರೂ. ೮-೦೦ (ಅಂಚೆವೆಚ್ಚ ಸಹಿತ)

ಬಿಡಿ ಪ್ರತಿ : ರೂ. ೨-೫೦ (ಅಂಚೆವೆಚ್ಚ ಪ್ರತ್ಯೇಕ)

ವಿದ್ಯಾರ್ಥಿಗಳಿಗೆ ರಿಯಾಯಿತಿ ಚಂದಾ ರೂ. ೪-೦೦

ಹಣವನ್ನು ಡಿಮಾಂಡ ಡ್ರಾಪ್ಟ್ ಅಥವಾ ಪೋಸ್ಟಲ್ ಆರ್ಡರ ಮೂಲಕ ಫಾಯನಾನ್ಸ ಆಫೀಸರ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ-೫೮೦ ೦೦೩ ಇವರ ವಿಳಾಸಕ್ಕೆ ಕಳುಹಿಸಬೇಕು.

ವಿವರಗಳಿಗೆ ಬರೆಯಿರಿ

ನಿರ್ದೇಶಕರು :

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.